ಮನುಷ್ಯ ಜಾತಿ
ತಾನೊಂದೆ ವಲಂ

ಜನಪದ ಸಾಹಿತ್ಯ ಸಮೀಕ್ಷೆ

ಜೀ. ಶಂ. ಪರಮಶಿವಯ್ಯ



ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೫೬೦೦೧೮

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಮಾಲಿಕೆ ಪ್ರಕಟಣೆ

ಜನಪದ ಸಾಹಿತ್ಯ ಸಮೀಕ್ಷೆ

ಜೀ.ಶಂ. ಪರಮಶಿವಯ್ಯ

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮

Kannada Sahitya Parishattu Centenary Publication

ಜನಪದ ಸಾಹಿತ್ಯ ಸಮೀಕ್ಷೆ
ಜೀ.ಶಂ. ಪರಮಶಿವಯ್ಯ
ಪ್ರಕಾಶಕರು :

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ
ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

ಮುಖಪುಟ ವಿನ್ಯಾಸ : ರಾ. ಸೂರಿ

ಪುಟಗಳು : ೧೭೬

ಮುದ್ರಣ ಕಾಗದ : ೮೦ ಜಿ.ಎಸ್.ಎಂ.
ಎನ್.ಎಸ್.ಮ್ಯಾಪ್‌ಲಿಥೋ

ಬೆಲೆ : ೯೦=೦೦

ಪ್ರಥಮ ಮುದ್ರಣ : ೧೯೬೭

ಪರಿಷತ್ತಿನಿಂದ ಮುದ್ರಣ: ೨೦೧೫

ಪ್ರತಿಗಳು : ೧೦೦೦

ಮುದ್ರಣ
ಗೀತಾಂಜಲಿ ಗ್ರಾಫಿಕ್ಸ್
ನಂ.ಬಿ-೭೧, ಹೊಸ ನಂ.೮೪
ಕೆ.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್
೬ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು - ೫೬೦ ೦೧೦.

JANAPADA SAHITHYA SAMMEKSHE -
a collection of articles on Folk literature
in Kannada by Sri J.S. Paramashiviah

published by :
Kannada Sahitya Parishattu
Pampa Mahakavi Road
Chamarajapete
Bengaluru - 560018

Cover Page : R. Suri

Pages : 176

Paper : 80 G.S.M. N.S. Maplitho

Rs : 90=00

First Edition : 1967

Edition by Parishattu : 2015

Copies : 1000

printed at
Geetanjali Graphics
No.B-71, New No.84
K.S.I.D.C. Industrial Estate
6th Block, Rajajinagar
Bengaluru - 560010.

ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಕೃತಿಗಳ ಆಯ್ಕೆ ಸಮಿತಿ

ಅಧ್ಯಕ್ಷರು

ಶ್ರೀ ಮಂಡಲೀಕ ಹಾಲಂಬಿ

ಸದಸ್ಯರು

ಡಾ. ಸಿದ್ಧಲಿಂಗಯ್ಯ

ಪ್ರೊ. ಜಿ. ಅಶ್ವತ್ಥನಾರಾಯಣ

ಡಾ. ಶ್ಯಾಮಸುಂದರ ಬಿದರಕುಂದಿ

ಡಾ. ತಾರಿಣಿ ಶುಭದಾಯಿನಿ

ಡಾ. ಮಾಧವ ಪೆರಾಜೆ

ಶ್ರೀ ಸಿ.ಕೆ. ರಾಮೇಗೌಡ, **ಗೌರವ ಕಾರ್ಯದರ್ಶಿ, ಕ.ಸಾ.ಪ.**

ಡಾ. ರಾಜಶೇಖರ ಹತಗುಂದಿ, **ಗೌರವ ಕಾರ್ಯದರ್ಶಿ, ಕ.ಸಾ.ಪ.**

ಶ್ರೀ ಪಿ. ಮಲ್ಲಿಕಾರ್ಜುನಪ್ಪ, **ಗೌರವ ಕೋಶಾಧ್ಯಕ್ಷ, ಕ.ಸಾ.ಪ.**

ಪ್ರಕಟಣಾ ಸಮಿತಿ ಸಂಚಾಲಕ

ಶ್ರೀ ಜೆ.ಎನ್. ಶಾಮರಾವ್

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಕಾರ್ಯಕಾರಿ ಸಮಿತಿ

ಶ್ರೀ ಪುಂಡಲೀಕ ಹಾಲಂಬಿ., ಅಧ್ಯಕ್ಷರು

ಶ್ರೀ ಸಿ.ಕೆ. ರಾಮೇಗೌಡ, ಗೌರವ ಕಾರ್ಯದರ್ಶಿ

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷ

ಶ್ರೀ ಟಿ. ತಿಮ್ಮೇಶ್, ಬೆಂಗಳೂರು ನಗರ

ಶ್ರೀ ಹುಲಿಕಲ್ ನಟರಾಜ್, ಬೆಂ. ಗ್ರಾಮಾಂತರ

ಶ್ರೀ ಬಿ.ಟಿ. ನಾಗೇಶ್, ರಾಮನಗರ

ಶ್ರೀ ಜೆ.ಜಿ. ನಾಗರಾಜ, ಕೋಲಾರ

ಶ್ರೀ ವೈ.ಎಲ್. ಹನುಮಂತರಾವ್, ಚಿಕ್ಕಬಳ್ಳಾಪುರ

ಡಾ. ಸೋ.ಮು. ಭಾಸ್ಕರಾಚಾರ್ಯ, ತುಮಕೂರು

ಶ್ರೀ ಆರ್. ಮಲ್ಲಿಕಾರ್ಜುನಯ್ಯ, ಚಿತ್ರದುರ್ಗ

ಶ್ರೀ ಎ.ಆರ್. ಉಜ್ಜನಪ್ಪ, ದಾವಣಗೆರೆ

ಶ್ರೀ ಡಿ.ಮಂಜುನಾಥ್, ಶಿವಮೊಗ್ಗ

ಡಾ. ಎಂ. ಚಂದ್ರಶೇಖರ್, ಮೈಸೂರು

ಶ್ರೀ ಸೋಮಶೇಖರ ಬಿಸಲ್ವಾಡಿ, ಚಾಮರಾಜನಗರ

ಶ್ರೀಮತಿ ಮೀರಾ ಶಿವಲಿಂಗಯ್ಯ, ಮಂಡ್ಯ

ಡಾ. ಎಚ್.ಎಲ್. ಜನಾರ್ಧನ, ಹಾಸನ

ಶ್ರೀ ಟಿ.ಪಿ.ರಮೇಶ್, ಕೊಡಗು

ಶ್ರೀ ಎಸ್.ಎಸ್. ಶಿವಸ್ವಾಮಿ, ಚಿಕ್ಕಮಗಳೂರು

ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ

ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ

ಶ್ರೀ ಯ.ರು. ಪಾಟೀಲ, ಬೆಳಗಾವಿ

ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಾಪುರ

ಡಾ. ವಿಜಯಕುಮಾರ ಕಟಗಿಹಳ್ಳಿಮಠ, ಬಾಗಲಕೋಟೆ

ಡಾ. ಲಿಂಗರಾಜ ರು. ಅಂಗಡಿ, ಧಾರವಾಡ

ಶ್ರೀ ಗುರುಶಾಂತಪ್ಪ ಬಿ. ಮಾಸಣಗಿ, ಹಾವೇರಿ

ಡಾ. ಶಿವಪ್ಪ ಮರಿಬಸಪ್ಪ ಕುರಿ, ಗದಗ

ಶ್ರೀ ರೋಹಿದಾಸ ನಾಯಕ, ಉತ್ತರ ಕನ್ನಡ

ಶ್ರೀ ಮಹಿಪಾಲರೆಡ್ಡಿ ಮುನ್ನೂರ, ಗುಲ್ಬರ್ಗ

ಶ್ರೀ ಸಿದ್ದಪ್ಪ ಎಸ್. ಹೊಟ್ಟಿ, ಯಾದಗಿರಿ

ಪ್ರೊ. ಸಿದ್ರಾಮಪ್ಪ ಮಾಸಿಮಾಡೆ, ಬೀದರ್

ಶ್ರೀ ಮಹಾಂತೇಶ ಮಸ್ಕಿ, ರಾಯಚೂರು

ಶ್ರೀ ವೀರಪ್ಪ ಮ. ನಿಂಗೋಜಿ, ಕೊಪ್ಪಳ

ಶ್ರೀ ಸಿರಿಗೇರಿ ಯರ್ರಿಸ್ವಾಮಿ, ಬಳ್ಳಾರಿ

ಶ್ರೀ ಎಚ್.ಬಿ.ಎಲ್.ರಾವ್, ಮಹಾರಾಷ್ಟ್ರ

ಶ್ರೀ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ

ಶ್ರೀ ಕೆ.ಪಿ.ಆಚಾರ್ಯ, ತಮಿಳುನಾಡು

ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ

ಡಾ. ಸಿದ್ಧಲಿಂಗಯ್ಯ
೮೧ನೇ ಅ.ಭಾ.ಕ.ಸಾ. ಸಮ್ಮೇಳನಾಧ್ಯಕ್ಷರು

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ನಿಕಟಪೂರ್ವ ಅಧ್ಯಕ್ಷರು

ಡಾ. ವಿಜಯದೇವಿ ಎಸ್.ಎಸ್.
ಮಹಿಳಾ ವಿ.ವಿ. ಪ್ರತಿನಿಧಿ

ಡಾ. ತಂಬಂಡ ವಿಜಯ್ ಪೂಣಚ್ಚ
ಕನ್ನಡ ವಿ.ವಿ.ಪ್ರತಿನಿಧಿ

ಶ್ರೀ ಕೆ.ಎ. ದಯಾನಂದ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಶ್ರೀಮತಿ ಬಿ.ಟಿ. ಲಲಿತಾ ನಾಯಕ್
ಮಹಿಳಾ ಪ್ರತಿನಿಧಿ

ಡಾ. ಕಾ.ವೆಂ. ಶ್ರೀನಿವಾಸಮೂರ್ತಿ
ಪರಿಶಿಷ್ಟ ಜಾತಿ ಪ್ರತಿನಿಧಿ

ಶ್ರೀ ಬಿ.ಎಚ್. ಸತೀಶ್‌ಗೌಡ
ಸಂಘಸಂಸ್ಥೆಗಳ ಪ್ರತಿನಿಧಿ

ಅಧ್ಯಕ್ಷರ ಮಾತು

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ. ನಾಡು, ನುಡಿ, ಸಾಹಿತ್ಯಕ್ಕೆ ಪ್ರೇರಕಶಕ್ತಿಯಾಗಿ ಹಾಗೂ ಪೋಷಕವಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೫-೫-೧೯೧೫ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ದಿವಾನ್‌ರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ ಸಂಸ್ಥಾಪನೆಗೊಂಡಿತು. ಈವರೆಗೆ ೨೪ ಜನ ಅಧ್ಯಕ್ಷರು ಪರಿಷತ್ತಿನ ಸೇವೆ ಸಲ್ಲಿಸಿದ್ದಾರೆ. ೮೧ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಯನ್ನು ೭೯ ಜನ ಮಹಾನ್ ಲೇಖಕರು ಅಲಂಕರಿಸಿದ್ದಾರೆ. ೧೨೫ ಜನ ಸದಸ್ಯರಿಂದ ಆರಂಭಗೊಂಡ ಪರಿಷತ್ತಿನ ಇಂದಿನ ಸದಸ್ಯರ ಸಂಖ್ಯೆ ೨,೦೮,೦೦೦. ಪರಿಷತ್ತಿನ ಪ್ರಕಟಣೆಗಳ ಸಂಖ್ಯೆ ೧೫೦೦. ಕೇವಲ ಅಂಕಿಸಂಖ್ಯೆಯ ದೃಷ್ಟಿಯಿಂದಲೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಧನೆ ಅನನ್ಯವಾದುದು; ಇನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಕೊಡುಗೆಯಂತೂ ಅವಿಸ್ಮರಣೀಯವಾದುದು.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಕೆಲವೊಂದು ಮಹತ್ವದ ಯೋಜನೆಗಳನ್ನು ಪರಿಷತ್ತು ಕೈಗೊಂಡಿರುತ್ತದೆ. ಮೊದಲನೆಯದಾಗಿ, ಎರಡು ಶತಮಾನಗಳಿಗೂ ಮೀರಿದ ಅವಧಿಯ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗಳ ರಚನೆ ಹಾಗೂ ಪ್ರಕಟಣೆ. ಈ ೧೭ ಸಂಪುಟಗಳ ರಚನೆಯ ಕಾರ್ಯದಲ್ಲಿ ಈಗಾಗಲೇ ಪರಿಣತ ಸಂಪಾದಕರು ಹಾಗೂ ನೂರಾರು ಲೇಖಕರು ಕ್ರಿಯಾಶೀಲರಾಗಿದ್ದು, ಒಂದು ಸಂಪುಟವು ಬಿಡುಗಡೆಯಾಗಿದೆ. ಎರಡನೆಯದಾಗಿ, ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾಗಿ ಕನ್ನಡದ ನೂರು ಮೌಲಿಕ ಗ್ರಂಥಗಳ ಮುದ್ರಣ. ಜೊತೆಗೆ, ಪರಿಷತ್ತಿನ ನೂರು ವರ್ಷಗಳ ಇತಿಹಾಸವನ್ನು ದಾಖಲಿಸುವ ನೆನಪಿನ ಸಂಪುಟದ ಪ್ರಕಟಣೆ.

'ಕನ್ನಡ ಸಾಹಿತ್ಯ ಪರಿಷತ್ತು ಶತಮಾನ : ಕೃತಿ ನೂರು' ಎಂಬ ಯೋಜನೆಯಡಿ ಪುಸ್ತಕಗಳ ಆಯ್ಕೆಗೆ ಪರಿಣತರ ಸಮಿತಿಯನ್ನು ರಚಿಸಲಾಯಿತು. ಈ ಆಯ್ಕೆ ಸಮಿತಿಯು ನೂರು ಪುಸ್ತಕಗಳನ್ನು ಆಯ್ಕೆಮಾಡಿ ಕೊಟ್ಟಿರುತ್ತದೆ. ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ಚಳುವಳಿಗಳು ಹಾಗೂ ವಿವಿಧ ಸಾಹಿತ್ಯಿಕ ಸಂವೇದನೆ ಹಾಗೂ ಅನುಭವ ದ್ರವ್ಯಗಳನ್ನು ಆಯ್ಕೆ ಸಮಿತಿಯು ಗಮನದಲ್ಲಿರಿಸಿಕೊಂಡು ನೂರು

ಪುಸ್ತಕಗಳನ್ನು ಆಯ್ಕೆ ಮಾಡಿರುತ್ತದೆ. ಇದರಲ್ಲಿ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಪ್ರಾತಿನಿಧ್ಯವಿರುವಂತೆ ಸಹ ನೋಡಿಕೊಳ್ಳಲಾಗಿದೆ. ಪ್ರತಿಭೆ, ಪ್ರಾದೇಶಿಕತೆ ಹಾಗೂ ಸಾಮಾಜಿಕ ನ್ಯಾಯಗಳನ್ನು ಪರಿಗಣಿಸಲಾಗಿದೆ. ಈಗಾಗಲೇ ಸಮಗ್ರವಾಗಿ ಲಭ್ಯವಿರುವ ಹಾಗೂ ಮತ್ತೆ ಮತ್ತೆ ಪುನರ್‌ಮುದ್ರಿತವಾಗಿರುವ ಕೃತಿಗಳಿಗೆ ಆದ್ಯತೆ ನೀಡಿಲ್ಲವಾಗಿದ್ದರೂ, ಒಟ್ಟಾರೆ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿರುವ ಲೇಖಕರನ್ನು ಬಹುಮಟ್ಟಿಗೆ ಉಳಿಸಿಕೊಳ್ಳಲಾಗಿದೆ. ಇಂಥ ಮಹತ್ವದ ಪುಸ್ತಕಗಳ ಪಟ್ಟಿಯನ್ನು ಸಿದ್ಧಪಡಿಸಿಕೊಟ್ಟ ಆಯ್ಕೆ ಸಮಿತಿ ಸದಸ್ಯರಾದ ಡಾ. ಸಿದ್ಧಲಿಂಗಯ್ಯ, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಶ್ಯಾಮಸುಂದರ ಬಿದರಕುಂದಿ, ಡಾ. ರಾಜಶೇಖರ ಹತಗುಂದಿ, ಡಾ. ತಾರಿಣಿ ಶುಭದಾಯಿನಿ ಹಾಗೂ ಡಾ. ಮಾಧವ ಪೆರಾಜೆ ಅವರಿಗೆ ನನ್ನ ಕೃತಜ್ಞತೆಗಳು.

ಈ ನೂರು ಕೃತಿಗಳನ್ನು ಏಕ ಚೌಕಟ್ಟಿನಲ್ಲಿ, ಆದರೆ ವಿವಿಧ ಕಲಾವಿನ್ಯಾಸಗಳಲ್ಲಿ ಮುದ್ರಿಸಲು ಸಹ ಯೋಜಿಸಲಾಗಿದೆ. ಸಾಧ್ಯವಾದ ಮಟ್ಟಿಗೂ ಒಟ್ಟಾರೆ ಗುಣಮಟ್ಟದಲ್ಲಿ ಏಕರೂಪತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಪರಿಷತ್ತಿನ ಈ ಯೋಜನೆಯಡಿ ಜೀ.ಶಂ. ಪರಮಶಿವಯ್ಯ ಅವರ ಕೃತಿಯನ್ನು ಪುನರ್‌ಮುದ್ರಿಸಲು ಅನುಮತಿಯನ್ನು ಕೋರಿದಾಗ, ಪರಿಷತ್ತಿನ ಮೇಲಿನ ಗೌರವದಿಂದಾಗಿ ಶ್ರೀಮತಿ ಎ.ಎನ್. ಶಾರದ ಅವರು ತಮ್ಮ ಒಪ್ಪಿಗೆಯನ್ನು ನೀಡಿ ಹೃತ್ಪೂರ್ವಕವಾಗಿ ಸಹಕರಿಸಿದ್ದಾರೆ. ಅವರಿಗೆ ನನ್ನ ಗೌರವಪೂರ್ವಕ ಕೃತಜ್ಞತೆಗಳು.

ಈ ಯೋಜನೆಯಡಿ ಈಗಾಗಲೇ ೫೦ ಪುಸ್ತಕಗಳನ್ನು ಹೊರತರಲಾಗಿದೆ. ಎರಡನೆಯ ಕಂತಿನ ಪುಸ್ತಕಗಳು ಇದೀಗ ಪ್ರಕಟವಾಗುತ್ತಿವೆ.

ಎರಡನೆಯ ಕಂತಿನ ಈ ಪುಸ್ತಕಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಮೆ॥ ಗೀತಾಂಜಲಿ ಗ್ರಾಫಿಕ್ಸ್ ಅವರಿಗೆ ನನ್ನ ಕೃತಜ್ಞತೆಗಳು.

ದಿನಾಂಕ : ೨೩-೦೭-೨೦೧೫
ಬೆಂಗಳೂರು

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಮುನ್ನುಡಿ

೧

ಮಂಗ ಮಾನವನಾದಾಗಲೇ ಜಾನಪದ ಸಂಪ್ರದಾಯ ಮೊಳೆಯಿತು; ಅವನ ಬುದ್ಧಿ ಮನಸ್ಸುಗಳು ವಿಕಾಸವಾದಂತೆಲ್ಲ ಜಾನಪದ ಕಲೆಗಳು ಹೊರಹೊಮ್ಮಿದವು; ಅವನ ನಾಲಗೆಯ ಮೇಲೆ ಮಾತು ಕುಣಿದಾಗಲೇ ಜಾನಪದ ಸಾಹಿತ್ಯ ಉದ್ಭವವಾಯಿತು. ಮಾನವನ ಸಕಲ ವಿದ್ಯೆಗಳಿಗೆ ಈ ಜಾನಪದ ಸಂಪ್ರದಾಯವೇ ತಲಕಾವೇರಿಯಾಯಿತು, ಅವನ ಸಂಸ್ಕೃತಿಯ ಹೊಮ್ಮುಗೆಯಾಯಿತು, ಅವನ ಆಶೆ ಆಕಾಂಕ್ಷೆ ಧ್ಯೇಯೋದ್ದೇಶಗಳ ಮೈದೋರಿಕೆಯಾಯಿತು, ಅವನ ಆತ್ಮವಿಕಾಸದ ಸಶಕ್ತ ಮಾಧ್ಯಮವಾಯಿತು. ಮಾನವನ ಪ್ರಾಚೀನ ಚರಿತ್ರೆಯ ಪುನರ್ರಚನೆಗಿರುವ ಶ್ರೀಮಂತ ಸಾಧನಗಳಲ್ಲಿ ಅದೂ ಒಂದು.

ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿಬೇರು; ಅದು ಜನಸಾಮಾನ್ಯದ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು. ಅದು ಬಾಯಿಂದ ಬಾಯಿಗೆ, ಊರಿಂದೂರಿಗೆ, ಯುಗದಿಂದ ಯುಗಕ್ಕೆ ಹರಿದು ಬರುತ್ತದೆ. ಅದು ಮೊಟ್ಟ ಮೊದಲು ಒಬ್ಬಾನೊಬ್ಬ ವ್ಯಕ್ತಿಯ ಮನೋಗರ್ಭದಲ್ಲಿ ರೂಪಿಕ್ಕಿದರೂ ಕಾಲಕ್ರಮೇಣ ಸಹಸ್ರ ಸಹಸ್ರ ಮುಖಗಳಿಂದ ಹೊರಹೊಮ್ಮುವಾಗ ಹೊಸಹೊಸ ಗಾತ್ರ ಆಕಾರಗಳನ್ನು ಪಡೆದು ಹಿಗ್ಗುತ್ತ ಸಾಮುದಾಯಕ ಮಹತ್ವದ ಗೌರವಕ್ಕೆ ಪಾತ್ರವಾಗುತ್ತದೆ. ಸಾಮಾನ್ಯವಾಗಿ ಜಾನಪದ ಕಲೆ ಸಾಹಿತ್ಯಗಳು ಅನಕ್ಷರಸ್ಥರ ಅಥವಾ ಅಲ್ಪಸ್ವಲ್ಪ ಓದು ಬಲ್ಲವರ ಸೃಷ್ಟಿಯಾಗಿವೆ.

ಲಿಂಗಭೇದವಿಲ್ಲದೆ ನಾಡಿನ ಎಲ್ಲ ಜಾತಿಯ ವಿವಿಧಾಭಿರುಚಿಯ ನಾನಾ ಜನಾಂಗಗಳ ವಿವಿಧ ವಯೋಸಂಸ್ಕಾರಗಳ ಸಾಮಾನ್ಯ ಜನ ಜಾನಪದ ಸಂಪ್ರದಾಯದ ನಿರ್ಮಾಣಕಾರ್ಯದಲ್ಲಿ ತೊಡಗಿದ್ದರಿಂದ ಅದು ರಾಷ್ಟ್ರೀಯತೆಯ ಪಟ್ಟಕ್ಕೆ ಅರ್ಹವಾಗಿದೆ. ಅದರಲ್ಲಿ ಜೀವನದ ಸಮಸ್ತ ಮುಖಗಳೂ ಸಕಲ ವ್ಯವಹಾರಗಳೂ ಮಾರ್ಪೊಳೆದಿವೆ. ಕೃಷಿಕ್ಷೇತ್ರದಲ್ಲಿ, ಮನೆ ಗುಡಿಸಲುಗಳ ಕಟ್ಟಡದಲ್ಲಿ, ದೇವಸ್ಥಾನಗಳ ನಿರ್ಮಾಣದಲ್ಲಿ, ಪಾಕ ಕಲೆಯಲ್ಲಿ, ವಿವಾಹಾದಿ ಸಾಮಾಜಿಕ ವ್ಯವಹಾರಗಳಲ್ಲಿ ಉಡುಗೆ ತೊಡುಗೆಗಳ ಮಾಡಿಕೆಯಲ್ಲಿ, ಆಯುರ್ವೇದಾದಿ ವೈಜ್ಞಾನಿಕ ಕ್ಷೇತ್ರಗಳಲ್ಲಿ ಅದರ ಮೂಲಭೂತಾಂಶಗಳನ್ನು ಗುರುತಿಸಬಹುದು. ಪ್ರಾಚೀನ ಕಾವ್ಯ ನಾಟಕ ಪುರಾಣಗಳ ಅಂತರಾಳದಲ್ಲಿ ಈ ಸಂಪ್ರದಾಯದ ಸತ್ವ ಹಾಗೂ ಜೀವರಸಗಳು ಗುಪ್ತವಾಗಿಯಾದರೂ ಸಮೃದ್ಧವಾಗಿ ಪ್ರವಹಿಸುತ್ತಿವೆ. ರಾಮಾಯಣ ಭಾರತ

ಭಾಗವತಗಳಲ್ಲಿ ಬರುವ ಅನೇಕ ಉಪಾಖ್ಯಾನ ಸನ್ನಿವೇಶ ಘಟನೆಗಳಿಗೆ ಜಾನಪದ ಸಾಹಿತ್ಯವೇ ಮಹಾ ಆಕರ. ನಿದರ್ಶನಾರ್ಥವಾಗಿ ಧರ್ಮವ್ಯಾಧನ ಕಥೆಯನ್ನೂ ನಳೋಪಾಖ್ಯಾನವನ್ನೂ ಹೆಸರಿಸಬಹುದು. ವೇದಗಳಲ್ಲಿಯೂ ಈ ಸಂಪ್ರದಾಯ ಹಾಸುಹೊಕ್ಕಾಗಿ ಸೇರಿಕೊಂಡಿದೆಯೆಂದೂ, ಊರ್ವಶಿ ಪುರೂರವರ ಕಥೆ ಜಾನಪದೀಯವೆಂದೂ,[1] ಸೂರ್ಯ ಚಂದ್ರರ ಪ್ರತೀಕಕಲ್ಪನೆ ಪುರಾತನವಾದುದೆಂದೂ[2] ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ.

ಇಷ್ಟು ಸರ್ವವ್ಯಾಪಿಯಾದ ಸಮೃದ್ಧವಾದ ಸಂಜೀವನ ಸಮರ್ಥವಾದ ಕ್ಷೇತ್ರ ಇತ್ತೀಚಿನ ತನಕ ಪಂಡಿತರ ಮನ್ನಣೆಗೆ ಪಾತ್ರವಾಗದೆ ತಕ್ಕಲು ಬಿದ್ದಿದ್ದರಿಂದ ಆಗಿರುವ ನಷ್ಟ ಅಪಾರ. ಆ ನಷ್ಟವನ್ನೀಗ ತುಂಬಿಕೊಡಲು ಸಾಧ್ಯವೇ ಇಲ್ಲ. ಕೈಗಾರಿಕೀಕರಣ ನಗರೀಕರಣಗಳ ಪರಿಣಾಮವಾಗಿ ಅದೆಷ್ಟೋ ಪಳೆಯುಳಿಕೆಗಳು ನಿರ್ನಾಮಗೊಂಡಿವೆ. ಅಳಿದುಳಿದಿರುವುದನ್ನು ಸಂರಕ್ಷಿಸಿಕೊಂಡರೂ ದೊಡ್ಡನಿಧಿಯೇ ಕೈಗೆಟುಕಿದಂತಾಗುತ್ತದೆ; ಮಾನವ ಸಂಸ್ಕೃತಿಯ ಚರಿತ್ರೆಯನ್ನು ಪುನರ್ನಿರ್ಮಿಸಬಹುದಾಗಿದೆ. ಹಳ್ಳಿಗ ಆಗಾಗ್ಗೆ ಕುರುಕಿಕೊಳ್ಳುವ ಪದ, ಕಟ್ಟುವ ಕತೆ ಮಾತ್ರವಲ್ಲ, ಅವನು ನಿತ್ಯ ವ್ಯವಹಾರದಲ್ಲಿ ಬಳಸುವ ಸಾಧನ ಸಾಮಗ್ರಿಗಳನ್ನೆಲ್ಲ ಸಂಗ್ರಹಿಸಬೇಕಾಗಿದೆ. ಈ ಮಹತ್ಕಾರ್ಯದಲ್ಲಿ ಆಯ್ಕೆಯ ವಿಧಾನ ಸಲ್ಲದು. ಕೀಳೆಂದು ಕಡೆಗಣಿಸದೆ ಕಡ್ಡಿ ಚಿಪ್ಪು ಬಕ್ಕರೆಗಳನ್ನು ಕಲೆಹಾಕಬೇಕು. ಸಂಗ್ರಹಕಾರ್ಯದ ಜೊತೆಗೆ ಸಂಶೋಧನೆ ಸಂಗೋಪನೆಗಳೂ ವ್ಯಾಖ್ಯಾನ ಟಿಪ್ಪಣಿಗಳೂ ಜರುಗಬೇಕು.

ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ. ಪಾಶ್ಚಾತ್ಯ ಪ್ರಭಾವದ ಪರಿಣಾಮವಾಗಿ ನಮ್ಮತನ ಬರಿದಾಗಿ, ಧೈರ್ಯಸ್ಥೈರ್ಯಗಳು ಹುಸಿಯಾಗಿ, ನಮ್ಮ ಜನ ವಿದೇಶೀಯರ ಬಾಲಂಗೋಚಿಗಳಂತೆ ಬದುಕು ನೂಕುವಂತಾಗಿದೆ. ರಾಜಕೀಯ ದಾಸ್ಯ ತೊಲಗಿದರೂ ಬುದ್ಧಿದಾಸ್ಯ ಹೋಗಿಲ್ಲ. ನಡೆನುಡಿಗಳಲ್ಲಿ ವೇಷಭೂಷಣಗಳಲ್ಲಿ ನಾವು ಅವರನ್ನಣಕಿಸುತ್ತಿದ್ದೇವೆಯೇ ಹೊರತು, ಅವರಲ್ಲಿ ಯಾರೂ ನಮ್ಮಂತಾಗಿಲ್ಲ. ನಮ್ಮಲ್ಲಿ ಮಹಾಮೇಧಾವಿಗಳೆಂದು ಹೆಸರಾಗಿರುವವರೂ

---

1. It seems quite probable that the Puranas and the great dramatist Kalidasa took their account from preexisting folklore tradition.

- Vedic Folklore

by V.S. Agarwala, Pub. in Folklore, Vol. VI-1 Page 4

2. We find a vast body of Folklore tradition which demonstrates the popularity and potency of the Sun-moon symbolism in all races of mankind but specially in India the Hindu tradition where sun and moon have became the maternal uncles for all times to come.

- Ibid Page 2

ಜಾನ್‌ಸನ್‌ನನ್ನು ಆರಾಧಿಸುವಂತಾಗಿದೆ. ಅವರಿಗೆ ಯಾವುದರಲ್ಲಿಯೂ ನಾವು ಕೀಳಲ್ಲವೆಂಬ ಆತ್ಮಪ್ರತ್ಯಯ ದಿನೇದಿನೇ ನಶಿಸುತ್ತಿದೆ. ಅಲ್ಲಿ ಹುಟ್ಟುಗೊಂಡ ಸ್ಕೌಟ್‌ಸಂಸ್ಥೆ, ಲಯನ್ಸ್ ಕ್ಲಬ್, ರೋಟರಿ ಮಂಡಳಿ, ಜ್ಯೂನಿಯರ್ ಚೇಂಬರ್ ಇನ್ನೂ ಮೊದಲಾದುವು ಇಲ್ಲಿಯ ಹಳ್ಳಿಹಳ್ಳಿಗೂ ಪ್ರವೇಶಿಸುತ್ತಿವೆ. ಅವರ ದತ್ತು ಮಕ್ಕಳೆಂಬಂತೆ ನಮ್ಮವರು ಅವುಗಳನ್ನು ಸಾಲುಸಾಲಾಗಿ ಬೆಳೆಸುತ್ತಿದ್ದಾರೆ. ನಮ್ಮ ಸಂಸ್ಥೆಗಳನ್ನು ಅವರು ತಮ್ಮ ದೇಶದಲ್ಲಿ ನಾಟಿಹಾಕಿ ಬೆಳೆಸುತ್ತಿದ್ದಾರೆಯೇ? ಅಂಥ ಸಂಸ್ಥೆಗಳನ್ನು ಇಲ್ಲಿಯೇ ಹೊಸದಾಗಿ ಸೃಷ್ಟಿಸುವ ತಾಕತ್ತು ನಮ್ಮವರಿಗಿಲ್ಲವೆ? ಎಲ್ಲಿಯವರೆಗೆ ಜನ ಪರರ ಭಾವನಾಭಿಪ್ರಾಯಗಳನ್ನು ಮೆಲುಕು ಹಾಕುತ್ತಾರೊ ಅಲ್ಲಿಯವರೆಗೆ ತಮ್ಮದೆನ್ನುವ ಭಾವಾಭಿಪ್ರಾಯಗಳು ಹೊರಹೊಮ್ಮುವುದಿಲ್ಲ, ಬುದ್ಧಿದಾಸ್ಯ ತೊಲಗುವುದಿಲ್ಲ, ಸೃಜನಶಕ್ತಿ ವಿಕಾಸಹೊಂದುವುದಿಲ್ಲ. ನಮ್ಮ ಮನೆಗಳಲ್ಲಿ ವಿದೇಶೀಯ ಕವಿಗಳ ಸಂತರ ಭಾವಚಿತ್ರಗಳು ತೂಗಾಡುತ್ತಿರುವಂತೆ ಅವರ ಮನೆಗಳಲ್ಲಿ ಟಾಗೋರ್ ತುಕಾರಾಮ್ ಬಸವೇಶ್ವರ ಗಾಂಧೀಜಿಯವರ ಭಾವಚಿತ್ರಗಳು ತೂಗಾಡುತ್ತಿವೆಯೆ?

ಇದರಿಂದ ಪಾಶ್ಚಾತ್ಯ ಜ್ಞಾನ ವಿಜ್ಞಾನಗಳನ್ನು ಕಲಿಯಬಾರದೆಂದಲ್ಲ, ಕಲಿಯಲೇಬೇಕು. ಆದರೆ ಆ ಕಲಿವು ನಮ್ಮ ತಿಳಿವಿಗೆ ಪೋಷಕವಾಗಿರಬೇಕೇ ಹೊರತು ಮಾರಕವಾಗಬಾರದು. ನಮ್ಮ ಕಾವೇರಿಗೆ ಥೇಮ್ಸ್‌ನದಿಯ ನೀರು ಹರಿದುಬರಲಿ, ವೋಲ್ಗಾನದಿಯ ನೀರು ಹರಿದು ಬರಲಿ, ಅಮೆಜಾನ್ ನದಿಯ ನೀರೂ ಬರಲಿ, ಆದರೆ ನಮ್ಮ ಕಾವೇರಿ ಕಾವೇರಿಯಾಗುಳಿಯಲಿ. ನಮ್ಮ ಶರೀರಪುಷ್ಟಿಗೆ ಅವರ ಗೋಧಿ ಹಾಲು ಬೆಣ್ಣೆಗಳು ಬರಲಿ; ಆದರೆ ಅವು ನಮ್ಮ ಆತ್ಮವಿಕಾಸಕ್ಕೆ ಅಡ್ಡ ಬರದಿರಲಿ. ಆದ್ದರಿಂದ ಅಂಧಾನುಕರಣೆಯಾಗಲೀ ಪರನೇಯ ಬುದ್ಧಿಯಾಗಲೀ ಸ್ವಬುದ್ಧಿ ವಿಕಾಸಕ್ಕೆ ಅನುವಾಗುವುದಿಲ್ಲ. ಒಂದು ವರ್ಷ ಮಾತ್ರ ತಾಯಿಯ ಹಾಲು ಕುಡಿದು ಅನಂತರದ ಆಯುಸ್ಸಿನಲ್ಲಿ ಎಮ್ಮೆಯ ಹಾಲು ಕುಡಿದಿದ್ದರಿಂದ ಕುಡಿದವನಿಗೆ ಕೋಣನ ಬುದ್ಧಿ ಬರಬಾರದು; ತಾನು ಕೋಣನ ವಂಶದವನೆಂದು ಹೇಳಿಕೊಳ್ಳುವ, ತಾಯಿಯನ್ನು ಮರೆಯುವ ಆತ್ಮಾವಹೇಳನ ಬುದ್ಧಿಯನ್ನು ಕಂಡಾಗ ಈ ದೇಶಕ್ಕೆ ಮೋಕ್ಷವುಂಟೇ ಎಂಬ ಸಂಶಯ ಮೂಡದಿರದು.

ವಿಜ್ಞಾನದ ದಿಗಂತ ವಿಸ್ತರಿಸಿದಂತೆಲ್ಲ, ತಾಂತ್ರಿಕಜ್ಞಾನ ವಿಸ್ಮಯಕಾರಿ ವೇಗದಲ್ಲಿ ವೃದ್ಧಿಹೊಂದಿದಂತೆಲ್ಲ ಜೀವನದೃಷ್ಟಿ ಮೌಲ್ಯಗಳು ಅನಿವಾರ್ಯವಾಗಿ ಬದಲಾವಣೆಯಾಗ ಬೇಕಾಗಿದೆ; ಹೊಸ ಸನ್ನಿವೇಶ ಪರಿಸ್ಥಿತಿಗನುಗುಣವಾಗಿ ಹೊಂದಿಕೊಂಡರೇನೇ ಜೀವಿ ಬದುಕುತ್ತದೆ; ಇಲ್ಲವಾದರೆ ಅದು ಸಾಯುತ್ತದೆ. ಬೇರೆ ಕಡೆಯಿಂದ ವಲಸೆಬಂದ ಜೀವಿಗೂ ಈ ಮಾತು ಅನ್ವಯಿಸುತ್ತದೆ. ಆ ಜೀವಿ ಕಾಲಕ್ರಮೇಣ ತಾನು ನೆಲಸಿದ ನೆಲಕ್ಕೂ ನೀರುಗಾಳಿಗಳಿಗೂ ಒಗ್ಗಿಕೊಂಡಾಗಲೇ ಅದರ ಬೆಳವಣಿಗೆ ಮತ್ತು ಸಂತಾನೋತ್ಪತ್ತಿ ಸಾಧ್ಯವಾಗುತ್ತದೆ. ವಿಜ್ಞಾನಿ ಹೊಸದಾಗಿ ಸೃಷ್ಟಿಸಿದ ಹೊಸತಳಿ

ರೋಗರುಜಿನಾದಿಗಳಿಂದ ಪಾರಾಗಿ ಬದುಕಬೇಕಾದರೆ, ತನ್ನ ಪೀಳಿಗೆಯನ್ನು ಬೆಳೆಸಬೇಕಾದರೆ, ಅದು ವಾತಾವರಣಕ್ಕೆ ಮೊದಲು ಹೊಂದಿಕೊಳ್ಳಬೇಕೆಂಬ ಸಂಗತಿ ಎಲ್ಲರಿಗೂ ಗೊತ್ತಿದ್ದದ್ದೇ. ಈ ತಳಿಶಾಸ್ತ್ರದ ಮೂಲನಿಯಮಗಳು ಸಾಹಿತ್ಯಕ್ಕೂ ಸಮುಚಿತವಾಗಿ ಅನ್ವಯವಾಗುತ್ತವೆ. ವಿದೇಶದಿಂದ ಆಮದಾದ ಹೊಸ ಕಾವ್ಯಪ್ರಕಾರ ಇಲ್ಲಿ ಬೇರೂರಬೇಕಾದರೆ ಇಲ್ಲಿಯ ಸಂಪ್ರದಾಯಕ್ಕೆ ತಕ್ಕಮಟ್ಟಿಗಾದರೂ ಶರಣಾಗ ಬೇಕಾಗುತ್ತದೆ. ಇಲ್ಲವಾದರೆ ಅದು ಆರುಕಾಲಿನ ಎರಡು ತಲೆಯ ಕರುವಿನಂತೆ ಕ್ಷಿಪ್ರದಲ್ಲಿ ಸತ್ತುಹೋಗುತ್ತದೆ. ಅದು ದಿನೇದಿನೇ ನೆಲದ ಸಾರವನ್ನು ಸುತ್ತಣ ಗಾಳಿಯನ್ನು ಹೀರಿಕೊಂಡು ಸುಪುಷ್ಟಗೊಂಡಾಗ ಮಾತ್ರ ಅದರ ಅಸ್ತಿತ್ವಕ್ಕೆ ಧಕ್ಕೆಯೊದಗುವುದಿಲ್ಲ. ಜಾನಪದ ಸಂಪ್ರದಾಯದ ನೆಲಗಟ್ಟಿನ ಮೇಲೆ ಅನ್ಯದೇಶೀಯ ಪ್ರಕಾರಗಳು ಭದ್ರವಾಗಿ ನಿಂತಾಗ ಅವಕ್ಕೆ ಚ್ಯುತಿಯೊದಗುವುದಿಲ್ಲ.

ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕುಳಿಸುತ್ತದೆ. ತನ್ನತನದ ನೆಲಗಟ್ಟಿನ ಮೇಲೆ ಹೊಸಬಾಳನ್ನು ರೂಪಿಸುವಂತಾಗುತ್ತದೆ. ಸಾಹಿತ್ಯವಾಗಲಿ, ಕಲೆಯಾಗಲಿ, ಯಾವ ಜೀವನ ವ್ಯಾಪಾರವೇ ಆಗಲಿ ದಿಕ್ಕು ತಪ್ಪಿದಾಗ ಜಾನಪದ ಸಂಪ್ರದಾಯ ಧ್ರುವತಾರೆಯಾಗುತ್ತದೆ. ಜಾನಪದದ ತಾಯಿರೆಂಬೆಯ ಮೇಲೆ ಅನ್ಯವೃಕ್ಷದ ರೆಂಬೆಯನ್ನು ಕಸಿಕಟ್ಟಿದಾಗ ಮಾತ್ರ ಫಲಿತಾಂಶ ಯಶಸ್ವಿಯಾಗುತ್ತದೆ. ಆಫ್ರಿಕಾದ ಆದಿವಾಸಿಗಳ ಶಿಲ್ಪ ತನ್ನ ಕಲೆಗೆ ಸ್ಫೂರ್ತಿನೀಡಿತೆಂದು ಪಿಕಾಸೊ ಹೇಳಿಕೊಳ್ಳುತ್ತಾನೆ. ರಾಬರ್ಟ್ ಬರ್ನ್ಸ್‌ನೂ ಜಾನಪದ ಗೀತೆಗಳಿಂದ ಸ್ಫೂರ್ತಿ ಪಡೆದು ಅನೇಕ ಸುಂದರ ಕವನಗಳನ್ನು ರಚಿಸಿದ ಸಂಗತಿ ಸರ್ವವೇದ್ಯವಾಗಿದೆ. ರವೀಂದ್ರರ ಸಾಹಿತ್ಯ ಕಲೆಗಳ ಮೇಲೆ ಜಾನಪದ ಸಂಸ್ಕೃತಿಯ ಪ್ರಭಾವ ಸಾಕಷ್ಟು ಬಿದ್ದಿದೆ.[1] ಜಾನಪದ ವಾಙ್ಮಯವನ್ನು ಸಂಗ್ರಹಿಸಿ ಸಂರಕ್ಷಿಸಬೇಕೆಂದು ತಮ್ಮ ಸಹಪಾಠಿಗಳಿಗೆ ಹೇಳುತ್ತಿದ್ದರಲ್ಲದೆ, ಆ ವಿಷಯ ಕುರಿತು ಲೋಕಸಾಹಿತ್ಯವೆಂಬ ಗ್ರಂಥವನ್ನೂ ಬರೆದು ಪ್ರಕಟಿಸಿದರು. ನಾಟೀ ವೈದ್ಯವನ್ನು ನಮ್ಮ ಡಾಕ್ಟರ್ ಪ್ರಭೃತಿಗಳು ಅವೈಜ್ಞಾನಿಕವೆಂದು ಪರಿಗಣಿಸದೆ ವಿಚಾರಪರರಾಗಿ ಪರಿಶೀಲಿಸಿ ಅದರ ಉಪಯುಕ್ತತೆಯನ್ನು ಕಂಡುಕೊಂಡರೆ ನಮ್ಮ ಜನ ಬದುಕಿಕೊಂಡಾರು. ಬಾಚಿ ಕಡಿತಕ್ಕೆ ಬಾಚಿಯ ಸೊಪ್ಪು, ಗಾಜುಹೊಕ್ಕ ಗಾಯಕ್ಕೆ ಸ್ವಮೂತ್ರ ಚಿಕಿತ್ಸೆ, ಕೆಲವೊಂದು ಗಾಯಕ್ಕೆ ಲಂಟಾನ ಸೊಪ್ಪಿನ ರಸದೊಡನೆ

---

1. The influence of Folk culture - art, music, dance, literature - is directly to be found everywhere in all his activities and creations.

Influence of Folk Art on Some Modern Artists
- by Chittaranjan Dev, Pub. in Folklore, Vol. 1, No. 5 P. 342

ಮರ್ದಿಸಿದ ಸುಣ್ಣ, ಜ್ವರಶಿರೋವೇದನೆಗೆ ಕೆಮ್ಮಣ್ಣಿನ ಪಟ್ಟು ಇತ್ಯಾದಿ ಸುಲಭೌಷಧಗಳು ರಾಮಬಾಣವಾಗುವ ಪಕ್ಷಕ್ಕೆ ಬಡವ ಸಾಲಮಾಡಿ ಹಣ ತೆರಬೇಕೇಕೆ? ಈ ಗಿಡಮೂಲಿಕೆಗಳ ಗುಣಾವಗುಣಗಳನ್ನು ಕಂಡುಹಿಡಿದು ವೈದ್ಯರು ಸುಲಭ ಚಿಕಿತ್ಸೆಗೆ ನೆರವಾಗುವುದಾದರೆ ಬಡವರು ಬದುಕಿಕೊಂಡಾರು! ಜಾನಪದ ಸಾಹಿತ್ಯದಿಂದ ಸಾಹಿತಿಗಳು ಸ್ಫೂರ್ತಿಪಡೆದಾಗ ಮಾತ್ರ ಕನ್ನಡ ಸಾಹಿತ್ಯ ಅತ್ಯುಚ್ಚಮಟ್ಟವನ್ನು ಮುಟ್ಟಿತ್ತೆಂಬ ಸಂಗತಿ ವಚನ ಮತ್ತು ದಾಸಸಾಹಿತ್ಯವನ್ನೋದಿದವರಿಗೆ ಮನದಟ್ಟಾಗದಿರಲಾರದು.

ಇಷ್ಟೇ ಅಲ್ಲ; ಜಾನಪದ ಸಂಪ್ರದಾಯದ ಮರುಕಳಿಕೆ ಇತಿಹಾಸದ ಮೇಲೆ ಅಪಾರವಾದ ಬೆಳಕು ಚೆಲ್ಲುತ್ತದೆ; ಪುರಾತತ್ವಶಾಸ್ತ್ರ ಜನಾಂಗ ವಿಜ್ಞಾನ ಸಮಾಜವಿಜ್ಞಾನ ಭಾಷಾವಿಜ್ಞಾನಗಳಿಗೂ ಅದಕ್ಕೂ ಹತ್ತಿರದ ನಂಟು. ಈ ದೃಷ್ಟಿಯಿಂದ ಅದರ ಜೀರ್ಣೋದ್ಧಾರ ಕಾರ್ಯ ಬಹು ಹಿಂದೆಯೇ ಪಾಶ್ಚಾತ್ಯದೇಶಗಳಲ್ಲಿ ಪ್ರಾರಂಭವಾಯಿತು. ೧೫೫೫ರಲ್ಲಿಯೇ ಆಲಸ್ ಮ್ಯಾಗ್ನಸ್ ಎಂಬುವನು ಸ್ವೀಡನ್ನಿನ ಜಾನಪದ ವಾಙ್ಮಯದ ಹಿನ್ನೆಲೆಯಲ್ಲಿ ರೈತಜೀವನದ ವಿವರಣೆ ನೀಡಿದನು. ರಷ್ಯಾದಲ್ಲಿ ಹದಿನೇಳನೆಯ ಶತಮಾನದ ಆದಿಭಾಗದಲ್ಲಿಯೇ ಚಾರಿತ್ರಿಕ ಗೀತೆಗಳ ಮತ್ತು ಜಾನಪದ ಕತೆಗಳ ಸಂಗ್ರಹಗಳು ಸಿದ್ಧವಾದವು. ರಿಚರ್ಡ್ ಜೇಮ್ಸ್ ಎಂಬ ಇಂಗ್ಲಿಷ್ ಪ್ರವಾಸಿಗಾಗಿ (೧೬೧೯–೧೬೨೦) ಮೊದಲನೆಯ ಸಂಗ್ರಹ ಸಿದ್ಧವಾಯಿತು. ಮಾಸ್ಕೋ ನಗರದಲ್ಲಿ ೪೦ ವರ್ಷ ಜೀವಿಸಿದ್ದ ಕೊಲಿನ್ಸ್ ಎಂಬ ಆಂಗ್ಲ ೧೬೬೦ ಮತ್ತು ೧೬೬೭ರಲ್ಲಿ ಎರಡು ಕತೆಗಳನ್ನು ಬರೆದಿಟ್ಟುಕೊಂಡನು. ೧೭೫೯ರಲ್ಲಿ ಜಿ.ಎನ್. ತೆಪ್ಲೋವ್ ಗೀತೆಗಳ ಸಂಕಲನವೊಂದನ್ನು ಸಂಪಾದಿಸಿದನು. ಅಲ್ಲಿಂದೀಚೆಗೆ ಈ ಸಂಗ್ರಹಕಾರ್ಯ ಆ ದೇಶದಲ್ಲಿ ನಿರಂತರವಾಗಿ ಸಾಗುತ್ತಿದೆ. ಇಂಗ್ಲೆಂಡಿನಲ್ಲಿ ಟಿ. ಪರ್ಸಿ ಎಂಬುವನು ೧೭೬೫ರಲ್ಲಿ ಶುದ್ಧವಾದ ಹಳೆಯಗೀತೆಗಳನ್ನು ಪ್ರಕಟಿಸಿದನು. ೧೭೭೮–೧೭೭೯ರ ಸಮಯದಲ್ಲಿ ಜರ್ಮನಿಯ ಗಾತ್‌ಫ್ರಿಡ್ ಹರ್ಡರ್ ಎಂಬುವನು ಅನೇಕ ಜನಾಂಗಗಳ ಜಾನಪದಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದ ನಂತರ ಯುರೋಪಿನ ನಾನಾ ರಾಷ್ಟ್ರಗಳಲ್ಲಿ ಈ ಕಾರ್ಯ ತುಂಬ ಹುರುಪಿನಿಂದ ಸಾಗಲಾರಂಭಿಸಿತು. ಗ್ರಿಮ್ ಸಹೋದರರ (೧೮೧೨–೧೮೧೫) ಕಥಾಸಂಕಲನವಂತು ಅನೇಕ ಕಾರ್ಯಕರ್ತರ ಕಣ್ಣು ತೆರೆದದ್ದಲ್ಲದೆ, ವೈಜ್ಞಾನಿಕ ವಿಧಾನದ ಜಾನಪದ ವ್ಯಾಸಂಗಕ್ಕೆ ಬುನಾದಿ ಹಾಕಿಕೊಟ್ಟಂತಾಯಿತು. ಮುಂದಿನ ಪೀಳಿಗೆಗೆ ಅವರು ಮಾದರಿಯಾದರು. ರಷ್ಯಾದೇಶದ ಗ್ರಿಮ್ ಎಂದು ಪ್ರಸಿದ್ಧಿಯಾದ ಬುಸ್ಲಾಯೇವ್ (೧೮೧೮–೧೮೯೭) ಆ ಸಹೋದರರ ಜಾನಪದ ಪ್ರಜ್ಞೆಯನ್ನೂ ವೈದುಷ್ಯವನ್ನೂ ಮನಸಾರೆ ಹೊಗಳಿದನು. ರಷ್ಯಾದ ಮತ್ತೊಬ್ಬ ಗಮನಾರ್ಹವಾದ ಸುಪ್ರಸಿದ್ಧ ವ್ಯಕ್ತಿಯೆಂದರೆ ಎ. ಎನ್. ಅಫನಾಸ್ಸೆವ್ (೧೮೨೬–೧೮೭೧).

ಸಂಸ್ಕೃತ ಭಾಷಾಸಾಹಿತ್ಯಗಳ ಕಡೆಗೆ ಪಾಶ್ಚಾತ್ಯ ವಿದ್ವಾಂಸರ ಗಮನ ಹರಿದಾಗ, ಥೀಯೋಡಾರ್ ಬೆನ್‌ಫಿ ಪಂಚತಂತ್ರವನ್ನು ಪ್ರಕಟಿಸಿ, ಕಥಾ ಪ್ರಪಂಚದ ಕೊಳುಕೊಡೆಯ ಸಂಬಂಧವನ್ನು ವಿವರಿಸಿದಾಗ, ಈ ಕ್ಷೇತ್ರದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತೆನ್ನ ಬಹುದು. ಬೆನ್‌ಫಿಯ ಪ್ರಾಚ್ಯ ಋಣತತ್ವ ದೇಶಾಂತರಗಮನತತ್ವ ಫ್ರಾನ್ಸ್‌ದೇಶದ ಜೋಸೆಫ್ ಬೀಡಿಯರ್‌ನ ಸಂದೇಹವನ್ನು ಪ್ರಬಲಪಡಿಸಿದರೂ, ರಷ್ಯಾ ವಿದ್ವಾಂಸರ ಮನ್ನಣೆಗೆ ಪಾತ್ರವಾಯಿತು. ತೌಲನಿಕ ಜಾನಪದ ವಾಙ್ಮಯ ಕ್ಷೇತ್ರದಲ್ಲಿ ಚಿರತಾರೆಯಾಗುಳಿದಿರುವ ಮತ್ತೊಂದು ಹೆಸರೆಂದರೆ ಫಿನ್‌ಲೆಂಡಿನ ಕಾರ್ಲೆಕ್ರೋನ್ (೧೮೬೩–೧೯೩೩)ಇತರ ಸ್ಕಾಂಡಿನೇವಿಯಾ ವಿದ್ವಾಂಸರೊಡಗೂಡಿ ೧೯೦೭ರಲ್ಲಿ ಅಂತರರಾಷ್ಟ್ರೀಯ ಜಾನಪದ ಕಾರ್ಯಕರ್ತರ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಟೇಲರ್, ಆಂಡ್ರ್ಯೂ ಲ್ಯಾಂಗ್, ವಿಲ್‌ಹೆಲ್ಮ್ ವೂಂಟ್, ಜೇಮ್ಸ್ ಫ್ರೇಜರ್, ಎ. ಎನ್. ವೆಸಿಲೋವ್‌ಸ್ಕಿ, ವಿ.ಎಫ್. ಮಿಲರ್ (೧೮೪೮–೧೯೧೩), ಹಾನ್ಸ್ ನೌಮನ್, ಮ್ಯಾಕ್ಸಿಮ್ ಗಾರ್ಕಿ, ಎ. ಎಫ್. ಹಿಲ್ ಫರ್ಡಿಂಗ್, ವೈ. ಎಮ್. ಸೊಕೋಲೇವ್, ಸ್ಟಿತ್ ಥಾಂಸನ್ ಮೊದಲಾದವರು ಜಾನಪದೀಯ ಸಂಗ್ರಹ, ಸಂಸ್ಕರಣ, ಸಂಶೋಧನೆ ಮತ್ತು ವ್ಯಾಸಂಗಗಳಿಗಾಗಿ ತಮ್ಮ ಜೀವಮಾನವನ್ನೆಲ್ಲ ಮುಡಿಪಿಟ್ಟು ಅಗಾಧಸೇವೆ ಸಲ್ಲಿಸಿದ್ದಾರೆ. ಪ್ರಪಂಚದ ನಾನಾ ರಾಷ್ಟ್ರಗಳಲ್ಲಿ ಜಾನಪದೀಯ ಸಂಸ್ಥೆಗಳು ರೂಪತಾಳಿವೆ. ಈಗ ಜಾನಪದೀಯ ವ್ಯಾಸಂಗ ಚಾರಿತ್ರಿಕ ವಿಜ್ಞಾನದ ಮಟ್ಟಕ್ಕೇರಿ, ನಾನಾ ವಿಧಾನಗಳು ಹುಟ್ಟಿಕೊಂಡಿವೆ : ೧. ಪೌರಾಣಿಕ ಕಥಾವಿಧಾನ ೨. ದೇಶಾಂತರ ಕಥಾವಿಧಾನ ೩. ಜಾನಾಂಗಿಕ ಕಥಾವಿಧಾನ ೪. ಮನೋವಿಶ್ಲೇಷಣಾತ್ಮಕ ವಿಧಾನ ೫. ಚಾರಿತ್ರಿಕ ವಿಧಾನ.

ಭರತಖಂಡದಲ್ಲಿ ಜಾನಪದೀಯ ಜೀರ್ಣೋದ್ಧಾರಕ್ಕೆ ಪಾಶ್ಚಾತ್ಯ ವಿದ್ವಾಂಸರ ಸಂಪರ್ಕ ಬಹುಮಟ್ಟಿಗೆ ಕಾರಣವಾಗಿದೆ. ಜನಸಾಮಾನ್ಯರಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಿದ್ದ ವಾಙ್ಮಯವನ್ನು ಕಲೆಹಾಕಿ ಅದರ ಪ್ರಯೋಜನವನ್ನು ಮುಂದಿನವರಿಗೆ ತೋರಿಸಿಕೊಟ್ಟ ಶ್ರೇಯಸ್ಸು ಯೂರೋಪೀಯ ಅಧಿಕಾರಿಗಳಿಗೆ ಸೇರಿದ್ದು. ಸಿ.ಇ. ಗೋವರ್ ೧೮೭೨ರಲ್ಲಿಯೇ ದಕ್ಷಿಣ ಇಂಡಿಯಾದ ಜಾನಪದ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಜಿ.ಎ. ಗ್ರಿಯರ್‌ಸನ್ 'ಕೆಲವು ಭೋಜಪುರಿ ಜಾನಪದಗೀತೆ'ಗಳನ್ನೂ (೧೮೮೪), ಪಿ.ಆರ್.ಟಿ. ಗುರ್ದನ್ 'ಕೆಲವು ಅಸ್ಸಾಮೀ ಗಾದೆಗಳ'ನ್ನೂ (೧೮೮೧), ರೆ॥ ಎಚ್. ಹಿಸ್ಲಾಪ್ ೧೮೮೬ರಲ್ಲಿ ಜಾನಪದ ಕಥೆಗಳಲ್ಲಿಯ ಆದಿವಾಸಿಗಳ ರೂಢಿ ಸಂಪ್ರದಾಯಗಳನ್ನೂ, ಆರ್. ಸಿ. ಟೆಂಪಲ್ ಪಂಜಾಬಿನ ಜಾನಪದ ಕಥೆಗಳನ್ನೂ (೧೮೮೫) ಪ್ರಕಾಶಪಡಿಸಿದರು. ಹತ್ತು ಸಂಪುಟಗಳಲ್ಲಿ ಪ್ರಕಟಗೊಂಡ ಪೆಂಜರ್ ಅವರ 'ಕಥಾಸಾಗರ' ಎಂಬ ಗ್ರಂಥ ಉಲ್ಲೇಖನೀಯವಾಗಿದೆ. ಇತ್ತೀಚೆಗಂತು ಭರತಖಂಡದ ನಾನಾ ಭಾಗಗಳಲ್ಲಿ ಜಾನಪದ

ಸಂಗ್ರಹಕಾರ್ಯ ತುಂಬ ಬಿರುಸಿನಿಂದ ಸಾಗುತ್ತಿದೆ. 'ಹಿಂದೂಸ್ಥಾನದ ಪ್ರಾಚೀನ ಲಾವಣಿ ಕಥೆ'ಗಳನ್ನು ಸಂಗ್ರಹಿಸಿದ (೧೮೮೨) ತೋರುದತ್, 'ಮರಾಠಿ ಗಾದೆಗಳ ಕೋಶ'ವನ್ನು ಸಿದ್ಧಪಡಿಸಿದ (೧೯೦೦) ಗಣೇಶ ನಾರಾಯಣ ದೇಶಪಾಂಡೆ, 'ತೆಲುಗು ಗಾದೆಗಳ ಕೋಶ'ವನ್ನು ತಯಾರಿಸಿದ (೧೮೬೮) ರವಿಪತಿ ಗುರುವಾಯುರು, 'ಅಸ್ಸಾಮಿನ ಜಾನಪದ ಕತೆ'ಗಳನ್ನು ಸಂಗ್ರಹಿಸಿದ ಜೆ. ಬರುವಾ ಇಂಥ ನೂರಾರು ಮಂದಿ ವಿದ್ವಾಂಸರ ಪರಿಶ್ರಮದಿಂದ ಭಾರತೀಯ ಜಾನಪದ ವಾಙ್ಮಯ ಸಮೃದ್ಧವಾಗಿ ಹೊರಬಿದ್ದಿದೆ. ದೇವೇಂದ್ರನಾಥ ಸತ್ಯಾರ್ಥಿ, ವೆರಿಯರ್ ಎಲ್ವಿನ್, ಪ್ರಫುಲ್ಲದತ್ತ ಗೋಸ್ವಾಮಿ, ಶಂಕರ ಸೇನಗುಪ್ತ, ಹಲಸಂಗಿ ಗೆಳೆಯರು, ಗೋರೂರು ರಾಮಸ್ವಾಮಿ ಅಯ್ಯಂಗಾರ್ ಮೊದಲಾದವರು ಈ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಅಗಾಧವಾಗಿದೆ, ಮುಂದಿನವರಿಗೆ ಮಾರ್ಗದರ್ಶಕವಾಗಿದೆ.

ಜಾನಪದ ಸಂಪ್ರದಾಯದ ಕುಟುಂಬ ಬಹುದೊಡ್ಡದು; ಅಷ್ಟೇ ವ್ಯಾಪಕವಾದದ್ದು. ಅದರ ಬೇರುಗಳು ಪ್ರಾಚೀನತೆಯ ಗರ್ಭಾಂತರಾಳದಲ್ಲಿ ಹುದುಗಿಕೊಂಡಿರುವಂತೆಯೆ ಅದರ ಕೊಂಬೆಗಳು ಸಂಕೀರ್ಣ ಸ್ವರೂಪದ ಆಧುನಿಕತೆಯಲ್ಲಿ ಲಯವಾಗಿವೆ. ಅದು ಪ್ರವೇಶಿಸದ ಜೀವನವ್ಯಾಪಾರವಿಲ್ಲ. ಗೀತೆ, ಕತೆ, ಲಾವಣಿ, ಯಕ್ಷಗಾನ, ಒಗಟು, ಗಾದೆ, ಮಂತ್ರ, ತಂತ್ರ, ಚಿತ್ರ, ಶಿಲ್ಪ, ವೈದ್ಯ, ಕೃಷಿ, ನಂಬಿಕೆ – ಹಬ್ಬ ಹರಿದಿನಗಳು – ಇವೆಲ್ಲ ಆ ಸಂಪ್ರದಾಯದ ಶಾಖೋಪಶಾಖೆಗಳು. ಸಂಸ್ಕೃತಿ ನಾಗರಿಕತೆಗಳ ಕಾರಂಜಿಗಳಂತಿರುವ ಈ ಶಕ್ತಿವಾಹಿನಿಗಳು ಜನಜೀವನದಲ್ಲಿ ಸಂಗಮಗೊಳ್ಳುವಂತೆ ವ್ಯವಸ್ಥೆ ಮಾಡಬೇಕಾದ್ದು ಜವಾಬ್ದಾರಿಯುಳ್ಳವರ ಆದ್ಯಕರ್ತವ್ಯ. ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೊಳ್ಳಬೇಕಾಗಿದೆ.

೨.

ಈಗಾಗಲೇ ಕನ್ನಡ ನಾಡಿನಲ್ಲಿ ನಡೆದಿರುವ ಕಾರ್ಯ ಗೀತೆಗಳ ಸಂಕಲನಕ್ಕೆ ಸೀಮಿತವಾಗಿದೆ. ಈ ಕಾರ್ಯವೂ ಪೂರ್ತಿಯಾಗಿಲ್ಲ. ಕಥಾನಾಟಕ ವಿಭಾಗದಲ್ಲಿ ಆಗಬೇಕಾದ ಕಾರ್ಯ ಅಗಾಧವಾಗಿದೆ. ಗಾದೆಗಳ ಸಂಗ್ರಹ ತಕ್ಕಮಟ್ಟಿಗೆ ನಡೆದಿದ್ದರೂ ಒಗಟುಗಳ ಸಂಕಲನದ ಕಡೆಗೆ ಸಂಗ್ರಹಕಾರರ ಗಮನ ಹರಿದಿಲ್ಲ. ರೂಢಿ ಸಂಪ್ರದಾಯಗಳ ಆಚಾರ ವ್ಯವಹಾರಗಳ ಕಟ್ಟುನಿಟ್ಟು ನಂಬಿಕೆಗಳ ಅಕ್ಷಯ ಖನಿಯನ್ನು ಇಂದಿಗೂ ಕೆದಕಿಲ್ಲ. ಜಾನಪದ ವೈದ್ಯಾದಿ ಶಾಸ್ತ್ರವಿಷಯಗಳಂತು ಮರೆತುಹೋಗುತ್ತಿವೆ. ರಾಜ್ಯದ ಎಲ್ಲ ಕಡೆಯ ಊರುಕೇರಿಗಳ ಪರಿವೀಕ್ಷಣೆ ಸಾಂಗವಾಗಿ ನಡೆದಿಲ್ಲ. ಎಲ್ಲ ಕಡೆಯ ಜಾನಪದ ವಿಷಯಗಳನ್ನು ಅಸಲುನಕಲೆನ್ನದೆ ಸಂಗ್ರಹಿಸಬೇಕು. ಏಕೆಂದರೆ

ನಕಲಿನಲ್ಲಿಯೂ ದೇಶಕಾಲ ಸಮಾಜಾನುಬಂಧಿಯಾದ ವ್ಯತ್ಯಾಸಗಳಿರುತ್ತವೆ. ಈ ವ್ಯತ್ಯಾಸಗಳನ್ನೊಳಗೊಂಡ ಪಾಠಾಂತರಗಳನ್ನು ಗುರುತಿಸುವುದರಿಂದ ಸಂಶೋಧನೆಗೆ ತುಂಬ ಪ್ರಯೋಜನವೊದಗುತ್ತದೆ. ಈಗಾಗಲೇ ಸಂಗ್ರಹವಾಗಿರುವ ಗೀತೆಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ, ವಿಂಗಡಿಸಿ, ಸಂಶೋಧಿಸಿ, ವ್ಯಾಖ್ಯಾನಿಸಬೇಕಾಗಿದೆ. ಎಲ್ಲ ಜಾನಪದೀಯ ಪ್ರಕಾರಗಳನ್ನು ಈ ದೃಷ್ಟಿಯಿಂದ ವ್ಯಾಸಂಗ ಮಾಡಬೇಕಾಗಿದೆ. ಅವುಗಳಿಂದ ಹೊರಹೊಮ್ಮುವ ಹಿಂದಿನ ಜನಜೀವನದ ಮೇಲೆ ಅನೇಕ ಉದ್ಗ್ರಂಥಗಳು ಹೊರಬರಬೇಕಾಗಿದೆ. ಆಧುನಿಕ ನಾಗರಿಕತೆಯ ಪ್ರವಾಹದಲ್ಲಿ ಇವು ಕೊಚ್ಚಿಹೋಗದಂತೆ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಈ ಬೃಹತ್ಪ್ರಮಾಣದ ಕಾರ್ಯಸಾದನೆಗೆ ಬೃಹತ್ಪ್ರಮಾಣದ ಸಹಾಯ ಸೌಕರ್ಯ ಅತ್ಯಗತ್ಯ. ಈ ಕಾರ್ಯ ಸರ್ಕಾರದ ವೇತನಗ್ರಾಹಿಗಳ ಮೂಲಕ ನಡೆಯುವುದಕ್ಕಿಂತ ವಿಶ್ವವಿದ್ಯಾನಿಲಯದಂಥ ಸ್ವಯಮಾಡಳಿತ ಸಂಸ್ಥೆಗಳ ಮೂಲಕ ನಡೆಯುವುದಾದರೆ ಅಧಿಕಲಾಭ ದೊರೆಯುವದಲ್ಲದೆ, ಅದಕ್ಕೆ ವಿಶಿಷ್ಟ ಗೌರವವೊದಗುತ್ತದೆ. ತಾಲ್ಲೂಕು ಹೋಬಳಿಗಳಲ್ಲಿ ಕಾಲೇಜು ಪ್ರೌಢಶಾಲೆಗಳು ಮೂಡುತ್ತಿರುವಾಗ ಈ ಕೆಲಸ ಸುಲಭವಾಗಿ ನಡೆದೀತು. ಕನ್ನಡ ಅಧ್ಯಾಪಕರು ಮತ್ತು ಕನ್ನಡವನ್ನು ಐಚ್ಛಿಕವಿಷಯವಾಗಿ ವ್ಯಾಸಂಗಮಾಡುವ ಬಿ.ಎ. ವಿದ್ಯಾರ್ಥಿಗಳು ಈ ಕಾರ್ಯ ತಮ್ಮ ಕರ್ತವ್ಯವೆಂದು ತಿಳಿದು ಆಸಕ್ತಿವಹಿಸಿದರೆ ಗುರಿ ಬಹು ಬೇಗನೆ ಸಿದ್ಧಿಸುತ್ತದೆ. ಸಂಗ್ರಾಹಕ ಎಂದೋ ಒಮ್ಮೆ ಒಂದೆರಡು ದಿನ ಯಾವುದೋ ಹಳ್ಳಿಯಲ್ಲಿ ತಂಗಿದ್ದು ನಾಲ್ಕಾರು ಮಂದಿಯಿಂದ ಗೀತೆ ಹಾಡಿಸಿ, ಬರೆದುಕೊಂಡರೆ, ಅಥವಾ ಪಟ್ಟಿಗೊಳಿಸಿಕೊಂಡರೆ ಸಾಲದು. ಕುಳಿತ ಪಟ್ಟಿಗೆ, ಕೇಳಿದ ಮಾತ್ರಕ್ಕೆ ಹಳ್ಳಿಯ ಜನ ತಮಗೆ ತಿಳಿದದ್ದನ್ನೆಲ್ಲ ಹೇಳಿಬಿಡುವುದಿಲ್ಲ. ಅವರಿಗೂ ಬಿಡುವು ಮನಸ್ಸು ಕೂಡಿಬರಬೇಕು. ಅವರಿಗೆ ಮನಸ್ಸಿದ್ದರೂ ತಕ್ಷಣ ಅವರು ಕಲಿತದ್ದೆಲ್ಲ ನೆನಪಿಗೆ ಬರುತ್ತದೆಯೆ? ಸಂಗ್ರಹಕಾರ ಅವರ ಚುಂಗುವಾಸನೆಗೆ ಮೂಗು ಮುರಿಯದೆ, ಕೊಳಕು ಚಿಂದಿಗೆ ಮುಖ ಸಿಂಡರಿಸದೆ, ಗ್ರಾಮ್ಯಶೈಲಿಗೆ ಓರೆನುಡಿಯದೆ, ಅವರೊಡನೆ ಬಂಧುಮಿತ್ರರಂತೆ ಸಲುಗೆಯಿಂದ ವರ್ತಿಸಿದರೆ ಮಾತ್ರ ಅವರ ಹೃದಯವರಳಿ, ಬಗೆದೆರೆದು, ಹಾಡು ತಾನೇತಾನಾಗಿ ಚಿಮ್ಮುತ್ತದೆ. ಆದರೆ ಗಾದೆ ಒಗಟು ಮೊದಲಾದ ಇತರ ಪ್ರಕಾರಗಳನ್ನು ಸಂಗ್ರಹಿಸಬೇಕಾದರೆ ಅವಸರ ಕೂಡದು. ಅದು ಆರಾಮವಾಗಿ ನಡೆಯಬೇಕಾದ ಕೆಲಸ. ನೆನೆದಾಗ ಗಾದೆ ಒಗಟುಗಳು ನಾಲಗೆಯಿಂದ ಉದುರುವುದಿಲ್ಲ. ಅವು ಉದುರಿದಾಗ ಕಾದಿದ್ದು ಗುರುತು ಹಾಕಿಕೊಳ್ಳಬೇಕು. ಬೇರೆ ಬೇರೆ ಸನ್ನಿವೇಶಗಳಲ್ಲಿ ಮೇಲಿಂದ ಮೇಲೆ ಹಳ್ಳಿಗರನ್ನು ಸಂಧಿಸಿ, ಅವರೊಡನೆ ಮಾತುಕತೆಯಾಡಿ ಅವರ ಸುಖದುಃಖಗಳಲ್ಲಿ ಭಾಗಿಯಾಗಿ ಅವರೊಡನೆ ನಲಿಯುತ್ತ ನಿಡುಸುಯ್ಯುತ್ತ ನಿಂತಾಗ ಕುಳಿತಾಗ ಅವರ ಮಾತೇ ಕಾವ್ಯಮಯವಾಗಿ ಗಾದೆಯಾಗಿ ಒಗಟಾಗಿ ಹೊರಹೊಮ್ಮುತ್ತದೆ. ಸಹನೆ

ಸಹಾನುಭೂತಿ ಪ್ರಸನ್ನ ಮನಸ್ಸುಳ್ಳ ವ್ಯಕ್ತಿ ಮಾತ್ರ ಉತ್ತಮ ಸಂಗ್ರಾಹಕನಾಗುತ್ತಾನೆ. ಅಧ್ಯಾಪಕರು ವಿದ್ಯಾರ್ಥಿಗಳು ರಜಾ ದಿನಗಳಲ್ಲಿ ಹೆಚ್ಚುಕಾಲ ಹಳ್ಳಿಗರ ನಡುವೆ ಕಳೆಯುವುದಾದರೆ ಈ ಕಾರ್ಯ ಸುಲಭಸಾಧ್ಯವಾಗುತ್ತದೆ.

ಪ್ರತಿಯೊಂದು ಕಾಲೇಜಿನಲ್ಲಿಯೂ ಒಂದೊಂದು ಜಾನಪದ ಸಂಘ ನಿರ್ಮಾಣವಾಗಿ ಸಂಘದ ಸದಸ್ಯರು ಈ ಕಾರ್ಯಕ್ಕೆ ನಿಯೋಜನೆಗೊಳ್ಳಬೇಕು. ಈ ಸಂಘಗಳು ವಿಶ್ವವಿದ್ಯಾನಿಲಯ ಜಾನಪದ ಸಂಘ (Folklore Club)ದ ಅಂಗಸಂಸ್ಥೆಗಳಾಗಿರಬೇಕು. ಮಾತೃಸಂಘ ಸಂಗ್ರಹಕಾರರಿಗೆ ಒಂದು ಅಥವಾ ಎರಡು ವಾರ ಸಂಗ್ರಹವಿಧಾನದಲ್ಲಿ ತರಬೇತಿ ನೀಡಬೇಕು. ಪ್ರತಿ ಆರು ತಿಂಗಳಿಗೊಮ್ಮೆ ಸಂಗ್ರಹಿತವಾದ ಸಾಮಗ್ರಿಯನ್ನು ಅಂಗಸಂಸ್ಥೆ ಕ್ರೋಡೀಕರಿಸಿ ಮಾತೃಸಂಸ್ಥೆಗೆ ರವಾನಿಸಬೇಕು. ವಿಶ್ಲೇಷಣೆ ವಿಂಗಡಣೆ ಸಂಶೋಧನಾದಿ ವ್ಯಾಪಾರಗಳು ಅಲ್ಲಿ ನಡೆಯಬೇಕು. ಮಾತೃಸಂಸ್ಥೆಯಲ್ಲಿ ಪ್ರಕಟವಾಗುವ ಅರ್ಧವಾರ್ಷಿಕೆಯಲ್ಲಿ ಸಂಶೋಧನಾ ಫಲಿತಾಂಶ ಹೊರಬೀಳಬೇಕು. ಇದಕ್ಕೆಲ್ಲ ಬೇಕಾಗುವ ವಾಹನಸಾಧನಾದಿ ಸೌಕರ್ಯಗಳನ್ನು ವಿಶ್ವವಿದ್ಯಾನಿಲಯ ಒದಗಿಸಬೇಕು.

ಇಷ್ಟು ಸಂಶೋಧನೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದ್ದಾಯಿತು. ಇದರ ಜೊತೆಗೆ ಅದರ ಬೆಳವಣಿಗೆಯ ಕಡೆಗೂ ಗಮನ ಹರಿಯಬೇಕು. ಇದು ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ಮಾಡಬೇಕಾದ ಕೆಲಸ. ಜಾನಪದ ಸಮ್ಮೇಳನ ಪ್ರದರ್ಶನಾದಿಗಳ ವ್ಯವಸ್ಥೆಯ ಮೂಲಕ, ಸ್ಪರ್ಧೆಗಳ ಮೂಲಕ, ಬಹುಮಾನ ಸನ್ಮಾನಗಳ ಮೂಲಕ ಜಾನಪದ ಕಲೆಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು. ಶೀಘ್ರಾವಶೇಷವಾಗುತ್ತಿರುವ ಹರಿಕಥೆ, ಗಮಕ ಕಲೆ, ಯಕ್ಷಗಾನಗಳ ಉದ್ಧಾರ ಅತ್ಯಗತ್ಯ. ಸಂಗೀತ ನಾಟಕ ಅಕಾಡಮಿ ದೊಡ್ಡ ದೊಡ್ಡ ನಗರಗಳಲ್ಲಾದರೂ ಕಲಾಸಂಘಗಳನ್ನು ಸ್ಥಾಪಿಸಿ, ಜಾನಪದ ಕಲೆಗಳಿಗೆ ಮಾನ್ಯತೆ – ಆದ್ಯತೆ ನೀಡಬೇಕು. ರಾಷ್ಟ್ರೀಯ ಭಾವನೆಯನ್ನು ಬೆಳೆಸಲು, ಸಾಮರಸ್ಯವನ್ನು ಸಾಧಿಸಲು, ಜಾತಿವರ್ಗ ಭೇದವನ್ನು ಮರೆಸಲು, ಸ್ವಾವಲಂಬನ ಪ್ರವೃತ್ತಿ ಹಾಗು ಆತ್ಮಪ್ರತ್ಯಯಗಳನ್ನು ಕೊನರಿಸಲು ಇದಕ್ಕಿಂತ ಬೇರೆ ಮಾಧ್ಯಮ ಮತ್ತೊಂದಿಲ್ಲ. ಈ ಕಲೆಗಳ ಪ್ರಚಾರದಿಂದ ಆತ್ಮೋಲ್ಲಾಸ ಆತ್ಮಕಲ್ಯಾಣಗಳೆರಡೂ ಏಕಕಾಲದಲ್ಲಿ ಸಾಧನೆಯಾಗುತ್ತವೆ. ಜನತೆಯಲ್ಲಿ ಸೃಜನಶಕ್ತಿ ವಿಕಾಸಗೊಳ್ಳುತ್ತದೆ.

ರಾಷ್ಟ್ರೀಯ ಸ್ವರೂಪದ ಉತ್ಸವಗಳಲ್ಲೆಲ್ಲ ಜಾನಪದ ಕಲೆಗಳಿಗೆ ಅಗ್ರಮಾನ್ಯತೆ ದೊರೆಯಬೇಕು. ಎಲ್ಲ ದರ್ಜೆಯ ಪಠ್ಯಪುಸ್ತಕಗಳಲ್ಲಿ ಜಾನಪದ ಗೀತೆಗಳ ಜೊತೆಗೆ ಜಾನಪದ ಸಂಸ್ಕೃತಿಯನ್ನು ಕುರಿತ ಪಾಠಗಳು ಸೇರ್ಪಡೆಗೊಳ್ಳಬೇಕು. ಆಗ ಜಾನಪದ ವಾಙ್ಮಯ ತಾನೂ ಬೆಳೆದು ಭೂನ್ಯೆಜವಾದ ಶಿಷ್ಟ ಸಾಹಿತ್ಯಸೃಷ್ಟಿಗೆ ಪ್ರೇರಕ ಶಕ್ತಿಯಾಗಿ ಪುಷ್ಟಿದಾಯಕವಾಗಿ ವಿಜೃಂಭಿಸುತ್ತದೆ.

೩

ಪ್ರತಿಯೊಂದು ಭಾಷಾಪ್ರದೇಶಕ್ಕೂ ಒಂದೊಂದು ಜಾನಪದ ಸಂಘ ಹೇಗೆ ಆವಶ್ಯಕವೊ ಹಾಗೆಯೇ ಒಂದೊಂದು ವಸ್ತುಸಂಗ್ರಹಾಲಯವೂ ಆವಶ್ಯಕ. ಸರ್ಕಾರವಾಗಲಿ ವಿಶ್ವವಿದ್ಯಾನಿಲಯವಾಗಲಿ ಈ ಯೋಜನೆಯನ್ನು ಕಾರ್ಯಗತ ಗೊಳಿಸಬೇಕು. ಶ್ರೀಸಾಮಾನ್ಯರ ಪ್ರತಿಭಾಸೃಷ್ಟಿಯ ಕಲಾವಸ್ತುಗಳೆಲ್ಲ ಸಂಗ್ರಹಗೊಂಡು, ಅದೊಂದು ಜ್ಞಾನಾರ್ಜನೆಯ ಕೇಂದ್ರವಾಗಬೇಕು, ರಾಷ್ಟ್ರೀಯ ಸಂಸ್ಕೃತಿಯ ಅಕ್ಷಯ ನಿಧಿಯಾಗಬೇಕು. ಆಧುನಿಕ ಯುಗದ ಯಂತ್ರವಿಜ್ಞಾನಕ್ಕೆ ಹೊರತಾದ, ಸಾಮಾನ್ಯ ಮಾನವರ ಸಾಧನೆ ಸಿದ್ಧಿಗಳ ಅಭಿವ್ಯಕ್ತ ರೂಪದ ವಸ್ತುಗಳೆಲ್ಲ ಅಲ್ಲಿ ರಾಶಿಗೊಳ್ಳಬೇಕು. ಕ್ರಮಬದ್ಧವಾಗಿ ಗ್ರಂಥಾಲಯದ ಪುಸ್ತಕಗಳಂತೆ ಜೋಡಣೆಗೊಳ್ಳಬೇಕು. ಒಂದೊಂದು ವಸ್ತುವಿನ ಸಮಗ್ರಮಾಹಿತಿಯನ್ನು ಅಚ್ಚುಕಟ್ಟಾಗಿ ಬರೆದಿಡಬೇಕು. ಅಲ್ಲಿ ಸೇರಿಸಬೇಕಾದ ವಸ್ತುಗಳು ಇಷ್ಟೇ ಸರಿ ಎಂದು ಹೇಳಲಾಗದು, ದಿಗ್ದರ್ಶನಾರ್ಥವಾಗಿ ಸಣ್ಣ ಪಟ್ಟಿಯೊಂದನ್ನಿಲ್ಲಿ ಕೊಡಬಹುದು:

ಕೃಷಿ ಸಾಧನಗಳು, ಮರಮುಟ್ಟುಗಳು, ಬಡಗಿ ಕಮ್ಮಾರ ಅಕ್ಕಸಾಲಿಗರ ಉಪಕರಣಗಳು, ಮಿಕ ಮೀನು ಬೇಟೆಯ ಸಲಕರಣೆಗಳು, ಕುಂಬಾರ ಚಮ್ಮಾರ ಮೇದ ಮಗ್ಗಗಾರ ಹೂವಾಡಿಗ ಹಾವಾಡಿಗ ಕುರುಬ ಕಂಚುಗಾರ ಕಲ್ಲುಕುಟಿಗ ಮೊದಲಾದ ಕಸುಬುದಾರರ ಬಳಕೆಯ ಹತಾರುಗಳು, ಹಬ್ಬ ಹರಿದಿನಗಳಲ್ಲಿ ಮದುವೆ ತಿಥಿಗಳಲ್ಲಿ ಬಳಸುವ ವಸ್ತು ವಿಶೇಷಗಳು, ಕಾಳರಟ್ಟು ತಮ್ಮಟೆ ಮೊದಲಾದ ವಾದ್ಯಗಳು, ಉಡುಗೆತೊಡುಗೆಗಳು, ಒಡವೆಗಳು, ಗರಡಿಯ ಸಾಧನಗಳು, ಕಸೂತಿ ಸಾಮಾನು, ಮನೆಯ ಪಾತ್ರೆ ಪರಡಿ ಊಗಲಗಳು, ಆಟದ ಸಾಮಾನು, ಸೂತ್ರದ ಬೊಂಬೆ, ಬಯಲಾಟದ ವೇಷಭೂಷಣಗಳು, ಆಯುಧ ವಿಶೇಷಗಳು, ಕಲ್ಲು ಮಣ್ಣು ಮರ ಲೋಹದ ವಿಗ್ರಹಗಳು, ಚಿತ್ರಗಳು, ಮೂರ್ತಿಶಿಲ್ಪದ ಮಾದರಿಗಳು, ದೇವಾಲಯದ ಸಾಮಗ್ರಿಗಳು, ಪೂಜಾಸಲಕರಣೆಗಳು, ಮಾಯಾಮಂತ್ರದ ಸಾಮಾನು, ಗ್ರಾಮದೇವತೆಗಳ ಅಲಂಕಾರ ವಸ್ತುಗಳು, ದೇವತೆ ಭೂತ ಪಿಶಾಚಿಗಳ ನಮೂನೆಗಳು, ರಂಗವಲ್ಲಿಯ ಚಿತ್ರಗಳು, ಹಿಂದಿನ ಮನೆಗಳ ಮಾದರಿಗಳು, ಉರಿಮಾರಮ್ಮ ಕೋಲೆಬಸವಗಳಿಗೆ ತೊಡಿಸುವ ಬಟ್ಟೆಬರೆಗಳು, ಆದಿವಾಸಿಗಳ ಬಳಕೆಯ ವಸ್ತುಗಳು, ದಾಸಯ್ಯ ಜೋಗಯ್ಯ ಗೊರವಯ್ಯಾದಿಗಳ ವೇಷಭೂಷಣಗಳು – ಇವೆಲ್ಲಕ್ಕೂ ಸಂಗ್ರಹಾಲಯದಲ್ಲಿ ಸ್ಥಾನವುಂಟು. ಆಯುರ್ವೇದ ಪಂಡಿತರ ಗಿಡಮೂಲಿಕೆಗಳನ್ನೂ ಮದ್ದು ಮಾಡುವ ಸಾಧನಗಳನ್ನೂ ಶೇಖರಿಸಬಹುದು. ಗ್ರಾಮಜೀವನಕ್ಕೆ ಸಂಬಂಧಿಸಿದ ಚಲಚ್ಚಿತ್ರಗಳನ್ನು ಕೂಡಿಸಬಹುದು. ಹಾಡುಗಳ ಧ್ವನಿಮುದ್ರಿಕೆಗಳನ್ನು ಸಂಗ್ರಹಿಸಬಹುದು.

ಮೇಲ್ಕಂಡ ಕಲಾವಸ್ತು ಸಾಮಗ್ರಿಗಳನ್ನು ಸಂಶೋಧಕರ ಮತ್ತು ಪ್ರೇಕ್ಷಕರ ಉಪಯೋಗಕ್ಕಾಗಿ ನಾನಾ ವರ್ಗ ಉಪ ವರ್ಗಗಳಾಗಿ ವಿಂಗಡಿಸಬಹುದು. ಅಲಹಾಬಾದಿನ ಜಾನಪದ ವಸ್ತುಸಂಗ್ರಹಾಲಯದ ವಸ್ತುಗಳ ವಿಂಗಡಣೆಯನ್ನು ಮಾದರಿಗಾಗಿ ಉಲ್ಲೇಖಿಸಬಹುದು; ಉಡುಪು, ಒಡವೆ, ಉಪಕರಣ, ಜೇಡಿಮಣ್ಣಿನ ಮೂರ್ತಿಗಳು, ಕಲ್ಲುಕೆತ್ತನೆ, ಮರಗೆತ್ತನೆ, ಲೋಹದ ಸಾಮಾನು, ಆಯುಧಗಳು, ಚಿತ್ರಗಳು, ನಮೂನೆಗಳು, ಕಸೂತಿ, ಸಂಗೀತ ವಾದ್ಯಗಳು, ನಾಣ್ಯಗಳು, ಚರ್ಮದ ಸಾಮಾನುಗಳು. ವರ್ಗೀಕರಣ ಹೀಗೆಯೇ ಇರಬೇಕೆಂದಿಲ್ಲ; ಇಷ್ಟೇ ವರ್ಗಗಳು ಸಾಕೆಂದಿಲ್ಲ. ಉಪಕರಣಗಳನ್ನು ಆಯಾಯ ಕಸಬುಗಳಿಗನುಗುಣವಾಗಿ ವಿಂಗಡಿಸಬೇಕಾಗುತ್ತದೆ. ಪ್ರತಿವಸ್ತುವಿನ ಮೂಲೋದ್ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಂಗಡಣೆ ಮಾಡಬೇಕಾಗುತ್ತದೆ.

ಆಧುನಿಕ ರೀತಿಯ ಜಾನಪದ ವಸ್ತುಸಂಗ್ರಹಾಲಯಗಳ ಕಲ್ಪನೆ ಮೊಟ್ಟಮೊದಲು ಮೂಡಿದ್ದು ಸ್ವೀಡನ್‌ನಲ್ಲಿ. ಆ ಕಲ್ಪನೆ ಮೊಳೆತು ಬೆಳೆದದ್ದು ಆರ್ಥರ್ ಹೇಜಿಲಿಯಸ್ ಎಂಬ ಕಲಾಭಿಜ್ಞನ ಮನೋಭೂಮಿಕೆಯಲ್ಲಿ. ಸ್ಟಾಕ್‌ಹೋಮ್‌ನಲ್ಲಿ ೧೮೭೨ರಲ್ಲಿ ಖಾಸಗಿಯಾಗಿ ಪ್ರಾರಂಭವಾದ ಸಂಗ್ರಹಾಲಯ ಕ್ರಮೇಣ ಬೃಹದಾಕಾರವಾಗಿ ಬೆಳೆದು ರಾಷ್ಟ್ರೀಯ ಸಂಸ್ಥೆಯಾಯಿತು. ಆಮೇಲೆ ಈ ಸಂಗ್ರಹಾಲಯದ ಭಾವನೆ ನಾರ್ವೆ ಡೆನ್ಮಾರ್ಕ್ ಹಾಲೆಂಡ್ ಜರ್ಮನಿಗಳಿಗೆ ಹರಿದು ಹೊಸ ಸಂಸ್ಥೆಗಳು ಸ್ಥಾಪನೆಗೊಂಡವು. ರುಮೇನಿಯಾ ದೇಶದಲ್ಲಿ ಒಂದು ಲಕ್ಷ ವಸ್ತುಗಳ ಸಂಗ್ರಹಾಲಯವುಂಟೆಂದು ಅದನ್ನು ಕೆಲವು ದಿನಗಳ ಹಿಂದೆ ನೋಡಿಬಂದ ಡಾ. ಹಾ. ಮಾ. ನಾಯಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅನೇಕ ದೇಶಗಳಲ್ಲಿ ಸರ್ವವಸ್ತು ಸಂಗ್ರಹಾಲಯದ ಭಾಗವಾಗಿ ಜಾನಪದ ಕಲಾವಸ್ತು ಸಂಗ್ರಹಾಲಯವಿರುತ್ತದೆ. ಅತ್ಯಂತ ಪ್ರಾಚೀನವೂ, ವಿವಿಧ ಜಾತಿಮತಗಳ ಸಮನ್ವಯ ಕ್ಷೇತ್ರವೂ, ಕಲಾಸಮೃದ್ಧವೂ ಆದ ಕನ್ನಡನಾಡಿನಲ್ಲಿ ಬೃಹತ್ಪ್ರಮಾಣದ ಜಾನಪದ ವಸ್ತುಸಂಗ್ರಹಾಲಯದ ಅವಶ್ಯಕತೆಯಿದೆ. ಸ್ನಾತಕೋತ್ತರ ವ್ಯಾಸಂಗ ಕ್ರಮದಲ್ಲಿ ಜಾನಪದ ಸಾಹಿತ್ಯಕ್ಕೆ ವಿಶೇಷ ಸ್ಥಾನ ಕೊಟ್ಟಿರುವ ಮೈಸೂರು ವಿಶ್ವವಿದ್ಯಾನಿಲಯ ಅಂಥದೊಂದು ವಸ್ತು ಸಂಗ್ರಹಾಲಯವನ್ನು ಇಷ್ಟರಲ್ಲೆ ಸ್ಥಾಪಿಸಲಿದೆ.

೪

ಕನ್ನಡನಾಡಿನಲ್ಲಿ ಜಾನಪದ ಗೀತೆಗಳ ಸಂಗ್ರಹಕಾರ್ಯ ಮೂರ್‍ನಾಲ್ಕು ದಶಕಗಳಿಂದ ಸಾಗುತ್ತಿದೆ. ಅದು ಈಚೀಚೆಗೆ ಮಾತ್ರ ವಿಶ್ವವಿದ್ಯಾನಿಲಯದಲ್ಲಿ ಮಾನ್ಯತೆ ಪಡೆಯುತ್ತಿದೆ. ಆ ಸಂಬಂಧವಾದ ವ್ಯಾಸಂಗ ಸಂಶೋಧನೆಗಳಿಗೆ ಒಳ್ಳೆಯ ಭವಿಷ್ಯ ಕಾದಿದೆ. ಇಂಥ ಪರ್ವಕಾಲದಲ್ಲಿ ಶ್ರೀಮಾನ್ ಪರಮಶಿವಯ್ಯನವರಂಥ ನಿಷ್ಠಾವಂತ

ಜಾನಪದಾಭಿಮಾನಿಗಳ ಅಗತ್ಯತೆ ಮಿಗಿಲಾಗಿದೆ. ಈ ದಶಕದ ಸಂಗ್ರಹಕಾರರಲ್ಲಿ ಅವರು ಅಗ್ರಗಣ್ಯರಾಗಿದ್ದಾರೆ. ಅನೇಕ ಸಂಗ್ರಹಕಾರರಿಗೆ ಮಾರ್ಗದರ್ಶಕರಾಗಿರುವುದಲ್ಲದೆ, ಅವರಿಗೆ ಹೆಸರು ಗಳಿಸಿಕೊಟ್ಟಿದ್ದಾರೆ. ಇಂಥ ಸಾಹಸಕಾರ್ಯಕ್ಕೆ ಬೇಕಾದ ಗುಣವಿಶೇಷ ಸಾಮರ್ಥ್ಯಗಳು ಅವರಲ್ಲಿ ಸಾಕಷ್ಟಿವೆ. ಅವರು ಹುಟ್ಟಾ ಬೆಳೆಯ ಹಳ್ಳಿಗರು; ಆದ್ದರಿಂದ ಹಳ್ಳಿಯ ಬಾಳನ್ನು ಸಮಗ್ರವಾಗಿ ಸಂಪೂರ್ಣವಾಗಿ ಬಲ್ಲವರು. ಹಳ್ಳಿಗರ ಬಗೆಗೆ ಅವರಿಗೆ ಸಹಾನುಭೂತಿಯಿದೆ, ಮೆಚ್ಚುಗೆಯಿದೆ. ಯಾವ ಊರಿಗೆ ಹೋದರೂ ಜನ ಅಪರಿಚಯಸ್ತರಾದರೂ ಒಂದೆರಡು ಗಳಿಗೆಯಲ್ಲಿಯೇ ಅವರೊಡನೆ ಸಲುಗೆಯಿಂದ ವರ್ತಿಸಬಲ್ಲ ಸ್ನೇಹಪರರು. ಆದ್ದರಿಂದ ಅವರ ಮನಸ್ಸನ್ನು, ಜೀವನ ರಹಸ್ಯವನ್ನು, ಅವರ ಆಶೆ ಆಕಾಂಕ್ಷೆಗಳನ್ನು ಸ್ಪಷ್ಟವಾಗಿ ಅರಿತಿದ್ದಾರೆ. ಜೊತೆಗೆ ದೇಶವಿದೇಶಗಳ ಜಾನಪದ ಸಂಪ್ರದಾಯವನ್ನೂ ಚೆನ್ನಾಗಿ ವ್ಯಾಸಂಗಿಸಿದ್ದಾರೆ.

ಅವರ ಬುದ್ಧಿಯ ಕಣ್ಣಿಗೆ ಮೊದಲು ಕಂಡದ್ದು ಜಾನಪದ ಸಂಪ್ರದಾಯ. ಅವರ ಮೈಮನಗಳು ಅದರಲ್ಲಿ ತೇಕಾಡಿದವು; ಅದು ಅವರ ಬದುಕಿನೊಡನೆ ಅವಿನಾಭಾವದಿಂದ ಸಂಯೋಗಗೊಂಡಿದೆ. ಹಗಲಿರುಳೆನ್ನದೆ, ಮಳೆ ಬಿಸಿಲೆನ್ನದೆ, ಹೆದ್ದಾರಿ ಕಾಡುದಾರಿಯೆನ್ನದೆ ಊರೂರು ಕೇರಿಕೊಂಪೆಗಳಿಗೆ ಅಲೆದಲೆದು, ಸುಖವನ್ನೊತ್ತೆಯಿಟ್ಟು ಜಾನಪದ ಸಾಹಿತ್ಯದ ಅನೇಕ ಪ್ರಕಾರಗಳನ್ನು ಸಂಗ್ರಹಿಸಿದ್ದಾರೆ. ಹಿಂದಿನವರು ಬಿಟ್ಟಿದ್ದನ್ನು ಇವರು ಪೂರೈಸುತ್ತಿದ್ದಾರೆ. ನೂರಾರು ಜಾನಪದ ಕತೆಗಳನ್ನು ಸಂಕಲಿಸಿ, ಆ ಕ್ಷೇತ್ರದಲ್ಲಿದ್ದ ದೊಡ್ಡ ಪಿಗ್ಗವನ್ನು ತುಂಬಿದ್ದಾರೆ. ಅಜ್ಞಾತವಾಗಿದ್ದ ಕಂಸಾಳೆ ಪದ, ಕರಪಾಲ ಮೇಳ, ಗೊಂದಲಿಗರ ಮತ್ತು ನೀಲಗಾರರ ಕತೆಗಳನ್ನು ಪ್ರಕಾಶಕ್ಕೆ ತಂದಿದ್ದಾರೆ. ಗೊರೂರು, ಬೆಟಗೇರಿ, ಗದ್ದಿಗಿ ಮಠ, ಸಿಂಪಿಯವರಂತೆ ಜಾನಪದ ಸಾಹಿತ್ಯದ ಗೊತ್ತುಗುರಿಗಳನ್ನು ನೀತಿ ತತ್ವಗಳನ್ನು ವ್ಯಾಖ್ಯಾನದ ಮೂಲಕ ಸ್ಪಷ್ಟಪಡಿಸಿದ್ದಾರೆ.

'ಜನಪದ ಸಾಹಿತ್ಯ ಸಮೀಕ್ಷೆ' ಅವರ ಆಳವಾದ ಅಭ್ಯಾಸದ ವಿಶೇಷ ಪರಿಶ್ರಮದ ಪಕ್ವಾನುಭವದ ಸುಂದರ ಫಲ. ಜಾನಪದ ಸಾಹಿತ್ಯದ ವಿವಿಧ ಮುಖಗಳನ್ನು ಕುರಿತ ೧೮ ಲೇಖನಗಳ ಹೆಣಿಗೆಯಿದು. ಕಂಸಾಳೆಯ ಪದ ಮತ್ತು ಕರಪಾಲ ಮೇಳಗಳ ಸ್ವರೂಪ ಲಕ್ಷಣಗಳನ್ನು ವಿವರಿಸಿ, ಅವುಗಳ ವೈಶಿಷ್ಟ್ಯವನ್ನೆತ್ತಿ ತೋರಿಸಿ, ಅವು ಪ್ರಚಾರದಲ್ಲಿರುವ ಪ್ರದೇಶವನ್ನು ಗುರುತಿಸಿದ್ದಾರೆ. ಜಾನಪದ ಸಾಹಿತ್ಯ ಹಾಸ್ಯದ ಹಗೇವೆಂಬುದನ್ನು ಅನೇಕ ನಿದರ್ಶನಗಳೊಡನೆ ತೋರಿಸಿದ್ದಾರೆ. ಹೀಗೆಯೇ ಈ ಲೇಖನಗಳಲ್ಲಿ ಹಳ್ಳಿಯ ಹಬ್ಬಗಳ ದರ್ಶನವಿದೆ; ಮದುಮಗಳ ಉತ್ಕಟ ಪರಿಸ್ಥಿತಿಯ ಅನುಭವವಿದೆ; ಅಕ್ಕನ ಮಮತೆಯ ಹೊನಲು ಹರಿದಿದೆ. ತೌರೂರಿನ ಆಶೆ ನಿರಾಶೆಗಳು ತೂಗುಯ್ಯಾಲೆಯಾಡುತ್ತವೆ; ಮಲೆಯ ಮಾದೇಶ್ವರ ಕಾವೇಟಿ ರಂಗ ತಾಯಿ ಕೆಂಪವ್ವೆಯರ ಮಹಿಮೆ ಮುಗ್ಧಭಕ್ತಿಯ ಬುಗ್ಗೆಯಾಗಿ ಹರಿದಿದೆ. ಜಾನಪದ ಕಲೆಗಳ

ಸಂಗ್ರಹ ಸಂರಕ್ಷಣ ಕಾರ್ಯವನ್ನು ಕುರಿತ ಮೂರು ಲೇಖನಗಳೊಡನೆ ಈ ಗ್ರಂಥ ಪರಿಸಮಾಪ್ತಿಗೊಳ್ಳುತ್ತದೆ. ಇಲ್ಲಿಯ ಲೇಖನಗಳು ಲೇಖಕರ ಸೂಕ್ಷ್ಮ ಸಂವೇದನೆಗೂ ಸೌಂದರ್ಯ ಪ್ರಜ್ಞೆಗೂ ದ್ಯೋತಕವಾಗಿವೆ. ಆದರೂ ಕೆಲವು ತುಂಬ ಮೊಟಕಾದುವೇನೊ ಎನ್ನಿಸುತ್ತದೆ. ಹಳ್ಳಿಗರ ಬಾಳಿನಂತೆ ಅವರ ಶೈಲಿ ನಿರಾಡಂಬರವಾಗಿದೆ, ಮುಗ್ಧಮೋಹಕವಾಗಿದೆ, ಸ್ಫುಟವಾಗಿದೆ; 'ಈ ನಡುವೆ ದಿನೇಶ ದಿನಗಳ ಮಂದೆಯನ್ನು ಓಡಿಸಿಕೊಂಡು ಸಾಗುತ್ತಾನೆ' – ಅಲ್ಲಲ್ಲಿ ಬರುವ ಇಂಥ ರೂಪಕಗಳು ಶೈಲಿಯ ಗೌರವವನ್ನು ಹೆಚ್ಚಿಸುತ್ತವೆ. ಜಾನಪದ ಸಾಹಿತ್ಯಾಭ್ಯಾಸಿಗಳಿಗೆ ಈ ಗ್ರಂಥ ತುಂಬ ಉಪಯುಕ್ತವಾಗುತ್ತದೆ. ಈ ಕ್ಷೇತ್ರಕ್ಕೆ 'ಜೀಶಂಪ'ರವರಿಂದ ಸಲ್ಲಬೇಕಾದ ಕಾಣಿಕೆ ಎಷ್ಟೋ ಇದೆ. ಅದು ಬೇಗನೆ ಸಂದಾಯವಾಗಬೇಕೆಂಬುದೇ ಅವರನ್ನು ಬಲ್ಲ ಜನರ ನಿರೀಕ್ಷೆಯಾಗಿದೆ.

ಗುರುಕೃಪಾ, ಮೈಸೂರು

ದೇಜಗೌ

ಪ್ರಸ್ತಾವನೆ

ಜನಪದ ಸಾಹಿತ್ಯದ ಸೌಂದರ್ಯಕ್ಕೆ, ಶ್ರೀಮಂತಿಕೆಗೆ ಬೆರಗಾಗಿ ಆ ಸಾಹಿತ್ಯ ಸಂಗ್ರಹದಲ್ಲಿ ಆಸಕ್ತರಾಗುವ ಯಾರೇ ಆದರು ತಮ್ಮ ಸಂಗ್ರಹ ಯಾತ್ರೆಯ ವಿಭಿನ್ನ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ಹಂಬಲಕ್ಕೊಳಗಾಗುವುದು ಸಹಜ. ಸಂಗ್ರಹ ಕಾಲದ ಸ್ವಾರಸ್ಯಪೂರ್ಣ ಪ್ರಸಂಗಗಳನ್ನೋ, ಸಂಗ್ರಹಿತ ಸಾಹಿತ್ಯದ ಸವಿ, ಸೊಗಸುಗಳನ್ನೋ ಚಿತ್ರಿಸುವ ಬರಹಗಳು ಜನಪದ ಸಾಹಿತ್ಯದ ಬಗ್ಗೆ ಉತ್ತಮ ಅಭಿರುಚಿಯನ್ನು ಕುದುರಿಸಲು ಅಭ್ಯಾಸಗಳಿಗೆ ಉತ್ತಮ ಹಿನ್ನೆಲೆಗಳನ್ನು ಒದಗಿಸಲು ಸಾಧಕವಾಗಬಹುದು; ಸಾಹಿತ್ಯ ರಸಿಕರ ಆಸಕ್ತಿಯನ್ನು ಕೆರಳಿಸುವ ಲಲಿತ ಪ್ರಬಂಧಗಳೂ ಆಗಬಹುದು. ಜನಪದ ಸಾಹಿತ್ಯದ ಕಲೆ ಹಾಗೂ ಶಾಸ್ತ್ರ ಮುಖಗಳೆರಡನ್ನು ಅನುಲಕ್ಷಿಸಿ ಬರೆದ ಲೇಖನಗಳಾದರೆ ಅವುಗಳ ಮಹತ್ವ ಇನ್ನೂ ಹೆಚ್ಚಿನದೆನ್ನಬಹುದು.

ಜನಪದ ಸಾಹಿತ್ಯ ಸಂಗ್ರಹಣೆ ಒಂದು ಕಲೆ. ಸಂಗ್ರಹಕನಾದವನು ತನ್ನ ಅವಿರತ ಶ್ರಮ, ಅತುಲ ಉತ್ಸಾಹ, ಅಪಾರ ಶ್ರದ್ಧೆ, ಆಸಕ್ತಿಗಳ ಜೊತೆಗೆ ಆ ಸಾಹಿತ್ಯದ ಮೌಲ್ಯಗಳನ್ನು ವಿವಿಧ ದೃಷ್ಟಿಕೋನಗಳಲ್ಲಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನೂ, ಆಸ್ವಾದನೆಯ ಮೂಲಕ ಸೌಂದರ್ಯದ ಸ್ತರಗಳನ್ನು ಗುರುತಿಸುವ ರಸಜ್ಞತೆಯನ್ನೂ ಹೊಂದಿದ್ದರೆ ಆ ಕಲೆಹಾಕಿದ ಸಾಹಿತ್ಯದ ಉನ್ನತಿ ಸ್ಥಿರವಾಗಿ, ಸಮರ್ಪಕವಾಗಿ, ಸುಸಂಬದ್ಧವಾಗಿ ಸ್ಥಾಪಿತವಾಗುತ್ತದೆ. ಇಲ್ಲವೆ ಸಂಗ್ರಹಿತ ಸಾಹಿತ್ಯವನ್ನು ಹಸಿಹಸಿಯಾಗಿಯೇ ಪ್ರಕಟಿಸುವ ಆತುರಕ್ಕೊ, ಚಾಪಲ್ಯಕ್ಕೊ ಒಳಗಾದರೆ ಉತ್ತಮ ಸಂಪಾದನೆಯ ಅಭಾವದಿಂದಾಗಿ ಆ ಕೃತಿ ಉದ್ದೇಶಿತ ಫಲವನ್ನು ನೀಡದೆಯೇ ಹೋಗಬಹುದು.

ಉತ್ತಮ ಸಂಪಾದನೆ ಎಂದರೆ ಸಂಗ್ರಹಿಸಿ ತಂದ ಸಾಹಿತ್ಯವನ್ನು ತಿದ್ದಿ, ಸಂಸ್ಕರಿಸುವ ನೆಪದಲ್ಲಿ ವಿರೂಪಗೊಳಿಸಿ ಪ್ರಕಟಿಸುವುದೆಂದಲ್ಲ. ದೊರೆತ ಸಾಹಿತ್ಯವನ್ನು ಆದಷ್ಟು ಭಿನ್ನಭಿನ್ನ ಪಾಠಗಳ ಪರಿಶೀಲನೆಯಿಂದ ಸಾಧ್ಯವಾದ ಮಟ್ಟಿಗೂ ಶುದ್ಧ ರೂಪದಲ್ಲಿ ಪ್ರಕಟಿಸಿ, ಅದಕ್ಕೆ ಸೂಕ್ತ ಹಿನ್ನೆಲೆಗಳನ್ನೂ, ಟೀಕೆ ಟಿಪ್ಪಣಿಗಳನ್ನೂ, ಅರ್ಥಕೋಶ, ಪ್ರಾದೇಶಿಕ ವೈಶಿಷ್ಟ್ಯಗಳನ್ನೂ ನೀಡಿ ಕೃತಿಯನ್ನು ಹೊರತಂದಾಗ ಮಾತ್ರ ಸಾರ್ಥಕವಾದ ಕಾರ್ಯವಾದೀತು. ಇದು ಮುಂದಿನ ಅಧ್ಯಯನ, ಅನುಶೀಲನ ಕಾರ್ಯಗಳಿಗೆ ಉತ್ತಮ ತಳಹದಿಯಾಗುತ್ತದೆ.

ಕಳೆದ ಒಂದೂವರೆ ದಶಕದಿಂದ ಜನಪದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಕಷ್ಟು ಕೈಯಾಡಿಸುತ್ತ ಬಂದಿರುವ ನಾನು ಸಹಸ್ರಾರು ಪುಟಗಳ ಸಾಹಿತ್ಯ ಇದ್ದೂ ನಿರೀಕ್ಷಿತ ಮಟ್ಟದಲ್ಲಿ ಸಂಕಲನಗಳನ್ನು ತರಲು ಇನ್ನೂ ಸಮರ್ಥನಾಗಿಲ್ಲ. ಆದರೆ ನನ್ನ ಸಂಗ್ರಹಯಾತ್ರೆಯ ಹೆಜ್ಜೆ ಗುರುತುಗಳಾಗಿ, ಆಗಾಗ ಲೇಖನಗಳನ್ನು ಮಾತ್ರ ಬರೆಯುತ್ತ ಬಂದೆ. Folkore ಪದದ ವ್ಯಾಪ್ತಿಗೆ ಒಳಪಡುವಂತೆ 'ಸಾಹಿತ್ಯ'ದ ಸಂಗ್ರಹ ನಮ್ಮಲ್ಲಿ ಆಗಲಿಲ್ಲವೆಂಬ ಅಪವಾದ ಇದ್ದರೂ ಆ ಕೊರತೆಯನ್ನು ತಕ್ಕಮಟ್ಟಿಗಾದರೂ ನಿವಾರಿಸಿಕೊಳ್ಳಲು ಈ ಲೇಖನಗಳು ಅವುಗಳ ಹಿಂದೆ ಸೂಚಿತವಾಗಿರುವ ಅಪಾರ ಸಾಹಿತ್ಯ ಸಹಾಯಕವಾಗುತ್ತವೆ. ಹಬ್ಬ ಹರಿದಿನಗಳು, ಆಚಾರ ವಿಚಾರಗಳು, ಗಾದೆ, ಗೀತೆ, ದಂತಕಥೆ, ಮೇಳಗಳು, ಕಥೆಗಳು ಹೀಗೆ ಎಲ್ಲ ಅಂಗಗಳ ಹೊಳಹೂ ಇಲ್ಲಿ ಕಾಣುವಂತಿದೆ. ಆದರೆ ಪೂರ್ವಭಾವಿ ಯೋಜನೆಯಿಂದ ರೂಪಿತವಾದ ಕೃತಿ ಇದಾಗದೆ, ಅಲ್ಲಲ್ಲಿ ಚೆಲ್ಲಿಕೊಂಡಿದ್ದ ಎಂದೋ ಬರೆದ ಲೇಖನಗಳ ಸಂಕಲನ ಮಾತ್ರವೆಂದಾಗ ಅದರ ಪರಿಮಿತಿ ಅದಕ್ಕೆ ಇದ್ದೇ ಇದೆ.

೧೯೫೪ರಿಂದ ೧೯೬೭ರ ವರೆಗೆ ಬರೆದ ಲೇಖನಗಳು ಇಲ್ಲಿವೆ. ವಿಶ್ಲೇಷಣೆ, ವಿಮರ್ಶೆ, ಸಂಶೋಧನೆ, ಪರಿಭಾವನೆ ಎಂಬ ಯಾವ ಶೀರ್ಷಿಕೆಯ ಕೆಳಗೂ ಇವನ್ನು ತರಲು ಆಶಿಸದೆ ಸಹೃದಯ ಚೇತನವೊಂದು ಅಪೂರ್ವ ಸಾಹಿತ್ಯ ರಶ್ಮಿಗಳ ಆಕರ್ಷಣೆಗೆ ಮಿಡಿದ ಎದೆಯಾಳದ ಸ್ಪಂದನಗಳೆಂದು ಮಾತ್ರ ಕರೆಯಬಲ್ಲೆ. ಜನಪದ ಸಾಹಿತ್ಯಶ್ರೀಯನ್ನು ನಾನು ಆರಾಧಿಸಿ, ಆನಂದಿಸಿ ಕಂಡುಂಡ ಅನುಭವಗಳ ಕುಂದಮಾಲೆ ಈ ಸಂಕಲನ.

ಈ ಲೇಖನಗಳು ಮೊದಲ ಬಾರಿಗೆ ಕನ್ನಡ ನಾಡಿನ ಅನೇಕ ಪ್ರಮುಖ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಒಂದು 'ಆಕಾಶವಾಣಿ'ಯಲ್ಲಿ ಪ್ರಸಾರವಾಗಿದೆ. ಇವುಗಳ ರಚನೆಯ ಹಿನ್ನೆಲೆಯಲ್ಲಿ ಅನೇಕ ಮಿತ್ರರ ಸಹಕಾರ, ಸ್ಫೂರ್ತಿ ಸ್ನೇಹ ವಾತ್ಸಲ್ಯಗಳು ಇದ್ದೇ ಇವೆ. ಅದರಲ್ಲೂ ಪ್ರಿಯಮಿತ್ರರಾದ ಎಂ.ಬಿ. ಸಿಂಗ್ ಅವರು ನನ್ನ ಬಹುಪಾಲು ಜನಪದ ಸಾಹಿತ್ಯ ರಚನೆಗಳಿಗೆ ಮುಖ್ಯ ಪ್ರೇರಕರು. ನನ್ನ ಜನಪದ ಸಾಹಿತ್ಯ ಸಂಗ್ರಹಣೆ ಯಾತ್ರೆಯಲ್ಲಿ ಅನೇಕ ಸಂದರ್ಭಗಳಲ್ಲಿ ಪಾಲುಗೊಂಡಿರುವ ಆತ್ಮೀಯ ಮಿತ್ರರಾದ ಶ್ರೀ ಪಿ.ಆರ್. ತಿಪ್ಪೇಸ್ವಾಮಿ, ನನ್ನ ಅಣ್ಣನವರಾದ ಶ್ರೀ ಎನ್. ಸತ್ಯನಾರಾಯಣ, ನನ್ನ ಸೋದರ ರಾಮು ಈ ಎಲ್ಲರಿಗೂ ನಾನು ಋಣಿಯಾಗಿರಬೇಕು. ಕಳೆದುಹೋಗಿದ್ದ ಇಲ್ಲಿನ ಒಂದೆರಡು ಲೇಖನಗಳನ್ನು ಮಿತ್ರರಾದ ಸಿ.ಪಿ.ಕೆ.ಯವರು ಹುಡುಕಿಕೊಟ್ಟು ಉಪಕರಿಸಿದ್ದಾರೆ. ಇವರಿಗೂ ನಾನು ಕೃತಜ್ಞ.

ಪ್ರೊ. ದೇ. ಜವರೇಗೌಡರು ಅಪಾರ ಅಭಿಮಾನದಿಂದ ಆರಂಭದಿಂದಲೂ ಪ್ರೋತ್ಸಾಹಿಸಿ, ಹುರುದುಂಬಿಸಿ ದಾರಿ ತೋರಿದವರು. ಅವರ ಉತ್ತೇಜನ, ಪ್ರೀತಿ, ವಾತ್ಸಲ್ಯಗಳ ಪ್ರತೀಕ ಅವರ ಈ ವಿದ್ವತ್ಪೂರ್ಣವಾದ ಮುನ್ನುಡಿಯಲ್ಲಿ ಆಡಿರುವ ಆದರದ ನುಡಿಗಳು. ಬಿಡುವಿಲ್ಲದ ಕಾರ್ಯಗೌರವಗಳ ನಡುವೆ ಕೃತಿಯನ್ನು ಕೈಗೆತ್ತಿ ಕೊಂಡು, ಪುಟಗಳನ್ನು ತಿರುವಿ, ಮೆಚ್ಚಿಕೆಯನ್ನು ವ್ಯಕ್ತಪಡಿಸಿ, ಇನ್ನೂ ಹೆಚ್ಚು ಕಾರ್ಯಾಸಕ್ತನಾಗುವಂತೆ ಹರಸಿ ಸಂತೋಷದಿಂದ ಮುನ್ನುಡಿಯನ್ನು ಬರೆದು ಕೊಟ್ಟಿದ್ದಾರೆ. ಶ್ರೀ ರಾವೆಂಶ್ರೀಯವರು ಅಷ್ಟೇ ಅಭಿಮಾನದಿಂದ ಈ ಕೃತಿಯನ್ನು ಇಷ್ಟು ಸುಂದರವಾಗಿ ಪ್ರಕಟಿಸಿ ಅಲ್ಲಲ್ಲಿ ಚೆದರಿ ಹೋಗಿದ್ದ ಲೇಖನಗಳೆಲ್ಲ ಒಂದೆಡೆ ಮಾಲೆಗೊಳ್ಳಲು ಕಾರಣಕರ್ತರಾಗಿದ್ದಾರೆ.

ಈ ಇಬ್ಬರು ಮಹನೀಯರಿಗೂ ಅನಂತ ವಂದನೆಗಳು ಸಲ್ಲುತ್ತವೆ.

ಜೀ. ಶಂ. ಪರಮಶಿವಯ್ಯ

೧೬–೯–೧೯೬೭

ಜೆ.ಎಸ್. ಎಸ್. ಕಾಲೇಜು

ಮೈಸೂರು – ೪

ಕೃತಜ್ಞತೆ

ಉನ್ನತ ಮಟ್ಟದ ಸಾಹಿತ್ಯ ಸೃಷ್ಟಿಯಾಗುತ್ತಿರುವ ಯಾವುದೇ ಭಾಷೆಯಲ್ಲಿ ಅನಾದಿಕಾಲದಿಂದಲೂ ಜನಪದ ಸಾಹಿತ್ಯ ಸಂಪತ್ತೂ ಸಂವೃದ್ಧಿಯಾಗಿರುವುದು ಕಂಡುಬರುತ್ತದೆ – ಕಾಶ್ಮೀರದ ಹೂದೋಟಗಳಲ್ಲಿ ಮತ್ತು ಕಾಡುಗಳಲ್ಲಿ ಬೆಳೆಸಿದ, ಬೆಳೆದ ಗುಲಾಬಿ ಹೂಗಳಂತೆ. ಕೇವಲ ಶೇಕಡ ಇಪ್ಪತ್ತೈದರಷ್ಟು ಮಾತ್ರ ಅಕ್ಷರತೆಯುಳ್ಳ ಈ ವಿಶಾಲ ಭಾರತದಲ್ಲಿ ಪಂಡಿತ ಸಾಹಿತ್ಯಕ್ಕಿಂತ ಜನಪದ ಸಾಹಿತ್ಯ ಎಷ್ಟು ಅಗಾಧವಾಗಿರಬಹುದು, ಸಂಪದ್ಭರಿತವಾಗಿರಬಹುದು ಎಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದು. ಆದರೆ ಆ ವಿಶಾಲ ಕ್ಷೇತ್ರದಲ್ಲಿ ಇದುವರೆಗೆ ಆಗಿರುವ ಅವಲೋಕನ, ಅಭ್ಯಾಸ, ಅಳತೆ – ಆಗಬೇಕಾಗಿರುವುದರೊಡನೆ ಆಗಿರುವುದನ್ನು ಹೋಲಿಸಿದರೆ – ಏನೇನೂ ಸಾಲದು.

ಜನಪದ ಸಾಹಿತ್ಯರಂಗ ತುಂಬ ವಿಶಾಲವಾದುದು. ಈ ಭಂಡಾರದ ರತ್ನಗಳನ್ನು ಪರೀಕ್ಷಿಸುತ್ತಾ ಹೋದಾಗ ಇಲ್ಲಿರುವ ವಿವಿಧ ಪ್ರಕಾರಗಳ ಪ್ರಖರತೆ ಗೋಚರವಾಗುತ್ತದೆ. ಪಂಡಿತ ಸಾಹಿತ್ಯದಲ್ಲಿ ಇಲ್ಲದಷ್ಟು ವಿವಿಧ ಪ್ರಕಾರಗಳನ್ನೂ ಪ್ರಯೋಗಗಳನ್ನೂ ನಾವು ಇಲ್ಲಿ ನೋಡುತ್ತೇವೆ. ವಿಶಾಲವಾದ ಸಮುದ್ರಾಂತರಾಳದಲ್ಲಿ ಭೂಗತವಾಗುತ್ತಿರುವ ಮುತ್ತುರತ್ನಗಳ ರಾಸಿಯಂತಿದೆ ಭಾರತೀಯ ಜನಪದ ಸಾಹಿತ್ಯ ಸಂಪತ್ತು. ಕಾಲ ಮಿಂಚಿಹೋಗುವುದಕ್ಕೆ ಮುಂಚೆ ಇವುಗಳನ್ನು ಮೇಲೆತ್ತಿ ನಮ್ಮ ಸಾಹಿತ್ಯ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕಾದುದು ಪ್ರತಿಯೊಬ್ಬನ ಕರ್ತವ್ಯ. ಅದರಲ್ಲಿಯೂ ವಿದ್ಯಾವಂತರೆನಿಸಿಕೊಂಡು ಪಂಡಿತ ಸಾಹಿತ್ಯವನ್ನು ಅಭ್ಯಾಸ ಮಾಡಿರುವ ಸಾಹಿತ್ಯಾಭಿಮಾನಿಗಳು ಇದರ ಕಡೆ ಹೆಚ್ಚು ಗಮನಕೊಡಬೇಕಾದುದು ಅತ್ಯಗತ್ಯ.

ಸ್ಥಳೀಯ ಅಭಿಮಾನಿಗಳು ಸ್ಥಳಗಳಲ್ಲಿ ನಡೆಸಬೇಕಾದ ಸಂಗ್ರಹಣ ಕಾರ್ಯದ ಜೊತೆಗೆ ಕೇಂದ್ರೀಯ ಸಂಸ್ಥೆಯೊಂದು ಸಂಗ್ರಹಿತ ಸಾಹಿತ್ಯದ ಶಾಸ್ತ್ರೀಯ ಪರಿಶೀಲನೆ, ವಿಂಗಡಣೆ, ವಿಮರ್ಶೆ, ಮುಂತಾದ ಕೆಲಸವನ್ನು ನಡೆಸುವ ಹೊಣೆಯನ್ನು ಹೊರಬೇಕು. ಭಾಷೆ, ಛಂದಸ್ಸು, ಕಟ್ಟುಕಟ್ಟಲೆ, ಕಟ್ಟಪ್ಪಣೆ, ಅಗತ್ಯ – ಒಂದೂ ಇಲ್ಲದೆ ನಿರಾತಂಕವಾಗಿ ನಿರರ್ಗಳವಾಗಿ ಹರಿದು ಬಂದಿರುವ ಜನಪದ ಸಾಹಿತ್ಯವಾಹಿನಿಯಲ್ಲಿ ಏನಿಲ್ಲ? ಕತೆ, ಕಾವ್ಯ, ನೃತ್ಯ, ಸಂಗೀತ, ಹಾಸ್ಯ, ಚಮತ್ಕಾರ ಪ್ರಧಾನವಾದ ವಿವಿಧ ಪ್ರಕಾರಗಳಿವೆ; ಒಂದೊಂದು ಪ್ರಕಾರದಲ್ಲಿಯೂ ವಿಧವಿಧ ಜಾತಿ, ರೀತಿ. ಇವುಗಳ ಶಾಸ್ತ್ರೀಯ ವಿಂಗಡಣೆ ಅಭ್ಯಾಸ ಪಂಡಿತಸಾಹಿತ್ಯದ ಅಭ್ಯಾಸಕ್ಕಿಂತಲೂ ಕಷ್ಟ, ಕ್ಲಿಷ್ಟ. ಪಂಡಿತ ಸಾಹಿತಿಗಳು ಈ ಮಹತ್ಕಾರ್ಯವನ್ನು ಶಾಸ್ತ್ರೀಯವಾಗಿ ಮಾಡಿ, ನಮ್ಮ ಜನಪದ

ಸಾಹಿತ್ಯವಾಹಿನಿಯ ನೀರು ಕಾಲದ ಕೆಸರಿನಲ್ಲಿ ಬತ್ತಿಹೋಗದಂತೆ ತಡೆದು, ಆ ಸಾಹಿತ್ಯರಾಜಸಾಗರದ ವಿಶಾಲ ವೈಭವವನ್ನೂ, ರಂಗುರಂಗಿನ ಚೆಲುಮೆಯ ಬೃಂದಾವನವನ್ನೂ ನೋಡಿ ಮನದಣಿಯುವ ಸುಯೋಗವನ್ನು ಕನ್ನಡಿಗರಿಗೆ ಬೇಗ ಕರುಣಿಸಲಿ ಎಂದು ಆಶಿಸುತ್ತೇನೆ. ಪಂಡಿತ ಸಾಹಿತ್ಯದ ಅಭ್ಯಾಸವನ್ನು ಕೈಗೊಂಡಿರುವ ವಿಶ್ವವಿದ್ಯಾನಿಲಯಗಳೇ ಈ ಹೊಣೆಯನ್ನು ಹೊತ್ತರೆ ಕೆಲಸ ಹೆಚ್ಚು ಯಶಸ್ವಿಯಾಗಿಯೂ ಪರಸ್ಪರ ಫಲಕಾರಿಯಾಗಿಯೂ ಆಗುತ್ತದೆ.

ಕನ್ನಡ ನಾಡಿನ ಮೊಟ್ಟಮೊದಲನೆಯ ವಿಶ್ವವಿದ್ಯಾನಿಲಯವಾದ ಮೈಸೂರು ವಿಶ್ವವಿದ್ಯಾನಿಲಯ ಈಚೆಗೆ, ಕನ್ನಡ ಭಾಷೆಯ ಅಭ್ಯಾಸಕ್ಕೇ ಒಂದು ಸಂಸ್ಥೆಯನ್ನು ಸ್ಥಾಪಿಸಿ, ಅದರ ಮೂಲಕ ಜನಪದ ಸಾಹಿತ್ಯವನ್ನು ಸ್ನಾತಕೋತ್ತರ ಅಭ್ಯಾಸ ವಿಷಯಗಳಲ್ಲೊಂದಾಗಿ ಆರಿಸಿರುವುದು ತುಂಬ ಹರ್ಷದಾಯಕವಾಗಿದೆ. ದಕ್ಷಿಣ ಭಾರತದ ಇನ್ನಾವ ವಿಶ್ವವಿದ್ಯಾನಿಲಯಗಳಲ್ಲಿಯೂ ಈ ಪ್ರಯತ್ನ ಇನ್ನೂ ನಡೆದಂತೆ ಕಂಡುಬಂದಿಲ್ಲ.

ವಿದ್ಯಾರ್ಥಿದೆಸೆಯಿಂದಲೂ ಜನಪದ ಸಾಹಿತ್ಯದ ಸಂಗ್ರಹಣೆ, ಸಂಪಾದನೆ, ಅಭ್ಯಾಸ ಇವುಗಳಲ್ಲಿ ತೊಡಗಿ, ಕನ್ನಡ ಭಾಷೆಯಲ್ಲಿ ಎಂ.ಎ. ಪದವಿಯನ್ನು ಪಡೆದನಂತರ ಡಾಕ್ಟರೇಟ್ ಪದವಿಯ ಅಧ್ಯಯನಕ್ಕೆ ಜನಪದ ಸಾಹಿತ್ಯವನ್ನೇ ಆರಿಸಿಕೊಂಡು ಶ್ರದ್ಧೆಯಿಂದ ಕೆಲಸಮಾಡುತ್ತಿರುವ ಶ್ರೀ ಜೀ. ಶಂ. ಪರಮಶಿವಯ್ಯನವರು ಈಗಾಗಲೇ ಕನ್ನಡಿಗರಿಗೆ ಚಿರಪರಿಚಿತರಾಗಿದ್ದಾರೆ. ಜನಪದ ಸಾಹಿತ್ಯದ ಬಗ್ಗೆ ಶಾಸ್ತ್ರೀಯವಾಗಿ, ಸಮರ್ಪಕವಾಗಿ ವ್ಯಾಸಂಗಮಾಡಿ ಈ ರಂಗದಲ್ಲಿ ಸಾಕಷ್ಟು ಪರಿಶ್ರಮ ಗಳಿಸಿರುವ ಅವರ ಈ ಕೃತಿಯನ್ನು ಪ್ರಕಟಿಸುವ ಸದವಕಾಶ ನಮಗೆ ದೊರೆತದ್ದು ನಮ್ಮ ಸುದೈವ. ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಜನಪದ ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಿರುವ, ಜನಪದ ಸಾಹಿತ್ಯಾಭ್ಯಾಸಿಗಳಿಗೆ ಮಾರ್ಗದರ್ಶಕರಾಗಿರುವ ಪ್ರೊ. ದೇ. ಜವರೇಗೌಡ ಅವರು ಈ ಕೃತಿಗೆ ಮುನ್ನುಡಿಯನ್ನು ಬರೆದು, ಜನಪದ ಸಾಹಿತ್ಯ ರಂಗದ ಮೇಲೆ ಹೊಸ ಬೆಳಕನ್ನು ಚೆಲ್ಲಿದ್ದಾರೆ. ಅವರ ಅಮೂಲ್ಯ ಸಲಹೆ ಸಹಕಾರ ಮಾರ್ಗದರ್ಶನಗಳಿಂದ ಮುಂದೆ ಈ ರಂಗದ ಕೆಲಸ ಇನ್ನೂ ಫಲಕಾರಿಯಾಗುವುದರಲ್ಲಿ ಸಂದೇಹವಿಲ್ಲ. ಅವರಿಗೆ ನಾನು ಚಿರಋಣಿ.

ರಾವೆಂಶ್ರೀ

ಪರಿವಿಡಿ

ಜನಪದ ಸಾಹಿತ್ಯ ಸಮೀಕ್ಷೆ

ಸಮೀಕ್ಷೆ ೧

To-day the well-equipped political state possesses its accredited historical records, its approved literary Master pieces and its classified folklore archives.

- From introduction to
"Folklore Research Around the World"

ಕಂಸಾಳೆಯ ಸಿರಿಯ ದೇವರಗುಡ್ಡರು

ಕಂಸಾಳೆಯ ಪದಗಳು ಕನ್ನಡ ಜನಪದ ಸಾಹಿತ್ಯದ ಒಂದು ಪ್ರಮುಖ ಅಂಗ. ಭಕ್ತಿಸ್ಥಾಯಿಯ ಹಿನ್ನೆಲೆಯಲ್ಲಿಯೇ ಸೃಷ್ಟಿಯಾಗಿರುವ ಈ ಸಾಹಿತ್ಯ ಮೂಲ ರಸಕ್ಕೆ ಪೋಷಕವಾಗುವ ಪರಿಮಿತಿಯಲ್ಲಿಯೇ ಅಪಾರ ವೈವಿಧ್ಯತೆಯನ್ನೂ ಸಾಧಿಸಿಕೊಂಡಿದೆ. ಅಪೂರ್ವವೂ, ಬಂಧುರವೂ ಆದ ದೈವಸ್ತುತಿ ಪ್ರಧಾನ ಗೀತೆಗಳ ಜೊತೆಗೆ ಸುದೀರ್ಘ ಕಥೆಗಳೂ ಈ ಸಾಹಿತ್ಯದ ಒಂದು ಹಿರಿಮೆ. ನಿಶ್ಚಿತ ದೈವವೊಂದರ ಆರಾಧಕರು ತಮ್ಮ ಮೆಚ್ಚಿನ ದೇವರ ಮಹಿಮೆಯ ಪ್ರಸಾರಕ್ಕಾಗಿಯೇ ಈ ವಿಪುಲ ಸಾಹಿತ್ಯವನ್ನು ಅಳವಡಿಸಿಕೊಂಡರೋ ಎನ್ನುವಂತೆ ಕಂಡರೂ ಆ ಚೌಕಟ್ಟಿನ ಆಚೆಯಲ್ಲಿ ತನ್ನದೇ ಆದ ವರ್ಣಮಯ ಪ್ರಪಂಚದಲ್ಲಿ ಕಂಸಾಳೆಯ ಪದಗಳು ರಂಜಿಸುತ್ತವೆ. ಅವುಗಳಲ್ಲಿ ಮಿಡಿಯುವ ಪ್ರಾದೇಶಿಕ ಭಾಷೆಯ ಸಜೀವಶಕ್ತಿ, ರಮ್ಯವೂ ಅದ್ಭುತವೂ ಆದ ಕಲ್ಪನಾವೈಖರಿ, ಸುಭಗವೂ, ಸುಂದರವೂ ಆದ ಕಥನಕಲೆ ಅಸದೃಶವಾದುವು; ಅತಿಶಯವಾದುವು.

'ಕಂಸಾಳೆ' ಎನ್ನುವುದು 'ಕಾಂಸ್ಯತಾಲ' ಎನ್ನುವ ಸಂಸ್ಕೃತ ಮೂಲದ ಕನ್ನಡರೂಪ. ಗಾತ್ರದಲ್ಲಿ, ಆಕಾರದಲ್ಲಿ, ನಾದದಲ್ಲಿ ಕಂಸಾಳೆ ಸಾಮಾನ್ಯ ತಾಳಗಳಿಗಿಂತ ಭಿನ್ನವಾದುದು. ಈ ಕಂಚಿನ ತಾಳಗಳು ಹೆಚ್ಚು ಅಗಲವಾಗಿಯೂ, ತಮ್ಮದೇ ಆದ ವಿಶಿಷ್ಟ ಆಕೃತಿಯಲ್ಲಿಯೂ ಇರುತ್ತವೆ. ಅಂಗೈಯಗಲದ ಬಟ್ಟಲಿನೋಪಾದಿಯ ಒಂದು ತಾಳಕ್ಕೆ, ಅದರ ಮುಚ್ಚಳವೋ ಎಂಬಂತೆ ತುಸು ಅಗಲವಾದ ಮತ್ತೊಂದು ತಾಳವಿರುತ್ತದೆ. ಮೇಲಿನ ತಾಳಕ್ಕೆ ಬಿಗಿದು ಕಟ್ಟಿದ ಉದ್ದವಾದ ದಪ್ಪ ಹುರಿ ಹಿಡಿಯುವ ಸಾಧನ. ಗೊಂಡೆ ಹೂ, ಗಗ್ಗರಗಳಿಂದ ಆ ಹುರಿ ಅಲಂಕೃತವಾಗಿರುತ್ತದೆ.

ಕಂಸಾಳೆ ಪದಗಳು ಹೇಗೆ ವಿಶಿಷ್ಟ ಉದ್ದೇಶಕ್ಕಾಗಿ ರಚಿತವಾಗಿರುವುವೋ ಹಾಗೆಯೇ ಅವುಗಳನ್ನು ಹಾಡುವವರೂ ಕೆಲವು ಕಟ್ಟುಕಟ್ಟಳೆಗಳ ಸಂಸ್ಕಾರಕ್ಕೆ ಒಳಗಾಗಲೇಬೇಕು. ಬದುಕಿನುದ್ದಕ್ಕೂ ಅವರು ನಿಷ್ಠೆಯ ಜೀವನವನ್ನೇ ನಡಸಿ ಈ ಭಕ್ತಿಸಾಹಿತ್ಯದ ಪ್ರಸಾರಕ್ಕಾಗಿಯೇ ಮೀಸಲಾದ ಭಕ್ತರಾಗುತ್ತಾರೆ. ಇವರೇ 'ದೇವರ ಗುಡ್ಡರು'. ತಮ್ಮ ದೇವರ ಮಹಿಮಾತಿಶಯಗಳನ್ನು ಸೊಗಸಾದ ರೀತಿಯಲ್ಲಿ ಹಾಡಿ, ನಲಿದು, ಜನತೆಯಲ್ಲಿ ದೈವಭಕ್ತಿ ನಿಚ್ಚಳವಾಗಿ ಉಳಿಯುವಂತೆ ಶ್ರಮಿಸುವ ಈ 'ಗುಡ್ಡರು' ದೇವರ ಶಿಷ್ಯರೇ ಹೌದು.

ಗುಡ್ಡನನ್ನು ಬಿಡುವುದು ಒಂದು ಸಂಪ್ರದಾಯ. ತಮಗೆ ಮಕ್ಕಳಾಗದೆ ಇದ್ದಾಗ ತಾಯಿತಂದೆಯರು ಹೊರುವ ಹರಕೆಯ ಫಲವೇ ಈ ಗುಡ್ಡರು. ಹುಟ್ಟಿದ ಮೊದಲನೆಯ ಗಂಡುಮಗುವನ್ನು ಗುಡ್ಡನನ್ನಾಗಿ ಬಿಡಲು ಹರಕೆ ಮಾಡಿಕೊಳ್ಳುತ್ತಾರೆ. ಹಾಗೆಯೇ ಆ ಮಗುವನ್ನು ದೇವರ ಸೇವೆಗೆ ಮೀಸಲಾಗಿಯೇ ಇರಿಸುತ್ತಾರೆ.

ದೇವರಗುಡ್ಡ ಸಂಸಾರಿಯೂ ಹೌದು, ಸ್ಥಿತಿವಂತನೂ ಆಗಿರಬಹುದು. ಆದರೆ ಸೋಮವಾರ ಶುಕ್ರವಾರ ಕಂಸಾಳೆಗಳನ್ನು ತೆಗೆದುಕೊಂಡು ದೇವರ ಹೆಸರಿನಲ್ಲಿ ಭಿಕ್ಷೆ ಮಾಡಬೇಕು. ಆ ಸಾಹಿತ್ಯದ ಸಂದೇಶವನ್ನು ಆ ಮೂಲಕ ಮನೆಮನೆಗೂ ಒಯ್ಯಬೇಕು. ಅಲ್ಲದೆ ಭಕ್ತರು ಬಯಸಿದಲ್ಲಿ ದೇವರ ಕಥೆಯನ್ನು ಮಾಡಲೂ ಸಿದ್ಧನಿರಬೇಕು.

ಕಥೆ ಮಾಡುವ ವೈಖರಿ ಗುಡ್ಡರಿಗೇ ಮೀಸಲಾದ ಒಂದು ಬಗೆ. ಕೋಲನ್ನು ಪೂಜಿಸಿ, ವಿಭೂತಿಯ ಗಟ್ಟಿಯನ್ನು ಇಟ್ಟು, ಹಣತೆಯ ಬೆಳಕಲ್ಲಿ ದೇವರನ್ನು ಅಲಂಕರಿಸಿ, ಅರ್ಚಿಸಿ ಅನಂತರ ನೆರೆದ ಮಂದಿಗೆ ಕಂಸಾಳೆಯ ಕಥೆಗಳ ಪ್ರಸಾದವನ್ನು ಸಮಗ್ರ ರಾತ್ರಿ ಎರೆಯುತ್ತಾರೆ. ಒಬ್ಬ ಮುಮ್ಮೇಳದವನು, ಇಬ್ಬರು ಮೂವರು ಹಿಮ್ಮೇಳದವರು ಕಥೆಗೆ ಬರುತ್ತಾರೆ. ಎಲ್ಲರೂ ಗುಡ್ಡರೇ. ಎಲ್ಲ ಕಥೆ ಮಾಡುವವರೇ. ಸಾಮಾನ್ಯವಾಗಿ ಹಿರಿಯ ಗುಡ್ಡ (ಗುರು) ಮತ್ತು ಅವನ ಕಿರಿಯ ಗುಡ್ಡರು (ಶಿಷ್ಯ) ಬರಬಹುದು ಅಥವಾ ಮೂರು ನಾಲ್ಕು ಮಂದಿ ಗುಡ್ಡರು ಬೇರೆ ಬೇರೆ ದಾರಿಗಳಿಂದ ಕಲೆತು ಕಥೆ ಮಾಡಬಹುದು. ಕಥೆಯ ಸಂದರ್ಭದಲ್ಲಿ ಹಿಮ್ಮೇಳದವರು ಕಂಸಾಳೆಯ ಜೊತೆಗೆ ಏಕತಾರಿ ದಮ್ಮಡಿಗಳನ್ನೂ ವೈವಿಧ್ಯಕ್ಕೆ ಬಳಸುತ್ತಾರೆ. ಮುಮ್ಮೇಳದವನು ಮಾತ್ರ ಕಂಸಾಳೆಯನ್ನೇ ಹಿಡಿಯಬೇಕು. ನಿಮಿಷ ನಿಮಿಷಕ್ಕೂ ಅದರ ವಿಶಿಷ್ಟ ನಾದವೇ ಕಥೆಯನ್ನು ಮುಂದೆ ನಡೆಸಬೇಕು. ಅದರ ಮಹಿಮೆಯಲ್ಲಿಯೇ ಮೈಮರೆತು ರಸಾವೇಶದ ಮಡುವಿನಲ್ಲಿ ಧುಮುಕಬೇಕು. ಕಥೆಯ ಕಾಮನಬಿಲ್ಲಿನ ಮೇಲೆ, ನೆರೆದ ಭಕ್ತರ ಮನಸ್ಸನ್ನು ತೇಲಿಸಬೇಕು. ಕೊರಳ ರುದ್ರಾಕ್ಷಿ, ಹಣೆಯ ವಿಭೂತಿ, ಕೈಯ ಕಂಸಾಳೆಗಳ ಗುಡ್ಡನ ಮೇಲೆ ದೇವರೇ ಮೈದುಂಬುವನೇನೊ! ಅಷ್ಟು ನಿಷ್ಠೆ, ಅಷ್ಟು ಶ್ರದ್ಧೆ, ಅಷ್ಟು ಭಯ ಭಕ್ತಿಯ ಹರಹು ಧೂಪದ ಪರಿಮಳವಾಗಿ ಕವಿಯುತ್ತದೆ. ದೇವರ ಗುಡ್ಡ, ದೇವರ ಶಿಷ್ಯ, ದೇವರ ಹರಿಕಾರ; ದೇವರನ್ನು ತನ್ನ ಅಪೂರ್ವ ಕಥೆಗಳಿಂದ ಭಕ್ತರೆದುರು ಸಾಕ್ಷಾತ್ಕರಿಸಿ ತೋರುವ ಮಾಂತ್ರಿಕ. ಅವನ ಕುಲ ಯಾವುದಾದರೇನು, ಅವನ ವಸನ ಹಸನಿಲ್ಲದಿದ್ದರೇನು! ಅವನ ಅಂತರಂಗದಿಂದ ತುಂಬಿ ಬರುವ ಕಾವ್ಯಕಾವೇರಿ ಪವಿತ್ರ, ಅನುಪಮ, ಅರ್ಥಪೂರ್ಣ.

ದೇವರಗುಡ್ಡರು ಬಾಲ್ಯದಿಂದಲೇ ಗುರುವಿನ ಸೇವೆಯನ್ನು ಮಾಡಿಕೊಂಡು ಈ ಸಾಹಿತ್ಯವನ್ನು ಅಭ್ಯಸಿಸಬೇಕು. ವರ್ಷಕ್ಕೆ ಇಷ್ಟೆಂದು 'ಮುಗುವಳಿ' ಮಾತಾಡಿ

ಶ್ರದ್ಧೆಯಿಂದ ಕಲಿಯಬೇಕು. ತಾನು ಕಲಿವ ಆ 'ವಿದ್ಯೆ' ಪರಂಪರೆಯಿಂದ ಬೆಳೆದು ಬಂದುದು. ಕೇವಲ ನಾಲಗೆಯ ಮೇಲೆಯೇ ಉಳಿದು ಬಂದುದು. ಅದನ್ನು ತಾನೂ ಉಳಿಸಿಕೊಳ್ಳಬೇಕು. ಪೂರ್ಣ ವಿದ್ಯೆಯ ಪರಿಶ್ರಮ ತನಗಾಗದಿದ್ದರೂ ಕಲಿತದ್ದನ್ನು ಸಾರ್ಥಕಪಡಿಸಿಕೊಳ್ಳಬೇಕು. ಆ ಪ್ರಸಾರಕಾರ್ಯದ ಹೊಣೆ ಅವನದಾಗುತ್ತದೆ.

ಇಂಥ ಗುಡ್ಡರ ಪಾವಿತ್ರ್ಯವನ್ನು ಲೌಕಿಕರು ಮರಣಕಾಲದಲ್ಲಿಯೂ ಹಾಳುಮಾಡುವಂತಿಲ್ಲ. ಅವರ ಅಂತ್ಯಸಂಸ್ಕಾರವೂ ಗುಡ್ಡರಿಂದಲೇ ಆಗಬೇಕು. ಅವನು ಭಕ್ತ. ಒಂದು ಪವಿತ್ರ ಉದ್ದೇಶಕ್ಕಾಗಿ ತನ್ನ ಬದುಕನ್ನು ಮೀಸಲಾಗಿಟ್ಟವನು. ಆ ಉದ್ದೇಶ ಜನಪದ ಸಾಹಿತ್ಯದ ಪ್ರಸಾರವೇ. ಸಮಗ್ರ ಬದುಕನ್ನೇ ಅದಕ್ಕಾಗಿ ಮೀಸಲಿಟ್ಟಾಗ ಅವರಿಂದ ಮೂಡಿ ಬರುವ ಸಾಹಿತ್ಯವೂ ಶ್ರೇಷ್ಠತಮವಾದುದೇ ಆಗಿರಬೇಕು.

ಕರ್ನಾಟಕದ ದಕ್ಷಿಣದ ತುದಿಯ ಹಲವು ಜಿಲ್ಲೆಗಳಲ್ಲಿ ಕಂಸಾಳೆ ಸಾಹಿತ್ಯ ವಿಪುಲವಾಗಿದೆ. ಮುಖ್ಯವಾಗಿ ಬೆಂಗಳೂರು, ಮಂಡ್ಯ, ಮೈಸೂರು ಜಿಲ್ಲೆಗಳ ಪೂರ್ವ ಮತ್ತು ದಕ್ಷಿಣದ ಸೆರಗಿನಲ್ಲಿ ಈ ಸಾಹಿತ್ಯ ತಾನೇ ತಾನಾಗಿ ಹಬ್ಬಿದೆ. ಇದಕ್ಕೆ ಹಿನ್ನೆಲೆ ಪೂರ್ವಘಟ್ಟಗಳು : ಇದರ ಸ್ಫೂರ್ತಿಕೇಂದ್ರ ಪೂರ್ವಘಟ್ಟಗಳನ್ನು ತನ್ನ ತಪೋಭೂಮಿಯನ್ನಾಗಿ ಮಾಡಿಕೊಂಡು, ಅಲ್ಲಿ ನೆಲೆಗೊಂಡಿರುವ ಮಲೆಯ ಮಾದೇಶ್ವರ. ದೇವರಗುಡ್ಡರೆಲ್ಲಾ ಮಾದೇಶ್ವರನ ಪರಮ ಭಕ್ತರೇ. ಅವನ ಹೆಸರಿನಲ್ಲಿಯೇ ಅವರು ಗುಡ್ಡರಾಗಿ ತಮ್ಮ ಬದುಕನ್ನು ಆ ದೈವದ ಸೇವೆಯಲ್ಲಿ ಸಾರ್ಥಕಪಡಿಸಿಕೊಳ್ಳುತ್ತಾರೆ. ಅವರು ಹಾಡುವುದು ಬಹುಪಾಲು ಈ ಮಾದೇಶ್ವರನ ಮಹಿಮೆಯ ಕಥೆಗಳೇ.

ಶ್ರೀ ಮಲೆಯ ಮಾದೇಶ್ವರ ಕ್ಷೇತ್ರ ಪ್ರಸಿದ್ಧ ಯಾತ್ರಾಸ್ಥಳ. ಇತ್ತ ಕನ್ನಡ ನಾಡಿನಿಂದ ಅತ್ತ ತಮಿಳು ನಾಡಿನಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಇಲ್ಲಿಗೆ ನಡೆದುಕೊಳ್ಳುತ್ತಾರೆ. ಪೂರ್ವಘಟ್ಟಗಳ ಮಧ್ಯೆ ಸುಂದರ ಬನಸಿರಿಯ ನಡುವೆ ಎರಡು ಸಂಸ್ಕೃತಿಗಳ ಸಂಗಮ ಸ್ಥಳದಂತೆ ಶ್ರೀಮಲೆಯ ಮಾದೇಶ್ವರ ಕ್ಷೇತ್ರವಿದೆ. ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿಗೆ ಸೇರಿದ ಈ ಕ್ಷೇತ್ರಕ್ಕೆ ಭಕ್ತರು ಬಹುದೂರದಿಂದ ಕಾಲುನಡಿಗೆಯಲ್ಲಿಯೇ ಬರುತ್ತಾರೆ. ಬಹುನಿಷ್ಠೆಯಿಂದ ನಡೆದುಕೊಳ್ಳುತ್ತಾರೆ. ದೀಪಾವಳಿ, ಶಿವರಾತ್ರಿಗಳಲ್ಲಿ ನಡೆಯುವ ದೊಡ್ಡ ಜಾತ್ರೆಗಳಿಗೆ ಅಸಂಖ್ಯಾತ ಯಾತ್ರಾರ್ಥಿಗಳು ಬರುತ್ತಾರೆ. ಇವರ ಜೊತೆಯಲ್ಲಿ ದೇವರ ಗುಡ್ಡರೂ ಬರುತ್ತಾರೆ. ಹಲವು ಪಯಣಗಳಲ್ಲಿ ಹಾದಿ ಸವೆಯುವಾಗ ಅನೇಕ ಕಡೆ ತಂಗಬೇಕಾಗುತ್ತದೆ. ದಾರಿ ನಡೆಯುವಾಗ ಮಾದೇಶ್ವರನ ಸ್ಮರಣೆ ಚೈತನ್ಯವನ್ನು ತುಂಬಬೇಕಾಗುತ್ತದೆ.

ಕುಳಿತಲ್ಲಿ ನಿಂತಲ್ಲಿ ಆ ದಿವ್ಯಪುರುಷನ ಮಹಿಮೆಯನ್ನು ಹೊಗಳಿ ಹಾಡಿ ಗುಡ್ಡರು ತಮ್ಮ ಕಂಸಾಳೆಯ ಕಣಿಕಣಿ ನಾದದಲ್ಲಿ ಭಕ್ತರನ್ನು ಪುಳಕಗೊಳಿಸುತ್ತಾರೆ. ಹೆಜ್ಜೆ ಹೆಜ್ಜೆಯಲ್ಲೂ 'ಮಹಾದೇವ.... ಮಹಾದೇವ' ಕಂಡ ಕಂಡಲ್ಲೆಲ್ಲ 'ಮಹಾದೇವ.... ಮಹಾದೇವ....' ಎಲ್ಲೆಲ್ಲಿಯೂ ಕಂಸಾಳೆ, ಎಲ್ಲೆಲ್ಲಿಯೂ ದೇವರ ಗುಡ್ಡರು!

ಕೊಳ್ಳೆಗಾಲ, ಕೌದಳ್ಳಿ, ತಾಳಬೆಟ್ಟಗಳನ್ನು ಮುಟ್ಟಿ, ಒಂಬತ್ತು ಮೈಲಿ ಏಳು ಬೆಟ್ಟಗಳನ್ನು ಹತ್ತಿ ಇಳಿದರೆ ಅತ್ತ 'ಕೀಳುದೇಶ' 'ಕುಂಪಣಿ ರಾಜ್ಯ' ಇತ್ತು – ಮದರಾಸು ಪ್ರಾಂತ. ಕೊಳ್ಳೆಗಾಲವೂ ಮದರಾಸಿಗೇ ಸೇರಿತ್ತು. ಅನೇಕ ಪವಾಡಗಳನ್ನೆಸಗಿ, ದುಷ್ಟರನ್ನು ದಂಡಿಸಿ, ಶಿಷ್ಟರನ್ನು ರಕ್ಷಿಸಿ, ಒಕ್ಕಲನ್ನು ಪಡೆದು, ಮಹಿಮೆಯನ್ನು ಮೆರೆದು ಎಪ್ಪತ್ತೇಳು ಮಲೆಯ ನಡುವೆ ' ಹೊನ್ನ ಹುತ್ತದಲ್ಲಿ ಒಡೆದು ಮೂಡಿದ' ಮಾದಯ್ಯನನ್ನು ನೋಡಲು 'ಹಟ್ಟಬೆಟ್ಟ'ವೇ ಹಿಡಿಸದಷ್ಟು ಜನ ಬರುತ್ತಾರೆ. ಪ್ರತಿತಿಂಗಳೂ ಗಿರಿಯಲ್ಲಿ ಜಾತ್ರೆಯುಂಟು. ಆದರೆ ದೀಪಾವಳಿ, ಶಿವರಾತ್ರಿಯ ಜಾತ್ರೆಗಳೇ ದೊಡ್ಡವು. ಮಾದಯ್ಯನ ಗಿರಿಯ ಪಯಣ ಹಿಂದಿನಷ್ಟು ಕಷ್ಟಸಾಧ್ಯವಲ್ಲ. ಈಗ ವಾಹನಗಳು ಸಂಚರಿಸುತ್ತವೆ; ಸೊಗಸಾದ ರಸ್ತೆಯಿದೆ.

ಗಿರಿಯಲ್ಲಿ ಮಾದಯ್ಯನನ್ನು ತಮ್ಮಡಿಗಳು ಪೂಜಿಸುತ್ತಾರೆ. ಗುಡ್ಡರು ಹಾಡಿ ಹೊಗಳುತ್ತಾರೆ. ಭಕ್ತರು, ಭಯಭಕ್ತಿಯಿಂದ ಮಣಿದು ಧನ್ಯರಾಗುತ್ತಾರೆ. ಅವನ ಕಥೆಗಳನ್ನು ಕೇಳಿ ಆನಂದಿಸುತ್ತಾರೆ, ಆದರಿಸುತ್ತಾರೆ.

ಕಂಸಾಳೆಯವರು ಹಾಡುವ ಕಥೆಗಳೆಲ್ಲವೂ ಒಂದು ರೀತಿಯ ಪದ್ಯ ಗಂಧಿಯಾದ ಗದ್ಯ. ನಡುನಡುವೆ ಹಾಡುಗಳು ಬರಬಹುದು. ಪಲ್ಲವಿ ಬದಲಾಗಬಹುದು. 'ಮೂಡು ಮಲೆಯ ಕೈಲಾಸ'ವನ್ನು ಕುರಿತು, ಆ ಕೈಲಾಸದ ಒಡೆಯನನ್ನು ಕುರಿತು ಭಕ್ತರು ಬಹು ಮೋಹಕ ಗೀತೆಗಳನ್ನೂ ಕಥೆಗಳನ್ನೂ ಹಾಡುತ್ತಾರೆ. 'ಬೀಸು ಕಂಸಾಳೆ' ಎನ್ನುವ ನೃತ್ಯಪ್ರಧಾನ ಮೇಳದಲ್ಲಿ ಬಹು ಆಕರ್ಷಕ ರೀತಿಯಲ್ಲಿ ನಾನಾಭಂಗಿಯಲ್ಲಿ ಬಾಗಿ, ಬಳುಕಿ, ಕುಣಿದು, ಕಂಸಾಳೆಗಳನ್ನು ಹಾಕುತ್ತ ಕೆಲವರು ಹಾಡಿದರೆ ಮತ್ತೆ ಕೆಲವರು ನಿಂತು ಹಾಡುತ್ತಾರೆ, ಅದೇ ಕಂಸಾಳೆಯ ನೆರವಿನಿಂದ.

ಕಂಸಾಳೆಯ ಕಥೆಗಳಲ್ಲಿ ಪೌರಾಣಿಕ ಐತಿಹಾಸಿಕ ಕಥೆಗಳು ಬರುತ್ತವೆ. ಒಂದು ಕ್ಷೇತ್ರಕ್ಕೆ, ಒಂದು ದೈವಕ್ಕೆ, ಧರ್ಮಕ್ಕೆ, ಮೀಸಲಾದ ಹಾಡುಗಳನ್ನೇ ಹಾಡಬೇಕೆನ್ನುವ ಕೃಪಣ ದೃಷ್ಟಿ ಇವರದಲ್ಲ. ಬಿಳಿಗಿರಿರಂಗಯ್ಯನ ಕಥೆಯನ್ನೂ ಉತ್ತರ ರಾಮಾಯಣದ ಕಥೆಯನ್ನೂ ಹಾಡಬಲ್ಲರು. ಮೇಲುಕೋಟೆ ಚೆಲುವರಾಯನ 'ವರನಂದಿ ಪ್ರಣಯ' ಪ್ರಸಂಗವನ್ನೂ ಬಣ್ಣಿಸಬಲ್ಲರು. 'ಪಿರಿಯಾಪಟ್ಟಣದ ಕಾಳಗ'ದಂಥ ಐತಿಹಾಸಿಕ ಇತಿವೃತ್ತದಲ್ಲಿ ವಿಹರಿಸಬಲ್ಲರು, 'ಬಂಜೆ ಹೊನ್ನಮ್ಮನ' ದುಃಖಮಯ ಬಾಳಿನ

ನೋವನ್ನೂ ಚಿತ್ರಿಸಬಲ್ಲರು. ಆದರೆ ಇವೆಲ್ಲವೂ ಕೇವಲ 'ಕಲಿಕೆ'ಗಾಗಿ, ಕಲೆಗಾಗಿ. ಆದರೆ ಮಾದಯ್ಯನಿಗೆ ಸಂಬಂಧಿಸಿದ ಕೆಲವು ವಿಶಿಷ್ಟ ಕಥೆಗಳೇ ಉಂಟು. ಅವನ್ನು ಹಾಡಲು ದೇವರನ್ನು ಪೂಜಿಸಬೇಕು. ಹಾಡುವವರಲ್ಲಿ, ಕೇಳುವವರಲ್ಲಿ ಅನನ್ಯ ಭಕ್ತಿಯಿರಬೇಕು, ನಿಷ್ಠೆ ಇರಬೇಕು, ಶ್ರದ್ಧೆ, ಆಸಕ್ತಿಗಳಿರಬೇಕು. 'ಮಲೆಯ ಮಾದೇವ' ಮಹಿಮಾ ಪುರುಷ. ಅವನ ಮಹಿಮೆ ಎಷ್ಟೆಲ್ಲ ಬಗೆಯಲ್ಲಿ ವ್ಯಕ್ತವಾಗಿಲ್ಲ – 'ಶಂಕಮ್ಮನ ಕಥೆ'ಯಲ್ಲಿ, 'ಬೇವಿನ ಕಾಳಮ್ಮನ ಕಥೆ'ಯಲ್ಲಿ 'ಜುಂಜೇಗೌಡನ ಕಥೆ'ಯಲ್ಲಿ 'ಉತ್ತರಾಜಮ್ಮ ನೀಲಮ್ಮ'ರ ಕಥೆಯಲ್ಲಿ. ಅವನ ಪವಾಡಗಳು ಎಷ್ಟೆಲ್ಲ ನೆಲೆಗಳಲ್ಲಿ ವ್ಯಕ್ತವಾಗಿಲ್ಲ – 'ಸೂತ್ತೂರಿನಲ್ಲಿ ಕುಂತೂರಿನಲ್ಲಿ' – ಹತ್ತು ಹಲವಡೆಗಳಲ್ಲಿ. ಅವನ ದಿವ್ಯ ಕರುಣೆಯೇ ಕಂಸಾಳೆಯವರಲ್ಲಿ ಆ ಹಾಡಾಗಿ ಉಳಿದಿವೆ. ಆ ಚಿರನೂತನ ಸಾಹಿತ್ಯವನ್ನು ಪರಿಚಯಿಸಿಕೊಳ್ಳುವ ಪುಣ್ಯ ನಮ್ಮದಾಗಲಿ.

ಅಪೂರ್ವ ಜನಪದ ಕಲೆ ಕರಪಾಲ ಮೇಳ

ಕರ್ನಾಟಕದಲ್ಲಿ ಜನಪದ ಸಾಹಿತ್ಯ ಸಮೃದ್ಧವಾಗಿರುವಂತೆಯೇ ಜನಪದ ಕಲೆಗಳಿಗೂ ಕೊರತೆಯಿಲ್ಲ. ಜನಪದ ರಂಗಭೂಮಿ ಗ್ರಾಮಾಂತರ ಬದುಕಿನ ಮನರಂಜನೆಯ ಮುಖ್ಯ ಸಾಧನವೇನೋ ನಿಜ. ಆದರೆ ಅದರ ವಸ್ತುವಿನ್ಯಾಸದಲ್ಲಿ ಪೌರಾಣಿಕ ಪ್ರಪಂಚದ ನಿಚ್ಚಳಪ್ರಭಾವವನ್ನೂ ಸಂಸ್ಕೃತಭೂಯಿಷ್ಠವಾದ ಕ್ಲಿಷ್ಟಭಾಷೆಯ ಬಳಕೆಯನ್ನೂ ಗಮನಿಸಿದಾಗ ನೆಲದ ಕಂಪನ್ನು ಸಹಜವಾಗಿ ಬೀರುವ, ಹಳ್ಳಿಗರ ಭಾಷೆ ಅನುಭವಗಳಿಗೆ ಸುಲಭವಾಗಿ ನಿಲುಕಬಹುದಾದ ಶುದ್ಧ ಜನಪದ ಶೈಲಿಯ ಕೋಲಾಟವೇ ಮೊದಲಾದ ಕೆಲವು ಕಲೆಗಳನ್ನು ಪ್ರತ್ಯೇಕಿಸಿಕೊಳ್ಳಬೇಕಾಗುತ್ತದೆ. ಯಕ್ಷಗಾನ, ಬಯಲಾಟಗಳೂ, ತೊಗಲಗೊಂಬೆ, ಸೂತ್ರದಗೊಂಬೆಯ ಆಟಗಳೂ ಜನಪದ ಕಲೆಗಳೇ ಆದರೂ ಅವುಗಳ ವಸ್ತು, ಭಾಷೆ, ರಚನೆಗಳ ದೃಷ್ಟಿಯಿಂದ ಈ ವಿಭಾಗ ಅನಿವಾರ್ಯ. ಶುದ್ಧ ಜಾನಪದ ಶೈಲಿ ಎನ್ನುವ ಮಾತಿನಲ್ಲಿ ಈ ಎಲ್ಲ ಸಂಸ್ಕಾರಗಳಿಂದ ಹೊರಗೆ ನಿಂತು, ಬಹು ಪ್ರಾಚೀನ ಕಾಲದಿಂದಲೂ ಹಳ್ಳಿಗರ ಬದುಕಿನಲ್ಲಿ ಬೆರೆತು ಬಂದಿರುವ, ಅವರಿಂದಲೇ, ಅವರಿಗಾಗಿಯೇ ರಚಿತವಾಗಿ, ಅವರ ಅನುಭವದ ಅಭಿವ್ಯಕ್ತಿಯ ಸರಳಸಾಧನಗಳಾದ ಕೋಲಾಟ, ಕಂಸಾಳೆಯ ಮೇಳ, ದೀವಳಿಗೆಯ ದಂಡು, ಗೊಂದಲಿಗರ ಕಥೆ, ದೊಂಬಿದಾಸರ ಕಥೆ, ಕರಪಾಲದ ಕಥೆ ಮುಂತಾದುವನ್ನು ಈ ಎರಡನೆಯ ವರ್ಗದಲ್ಲಿ ಪ್ರಮುಖವಾಗಿ ಹೆಸರಿಸಬಹುದು. ಈ ಎಲ್ಲ ಕಲೆಗಳೂ ಕನ್ನಡ ನಾಡಿನಲ್ಲಿ ಎಲ್ಲಾ ಕಡೆಯಲ್ಲಿಯೂ ಪ್ರಚಾರದಲ್ಲಿದ್ದು ಜನತೆಯ ಆಸಕ್ತಿಯನ್ನು ಸೆಳೆಯುತ್ತಾ ಬಂದಿವೆ. ಕರಪಾಲ ಮೇಳ ಈ ಸರಳ ಜನಪದ ಕಲೆಗಳ ಸಾಲಿನಲ್ಲಿ ಅಗ್ರಗಣ್ಯವೆನಿಸುತ್ತದೆ.

ಕರಪಾಲ ಮೇಳ ಕೋಲಾಟ, ಬೀಸುಕಂಸಾಳೆ ಮೇಳಗಳಷ್ಟು ಶ್ರಮ ಪೂರ್ಣವಾದುದಲ್ಲ. ಕುಣಿತವೇ ಹೆಚ್ಚು ಪ್ರಧಾನವೆನಿಸುವ ಆ ಕಲೆಗಳಲ್ಲಿ ಕಥೆ ಒಮ್ಮೊಮ್ಮೆ ಗೌಣವೆನಿಸಿಬಿಡುತ್ತದೆ.

ಸಂಗೀತ, ಸಾಹಿತ್ಯ, ನೃತ್ಯಗಳಿಂದ ಮುಪ್ಪುರಿಗೊಂಡ ಕರಪಾಲ ಮೇಳದಲ್ಲಿ ಪ್ರಧಾನವಾಗಿ ಕಥೆ, ಅದಕ್ಕೆ ಪೋಷಕವಾಗಿ ಹಾಡು, ಎರಡಕ್ಕೂ ಮೆರುಗನ್ನು ನೀಡುವಂತೆ ನೃತ್ಯ ಹೀಗೆ ಅಳವಡಿಸಿಕೊಳ್ಳಲಾಗುತ್ತದೆ. ಒಬ್ಬ ನಿರೂಪಕ, ಇಬ್ಬರು ಸಹಾಯಕ ನೃತ್ಯದವರು, ಹಿಮ್ಮೇಳದ ಎರಡು ಮೂರು ಮಂದಿಯಾದರೆ ಕರಪಾಲದ ವ್ಯವಸ್ಥೆ ಮುಗಿಯಿತು. ಪ್ರತ್ಯೇಕವಾದ ಯಾವ ರಂಗಸಜ್ಜಿಕೆಯ ಅಗತ್ಯವೂ ಇದಕ್ಕಿಲ್ಲ. ಆದರೆ ಮೂವರು ಸುಲಲಿತವಾಗಿ ನರ್ತಿಸಲು ಸಹಾಯಕವಾಗುವಷ್ಟು ಹಸಿರು ಚಪ್ಪರವಿದ್ದರೆ ಅವರ ಕಲೆಗೆ ಒಂದು ಚೌಕಟ್ಟನ್ನು ಕಲ್ಪಿಸಿದಂತಾಗುತ್ತದೆ. ರಸಪೂರ್ಣ

ಸನ್ನಿವೇಶಗಳಲ್ಲಿ, ಕಥೆಯ ಮುಖ್ಯ ತಿರುವುಗಳಲ್ಲಿ ನಿರೂಪಕನೊಡನೆ ಉಳಿದಿಬ್ಬರು ಹಾಡುತ್ತ, ಹಿಂದೆ ಮುಂದೆ ಸರಿಯುತ್ತ, ತಾಳಕ್ಕೆ ತಕ್ಕಂತೆ ಪದವಿನ್ಯಾಸವನ್ನು ಮೆರೆಯುತ್ತಾ ನರ್ತಿಸುವುದು ಬಹು ಮೋಹಕವಾಗಿರುತ್ತದೆ.

ಕರಪಾಲ ಮೇಳದಲ್ಲಿ ನಿರೂಪಕನ ಪಾತ್ರವೇ ಹಿರಿದಾದುದು. ಮೇಳದ ಜೀವಸೂತ್ರವೇ ಅವನು. ಅವನ ವಾಕ್ಚಾತುರ್ಯ, ಅವನ ನಿರೂಪಣಾ ವೈಖರಿಯ ಮೇಲೆ ನೀರಸ ಸನ್ನಿವೇಶಗಳೂ ರಸಪುಷ್ಟವಾಗಿ ಕಳೆಗಟ್ಟುತ್ತವೆ. ತನ್ನ ಚಾತುರ್ಯದಿಂದ ಪ್ರೇಕ್ಷಕರ ಮನಸ್ಸನ್ನು ಸೆರೆಹಿಡಿಯುವ ಕಲೆಗಾರಿಕೆ ಇವನಿಗೆ ಸಿದ್ಧಿಸಿರುತ್ತದೆ. ಒಟ್ಟಿನಲ್ಲಿ ಈತನೊಬ್ಬ ಹುಟ್ಟು ಕಲಾವಿದನಾಗಿದ್ದಾಗಲೇ ಕರಪಾಲ ಮೇಳ ಯಶಸ್ಸಿನ ಶಿಖರವನ್ನು ಮುಟ್ಟುವುದು. ಉಳಿದವರೆಲ್ಲ ಇವನಿಗೆ ಸಹಾಯಕ ವ್ಯಕ್ತಿಗಳು. ಆದರೆ ಅವರೂ ಈ ಕಲೆಯಲ್ಲಿ ಪಳಗಿದವರೇ. ಉತ್ತಮ ರೀತಿಯ ನೃತ್ಯವೈಖರಿ, ಮಧುರ ಕಂಠ, ನಿರೂಪಕನ ಕಥೆಗೆ ಸಂದರ್ಭೋಚಿತವಾಗಿ ಓಗೊಡುವ ಜಾಣ್ಮೆ, ಸಾಕಷ್ಟು ಸಂಗೀತ ಜ್ಞಾನ ಅವರಿಗೂ ಇರಬೇಕು. ನಿರೂಪಕನು ಎತ್ತಿಕೊಟ್ಟ ಹಾಡಿನ ಮೊದಲ ಚರಣವನ್ನು ಹಿಡಿದು ಅವರು ಉಳಿದ ಭಾಗವನ್ನು ಹಾಡಿ ನರ್ತಿಸಬೇಕು. ಹಿಮ್ಮೇಳದವರು ಅವರ ಸಹಾಯಕ್ಕೆ ಬಂದು ಅದು ಅಪೂರ್ವವಾದ ರೀತಿಯಲ್ಲಿ ಕಳೆಗಟ್ಟುವಂತೆ ಮಾಡಬೇಕು.

ಕರಪಾಲ ಮೇಳದಲ್ಲಿ ವಿಜ್ರಂಭಿಸುವ ವೇಷಭೂಷಣಗಳ ಅಗತ್ಯವೇನೂ ಇಲ್ಲ. ಆದರೆ ನಿರೂಪಕ ತನ್ನದೇ ಆದ ಒಂದು ವಿಶಿಷ್ಟ ರೀತಿಯ ಅಲಂಕಾರದಿಂದ ಉಳಿದವರಿಗಿಂತ ಭಿನ್ನವಾಗಿ ತೋರುತ್ತಾನೆ. ಕಿರೀಟಾಕೃತಿಯ ವರ್ಣರಂಜಿತ ಕುಲಾವಿ ಅವನ ಮುಡಿಯನ್ನಲಂಕರಿಸಿರುತ್ತದೆ. ಅದರಿಂದ ಇಳಿಬಿದ್ದ ಮುತ್ತಿನ ತುರಾಯಿ, ಕಿವಿಯಲ್ಲಿ ದೊಡ್ಡ ಕರ್ಣಕುಂಡಲಗಳು, ಕುಲಾವಿಯನ್ನು ಬಳಸಿದ ರುದ್ರಾಕ್ಷಿಯ ಸರ, ಕೊರಳಿನಲ್ಲಿ – ಕೈಗಳಲ್ಲಿ ರುದ್ರಾಕ್ಷಿ, ಕಾಲಿನಲ್ಲಿ ಗೆಜ್ಜೆ, ನಡುವಿನಲ್ಲಿ ಬಣ್ಣದ ವಸ್ತ್ರದಿಂದ ನಡುಪಟ್ಟಿ, ಕಾವಿಯ ನಿಲುವಂಗಿ, ಬಿಗಿದು ಕಟ್ಟಿದ ಕಚ್ಚೆಯ ಪಂಚೆ ಹೀಗೆ ಸಿದ್ಧತೆಯನ್ನು ಮಾಡಿಕೊಂಡ ನಿರೂಪಕನ ಅಕ್ಕಪಕ್ಕದಲ್ಲಿ ಉಳಿದಿಬ್ಬರು ಸಹಾಯಕ ವರ್ಗದವರು ನಿಂತಿರುತ್ತಾರೆ. ಅವರಲ್ಲಿ ಒಬ್ಬ ಘುಮುಕಿಯನ್ನೂ ಮತ್ತೊಬ್ಬ ತಾಳವನ್ನೂ ಹಿಡಿದವರು. ಕಾವಿಯ ವಸ್ತ್ರಗಳಲ್ಲಿ ಸೊಗಸಾದ ಸವಾರರ ಪೇಟಗಳನ್ನು ಕಟ್ಟಿದ ಇವರು, ಬಿಳಿಯ ವಸ್ತ್ರದಲ್ಲಿ ನಡುಪಟ್ಟಿಯನ್ನು ಕಟ್ಟಿಕೊಳ್ಳುತ್ತಾರೆ. ಕಚ್ಚೆಯ ಪಂಚೆಯ ಜೊತೆಗೆ ಕಾಲಿನಲ್ಲಿ ಗೆಜ್ಜೆಯ ಸರವೂ ಇರುತ್ತದೆ. ನಿರೂಪಕನ ಅತ್ತ – ಇತ್ತ ನಿಂತ ಇವರು, ಕಥೆಯ ಉದ್ದಕ್ಕೂ ಹೆಜ್ಜೆ – ಹೆಜ್ಜೆಗೂ ಬರುವ ಹಾಡುಗಳನ್ನು ನಿರೂಪಕನ ಜೊತೆಯಲ್ಲಿ ಹಾಡುತ್ತ ತಮ್ಮ ಕುಣಿತದ ಮೋಡಿಯಲ್ಲಿ ಪ್ರೇಕ್ಷಕರನ್ನು ಮೂಕಗೊಳಿಸುತ್ತಾರೆ. ಅವರು ಹಾಡುವ ವಿವಿಧ ಜಾನಪದ ಧಾಟಿಗಳನ್ನೂ ಜನ ಮೆಚ್ಚಿ ತಲೆದೂಗುತ್ತಾರೆ. ಹಾಡು ಮುಗಿದ ಕೂಡಲೇ, ನಿರೂಪಕನ ಸೂಚನೆಯಂತೆ

ಹಾಡನ್ನೂ, ಕುಣಿತವನ್ನೂ ನಿಲ್ಲಿಸುವ ಘುಮುಕಿಯವನು, ಅದನ್ನು ಚಂಗನೆ ತನ್ನ ಬೆನ್ನ ಹಿಂದಕ್ಕೆ ಎಸೆದು ನಿಲ್ಲುವ ಭಂಗಿಯೂ ಆಕರ್ಷಕವಾದುದೇ. ಆಧುನಿಕ ನಾಗರಿಕತೆಯ ಗಜಿಬಿಜಿಯಿಂದ ದೂರವಾದ ಹಳ್ಳಿಯ ಪ್ರಶಾಂತ ವಾತಾವರಣ, ಕುತೂಹಲವಿಷ್ಟರಾಗಿ ಕುಳಿತ ಆ ಮುಗ್ಧ ಪ್ರೇಕ್ಷಕರು, ರಾತ್ರಿಯ ಮೌನವನ್ನು ಮೀಟಿ ಚಿಮ್ಮುವ ಇವರ ಮೇಳದ ಮಧುರ ನಾದಲಹರಿ ಬಹುದೂರದವರೆಗೆ ಹಬ್ಬುತ್ತದೆ. ಕರಪಾಲ ಮೇಳದ ಸೂಚನೆಯನ್ನರಿತ ನೆರೆಯ ಹಳ್ಳಿಯ ಜನರೂ ಬಂದು ಕಲೆಯುತ್ತಾರೆ. ರಾತ್ರಿ ಬಹು ಹೊತ್ತಿನವರೆಗೆ ಕಥೆ ಸಾಗುತ್ತದೆ.

ಕರಪಾಲ ಮೇಳಕ್ಕೆ ಅಳವಡಿಸಿಕೊಂಡಿರುವ ಹಾಡುಗಳೂ, ಕಥೆಗಳೂ, ಜನಪದ ಸಾಹಿತ್ಯ ಭಂಡಾರದಿಂದಲೇ ಆಯ್ದುವು. ಎಂತಲೇ ಕರಪಾಲ ಶುದ್ಧವಾದ ಜನಪದ ಕಲೆ. ಅದರ ವಿಶಿಷ್ಟವೂ ಜಾನಪದದ ಉಸಿರೇ ಆಗಿದೆ. ಅಲ್ಲಲ್ಲಿ ದೊರೆಯುವ ಕೆಲವು ಆಕರ್ಷಕ ಕಥೆಗಳನ್ನು ಕರಪಾಲ ಮೇಳಕ್ಕೆ ತಕ್ಕಂತೆ ಸಂಸ್ಕಾರಗೊಳಿಸಿಕೊಳ್ಳುತ್ತಾರೆ. ರೇಖಾರೂಪದಲ್ಲಿ ದೊರೆಯಬಹುದಾದ ಮೂಲಕಥೆಗೆ ಜೀವ ತುಂಬಿ, ಬರುವ ಪಾತ್ರಗಳಿಗೆಲ್ಲಾ ಉತ್ತಮ ಹೆಸರುಗಳನ್ನು ಆರೋಪಿಸಿ, ಪ್ರಧಾನ ಪಾತ್ರಕ್ಕೆ ಮಾತ್ರ ಮೂಲದ ಹೆಸರನ್ನು ಉಳಿಸಿಕೊಂಡು ಬರುವ ಬಗೆಯನ್ನು ಕಾಣಬಹುದು. ಸಾಮಾನ್ಯ ಜನಪದ ಕಥೆ ಕರಪಾಲ ಮೇಳದವರ ಪ್ರತಿಭೆಯಿಂದ ವಿಸ್ತೃತವೂ, ವಿಶಿಷ್ಟವೂ, ರಸೋತ್ಕಟವೂ ಆದ ಸುಂದರ ಕಲಾಕುಸುಮವಾಗಿ ರಂಜಿಸುತ್ತದೆ. ಕಥೆಯನ್ನು ಗಂಭೀರವೂ, ಸಾಹಿತ್ಯ ಬದ್ಧವೂ, ಆದರೆ ಸರಳವೂ ಆದ ಗದ್ಯದಲ್ಲಿ ನಿರೂಪಕ ಬೆಳೆಸುತ್ತಾ ಹೋಗುತ್ತಾನೆ. ಅಲ್ಲಲ್ಲಿ ಸ್ವಾರಸ್ಯ ಭಾಗಗಳನ್ನು ಬಣ್ಣಿಸುವಾಗ ಅಪೂರ್ವ ಜನಪದ ಧಾಟಿಯ ದ್ವಿಪದಿಗಳನ್ನು ಹಾಡುತ್ತಾ ನರ್ತಿಸುತ್ತಾರೆ. ಕಥೆಯ ಮೈಗೇ ಸೇರಿದಂತಿರುವ ಈ ಹಾಡುಗಳು ಕರಪಾಲದ ಎಲ್ಲ ಕಥೆಗಳಿಗೂ ಸಾಮಾನ್ಯವಾಗಿ ಬರುತ್ತವೆ. ಆಯಾ ಸನ್ನಿವೇಶಕ್ಕೆ ತಕ್ಕಂತೆ ಸ್ಥಳದ ಅಥವಾ ವ್ಯಕ್ತಿಯ ಹೆಸರನ್ನು ಬದಲಿಸಿಕೊಂಡರೆ ಆಯಿತು. ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ಬೇರೆ ಬೇರೆ ಜಾನಪದ ಗೀತೆಗಳನ್ನು, ಜೋಡಿಸಿಕೊಳ್ಳುತ್ತಾರೆ. ಉತ್ತಮ ತ್ರಿಪದಿಗಳೂ, ಸುವ್ವಿಯ ಪದಗಳೂ ಕರಪಾಲ ಮೇಳದವರ ಕಂಠದಲ್ಲಿ ಬಹು ಆಕರ್ಷಕವಾಗಿ ಚಿಮ್ಮಿ ಬರುತ್ತವೆ. ಸನ್ನಿವೇಶಕ್ಕೆ ತಕ್ಕಂತೆ ಕರಪಾಲದ ಕಥೆಗಳನ್ನು ಹಿಗ್ಗಿಸುವ ಅಥವಾ ತಗ್ಗಿಸುವ ಜಾಣ್ಮೆ ನಿರೂಪಕನದಾಗಿರುತ್ತದೆ.

ಶ್ರೀ ಗುರುವರ ಜಯತು
ಭೋಗಿ ವಿಭೂಷಣ ಯೋಗಿವರನೆ ಜಯತು

ಎಂದು ನಾಂದಿಯನ್ನು ಆರಂಭಿಸಿ, ಯಕ್ಷಗಾನ ಬಯಲಾಟಗಳಲ್ಲಿ ಬರುವ ಸಾಂಪ್ರದಾಯಿಕ ಪ್ರಾರ್ಥನಾ ಪದ್ಯಗಳನ್ನು ಸಾಮೂಹಿಕವಾಗಿ ತಾಳಮದ್ದಲೆಗಳ ಹಿಮ್ಮೇಳದಲ್ಲಿ ಹಾಡಿದರೂ ಮುಂದೆ ಬರುವ ಪದ್ಯಗಳೆಲ್ಲಾ ಜನಪದ ಧಾಟಿಯಲ್ಲಿ

ಸರಳವಾಗಿ ರಚಿತವಾದ ದ್ವಿಪದಿಗಳೇ. ಕೋಲಾಟದ ಮೇಳದಲ್ಲಿ ಬರುವಂತೆ ಆರಂಭದಲ್ಲಿ –

ನಾವು ಬಲ್ಲವರಲ್ಲ ನಾವು ತಿಳಿದವರಲ್ಲ
ಯಾವ ತಪ್ಪಿದ್ದರು ತಿದ್ದಿ ಕೊಡಬೇಕು

ಎಂದು ವಿನಯಪೂರ್ವಕವಾಗಿ ಸಭಿಕರನ್ನು ಕೇಳಿಕೊಳ್ಳುತ್ತಾರೆ. ಅನಂತರ ಕತೆಯನ್ನು ಸುಗಮವಾಗಿ ನಡಸಿಕೊಡುವಂತೆ ಚಂದ್ರಶೇಖರನನ್ನು ಬೇಡುವ ಬಗೆಯೂ ಆಕರ್ಷಕವಾಗಿದೆ.

ತಪ್ಪುಗಳಿದ್ದರೆ ಒಪ್ಪಿಕೊಳ್ಳಯ್ಯ ದೇವ
ಸಾವಿರದ ಒಂದು ಶರಣಾರ್ತಿ ನಿಮಗೆ........
ಮುಂದಣ ಕತೆಯ ಅದರಂದವ ಪೇಳುವೆವು
ಚಂದ್ರಶೇಖರ ನಮಗೆ ವರಕೊಡಲೊ ದೇವ

ಕಥೆಯ ಆರಂಭದಲ್ಲಿ, ನಿರ್ವಹಣೆಯಲ್ಲಿ, ವರ್ಣನೆಗಳನ್ನು ತರುವ ಪರಿಯಲ್ಲಿ ಮಾರ್ಗಕಾವ್ಯದ ಪರಿಯೇ ಗೋಚರಿಸುತ್ತದೆ. ಅಷ್ಟಾದಶ ವರ್ಣನೆಯ ಗೋಜಿಗೆ ಇವರು ಹೋಗದಿದ್ದರೂ ನಗರ ವರ್ಣನೆಯನ್ನು, ರಾಜನ ವೈಭವದ ವರ್ಣನೆಯನ್ನು, ಅವನ ದಂಡು, ಧಾಳಿಗಳ ವಿಚಾರವನ್ನೂ ವಿಸ್ತರಿಸಿ ಹೇಳುತ್ತಾರೆ –

ಕೆತ್ತುಗಲ್ಲಿನ ಕೋಟೆ ಮುತ್ತಿನ ತೋರಣ

ಎಂದು ಆರಂಭವಾಗುವ ವರ್ಣನೆ –

ಹಾಲು ಮಾರುವ ಬೀದಿ, ನೂಲು ಮಾರುವ ಬೀದಿ
ಸಾಲು ಸಕಲಾತಿಗಳ ಮಾರುವ ಬೀದಿ

ಎಂದು ಬಗೆ ಬಗೆಯಲ್ಲಿ ನಗರದ ಸುಂದರ ಕಲ್ಪನೆಯನ್ನು ತರುತ್ತದೆ.

ಸೂರ್ಯೋದಯ ವರ್ಣನೆಯೂ ಬಹು ಸರಳವಾದ ರೀತಿಯಲ್ಲಿ ಕರಪಾಲ ಮೇಳದಲ್ಲಿ ಬರುತ್ತದೆ –

ಮೂಡಲಗಿರಿಯಿಂದ ಮೂಡಿದನು ರವಿರಾಜ
ನಾಡಿನ ಜನರಿಗೆ ದರ್ಶನವ ಕೊಟ್ಟ

ಹೀಗೆ ಯಾವ ಭಾವದ ಸೊಗಸೂ ಇಲ್ಲದ ಸಾಲುಗಳು ಕೂಡ ಮೇಳದವರ ಹಾಡು, ಕುಣಿತಗಳಿಂದ ಆಕರ್ಷಕವಾಗುತ್ತವೆ. ಆದರೂ ಕೆಲವು ಕಡೆ ವರ್ಣನೆ ಸಹಜಸುಂದರವಾಗಿರುತ್ತದೆ –

ಘೋರಕಾನನದೊಳಗೆ ನೀರಿಲ್ಲ ನೆರಳಿಲ್ಲ
ಹಾರುವ ಪಕ್ಷಿಗಳ ಸುಳಿವಿಲ್ಲ ದೇವ
ಅಡವಿ ಗಿಡಮರದಲ್ಲಿ ಎಡವಿ ಮುಗ್ಗರಿಸುತ್ತ
ತಡವರಿಸಿ ಹೊರಟಳು ಅರಣ್ಯದೊಳಗೆ

ಹೀಗೆ ಶೋಕಪೂರ್ಣ ಸನ್ನಿವೇಶಗಳನ್ನು ಪ್ರೇಕ್ಷಕರ ಮನಕರಗುವಂತೆ ಕೆಲವು ಹಾಡುಗಳು ನಿರೂಪಿಸುತ್ತವೆ. ಹೃದಯವನ್ನು ಮಿಡಿಯುವಂತಹ ಕೆಲವು ಸಂದರ್ಭಗಳನ್ನು ನಿರೂಪಕ ಬಗೆಬಗೆಯಲ್ಲಿ ಗದ್ಯದಲ್ಲಿ ಬಣ್ಣಿಸಿ, ಅದು ಹೆಚ್ಚು ಪರಿಣಾಮಕಾರಿಯಾಗುವಂತೆ ಪದ್ಯಗಳನ್ನು ಅಳವಡಿಸಿಬಿಡುತ್ತಾನೆ. ತಂದೆತಾಯಿಗಳನ್ನು ಕಳೆದುಕೊಂಡು, ತಬ್ಬಲಿಯಾಗಿ ಕಾಡಿನಲ್ಲಿ ಅಳುವ ಮಗುವನ್ನು ನೋಡಿ ಪರಮೇಶ್ವರನು ಬಂದು –

ಎನ್ನ ಮಗನೆ ಬಾರೊ ಹೊನ್ನ ಪುತ್ಥಳಿ ಬೊಂಬೆ

ಎಂದು ಮಗುವನ್ನು ಎತ್ತಿ ಎದೆಗಪ್ಪಿಕೊಳ್ಳುವ ಸನ್ನಿವೇಶ ಆ ಹಾಡಿನ ಮಹಿಮೆಯಿಂದ ಎಂಥವರಲ್ಲಿಯೂ ಪುಳಕವನ್ನುಂಟುಮಾಡುತ್ತದೆ.

ಕರಪಾಲದ ಮುಖ್ಯಕಥೆಯ ಜೊತೆಯಲ್ಲಿ ಅಲ್ಲಲ್ಲಿ ವೈವಿಧ್ಯಕ್ಕೋಸ್ಕರ, ಬರುವ ಉಪಕಥೆಗಳು ಹಾಸ್ಯಪೂರ್ಣವಾಗಿರುತ್ತವೆ. ಮುಖ್ಯಕಥೆಗೆ ಯಾವ ರೀತಿಯಲ್ಲೂ ಪೋಷಕವಾಗದಿದ್ದರೂ ಈ ಕಥೆಗಳು ಸ್ವಸಂಪೂರ್ಣವಾಗಿ ತಮ್ಮದೇ ಆದ ಆಕರ್ಷಣೆಯಿಂದ ರಂಜಿಸುತ್ತವೆ. ಕುಣಿತದವರಿಗೆ ವಿರಾಮವನ್ನು ಕೊಡುವುದರ ಜೊತೆಗೆ ಗಂಭೀರ ಸನ್ನಿವೇಶಗಳಿಂದ ಭಾರವಾದ ಪ್ರೇಕ್ಷಕರ ಮನಸ್ಸನ್ನು ಇಲ್ಲಿನ ತಿಳಿಹಾಸ್ಯದಿಂದ ಹಗುರಗೊಳಿಸಲು ನಿರೂಪಕ ಉಪಕಥೆಗಳ ನೆರವನ್ನು ಪಡೆಯುತ್ತಾನೆ. ಪ್ರಧಾನ ಕಥೆಗೆ ಸಹಜವಾದ ಗಂಭೀರ ಧಾಟಿಯನ್ನು ಬಿಟ್ಟು ಉಪಕಥೆಗಳಲ್ಲಿ ಹಳ್ಳಿಗರ ಭಾಷೆಯಲ್ಲೇ, ಹಳ್ಳಿಯ ಬದುಕಿಗೇ ಸಂಬಂಧಿಸಿದ ವಾತಾವರಣವನ್ನು ಕಲ್ಪಿಸುವುದರಿಂದ ಹೆಚ್ಚು ಸಹಜವಾಗಿರುತ್ತವೆ. ನಿರೂಪಕನ ಹಾವಭಾವ ಪ್ರದರ್ಶನ, ಕಥೆ ಕಣ್ಣೆದುರಿಗೆ ನಡೆಯುವಂತೆಯೇ ಬಣ್ಣಿಸುವ ವೈಖರಿ, ಗ್ರಾಮ್ಯಭಾಷೆಯ ಸಹಜ ಸೊಬಗು, ಹೇರಳವಾದ ಗಾದೆಗಳ ಬಳಕೆ ಇವುಗಳಿಂದಾಗಿ ಉಪಕಥೆಗಳು ತಮ್ಮ ನೈಜತೆಯನ್ನು ಕಾಪಾಡಿಕೊಳ್ಳುತ್ತವೆ. ಹಳ್ಳಿಯ ಕೆಲವು ಸಮಸ್ಯೆಗಳನ್ನು ಎತ್ತಿಕೊಂಡು, ಕೆಲವು ವ್ಯಕ್ತಿಗಳ ದೌರ್ಬಲ್ಯಗಳನ್ನು ವ್ಯಂಗ್ಯವಾಗಿ ಟೀಕಿಸಿ, ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸುವ ಈ ಕಥೆಗಳು ಅನೇಕವೇಳೆ ಪ್ರಧಾನ ಕಥೆಯನ್ನು ಮರೆಸಿಬಿಡುವಷ್ಟು ಉಜ್ವಲವಾಗಿ ನಿರೂಪಕರ ಬಾಯಲ್ಲಿ ಅವತರಿಸುತ್ತವೆ.

ಉಪಕಥೆ ಮುಗಿದ ಕೂಡಲೇ ಮುಂದಿನ ಮುಖ್ಯಕಥೆಗೆ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಾರೆ.

ಅಲ್ಲಿಗಲ್ಲಿಗೆ ಕಥೆಯು ಮಲ್ಲಿಗೆ ವಾಸನೆಯು

ಎಂದು ಕಥೆಯನ್ನು ಆರಂಭಿಸುವ ಬಗೆಯೇ ಒಪ್ಪುವಂತಿರುತ್ತದೆ. ಕಥೆಯನ್ನು ಮುಂದುವರಿಸುವಲ್ಲಿ ನಿರೂಪಕನ ಮಾತಿನ ಧಾಟಿಯನ್ನು ಹಿಡಿದು ತಾಳದವನು ಕಥೆಗೆ ಓಗೊಡುತ್ತಾ ಹೋಗುತ್ತಾನೆ –

"ಪರಮಾತ್ಮನ ಲೀಲಾಮಯದಿಂದ"
"ಹೌದು ಗುರುವೆ"
"ಶುಭದಿನ, ಶುಭತಿಥಿ, ಶುಭಲಗ್ನದಲ್ಲಿ"
"ಅಲ್ಲವೆ ಮಹಾದೇವ"
"ಚದುರಂಗರಾಯನು ಹೀಗೆ ಹೊರಟಿದ್ದಾನೆ"
"ಹೊರಟಿದ್ದಾನೆ............."

ಹೀಗೆ ಚತುರ ಸಂಭಾಷಣೆಯ ತಂತ್ರವನ್ನು ಯಶಸ್ವಿಯಾಗಿ ಕಥಾ ನಿರೂಪಣೆಯಲ್ಲಿ ಬಳಸಿಕೊಳ್ಳುತ್ತಾರೆ.

ನೀತಿಬೋಧಕವಾದ, ಗಂಭೀರವಾದ ಕರಪಾಲದ ಕತೆಗಳು ಹೀಗೆ ಸಂಗೀತದ, ನೃತ್ಯದ, ಉತ್ತಮ ನಿರೂಪಣೆಯ ಕೌಶಲದಿಂದ ಸಜೀವಗೊಳ್ಳುತ್ತವೆ. ಕಥೆಯ ಮೈಗೆಡದಂತೆ, ಮುಖ್ಯ ರಸಪೋಷಣೆಗೆ ಎಲ್ಲಿಯೂ ಊನ ಬರದಂತೆ, ಕಥೆಯನ್ನೂ, ಹಾಡುಗಳನ್ನೂ, ಸನ್ನಿವೇಶಗಳನ್ನೂ ಅನಗತ್ಯವಾಗಿ ವಿಸ್ತರಿಸದೆ ನಡಸುವ ಜಾಣ್ಮೆ ನಿರೂಪಕನದಾಗಿರುತ್ತದೆ.

"ಇಲ್ಲಿಗೆ ಶಿವ ಶಿವ ಇಲ್ಲಿಗೆ ಹರಹರ"
ಇಲ್ಲಿಗೆ ಈ ಕತೆಯು ಸಂಪೂರ್ಣವಾಯ್ತು.

ಎಂದು ಕಥೆಯ ಮುಗಿತಾಯವನ್ನು ಹಾಡಿ, ಮಂಗಳವನ್ನು ಹಾಡುವುದಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದರೂ, ಪ್ರೇಕ್ಷಕರಿಗೆ ಕಥೆ ಮುಗಿದ ಅರಿವೇ ಆಗಿರುವುದಿಲ್ಲ.

"ಕಾಡುಸಿದ್ಧಮ್ಮ", "ನೀಲಕಂಠ ರೂಪಾವತಿ", "ಬಸವ ಕುಮಾರ ಲೋಹಿತ ಕುಮಾರ", "ರುದ್ರೇಶ್ವರ ಮಹಾತ್ಮೆ" ಮೊದಲಾದ ಕೆಲವು ಜನಪ್ರಿಯ ಕರಪಾಲದ ಕಥೆಗಳು ನಮ್ಮ ಜನಪದ ಕಥೆಗಳ ರಾಶಿಯಲ್ಲಿ ಕನ್ನಡ ನಾಡಿನ ಹೆಣ್ಣುಮಕ್ಕಳಿಗೆ ಹೆಚ್ಚು ಪರಿಚಯವಾದ ಕಥೆಗಳೇ ಆಗಿವೆ. ಆದರೆ ಅವು ಕರಪಾಲದ ಕಥೆಯ ಸ್ವರೂಪವನ್ನು ಪಡೆದಾಗ, ನಿರೂಪಕನ ಬಾಯಲ್ಲಿ ಮೋಹಕವಾಗಿ ಹೊಸರೂಪನ್ನು ಪಡೆದು ಹೊರಬರುವಾಗ ಇನ್ನೂ ಆಕರ್ಷಕವಾಗಿ, ರಸವತ್ತಾಗಿ ತೋರುತ್ತವೆ. ಅಲ್ಲಿ ಬರುವ ಕಥೆಯ, ಸನ್ನಿವೇಶಗಳ ಹೊಸತನಕ್ಕಿಂತ, ನಿರೂಪಕನ ಬಾಯಲ್ಲಿ ಅವು ಹೊಸತನವನ್ನು ಪಡೆದು ಅವತರಿಸುವ ಬಗೆ ಅತಿಮುಖ್ಯವಾದುದು. ಈ ಒಂದು ಗುಣದಿಂದಲೇ ಜನಪದ ಕಲೆಗಳಲ್ಲಿ ಕರಪಾಲಮೇಳ ಅದ್ವಿತೀಯವೆನಿಸುತ್ತದೆ. ಜಾನಪದ ಶೈಲಿ, ಜಾನಪದ ಜೀವನವನ್ನು ಚಿತ್ರಿಸುವ ಸನ್ನಿವೇಶಗಳು, ಜನತೆಯ ಆಶೋತ್ತರಗಳನ್ನು ಮೋಹಕವಾಗಿ ಬಣ್ಣಿಸುವ ಕಥನವಿಧಾನ ಇವುಗಳಿಂದಾಗಿ ಕರಪಾಲದ ಕಥೆಗಳು ತಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಂಡಿವೆ.

ಇವು ಕೇವಲ ದಂತಕಥೆಗಳೆ?

ಗ್ರಾಮಾಂತರ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಬರುವವರಿಗೆ ಮೇಲುನೋಟಕ್ಕೆ ಅಲ್ಲಿನ ಜೀವನ ವೈವಿಧ್ಯದ ಅಖಂಡ ಪರಿಚಯವಾದಂತಾಗುವುದಿಲ್ಲ. ಗ್ರಾಮ ಜೀವನದ ಹೃದಯವನ್ನು ಹೊಕ್ಕು, ಅವರ ಬದುಕಿನ ಅಂತರಾಳದಲ್ಲಿ ಅವ್ಯಾಹತವಾಗಿ ಪ್ರವಹಿಸುವ ಅನಂತಕಲಾತರಂಗಿಣಿಯಲ್ಲಿ ಸಂಸ್ನಾತರಾಗಿ ಬರುವವರಿಗೆ ಅನೇಕ ಸೋಜಿಗಗಳು ಗೋಚರವಾಗುತ್ತವೆ. ಅಲ್ಲಿನ ಬದುಕಿನ ಎಳೆಎಳೆಯನ್ನೂ ಹಿಡಿದು ನೋಡುವ ಕಣ್ಣಿಗೆ ಆ ವೈವಿಧ್ಯ, ಆ ವೈಶಾಲ್ಯಗಳು ಅರಿವಾಗುತ್ತವೆ. ಸುತ್ತಣ ಪ್ರಕೃತಿಯನ್ನೂ ತಮ್ಮ ಬದುಕಿನೊಡನೆ ಹೊಂದಿಸಿಕೊಂಡು, ಅದಕ್ಕೂ ಸಜೀವತೆಯನ್ನು ಕಲ್ಪಿಸಿ, ಅದರೊಡನೆ ಬೆರೆತು, ಕಲೆತು, ಅದರಿಂದ ಸ್ಫೂರ್ತಿಯನ್ನು ಪಡೆದು ತಮ್ಮ ಬಾಳಿಗೊಂದು ಬೆಳಕನ್ನು ಕಂಡುಕೊಳ್ಳಬೇಕೆಂಬ ಬಗೆ ಹಳ್ಳಿಗರಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ಒಂದು ವೈಶಿಷ್ಟ್ಯವೆಂದೇ ಹೇಳಬೇಕು. ಆ ಪ್ರವೃತ್ತಿ, ಆ ಮನೋಭಾವ ಅವರ ಜೀವನವನ್ನು ರಸಮಯಗೊಳಿಸಿದೆ; ಅವರ ಪಾಲಿಗೆ ಅಪೂರ್ವ ಆನಂದವನ್ನು ತಂದುಕೊಟ್ಟಿದೆ. ಆ ಪುಣ್ಯಕ್ಕೆ ಅವರು ಮಾತ್ರ ಭಾಗಿಗಳು.

ಹಳ್ಳಿಗರ ಪಾಲಿಗೆ ಪುರಾಣ, ಇತಿಹಾಸಗಳು ಮತ್ತೆ ಅವತರಿಸಿ ಅವರನ್ನು ಸದಾ ಸನ್ಮಾರ್ಗದಲ್ಲಿ ಕರೆದೊಯ್ಯುವ ಸಾಧನಗಳಾಗುತ್ತವೆ. ಶಿಲೆಶಿಲೆಯೂ ಸಜೀವಗೊಂಡು ಆ ಕಥೆಯನ್ನು, ಆ ನೀತಿಯನ್ನು ಆ ಸತ್ಯವನ್ನು ಸಾರುವ ಸ್ಫೂರ್ತಿಕೇಂದ್ರಗಳಾಗುತ್ತವೆ. ಪ್ರಕೃತಿಯ ಯಾವುದೋ ವೈಚಿತ್ರ್ಯದಲ್ಲಿ ತಾವು ಕೇಳಿದ ಮಹಾಪುರುಷರ ಬದುಕಿನ ಸಂಕೇತವೊಂದನ್ನು ಕಂಡುಕೊಂಡು, ಅದನ್ನು ನಂಬಿ, ಅದನ್ನು ಆರಾಧಿಸಿ ಅವರ ಜೀವನವನ್ನು ಆದರ್ಶವಾಗಿ ಇಟ್ಟುಕೊಳ್ಳುವ ಒಂದು ಮನೋವೈಶಾಲ್ಯವನ್ನು ಅವರಲ್ಲಿ ಮಾತ್ರ ಕಾಣಬಹುದು. ಸತ್ಯ, ನ್ಯಾಯ, ಧರ್ಮಗಳ ಸಂಸ್ಥಾಪನೆಗಾಗಿ ತಮ್ಮ ಬದುಕನ್ನೇ ಒಂದು ಪ್ರಯೋಗಕ್ಕೆ ಒಡ್ಡಿ ಅನೇಕ ಕಷ್ಟಪರಂಪರೆಗಳನ್ನು ಎದುರಿಸಿಯೂ ನಿಶ್ಚಲಮನರಾಗಿ, ನಿರ್ವಿಕಲ್ಪಚಿತ್ತರಾಗಿ ಬದುಕಿಹೋದ ಪುಣ್ಯಪುರುಷರ ಪುಣ್ಯಸ್ಮರಣೆಯನ್ನು ಪ್ರಕೃತಿಯಲ್ಲಿ ಬರೆದಿಟ್ಟುಕೊಳ್ಳುವ ರೀತಿ ನಿಜಕ್ಕೂ ಅತಿಶಯವಾದುದು. ನಮ್ಮ ಕಣ್ಣಿಗೆ ಕೇವಲ ಜಡವಾಗಿ, ಕೇವಲ ಒಂದು ನಿರ್ಜೀವವಸ್ತುವಾಗಿ ತೋರುವ ಬಂಡೆಯೊಂದು ಅವರ ಪಾಲಿಗೆ ಒಂದು ಸತ್ಯಕಥೆಯನ್ನು ಹೇಳುವ ಯಾರೋ ಮಹಾಪುರುಷನ ನೆನಪನ್ನು ತಂದುಕೊಡುವ ಸೋಜಿಗದ ಕಾರಂಜಿಯಾಗುತ್ತದೆ! ದೃಷ್ಟಿಯನ್ನು ತೇಲಿಸಿ ಮುಂದೆಹೋಗದೆ, ಸಹನೆಯಿಂದ ಶ್ರದ್ಧಾಸಕ್ತಿಯಿಂದ ಅತ್ತ ಕಿವಿಗೊಡುವವರಿಗೆ ಅಲ್ಲಿನ ಅಪೂರ್ವ ಆನಂದ ಪರಿಚಯವಾಗುತ್ತದೆ. ದಂತಕಥೆಗಳೆಂದು ನಿರ್ಲಕ್ಷಿಸದೆ, ವಾಸ್ತವಿಕ ದೃಷ್ಟಿಯಿಂದ,

ವೈಜ್ಞಾನಿಕ ದೃಷ್ಟಿಯಿಂದ ಎಲ್ಲವನ್ನೂ ಪರಿಶೋಧಿಸುವ ಚಿಕಿತ್ಸಕ ಮತಿಯನ್ನು ಕೆಲಕಾಲ ಬದಿಗಿಟ್ಟು ಆ ಕಥೆಗಳ ಮೂಲಕ ಪ್ರಕೃತಿ ಅವರೊಡನೆ ಹೇಗೆ ಮಾತಾಡುತ್ತದೆ, ಎಂಬುದನ್ನು ನೋಡುವ ಸಹೃದಯತೆಯನ್ನು ಬೆಳಸಿಕೊಂಡವರಿಗೆ ಅಲ್ಲಿಯೂ ರಸವಿದೆ, ಸಜೀವತೆಯಿದೆ, ಆನಂದವಿದೆ. ಇಲ್ಲಿ ರಾಮದೇವರು ನಡೆದುಹೋದರು, ಅಲ್ಲಿ ಪಾಂಡವರು ತಂಗಿಹೋದರು ಎಂಬ ಭಾವನೆ ಅಸಂಭಾವ್ಯವಲ್ಲ, ಅಸಾಧುವಾದುದಲ್ಲ. ಎಲ್ಲಿ ಸುಂದರ ಕಲ್ಪನೆಯಿದೆಯೋ, ಎಲ್ಲಿ ಒಂದು ಮಧುರ ಮನಸ್ಸು ಒಂದು ಮನೋಹರ ಕಥೆಯನ್ನು ಹೆಣೆದಿರುತ್ತದೆಯೋ ಅಲ್ಲಿ ಸೌಂದರ್ಯವನ್ನು ಅರಸುವ ಬಗೆ ಬೇಕು; ಭಾವನೆ ಬೇಕು. ಅವನ್ನು ಪುರಸ್ಕರಿಸುವ ವಿಶಾಲಮತಿ ಬೇಕು.

ಈ ಕಥೆಗಳನ್ನು ವಸ್ತುವೈವಿಧ್ಯದ ದೃಷ್ಟಿಯಿಂದ ಪೌರಾಣಿಕ ಐತಿಹಾಸಿಕ ಹಾಗೂ ಸಾಮಾಜಿಕವೆಂದು ಸ್ಥೂಲವಾಗಿ ವಿಂಗಡಿಸಿಕೊಳ್ಳಬಹುದು. ಇವುಗಳ ಗುಂಪಿನಲ್ಲಿ ಸ್ಥಳಕಥೆಗಳೂ ಹಿರಿಯ ಪಾತ್ರವನ್ನು ವಹಿಸುತ್ತವೆ. ಹಳ್ಳಿಗೆ ಹೆಸರು ಬಂದ ರೀತಿಯಲ್ಲಿ, ಹಳ್ಳಿಯ ವೈಭವ ಹೆಚ್ಚಿದ ಬಗೆಯಲ್ಲಿ ಒಂದೊಂದು ಅದ್ಭುತ ಕಥೆಯಿರುತ್ತದೆ. ಹಳ್ಳಿಯ ಸುತ್ತಿನ ಗಿರಿಯಲ್ಲಿ, ಬನದಲ್ಲಿ, ಕೆರೆ ತೊರೆಗಳಲ್ಲಿ ಯಾರೋ ಒಬ್ಬ ವೀರನ, ಒಬ್ಬ ಮಹಾಪುರುಷನ, ಒಬ್ಬ ಆದರ್ಶವ್ಯಕ್ತಿಯ ಸ್ಮಾರಕವನ್ನು ಗುರುತಿಸಿ ಅದರ ನೆನಪು ನಿತ್ಯನೂತನವಾಗಿ, ಚಿರಂತನವಾಗಿ ನಿಲ್ಲುವಂತೆ ಕಥೆಗಳು ಹುಟ್ಟಿಕೊಳ್ಳುತ್ತವೆ. ಎಲ್ಲಿಯೋ ಒಂದು ಸಂಕೇತವನ್ನು ತೋರಿ ಆ ಮೂಲಕ ಒಂದು ಕಥೆಯ ಬಣ್ಣವನ್ನು ಕಟ್ಟಿ, ಒಂದು ನೀತಿಯನ್ನೋ ಒಂದು ಸತ್ಯವನ್ನೋ ಸಾರುವ ಉದ್ದೇಶ ಹಿರಿದಾದುದು. ಹಳ್ಳಿಗರ ಬದುಕಿನ ಮೇಲೆ ಅದರ ಪ್ರಭಾವ ಅಪಾರವಾದುದು. ಶತಶತಮಾನಗಳಿಂದ ಇಂಥ ಸಹಸ್ರಾರು ಕಥೆಗಳು ಹುಟ್ಟಿಕೊಂಡು ಸಂಕೇತಗಳ ಬೆಂಬಲದಿಂದಲೊ ಏನೊ ಇನ್ನೂ ಅಚ್ಚಳಿಯದೆ ಉಳಿದುಬಂದಿವೆ. ಜನಸಾಮಾನ್ಯರು ತಮ್ಮ ಅನುಭವದಿಂದ, ತಮ್ಮ ಕಲ್ಪನಾಸಾಮರ್ಥ್ಯದಿಂದ ಕಟ್ಟಿದ ಕಥೆಗಳಿವಾದರೂ ಸತ್ಯಕಥೆಗಳಿವೆಂಬಂತೆ ಬೆರಗುಗೊಳಿಸುವ ರೀತಿ, ಅದರ ಸಮರ್ಥನೆಗೆ ಅವರು ಹಾಕುವ ನಿದರ್ಶನ, ಸವಾಲು, ಎಷ್ಟು ಕೌತುಕಕಾರಿಯಾಗಿರುತ್ತವೆ! ಯಾರು ನಂಬಲಿ ಬಿಡಲಿ, ಅವರು ಆ ಕಥಾನಾಯಕರ ಉದಾತ್ತವ್ಯಕ್ತಿತ್ವಕ್ಕೆ ತಲೆಬಾಗಿದ್ದಾರೆ, ಅವರ ಪುಣ್ಯಸ್ಮರಣೆಯಿಂದ ತಮ್ಮ ಬದುಕನ್ನು ಹಸನುಮಾಡಿಕೊಳ್ಳಲು ಯತ್ನಿಸಿದ್ದಾರೆ. ಇಂದಿಗೂ ಹಳ್ಳಿಗರ ರಸನೆಯಲ್ಲಿ ಆ ಕಥೆಗಳು ಉಳಿದಿವೆ. ಹಳ್ಳಿಹಳ್ಳಿಯೂ ಇಂಥ ಕಥಾಕೌತುಕಗಳ ತೌರಾಗಿದೆ. ಒಂದು ಬಂಡೆಯನ್ನೋ, ಒಂದು ಮುರಿದ ಕಂಬವನ್ನೋ, ಒಂದು ಬತ್ತಿದ ಕೊಳವನ್ನೋ, ಒಂದು ವಿಚಿತ್ರವೃಕ್ಷವನ್ನೋ ತೋರಿ ಅದಕ್ಕೊಂದು ಕಥೆಯನ್ನು ಹೇಳುವ ರೀತಿ ಯಾರ ಆಸಕ್ತಿಯನ್ನು ಕೆರಳಿಸದು, ಯಾರ ಕುತೂಹಲವನ್ನು ಅರಳಿಸದು!

ನಾಗಮಂಗಲ ತಾಲ್ಲೂಕಿನ ಮೈಸೂರು ತುಮಕೂರು ರಸ್ತೆಯ ಮೂಡಣದಲ್ಲಿ ಆಲತಿ ಎಂಬೊಂದು ಉತ್ತುಂಗ ಗಿರಿಯಿದೆ. ಆ ಗಿರಿಶ್ರೇಣಿ ಅನಂತವಾಗಿ ಬೆಳೆದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವವರು ಅದನ್ನು ದಾಟಿಯೇ ಹೋಗಬೇಕಾಗಿದೆ. ಹಿಂದೆ ಹೆಗಲಲ್ಲಿ ಕೊಡಲಿಯನ್ನು ಧರಿಸಿ ಹೊರಟುಬಂದ ಪರಶುರಾಮನಿಗೂ ಇದೇ ಗತಿಯಾಯಿತು. ಗಿರಿಯನ್ನು ಹತ್ತಿ ಆಯಾಸಗೊಂಡು, ನೆತ್ತಿಯಲ್ಲಿ ಹೆಬ್ಬಂಡೆಯೊಂದರ ನೆರಳಲ್ಲಿ ಕುಳಿತು 'ಪರಮೇಶ್ವರಾ' ಎಂದು ನಿಟ್ಟುಸಿರನ್ನು ಬಿಡಲು 'ಇಲ್ಲಿದ್ದೇನೆ' ಎಂಬ ಕೂಗು ಬಂಡೆಯೊಳಗಿನಿಂದ ಕೇಳಿಬಂದಿತು! ಅಚ್ಚರಿಗೊಂಡ ಪರಶುರಾಮ ತನ್ನ ಕೊಡಲಿಯಿಂದಲೇ ಆ ಬಂಡೆಯ ಉದರವನ್ನು ಭೇದಿಸಿ ಒಳಗೆ ಶಿವಲಿಂಗದ ದರ್ಶನವನ್ನು ಪಡೆದ. ಅದೊಂದು ದೊಡ್ಡ ಬಂಡೆ ಅದರ ನಡುವೆ ಹತ್ತಿಪ್ಪತ್ತು ಗಜಗಳ ಉದ್ದವಿರುವ ದೊಡ್ಡ ಕಂದಕ. ಒಳಗೆ ಕತ್ತಲು, ನಡುಬಂಡೆಯಲ್ಲಿ ನೀರು ಬೇರೆ! ಕೊಡಲಿಯಿಂದಲೇ ಕಡಿಕಡಿದು ಸ್ಥಳ ಮಾಡಿಕೊಂಡು ಹೋದಂತೆ ಗುರುತುಗಳು. ಒಳಗೆ ಹೋದರೆ ಶಿವಲಿಂಗದ ದರ್ಶನ ಇಂದಿಗೂ ದೊರೆಯುತ್ತದೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಬಳಿ ತುಂಗಾನದಿಯಲ್ಲಿ ರಾಮ ತೀರ್ಥವೆಂಬ ಪುಣ್ಯಕ್ಷೇತ್ರವಿದೆ. ಇಲ್ಲಿ ತುಂಗೆ ತನ್ನ ಪಾತ್ರವನ್ನು ವಿಸ್ತರಿಸಿಕೊಂಡು ಅನೇಕ ಬಂಡೆಗಳ ನಡುವೆ ನುಗ್ಗಿ ಸಾಗುತ್ತಾಳೆ. ನದಿಯ ನಡುವಿನಲ್ಲೊಂದು ವಿಶಾಲವಾದ ಬಂಡೆ. ಅದರ ನಡುವಿನಲ್ಲೊಂದು ದೊಡ್ಡ ಕೊಳಗದಾಕಾರದ ಗುಂಡಿ! ತುಂಗೆಯ ನೀರು ಅದರಲ್ಲಿಯೂ ನುಗ್ಗಿ ಹರಿಯುತ್ತದೆ. ತನ್ನ ತಾಯಿಯನ್ನು ಕೊಲೆಗೈದ ಪರಶುರಾಮನ ಕೊಡಲಿಯಲ್ಲುಳಿದ ರಕ್ತದ ಕಲೆ ಯಾವ ತೀರ್ಥದಲ್ಲಿ ತೊಳೆದರೂ ಹೋಗದೆ ಇಲ್ಲಿಗೆ ಬಂದು ಆ ಗುಂಡಿಯಲ್ಲಿ ಕೊಡಲಿಯನ್ನಿಡಲು ಸಂಪೂರ್ಣವಾಗಿ ಹೋಯಿತು! ಅಂಥ ಪವಿತ್ರಕ್ಷೇತ್ರವಿದು. ನದಿಯ ನಡುವೆಯೇ ಒಂದು ಮಂಟಪವಿದೆ. ನದಿಯ ದಂಡೆಯಲ್ಲಿ ಸುಂದರವಾದ ರಾಮೇಶ್ವರ ದೇವಾಲಯವಿದೆ. ವರ್ಷಕ್ಕೊಮ್ಮೆ ಸಹಸ್ರಾರು ಭಕ್ತರು ಬಂದು ಈ ಗುಂಡಿಯಲ್ಲಿ ಮಿಂದು, ತಮ್ಮ ಪಾಪದ ಕಲೆಗಳನ್ನು ತೊಳೆದುಕೊಳ್ಳುತ್ತಾರೆ!

ಹೀಗೆ ದಂತಕಥೆಗಳಲ್ಲಿ ಪರಶುರಾಮನ ಪಾತ್ರ ವಿಶೇಷವಾಗಿಯೇ ಕಂಡುಬರುತ್ತದೆ. ಎಷ್ಟೋ ಸ್ಥಳಕಥೆಗಳಲ್ಲಿ ಪರಶುರಾಮನ ಪ್ರಸ್ತಾಪ ಬರುತ್ತದೆ. ಒಂದಲ್ಲ ಒಂದು ರೀತಿಯಲ್ಲಿ ಅವನು ಆ ಸ್ಥಳಕ್ಕೆ ಬಂದುಹೋದ ಸಂಬಂಧವನ್ನು ಕಲ್ಪಿಸಿಕೊಂಡ ಬಗೆ ಸುಂದರವಾಗಿರುತ್ತದೆ.

ಜನಪದ ಜೀವನದ ಮೇಲೆ ರಾಮಾಯಣ ಮಹಾಭಾರತಗಳ ಪ್ರಭಾವವಂತೂ ಹೇರಳವಾದುದು. ರಾಮನೋ, ಸೀತೆಯೋ, ಪಾಂಡವರೋ, ಹನುಮ ಭೀಮರೋ ಯಾರಾದರೊಬ್ಬರು ಬರದೆ ಹೋದ ಪ್ರದೇಶಗಳೇ ಇಲ್ಲ. ಅವರ ಪುಣ್ಯಪಾದ

ಸ್ಪರ್ಶಗಳಿಂದ ಆ ನೆಲೆ ಪವಿತ್ರವಾಗಿರುತ್ತದೆ. ಅವರ ನಾಮಸ್ಮರಣೆಯಿಂದ ಆ ಸುತ್ತಿನ ಮಂದಿ ಪಾವನರಾಗಿರುತ್ತಾರೆ. ಎಲ್ಲಿಯೋ ನಾಲ್ಕು ಸಣ್ಣ ಕಲ್ಲುಗಳನ್ನು ಕಂಡರೆ ಆಯಿತು. ಆಗಲೇ ಮನಸ್ಸಿನ ಕುತೂಹಲ ಮುಗಿಲಲ್ಲಿ ಹಾರಿ ಕಥೆಯ ಗರಿಯನ್ನು ಕೆದರುತ್ತದೆ.

ಅತ್ತಿಯ ಮರದಡಿ ಅಟ್ಟುಂಡೊರವರ್‍ಯಾರು
ಅತ್ತಿಯ ಹಣ್ಣ ಒಲೆಹೂಡಿ । ಪಾಂಡವರು
ಅಟ್ಟುಂಡು ಹೋಗವರೆ ವನವಾಸ!!

ಎಂದು ಆ ಸ್ಥಳವನ್ನು ನೋಡಿ, ಪಾಂಡವರ ಬದುಕನ್ನು ನೆನೆದು ಮರುಗುತ್ತಾರೆ. ಸತ್ಯವಂತರಿಗೆ ಎಂದಿಗೂ ಕೇಡಾಗದಿರಲಿ ಎಂದು ಹಾರೈಸುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿ ಒಂದು ಹಳ್ಳಿಯುಂಟು. ಅಲ್ಲಿಗೆ ಹಿಂದೆ ಪಾಂಡವರು ಬಂದಿದ್ದರಂತೆ. ಹಸಿದುಬಂದ ಅವರಿಗೆ ಆ ಊರಿನ ಜನ ಇಷ್ಟು ಭಿಕ್ಷೆ ನೀಡಲಿಲ್ಲ. ಪಾಂಡವರ ಶಾಪವೋ ಏನೋ, ಆ ಊರಿನಲ್ಲಿ ಇಂದಿಗೂ ಒಂದಲ್ಲ ಒಂದು ರೂಪಿನಲ್ಲಿ ದಿನಕ್ಕೆ ಐದು ಮಂದಿ ಉಪವಾಸವಿದ್ದು ಬಿಡುತ್ತಾರೆ! ಇಲ್ಲಿಗೆ ಸಮೀಪದಲ್ಲಿಯೇ ಒಂದು ಕೆರೆಯಿದೆ. ಬಾಯಾರಿದ ಧರ್ಮಜ ನೀರನ್ನು ಕುಡಿಯಲು ಹೋಗಿ ಒಂದು ಬೊಗಸೆಯನ್ನು ಕೈಗೆತ್ತಿಕೊಳ್ಳಲು ಒಂದು ಕಪ್ಪೆಯೂ ಜೊತೆಯಲ್ಲಿ ಬಂದಿತು! 'ಥೂ' ಎಂದು ಅದನ್ನು ಹಿಂದೆ ಚಿಮ್ಮಿದ. ಆಯಿತು, ಅಂದಿನಿಂದ ಇಂದಿನವರೆಗೂ ಆ ಕೆರೆಯಲ್ಲಿ ಒಂದು ಕಪ್ಪೆಯೂ ಸೇರುವುದಿಲ್ಲ. ಆದರೆ ಏರಿಯ ಹಿಂದಣ ಗುಂಡಿಗಳಲ್ಲಿ ನೂರಾರು ಕಪ್ಪೆಗಳಿರುತ್ತವೆ! ಸತ್ಯವಂತರ ಪ್ರಭಾವ ಹೀಗೆಯೇ ಎನ್ನಲಾದೀತೆ!

ಹಿಂದೆ ವನವಾಸದಲ್ಲಿದ್ದ ರಾಮಾದಿಗಳಿಗೂ ಹೀಗೆಯೇ ಒಮ್ಮೆ ನೀರಡಿಕೆಯಾಯಿತು. ಮೇಲುಕೋಟೆಯ ಬೆಟ್ಟದ ದಕ್ಷಿಣದ ತುದಿಗೆ ಬಂದಾಗ ದಾಹ ಮತ್ತೂ ಹೆಚ್ಚಿ ಸೀತಾದೇವಿ ಕಂಗಾಲಾದಳು! ಆಗ ಲಕ್ಷ್ಮಣ, ಅಲ್ಲೊಂದು ದೊಡ್ಡ ಬಂಡೆಯ ಮೇಲೆ ಬಾಣಪ್ರಯೋಗ ಮಾಡಿದ. ಒಂದು ಕೊಳವೇ ಆಯಿತು. ಎಲ್ಲಿಂದಲೋ ನೀರು ಚಿಮ್ಮಿ ಬಂದಿತು. ನೀರನ್ನು ಕುಡಿದು ಸಂತೃಪ್ತರಾದರು. ಪುಣ್ಯವಂತರು ನೀರು ಕುಡಿದ ಸ್ಥಳವದು. ಬಾಣಾಘಾತಕ್ಕೆ ಪಕ್ಕದ ಬಂಡೆಯ ಉದರ ಸೀಳಿರುವುದನ್ನು ನೋಡಲು ಈಗಲೂ ಯಾತ್ರಿಕರು ಹೋಗುತ್ತಾರೆ. ಆ ಧನುಷ್ಕೋಟಿಯಲ್ಲಿ ಮಿಂದರೆ ದೊಡ್ಡ ಪುಣ್ಯ ಬರುವುದಂತೆ!

ತುಮಕೂರು ಜಿಲ್ಲೆಯ ಸಿದ್ಧಗಂಗಾ ಕ್ಷೇತ್ರದ ಬಳಿ ರಾಮದೇವರ ಬೆಟ್ಟವಿದೆ. ರಾಮಲಕ್ಷ್ಮಣರನ್ನು ವಂಚಿಸಿ ರಾವಣನು ಸೀತಾದೇವಿಯನ್ನು ಆಕಾಶದಲ್ಲಿ ಕದ್ದೊಯ್ಯುವಾಗ ಆಕೆಯ ಸೆರಗು ಜಾರಿ ಆ ಬೆಟ್ಟದ ನೆತ್ತಿಯಲ್ಲಿ ಸವರಿಕೊಂಡು

ಹೋದ ಗುರುತು ಇನ್ನೂ ಉಳಿದಿದೆ. ಇದನ್ನು ಕಂಡವರೆಲ್ಲಾ ರಾವಣನ ದುಷ್ಕೃತ್ಯವನ್ನು ಇಂದಿಗೂ ಹೀಯಾಳಿಸುತ್ತಾರೆ !

ಈ ಕಥೆಗಳ ಮಾತಂತಿರಲಿ, ಮಹಾ ಪೌರುಷಶಾಲಿಗಳೆಂದು ಪ್ರಖ್ಯಾತರಾದ ಭೀಮ ಹನುಮರ ಕಥೆಗಳನ್ನು ಕೇಳಬೇಕು! ಹನುಮನ ಕಥೆಗಳು ಅಷ್ಟಾಗಿ ಸಿಗದಿದ್ದರೂ ಭೀಮನನ್ನು ಜನ ವಿಶೇಷವಾಗಿ ನೆನೆದಿದ್ದಾರೆ. ಅವನ ಶಕ್ತಿ ಸಾಮರ್ಥ್ಯಗಳಿಂದ ಇಂದಿಗೂ ಅವರು ಸ್ಫೂರ್ತಿ ಪಡೆಯುತ್ತಿದ್ದಾರೆ!

ಮಂಡ್ಯ ಜಿಲ್ಲೆಯ ಬೆಳ್ಳೂರಿನ ಮೂಡಣದಿಸೆಯಲ್ಲಿ ಅನಂತಗಿರಿವ್ರಾತವಿದೆ. ಅಲ್ಲಿನ ಒಂದು ಕಣಿವೆಯಲ್ಲಿ ವಿಶಾಲವಾದ ಬಂಡೆಯೊಂದರ ಮೇಲೆ ಮನುಷ್ಯನ ಹೆಜ್ಜೆಯ ಗುರುತಿನ ಆಕೃತಿಯನ್ನೇ ಹೋಲುವ ದೊಡ್ಡ ಗುಂಡಿಯುಂಟಾಗಿದೆ. ಸಾಮಾನ್ಯ ಎತ್ತರದ ಒಬ್ಬ ಮನುಷ್ಯನು ಹೊರಗೆ ಕಾಣದಂತೆ ಅಪ್ರಯಾಸವಾಗಿ ಮಲಗಬಲ್ಲ ತೊಟ್ಟಿಲಿನಂತಿರುವ ಅದು ಭೀಮನ ಹೆಜ್ಜೆ! ಹಿಂದೆ ಅರಗಿನ ಮನೆಯಿಂದ ಸೋದರರನ್ನೂ ತಾಯಿಯನ್ನೂ ಸಾಗಿಸಿಕೊಂಡು ವೇಗವಾಗಿ ಕಾಡಿಗೆ ನಡೆದು ಹೋದಾಗಿನ ಹೆಜ್ಜೆಯಿದು. ಇಂತಹುದೇ ಇನ್ನೊಂದು ಹೆಜ್ಜೆ ಅಲ್ಲಿಂದ ಕೆಲವು ಮೈಲಿಗಳ ದೂರದಲ್ಲಿರುವುದಂತೆ! ಆ ಮಹಾರಾಯನ ಆಕಾರವನ್ನು ಊಹಿಸಿಕೊಂಡರೆ ಮೈ 'ಜುಂ' ಎನ್ನುತ್ತದೆ.

ಇದನ್ನು ಸಮರ್ಥಿಸುವಂತೆ ದಾವಣಗೆರೆಯ ಯಾವುದೋ ಬೆಟ್ಟದ ಮೇಲೆ ವಿಶಾಲವಾದ ಅರೆಯ ಮೇಲೆ ದೊಡ್ಡ ಕೊಪ್ಪರಿಗೆಯಾಕಾರದ ಗುಂಡಿಯುಂಟಾಗಿದೆ. ಹಿಂದೆ ಭೀಮನು ಊಟಮಾಡಿ ತಟ್ಟೆಯನ್ನು ಮಗುಚಿದ ಸಮಯದಲ್ಲುಂಟಾದ ಗುರುತದು. ಇನ್ನೆಲ್ಲಿಯೋ ಅವನು ಬಳಸುತ್ತಿದ್ದ ದೊಡ್ಡ ಬಂಡೆಯಾಕಾರದ ರುಬ್ಬುಗುಂಡಿದೆಯಂತೆ. ಇದ್ದರೆ, ಅವನಂಥ ಸಮರ್ಥಶಾಲಿಗಳಾಗಿದ್ದು, ಪೌರುಷವನ್ನು ಮೆರೆಯಬೇಕು!

ರಾಮಾಯಣ ಮಹಾಭಾರತಗಳಿಗೆ ಸಂಬಂಧಿಸಿದಂತೆಯೇ ಅಲ್ಲದೆ ಇತರ ಪುರಾಣಗಳಿಗೂ, ಸ್ಥಳದೇವತೆಗಳಿಗೂ ಸಂಬಂಧಪಟ್ಟ ಕತೆಗಳು ವಿಶೇಷವಾಗಿಯೇ ಇವೆ. ಸುತ್ತೂರಿನ ದೊಡ್ಡ ರಾಗಿಯಕಲ್ಲು, ಚುಂಚನಗಿರಿಯ ಮೇದರ ಶಿರಗಳು, ಮುಂತಾದುವುಗಳ ಬಗೆಗೆ ದೊರೆಯುವ ಕಥೆಗಳೆಷ್ಟು ಕುತೂಹಲಪೂರ್ಣವಾಗಿವೆ! ಶಿವನ ಪವಾಡಗಳನ್ನು ಮೆರೆಯುವ ಕಥೆಗಳೂ ಹೆಚ್ಚಾಗಿಯೇ ಇವೆ.

ಹೀಗೆಯೇ ಐತಿಹಾಸಿಕ ವಸ್ತುಗಳನ್ನೊಳಗೊಂಡ ಕಥೆಗಳೂ ಅಲ್ಲಲ್ಲಿ ದೊರೆಯುತ್ತವೆ. ವೀರರ ಸಾಹಸಗಳು, ರಾಜರ ಸತ್ಯಸಂಧತೆ, ಜನಪ್ರಿಯತೆ, ವಿಶಾಲಮತಿಗಳನ್ನು ಸಾರುವ ಕಥೆಗಳು ಔದಾರ್ಯ, ವಿಪುಲವಾಗಿ ದೊರೆಯುತ್ತವೆ.

ರಾಮನಗರದ ಬಳಿಯ ರೇವಣಸಿದ್ಧೇಶ್ವರಗಿರಿ ಪ್ರಸಿದ್ಧವಾದ ಕ್ಷೇತ್ರ. ಹಿಂದೆ ಇಲ್ಲಿನ ರೇಣುಕ ಗುಹಾಲಯದಲ್ಲಿ ಶಿವರಾತ್ರೀಶ್ವರರು ತಪಸ್ಸನ್ನು ಆಚರಿಸಿದ್ದರು. ಈ ಗಿರಿ ಅತ್ಯಂತ ಸುಂದರವಾಗಿರುವಂತೆಯೇ ತುಂಬ ಕಡಿದಾಗಿಯೂ, ಅಗಮ್ಯ ವಾಗಿಯೂ ಇದ್ದುದರಿಂದ ಕಬ್ಬಿಣದ ಸಲಾಕಿಗಳನ್ನು ಹಾಕಿ ಹತ್ತಿಹೋಗಲು ಯಾರೋ ಸೌಲಭ್ಯವನ್ನು ಕಲ್ಪಿಸಿದ್ದಾರೆ. ಹಿಂದೆ ರಾಜೇಂದ್ರ ಚೋಳನ ಕನಸಿನಲ್ಲಿ ರೇಣುಕರು ಕಾಣಸಿಕೊಂಡು ಅಲ್ಲಿ ತಪೋರೂಢರಾಗಿದ್ದ ಶಿವರಾತ್ರೀಶ್ವರರ ದರ್ಶನವನ್ನು ಪಡೆಯುವಂತೆ ಹೇಳಿದರು. ಆ ರಾಜನ ಮಹಿಮೆ ಎಂತಹುದೋ ಅವನ ಕುದುರೆ ಆ ಕಡಿದಾದ ಬೆಟ್ಟದ ಮೇಲೂ ಲೀಲಾಜಾಲವಾಗಿ ಹತ್ತಿಹೋಯಿತು! ಹಾಗೆ ಹತ್ತಿದ ಅದರ ಗೊರಸಿನ ಗುರುತುಗಳು ಇಂದಿಗೂ ಇವೆ!

ಚಿತ್ರದುರ್ಗದ ವೀರಪಾಳೆಯಗಾರ ಮದಕರಿನಾಯಕ ಮುಂತಾದವರ ಬಗೆಗೂ ಅನೇಕ ಕಥೆಗಳು ದೊರೆಯುತ್ತವೆ. ಸಾಮಾನ್ಯವಾಗಿ ಐತಿಹಾಸಿಕ ವಿಷಯಕ್ಕೆ ಅಂಟಿಕೊಂಡಂತೆ ತೋರಿಬರುವ ದಂತಕಥೆಗಳಲ್ಲಿ ಆ ರಾಜರ ಜನಪ್ರಿಯತೆಯ ವಿಸ್ತಾರ ವ್ಯಕ್ತವಾಗುತ್ತದೆ. ಜನಮನದಲ್ಲಿ ಪವಾಡಪುರುಷರಾಗಿ ಅವರು ಗೋಚರರಾಗ ಬೇಕಾದರೆ ಅವರ ಕೀರ್ತಿ, ಯಶಸ್ಸು ಅಪಾರವಾದುದೆಂದೇ ಹೇಳಬೇಕು.

ಸಾಮಾಜಿಕ ಕಥೆಗಳಂತೂ ಈ ಎಲ್ಲ ಕಥೆಗಳಿಗಿಂತಲೂ ತುಂಬ ಆಕರ್ಷಕವಾಗಿ, ನೀತಿಪ್ರದವಾಗಿ, ರಮ್ಯವಾಗಿರುವುದು ಕಂಡುಬರುತ್ತದೆ.

ಚಿತ್ರದುರ್ಗ ಜಿಲ್ಲೆಯ ಧರ್ಮಪುರದ ಬಳಿ ವಿಶಾಲವಾದ ಕೆರೆಯೊಂದಿದೆ. ಬಹಳ ದಿನಗಳ ಹಿಂದಿನ ಮಾತು, ಆಗಿನ್ನೂ ಕೆರೆಯನ್ನು ಕಟ್ಟಿಮುಗಿಸಿದ ಹೊಸದಿನಗಳು. ಒಮ್ಮೆ ವಿಪರೀತ ಮಳೆಯಾಗಿ ಕೆರೆತುಂಬಿ ತುಳುಕಿತು. ನಡುರಾತ್ರಿಯಲ್ಲಿ ಕೆರೆಯನ್ನು ನೋಡಿಬರಲು ಹೋದ ಶ್ರವಣನೆಂಬ ನೀರುಗಂಟಿಯನ್ನು ಕುರಿತು ಗಂಗೆ ಕೂಗಿದಳು – "ಶ್ರವಣಾ, ಇನ್ನು ನಾನು ತಾಳಲಾರೆ, ಈ ಬಂಧನವನ್ನು ಸಹಿಸಲಾರೆ, ಹೊರಟುಹೋಗುತ್ತೇನೆ!"

ಶ್ರವಣ ಬೆಚ್ಚಿದ! ತಾಯಿ ಹೊರಟು ಹೋದರೆ ಇನ್ನೇನು ಗತಿ! ಜನರೆಲ್ಲಾ ಅನಾಥರಾಗಬೇಕಾಗುತ್ತದೆ!

"ತಾಳು ತಾಯಿ, ಹಾಗೆ ಮಾಡಬೇಡ, ಒಂದು ಗಳಿಗೆ ಊರಿಗೆ ಓಡಿಹೋಗಿ ಗೌಡರಿಗೆ ತಿಳಿಸಿ ಬಂದುಬಿಡುತ್ತೇನೆ – ಅಲ್ಲಿಯವರೆಗೂ ಹೋಗುವುದಿಲ್ಲವೆಂದೂ ಭಾಷೆಯನ್ನು ಕೊಡು––"*

---

* ಚಿಕ್ಕಮಗಳೂರು ಜಿಲ್ಲೆಯ ಅಯ್ಯನಕೆರೆಯ ಕಥೆಯನ್ನೂ ಇಲ್ಲಿ ನೆನಮ ಮಾಡಿಕೊಳ್ಳಬಹುದು.

ಶ್ರವಣ ಬೇಡಿದ. ಗಂಗೆ ಭಾಷೆಯನ್ನು ಕೊಟ್ಟಳು. ಎಲ್ಲಿಯೋ ಕತ್ತಲಲ್ಲಿ ಕರಗಿದ ಶ್ರವಣ ಏನಾದನೋ! ಹಿಂದಿರುಗಲಿಲ್ಲ, ಊರಿಗೂ ಬರಲಿಲ್ಲ! ಗಂಗೆ ಅವನಿಗಾಗಿ ಕಾಯುತ್ತಿದ್ದಾಳೆ! ಕೆರೆ ಇನ್ನೂ ಭದ್ರವಾಗಿದೆ. ಶ್ರವಣ ಇನ್ನೆಂಥ ತ್ಯಾಗಶೀಲ!

ಚೆನ್ನಪಟ್ಟಣದ ಬಳಿಯ ಅಣ್ಣತಮ್ಮಂದಿರ ಗುಡ್ಡಗಳ ಕಥೆ, ರಾಮನಗರದ ಅಬ್ಬೂರು ಬಳಿಯ ಕಣ್ವಾನದಿಯಲ್ಲಿರುವ ಹೊಂಡದ ಕಥೆ–ಇವೆಲ್ಲಾ ಎಂಥ ರೋಮಾಂಚಕಾರಕ ಕಥೆಗಳು! ಯದುಗಿರಿಯ ಅಕ್ಕತಂಗಿಯರ ಕೊಳದ ಬಗೆಗಿರುವ ದಂತಕಥೆಯೇನು ಮರೆಯುವಂತಹುದೆ? ಅಷ್ಟೆಲ್ಲ ಶ್ರಮದಿಂದ ಕಟ್ಟಿಸಿದ ಕೊಳ ಒಂದು ಸಣ್ಣ ಬೇಸರದ ಮಾತಿಗಾಗಿ ತನ್ನಲ್ಲಿ ಉಪ್ಪು ನೀರಿಗೆ ಆಶ್ರಯ ಕೊಟ್ಟುಬಿಡುವುದೆ!

ಊರು ಊರಿಗೂ ಇಂಥ ನೂರು ಕಥೆಗಳನ್ನು ಕೇಳುವ ಕಿವಿ ಎಷ್ಟು ಪುಣ್ಯ ಮಾಡಿರುತ್ತದೆ! ಸತ್ಯ, ನ್ಯಾಯ, ಧರ್ಮಗಳನ್ನು ಲೋಕದ ಮೇಲೆ ಬಿತ್ತಿ ಜನತೆಯಲ್ಲಿ ಶಾಂತಿ, ನೆಮ್ಮದಿ, ಆನಂದಗಳ ಹೊಸ ಹಾಡನ್ನು ಹಾಡಲು ಪರಮಾತ್ಮ ಈ ಕತೆಗಳ ರೂಪದಲ್ಲಿ, ಹಲವು ಸಂಕೇತಗಳ ರೂಪಿನಲ್ಲಿ ಹನ್ನೊಂದನೆಯ ಅವತಾರ ವನ್ನೆತ್ತಿದನೇನೋ! ಆದರೆ ಎಲ್ಲ ಗ್ರಾಮಕಲೆಗಳೂ ನಶಿಸಿಹೋಗುತ್ತಿರುವ ಈ ದಿನಗಳಲ್ಲಿ ಈ ದಂತಕಥೆಗಳನ್ನು ಹೇಳುವವರೂ, ಕೇಳುವವರೂ ಕಡಿಮೆ ಯಾಗುತ್ತಿರುವುದು ವಿಷಾದಕರ! ಇಂತಹ ಕಥೆಗಳ ಒಂದು ಸಂಗ್ರಹವೂ ಕನ್ನಡದಲ್ಲಿನ್ನೂ ಬರದಿರುವುದು ಖೇದಕರ!

ಕನ್ನಡ ಜನಪದ ಸಾಹಿತ್ಯದಲ್ಲಿ ಕೋಲಾಟದ ಪದಗಳು

ಕೋಲಾಟ, ಬಯಲಾಟಗಳು ನಮ್ಮ ಗ್ರಾಮಕಲೆಯ ಎರಡು ಕಣ್ಣುಗಳು. ಬಹು ಪ್ರಾಚೀನ ಕಾಲದಿಂದಲೂ ಜಾನಪದ ಜೀವನದಲ್ಲಿ ಮನರಂಜನೆಯ ಮುಖ್ಯ ಸಾಧನಗಳಾಗಿ ಇವು ಉಳಿದು ಬಂದಿವೆ. ಮನರಂಜನೆಯ ಜೊತೆಗೆ ಹಳ್ಳಿಗರ ಬದುಕಿನಲ್ಲಿ ಉತ್ಸಾಹ ಲವಲವಿಕೆಗಳನ್ನು ತುಂಬುವುದರಲ್ಲೂ ಇವು ಸಹಕಾರಿಯಾಗಿವೆ. ಇವೆರಡರಲ್ಲಿ ಕೋಲಾಟ ಬಹು ಸುಲಭಸಾಧ್ಯವಾದ, ಸರಳವಾದ ಜಾನಪದ ಕಲೆಯಾಗಿದೆ. ಯಾವ ವೇಷಭೂಷಣವೂ, ಯಾವ ವಾದ್ಯ ವಿಶೇಷಗಳ ಹಿನ್ನೆಲೆಯೂ, ರಂಗಸಜ್ಜಿಕೆಯೂ ಬೇಕಾಗದ ಈ ಕಲೆ ಎಲ್ಲಿಯಾದರೂ, ಯಾವ ಗಳಿಗೆಯಲ್ಲಿ ಬೇಕಾದರೂ, ವಿರಾಮ ದೊರೆತಾಗಲೆಲ್ಲ ಹಳ್ಳಿಗರಿಗೆ ಆನಂದವನ್ನು ನೀಡಬಲ್ಲ ಉತ್ತಮ ಸಾಧನವಾಗಿದೆ. ಯಕ್ಷಗಾನ, ಬಯಲಾಟಗಳೂ ಈ ಉದ್ದೇಶವನ್ನು ಸಾಧಿಸುವ ಮುಖ್ಯ ಅಂಗಗಳೇ ಆದರೂ ಇಷ್ಟು "ಸರಳ' ಎಂದು ಅವನ್ನು ಕರೆಯಲಾಗುವುದಿಲ್ಲ. ಅಭಿನಯದಲ್ಲಾಗಲೀ, ನೃತ್ಯದಲ್ಲಾಗಲೀ ಅಲ್ಲಿ ಶಾಸ್ತ್ರೀಯ ದೃಷ್ಟಿ, ಸಂಪ್ರದಾಯನಿಷ್ಠತೆ ಹೆಚ್ಚು. ಸಂಭಾಷಣೆಗಳೂ, ಗೀತೆಗಳೂ ಸಂಸ್ಕೃತ ಭೂಯಿಷ್ಠವಾಗಿ, ಕ್ಲಿಷ್ಟವಾಗಿ ಸಾಮಾನ್ಯರ ಮಟ್ಟಕ್ಕೆ ಮೀರಿದಂತಿರುತ್ತವೆ. ಅಲ್ಲಿ ಕಥೆಯ ಅಂಶ, ಸಂಗೀತದ ಪ್ರಾಚುರ್ಯ ಹೆಚ್ಚಾಗಿ ಇರುವುದರಿಂದ ಅವು ಜನಪ್ರಿಯತೆಯನ್ನು ಹೇಗೋ ಕಾಪಾಡಿಕೊಂಡಿವೆ.

ಕೋಲಾಟದಲ್ಲಿ ಈ ಯಾವ ತೊಡಕುಗಳೂ ಇಲ್ಲ. ಯಕ್ಷಗಾನ ಬಯಲಾಟಗಳಂತೆ ದೀರ್ಘವಾದ ಅಭ್ಯಾಸವೂ ಇದಕ್ಕೆ ಬೇಕಿಲ್ಲ. ಅಲ್ಲಿ ಬರುವ ಗೀತೆಗಳಾದರೂ ಜನಸಾಮಾನ್ಯರಿಂದಲೇ ರಚಿತವಾದವು. ಅವರ ದಿನನಿತ್ಯದ ಅನುಭವಗಳ ಆಧಾರದ ಮೇಲೆಯೇ ಅವು ನಿಂತಿರುವುದರ ಜೊತೆಗೆ, ಜನಸಾಮಾನ್ಯರ ಭಾಷೆಯಲ್ಲಿಯೇ ಇರುತ್ತವೆ. ಸಹಜವೂ, ಸರಳವೂ, ಸುಂದರವೂ ಆದ ಧಾಟಿಗಳಿರುತ್ತವೆ. ನೃತ್ಯದಲ್ಲಿಯೂ ಈ ಸರಳ ಗುಣವನ್ನು ನಾವು ಕಾಣಬಹುದು. ಈ ಎಲ್ಲ ದೃಷ್ಟಿಗಳಿಂದಲೂ ಸುಸಂಸ್ಕೃತವಾದ ಬಯಲಾಟ ಯಕ್ಷಗಾನಗಳ ಜೊತೆಯಲ್ಲಿ ಹೊಯ್‌ಕಯ್ಯಾಗಿ ಕೋಲಾಟ ಬೆಳೆದು ಬಂದು, ಅವಕ್ಕಿಂತಲೂ ಜನತೆಗೆ ಹೆಚ್ಚು ಹತ್ತಿರವಾಗಿ, ಹೆಚ್ಚು ಪ್ರಿಯವಾಗಿ, ಹೆಚ್ಚು ಉಲ್ಲಾಸಕಾರಿಯಾಗಿ ಪರಿಣಮಿಸಿದೆ.

ಯಾವ ಪೂರ್ವ ವ್ಯವಸ್ಥೆಯೂ ಬೇಕಾಗದ, ಹಣದ ವೆಚ್ಚವೇನೂ ಇಲ್ಲದ ಈ ಕೋಲಾಟಕ್ಕೆ ತುಸು ವಿಶಾಲವಾದ ಬಯಲಾದರೆ ಸಾಕು. ಕೋಲಾಟದ

ಕಟ್ಟಾಳುಗಳು ಸ್ವಚ್ಛಂದವಾಗಿ ಅಡ್ಡಾಡುವಷ್ಟು ಶುದ್ಧವಾದ ಸ್ಥಳವಾದರಾಯಿತು. ಪ್ರೇಕ್ಷಕರೇನು, ಜಗಲಿಗಳ ಮೇಲೆ, ಮರದ ತುಂಡುಗಳ ಮೇಲೆ, ನಿಂತ ಗಾಡಿಗಳ ಮೇಲೆ, ಕಲ್ಲು ಕಟ್ಟೆಗಳ ಮೇಲೆ ಕುಳಿತೋ ನಿಂತೋ ಕೊನೆಗೆ ಅತ್ತಿತ್ತ ಸುಳಿದಾಡುತ್ತಲೋ "ಆಟ"ವನ್ನು ಸವಿಯುತ್ತಾರೆ. ಹೊರಗೆ ಬರಲಾಗದವರು ಮನೆಗಳ ಒಳಗೆ ಕುಳಿತೋ, ನಿಂತೋ, ಮಲಗಿಯೋ ಹಾಡುಗಳ ಸವಿಯನ್ನುಣ್ಣುತ್ತಾರೆ.

ಪರಊರಿನಿಂದ ಕುಶಲಿಗಳಾದ ಕೋಲಾಟದವರನ್ನು ವಿಶೇಷವಾದ ಸಂದರ್ಭಗಳಲ್ಲಿ ಕರೆಸುವುದುಂಟು. ಕಾಡುಗೊಲ್ಲರೇ ಮುಂತಾದ ಕೆಲವರು ಕೋಲಾಟದ ಈ ಯಾತ್ರೆಯನ್ನು ಇಟ್ಟುಕೊಳ್ಳುತ್ತಾರೆ. ಆಡಿದ ಕಡೆ ದೊಡ್ಡ ದೊಡ್ಡ ಗೌಡರ ತಲೆಯನ್ನು ಕಂಡರೆ ಕೊನೆಗೆ ಅವರ ಮೇಲೆಯೇ ಹಾಡೊಂದನ್ನು ಕಟ್ಟಿ ಹಾಡಿ ಅವರಿಂದ ಕಾಣಿಕೆಗಳನ್ನು ಕಸಿದುಕೊಳ್ಳುತ್ತಾರೆ. ಜಾತ್ರೆ, ಉತ್ಸವ, ಹಬ್ಬ, ಹುಣ್ಣಿಮೆ, ಸುಗ್ಗಿ, ಸಮಾರಂಭಗಳಲ್ಲಿ ಕೋಲಾಟದ ಮೇಳಗಳು ನಡೆಯುತ್ತವೆ. ಇಂಥ ಸಂದರ್ಭದಲ್ಲಿಯೇ ನಡೆಯಬೇಕೆಂಬ ನಿಯಮವೇನೂ ಇಲ್ಲವಾದರೂ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಆಡುವಾಗ ಮಾತ್ರ ಕೋಲಾಟದವರಿಗೆ ಹೆಚ್ಚಿನ ಸ್ಫೂರ್ತಿ ಬರುತ್ತದೆ. ಅವರು ತಮ್ಮೆಲ್ಲ ಜಾಣ್ಮೆಯನ್ನೂ, ತಮ್ಮೆಲ್ಲ ಕೌಶಲವನ್ನೂ, ಹಾಡುಗಾರಿಕೆಯನ್ನೂ ವಿಶೇಷವಾಗಿ ಮೆರೆಯಬೇಕಾದರೆ ಕಿಕ್ಕಿರಿದ ಪ್ರೇಕ್ಷಕರು ಸೇರುವ ಸನ್ನಿವೇಶವೇ ಆಗಬೇಕು.

ಕೋಲಾಟದ ಪಡ್ಡೆಯ ಹುಡುಗರಲ್ಲಿ ಎಲ್ಲರೂ ಹಾಡುವ ಜಾಣರೇ ಆಗಬೇಕಾಗಿಲ್ಲ. ತಾಳ ತಪ್ಪದಂತೆ ಪಲ್ಲವಿಯನ್ನು ಹಾಡಿ ತಮ್ಮ ಸೊಲ್ಲನ್ನು ಸೇರಿಸುವಂತಿದ್ದರೆ ಸಾಕು. ಅವರ ಮುಂದಾಳು ಒಂದೊಂದು ಆಟಕ್ಕೂ ಹೊಸ ಹೊಸ ಹಾಡನ್ನು ಜೋಡಿಸುತ್ತ ಎಲ್ಲರನ್ನು ಬೆರಗುಗೊಳಿಸುತ್ತಾನೆ. ಉಳಿದವರು ವಿವಿಧ ತಾನಗಳಲ್ಲಿ ಹೆಜ್ಜೆ ಹಾಕುತ್ತ, ಕೋಲಿಗೆ ಕೋಲು ಕೊಡುತ್ತ, ಬಾಗಿ, ಬಳುಕಿ, ಕುಣಿದು, ಮಣಿದು ರೋಮಾಂಚಕಾರಕ ಪ್ರದರ್ಶನ ನೀಡುತ್ತಾರೆ. ಒಂದೊಂದು ಆಟವೂ, ಹಾಡೂ ಮುಗಿಯುತ್ತಿದ್ದಂತೆಯೇ "ವಿಧೈ ವೀಧೈ ವೀಧತ್ತ" ಎಂದು ಹೇಳಿ ಕೋಲು ಬಿಟ್ಟು ಕೈಕಾಲುಗಳಿಗೆ ಒಂದೆರಡು ಗಳಿಗೆ ಬಿಡುವು ಕೊಟ್ಟಾಗಲೂ ಅದೇ ತಾಳ, ಅದೇ ರಾಗ ಕಿವಿಯ ಮೇಲೆ ನಿರಂತರವಾಗಿ ಮೊರೆಯುತ್ತಿರುವಂತೆಯೇ ಆಗುತ್ತದೆ.

ಗೆಜ್ಜೆಗಳ ಝುಣತ್ಕಾರ, ಕೋಲುಗಳ ಕಣಿಕಣಿನಾದ, ಹೊನಲ ಘೋಷದಂತೆ ಉಕ್ಕಿ ಝೇಂಕರಿಸುವ ಹಾಡುಗಳು, ಆ ಕೇಕೆ, ಆ ನೃತ್ಯವಿನ್ಯಾಸ – ಎಲ್ಲವೂ ಪ್ರೇಕ್ಷಕರನ್ನು ಯಾವುದೇ ರಸಲೋಕದಲ್ಲಿ ಮುಳುಗಿಸುತ್ತವೆ. ಬಗೆಬಗೆಯ ಹಾಡುಗಳ ಬಣ್ಣಬಣ್ಣದ ಪ್ರಪಂಚ ಕಣ್ಣಿಗೆ ಕಟ್ಟಿದಂತೆ ಮೂಡಿ ನಿಲ್ಲುತ್ತದೆ. ಕೋಲಿಗೆ ತಕ್ಕಂತೆ, ತಾಳಕ್ಕೆ ತಕ್ಕಂತೆ, ಹಾಡಿನ ಲಾಸ್ಯದೊಡನೆ ಬೆರೆತು ಪ್ರೇಕ್ಷಕರ ಮನಸ್ಸು ಆಟದಲ್ಲಿ

ಭಾಗವಹಿಸಿದಂತೆಯೇ ತಲ್ಲೀನವಾಗಿಬಿಡುತ್ತದೆ. ಅಂಥ ಶಕ್ತಿ ಅಂಥ ಮೋಹಕತೆ, ಆ ಆಟಕ್ಕಿಂತಲೂ ಆ ಹಾಡುಗಳಲ್ಲಿ ನಿಚ್ಚಳವಾಗಿ ಹರಿದಿರುತ್ತದೆ. ಶೃಂಗಾರ, ಹಾಸ್ಯ, ವೀರ, ಭಕ್ತಿ – ಎಲ್ಲ ಭಾವಗಳ ನರ್ತನವೂ ಅಲ್ಲಿ ಅಂತರ್ಗತವಾಗಿರುತ್ತದೆ.

ಆಡು ಮುಟ್ಟದ ಸೊಪ್ಪಿಲ್ಲ, ನಿಜ. ಆದರೆ ಕೋಲಾಟದವರು ಕುರಿತು ಹಾಡದ ವಿಷಯವೂ ಇಲ್ಲ. ಅದು ಅವರಿಗೂ ಗೊತ್ತು. ಅವರೇ ಹೇಳುತ್ತಾರೆ.

ಕೋಲೆ ಕೋಲೆ ಕೋಲು ಕೋಲಣ್ಣ ಕೋಲೆ
ಕೋಲೆ ಕೋಲೆ ಕೋಲು ಕೋಲಣ್ಣ ಕೋಲೆ
ಹತ್ತು ಸಾವಿರ ಪದವ ಎತ್ತಿನ ಮೇಲೇರಿಕೊಂಡು
ಮತ್ತೆ ಸಾವಿರವ ಕೈಯಲ್ಲಿ – ಹಿಡಕೊಂಡು
ಬಂದೀವಿ ಬಾರೊ ಬಸವಣ್ಣ ಸಭೆಗೆ

ಎನ್ನುವಲ್ಲಿ ಅವರು ಬಲ್ಲ ಪದಗಳ ಬಾಹುಳ್ಯ ಅಚ್ಚರಿಯನ್ನುಂಟುಮಾಡುತ್ತದೆ. ಅಷ್ಟೊಂದು ಅಪೂರ್ವ ಗೀತೆಗಳನ್ನು ಹೊತ್ತು ತಂದು ಅವರು ಸಭೆಯನ್ನು ತಣಿಸುವವರಿದ್ದಾರೆ, ಆ ಹಾಡುಗಳನ್ನು ಬರೆದುಕೊಳ್ಳುವವರಿದ್ದರೆ, ಇಲ್ಲವೆ ಅವಕ್ಕೆ ಸವಾಲು ಹಾಕುವವರಿದ್ದರೆ ಬರಲಿ ಎಂದು ಘೋಷಿಸುತ್ತಾರೆ. ಅವರ ಪದಗಳ ಮಾಧುರ್ಯಕ್ಕೆ ಮನಸೋತು –

ಕೋಲಿನ ಮೇಲೊಬ್ಬ ಬಸವಣ್ಣ ಕೂತುಕೊಂಡು
ಲಾಲಿಸಿ ಪದವ ಬರಕೊಂಡ ಕೋಲೆ

ಎನ್ನುತ್ತಾರೆ. ಈ ಹಾಡಿನ ವೈಖರಿ ಅಂತಿರಲಿ, ಅವರ ಆಟದ ಬೆಡಗೇನು ಸಾಮಾನ್ಯವಾದುದೇ –

ಅವರಾಡಿ ಇವರಾಡಿ ತೋಳಾಡಿ ಭುಜವಾಡಿ
ನಾಗರ ಸೆಡೆಯಂತೆ ನಡುವಾಡಿ ಕೋಲೆ
ನಮಕುಟ್ಟೆ ನೀನಾಡಿ ತಣಿದಲ್ಲೇ ಕೋಲೆ

ಹೀಗೆ ಸ್ಪರ್ಧೆಯಿಂದ, ಉತ್ಸಾಹದಿಂದ, ಹುಮ್ಮಸ್ಸಿನಿಂದ ನರ್ತಿಸುವಲ್ಲಿ ಕೇವಲ ಯುವಕರೇ ಆಗಬೇಕಿಲ್ಲ. ಈ ಕಲೆಯಲ್ಲಿ ಪಳಗಿದ ಇಳಿವಯಸ್ಸಿನವರೂ ಭಾಗವಹಿಸುತ್ತಾರೆ. ಯುವಕರು ಸೋತರೂ, ಸೋಲೆಂಬುದನ್ನು ಈ ಹಿರಿಯರು ಅರಿಯರು. ಹಾಡಿನಲ್ಲಿ, ಕುಣಿತದಲ್ಲಿ ಕೋಲು ಕೊಡುವುದರಲ್ಲಿ ಪಳಗಿ ಹದಗೊಂಡ ಚೇತನ ಅವರದು.

ಸಾವಿರ ಸಾವಿರ ಪದಗಳ ಈ ಸಾಲಿನಲ್ಲಿ ಸುಳಿದು ಹೋಗುವ ಸೊಗಸಾದ ಕಲ್ಪನೆಗಳೆಷ್ಟು! ಅವರ ಅನುಭವ, ಅವರ ಭಾವನೆ, ಅವರ ಆದರ್ಶ, ಅವರ ರಸಿಕತೆ, ಅವರ ಜೀವನದ ಕನಸುಗಳೆಲ್ಲವಕ್ಕೂ ಹಾಡಿನ ಮೂರ್ತಸ್ವರೂಪವನ್ನು ಕೊಟ್ಟು ಕೋಲುಪದಗಳ ವಿಶಿಷ್ಟ ವರ್ಣಮಯ ಪ್ರಪಂಚಕ್ಕೆ ಪ್ರೇಕ್ಷಕರನ್ನು ಕರೆದೊಯ್ಯುತ್ತಾರೆ. ಕೋಲಾಟದ ವೈಶಿಷ್ಟ್ಯವನ್ನು ಅವರೇ ಹೇಳುತ್ತಾರೆ –

ಕೋಲು ಆಟವು ಚೆಂದ
ಕಾಳೆಯ ದನಿ ಚೆಂದ
ಸೂಳೆಯ ಕುಣಿತ ಬಲುಚೆಂದ – ಚಿನ್ನದಾ
ಕೋಲು ಕೋಲನ್ನ ಕೋಲೆ – ರನ್ನದಾ
ಕೋಲು ಕೋಲನ್ನ ಕೋಲೆ

ಇಂಥ ಆಟಕ್ಕೆ, ಇಂಥ ಹಾಡಿಗೆ ಪ್ರೇರಕ ಶಕ್ತಿಯಾದ ಕೋಲಿನ ಮಹಿಮೆಯಾದರೂ ಎಷ್ಟು? ಅದೇನು, ಯಾವುದೋ ಸಾಮಾನ್ಯವಾದ ಕಾಡುಗಿಡದಿಂದ ಕಡಿದು ಮಾಡಿದ ಕೋಲೇ! ಚಿನ್ನದ ಕೋಲು, ರನ್ನದ ಕೋಲು, ಮುತ್ತಿನ ಕೋಲು, ವಜ್ರದ ಕೋಲು, ಜೊತೆಗೆ ಮೃದುವಾದ ಆಕರ್ಷಕವಾದ ಹೂವಿನ ಕೋಲೂ ಹೌದು.

ಇಂಥ ಮೇಲಾದ ಕೋಲುಗಳನ್ನು ಹಿಡಿದು ಆಡುವವರಾದರೂ ಯಾರು! ಇವರು ಕೋಲು ಕೊಡುತ್ತಿರುವುದಾದರೂ ಯಾರಿಗೆ! ಬೆಟ್ಟದ ಭೈರವ, ಮೇಲುಕೋಟೆಯ ಚೆಲುವರಾಯ ಎಲ್ಲ ದೇವರೂ ಇಳಿದು ಬಂದು ಇವರೊಡನೆ ಭಾಗವಹಿಸುತ್ತಾರೆ.

ಸುತ್ತಮುತ್ತ ಕೋಲುಕೊಡಿ ಸೂಳೆರಾಯಗೆ
ಸೂಳೆಕೇರಿ ಮೇಲುಕೋಟೆ ಚೆಲುವರಾಯಗೆ
ಅರಸರೆಲ್ಲ ಕೋಲು ಕೊಡಿ ನಾಗಮಂಗಲದ್ನರಸಿಂಹಾಗೆ
ಅಂದ ಚೆಂದದ ಚುಂಚನಗಿರಿ ಭೈರವಗೆ

ದೇವದೇವರೆಲ್ಲ ಭಾಗವಹಿಸಿದ ಈ ಆಟದಲ್ಲಿ ಕೌಶಲವೂ ತೀವ್ರತೆಯೂ ಹೆಚ್ಚುತ್ತದೆ.

ಚಂದದಿಂದ ಕೋಲುಕೊಡಿ ಸಂದಿ ಸಂದೀಲ್ಕೋಲು ಕೊಡಿ
ಸುತ್ತಮುತ್ತ ಕೋಲುಕೊಡಿ ಭೈರವಗೆ

ಆಟದ ವೈಖರಿ ಹೆಚ್ಚುತ್ತಾ ಹೆಚ್ಚುತ್ತ ಯಾರು, ಎಲ್ಲಿ, ಹೇಗೆ ಕುಣಿದು ಕೋಲು ಕೊಡುತ್ತಿದ್ದಾರೆಂಬುದು ನಮಗೆ ಅರಿವಾಗದಿದ್ದರೂ, ಅವರು ಮಾತ್ರ ತಾಳತಪ್ಪುವುದಿಲ್ಲ, ಹೆಜ್ಜೆ ತಪ್ಪುವುದಿಲ್ಲ – ಯಾವುದೋ ದೈವಿಕಶಕ್ತಿ ಅವರ ಕೈಗಳಿಗೆ ಬಂದಂತಾಗಿ ಕೋಲುಗಳು ತಮ್ಮ ಚಲನೆಗಳನ್ನು ಮೀರಿ ಒಂದನ್ನೊಂದು ತಾಕಿ ಮಧುರ ನಾದ ವನ್ನುಂಟುಮಾಡುತ್ತವೆ. ಆ ಭಕ್ತಿ, ಶ್ರದ್ಧೆ, ಉತ್ಸಾಹಗಳ ಮಥನದಲ್ಲಿ ಹಾಡಿನ ಅಮೃತ ಝುರಿ ಮಿಂಚಿನಂತೆ ಚಿಮ್ಮಿ ಬರುತ್ತದೆ.

ಮದಽಲು ನೆನೆದೆವು ಸ್ವಾಮಿ ಲಿಂಗನ
ಸುನುಮತ ಶಿವಗಂಗೆ ಬೆನಽವನ

ಎಂದು ಸಕಲ ವಿಘ್ನಗಳನ್ನು ಹರಿಸುವ ವಿನಾಯಕನನ್ನು ಕುರಿತು ಹಾಡಿ, ತಮ್ಮ ಕುಲದೇವರನ್ನು ನೆನೆಯುತ್ತಾರೆ.

ಎಲ್ಲವನೊ ಶಿವನೆಲ್ಲವನೊ
ಸ್ವಾಮೆಲ್ಲವನೊ – ಗುರುವೆಲ್ಲವನೊ

ಅಲ್ಲವನಿಲ್ಲವನೆಲ್ಲವನೊ
ಸ್ವಾಮೆಲ್ಲವನೊ ಗುರುವೆಲ್ಲವನೊ
ಅನ್ನದಾನಿ ಶೀವನೆಲ್ಲವನೊ
ಒಳ್ಳೆ ಆದಿಚುಂಚನಗಿರಿ ಎಲ್ಲವನೊ
ಕೋಡುಗಲ್ಲಿನ ಒಡೆಯ ಎಲ್ಲವನೊ
ಒಳ್ಳೆ ಗಿರಿಮೇಲೆ ಭೈರುವ ಎಲ್ಲವನೊ

ಕೋಲಾಟದವರಿಗೆ ಮನೆದೇವರೇನು, ಕುಲದೇವರೇನು, ಸುತ್ತೇಳು ದೇವತೆಗಳೂ ಅವರಿಗೆ ಬೇಕು. ಮೂಡಲಗಿರಿಯ ತಿಮ್ಮಪ್ಪನನ್ನು ನಿದ್ದೆಯಿಂದ ಎಚ್ಚರಿಸುವ ಈ ಸೊಗಸನ್ನು ನೋಡಿ –

ಏಳಯ್ಯ ಏಳು ಏಳು ಚೆನ್ನದ ಗಿರಿ
ಏಳಯ್ಯ ಸ್ವಾಮಿ ಬೆಳಗಾದೊ – ತಾ
ನಂದನ್ನಿ ತಾನೊ ತಂದೆನಾನೊ – ತಾ
ತಾನಾನಾನಿ ತಾನೊ ತಂದೆನಾನೊ
ಏಳಯ್ಯ ಸ್ವಾಮಿ ಬೆಳಗಾದೊ ಮೂಡಲಿಂದ
ಸ್ವಾಮಿ ರಥವೇರಿ ಬರುತಾನೆ – ತಾ

ಕೋಲಾಟದವರ ಪದಗಳಲ್ಲಿ ಮಳೆರಾಯನನ್ನು ಕುರಿತ ಹಾಡುಗಳು ಹೇರಳವಾಗಿ ಬರುತ್ತವೆ. ಮಳೆರಾಯನನ್ನು ಕುರಿತ ಅವರ ಕಲ್ಪನೆ ಬಂಧುರವಾದುದು–

ಕುಣಿಯೊ ಕುಣಿಯೊ ಗೆಜ್ಜೆಕುಣಿಯೊ ನಾಗರಗೆಜ್ಜೆ
ಮುಗಿಲಲ್ಲಿ ರಥವೆರಿ – ಮಳೇರಾಯ
ಮುಗಿಲಲ್ಲಿ ರಥವೇರಿ

ಹೀಗೆ ಆರಂಭವಾಗುವ ಮಳೆರಾಯನ ಪದಗಳು ಮಳೆರಾಯನ ವೈಭವ, ನಂಬಿದ ಮಾನವರನ್ನು ಅವನು ಕೈಬಿಡದಿರುವ ಬಗೆ, ಅವನ ಔದಾರ್ಯ, ಅವನ ಹಿರಿಮೆ ಮುಂತಾದುವನ್ನು ಕುರಿತು ವರ್ಣಿಸುತ್ತಾರೆ.

ಅನೇಕ ಪೌರಾಣಿಕ, ಐತಿಹಾಸಿಕ ಹಾಗೂ ಲೌಕಿಕ ಕಥೆಗಳನ್ನೂ ವಿಶೇಷವಾಗಿ ಹಾಡುತ್ತಾರೆ. ಕೃಷ್ಣ – ಕೊರವಂಜಿಯ ಕಥೆ, ಗಂಗೆ – ಗೌರಿಯರ ಜಗಳದ ಕಥೆ ಮುಂತಾದ ಕೆಲವು ದೀರ್ಘ ಕಥಾನಕಗಳನ್ನು ಆರಿಸಿಕೊಂಡಾಗ ಕೋಲಾಟದವರು ವೃತ್ತಾಕಾರವಾಗಿ ಕುಣಿಯುವುದು ಕಡಿಮೆ. ಅದಕ್ಕೆ ಬದಲಾಗಿ ಪರಸ್ಪರ ಅಭಿಮುಖವಾಗಿ ಎರಡು ಸಾಲಾಗಿ ನಿಂತು ತಾಳಕ್ಕೆ ತಕ್ಕಂತೆ ನಾಲ್ಕು ನಾಲ್ಕು ಮಂದಿ ಕೋಲು ಹೊಯ್ಯುತ್ತಾ ಪಲ್ಲವಿಯನ್ನು ಹಾಡುತ್ತಾರೆ. ಅವರ ಮುಂದಾಳು ಮತ್ತೊಬ್ಬನ ನೆರವಿನಿಂದ ಆ ಎರಡು ಸಾಲಿನ ನಡುವೆ ಅತ್ತಿಂದಿತ್ತ ಕೋಲು ಹೊಯ್ದುಕೊಂಡು ಕಥೆಯ ಪ್ರತಿಯೊಂದು ಸನ್ನಿವೇಶವನ್ನೂ ಸಹಜವಾಗಿ ಅಭಿನಯಿಸುತ್ತಾ ಕಥೆಯನ್ನು ಬೆಳೆಸಿಕೊಂಡು ಹೋಗುತ್ತಾನೆ.

ಕೋಲು ಪದಗಳಲ್ಲಿ ಶೃಂಗಾರ ಮತ್ತು ಹಾಸ್ಯಕ್ಕೆ ಪ್ರಮುಖವಾದ ಸ್ಥಾನವಿದೆ. ಒಗಟುಗಳು, ಚಮತ್ಕಾರಯುತವಾದ ಪ್ರಶ್ನೋತ್ತರ ರೂಪವಾದ ಪದ್ಯಗಳನ್ನು ಹಾಸ್ಯದ ಗುಂಪಿಗೆ ಸೇರಿಸಿಕೊಂಡರೆ, ಗೆಣೆಯ ಗೆಣತಿಯರ ಪ್ರಣಯ ಸಲ್ಲಾಪಗಳನ್ನು ಶೃಂಗಾರಕ್ಕೆ ಉದಾಹರಣೆಯಾಗಿ ಕೊಡಬಹುದು.

ಬೆಳದಿಂಗಳ ಬೆಳಕಿಗೆ ಬಿಳಿಯ ಹಚ್ಚಡಹೊದ್ದು
ಕಾಡಿಗೆ ಹೋಗಿ ಬರುವೋನೆ – ಗೆಣೆಯನಿಗೆ
ತಣ್ಣೀರ ಬೆರಸಿ ಸಖಿಯೋಳು

ತಣ್ಣೀರ ಬೆರಸುತ ಮೈಬೆವರ ಒರಸುತ
ಬೆನ್ನು ಮೇಲೆ ಏನು ಹೊಸಗಾಯ –

ಕಾಡಿಗೆ ಹೋಗಿ ಬಂದ ಪತಿಯ ಬೆನ್ನಿನ ಮೇಲೆ ಹೊಸ ಗಾಯವಾಗಿರುವುದನ್ನು ಮಡದಿ ಗುರುತಿಸುತ್ತಾಳೆ. ತಣ್ಣೀರು ಬೆರಸಿ ಮೈಬೆವರನ್ನು ಒರೆಸುವಾಗ ಬೆನ್ನಿನ ಮೇಲೆ ಹೊಸ ಗಾಯ ಏನೆಂದು ಕೇಳುತ್ತಾಳೆ.

ನಿನ್ನೂರಮುಂದೆ ನೆನ್ನೆ ಬೀಡಿಕೆ ಬಿಟ್ಟೆ
ಹಿಡಿಯೊಂಬೊ ತೇಜಿ ಹಿಡಿದಿದ್ದೆ – ಸಖಿಯೊಳೆ
ನಿನ್ನೂರ ಸೀಗೆ ಸೆಣೆದಾವು

ಎಂದು ಪತಿ ಉತ್ತರ ಕೊಡುತ್ತಾನೆ. ಅವಳೂರ ಸೀಗೆಯ ಮೆಳೆ ಅವನ ಬೆನ್ನಮೇಲೆ ಗಾಯ ಮಾಡಿತಂತೆ. ಅದನ್ನು ಕೇಳಿದ ಮಡದಿ ಅಲ್ಲಿಗೇ ಸುಮ್ಮನಾದಳೇ. ಆ ಸೀಗೆಯ ಬಳಿ ಹೋಗಿ ಅದರೊಡನೆ ಚೆನ್ನಾಗಿ ಜಗಳ ಆಡಿದಮೇಲೆ, ಪತಿ ಎಲ್ಲಿ ಹೋಗಿ ಹೇಗೆ ಗಾಯಮಾಡಿಕೊಂಡ ಎಂಬ ರಹಸ್ಯವನ್ನು ಅದು ಬಯಲು ಮಾಡುತ್ತದೆ.

ನಿನ್ನೂರಾಗೊಬ್ಬಳು ಘನಸೂಳೆ ಮನೆಗ್ಹೋಗಿ
ನಿಮ್ಮ ರಾಯರ ತಬಸ ಕಳೆದಾಳೆ – ಎಲೆನಾರಿ
ನನ್ನ ದೂರಲು ತರವೇನೆ

"ಕೋಲಾಟ"ಗಳನ್ನು ಹಾಡುತ್ತಿದ್ದವರು ವಿಶೇಷವಾಗಿ ಪುರುಷರು. ಅವರೆಲ್ಲರೂ ವೀರರೇ ಆಗಿರುತ್ತಿದ್ದರು. ಅಂಥ ವೀರರು ಸಹಜವಾಗಿ ವೀರಗೀತೆಗಳನ್ನೂ ಹೆಚ್ಚಾಗಿಯೇ ಹಾಡುತ್ತಿದ್ದರು. ಇಂದಿಗೂ ಅವು ಕೋಲಾಟದವರಲ್ಲಿ ಉಳಿದುಬಂದಿದೆ. ವೀರರನ್ನೂ, ವೀರರಿಗೆ ಸಹಜವಾದ ಸನ್ನಿವೇಶಗಳನ್ನೂ ಕುರಿತು ಅವರು ಹಾಡುತ್ತಾರೆ. ಕಿತ್ತೂರಿನ ಕಥೆಯನ್ನು ಹಾಡುವ ರೀತಿಯನ್ನು ನೋಡಿ –

ಕೋಲು ಕೋಲು
ರನ್ನದ ಕೋಲು ಕೋಲನ್ನ ಕೋಲೆ
ಬೆಳ್ಳನ್ನೆ ಬೆಳಗಾದೊ ಬೆಳ್ಳಿಯ ಉದಯಾದೊ

ಸೂರಜನ ರಸಿಮಿ ಹರಿದಾವು – ರನ್ನದ ಕೋಲು ಕೋಲನ್ನ ಕೋಲೆ
ಸೂರಜನ ರಸಿಮಿ ಹರಿದಾವು ಕಿತ್ತೂರ
ರಣಕಾಳಿ ಚಿಣಕಾಳಿ ಸೂರ್‍ಹಿಡಿದು

ಹೀಗೆ ಬಹುಮುಖವಾಗಿ ಬೆಳೆದುಕೊಂಡಿರುವ ಈ "ಕೋಲು ಪದ"ಗಳ ನಾನಾ ಬಗೆಗಳನ್ನು ಹಾಡಿ ತೋರಿಸುತ್ತಾರೆ.

ಬಹಳ ಹೊತ್ತಿನವರೆಗೆ ಕೋಲುಹುಯ್ದು ಕೋಲನ್ನು ಬಿಡುವ ಸಂದರ್ಭಕ್ಕೆ ಪ್ರೇಕ್ಷಕರ ಕ್ಷಮಾಪಣೆಯನ್ನು ಕೇಳಲು ಮರೆಯುವುದಿಲ್ಲ –

ಕೋಲ ಬಿಡ್ತೀವಿ ಲಾಲಿಸಿ ಕೇಳಯ್ಯ
ಹಣ್ಣಾಯಿ ಹೆಡಗೆ ಹೆಗಲಲ್ಲಿ – ಹೊತ್ಕೊಂಡು
ಮತ್ತೆ ರಾತ್ರೀಗೆ ಬರ್ತೀವಿ
ಕೋಲು ಬಿಡ್ತೀವೆಂದು ಕೋಪಮಾಡಲು ಬೇಡಿ
ನಿನ್ನಾಣೆ ಕೋಲ ಬಿಡ್ತೀವಿ

ಕೋಲಾಟ ಅಲ್ಲಿಗೂ ಮುಗಿಯಲಿಲ್ಲ. ಮತ್ತೆ ರಾತ್ರಿಯೂ ಬರುವುದಾಗಿ ಹೇಳಿ ಹೋಗುತ್ತಾರೆ. ಆ ಅಪಾರ ಗೀತೆಗಳು, ಆ ಅಪೂರ್ವ ಕೋಲಾಟ ಮುಗಿಯುವುದೆಂದರೇನು!

ಮೈಮನಸ್ಸುಗಳೆರಡಕ್ಕೂ ಬಲವನ್ನು ನೀಡುವ ಈ ಕೋಲಾಟದಲ್ಲಿ ಏಕಕಾಲದಲ್ಲಿ ಹಾಡುತ್ತ ವಿವಿಧ ತಾನಗಳಲ್ಲಿ ಕುಣಿಯುವುದು ಸಾಹಸಿಗಳಿಗೆ ಮಾತ್ರ ಸಾಧ್ಯ. ಇಂಥ ಸಾಹಸಿಗಳು ಹಿಂದೆ ನಮ್ಮ ಹಳ್ಳಿಹಳ್ಳಿಯಲ್ಲೂ ಇದ್ದರು; ಮನೆ ಮನೆಗೂ ಇದ್ದರು. ನಮ್ಮ ಸೈನಿಕರು ದೊಣ್ಣೆವರಸೆ, ಕತ್ತಿವರಸೆಗಳಂತೆ ಈ ಕೋಲಾಟವನ್ನೂ ಆಡುತ್ತಿದ್ದರು. ಉತ್ತಮ ಅಂಗಸಾಧನೆಯೂ, ಮನರಂಜನೆಯೂ ಕೋಲಾಟದಿಂದ ಅವರಿಗೆ ದೊರೆಯುತ್ತಿದ್ದುವು. ದೇಹಬಲ, ಮನಸ್ಸಿನ ಬಲ ಎರಡರಲ್ಲಿಯೂ ಮಿಗಿಲೆನಿಸಿದ್ದ ನಮ್ಮ ವೀರರು ತಮ್ಮ ಊರನ್ನೂ, ದುರ್ಬಲರನ್ನೂ ಸಂದರ್ಭ ವೊದಗಿದರೆ ನಾಡನ್ನೂ ರಕ್ಷಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಿದ್ದರು. ಇದಕ್ಕೆಲ್ಲ ಪ್ರೇರಕಶಕ್ತಿಯಾಗಿದ್ದ ಈ ಕೋಲಾಟದಂಥ ಸಾಮೂಹಿಕ ನೃತ್ಯಗೀತೆಗಳ ಸಂವರ್ಧನೆ ಅತ್ಯಗತ್ಯ. ನಮ್ಮ ಕೋಲಾಟ ಉಳಿದು ಬಾಳಬೇಕಾದುದು ಈ ದೃಷ್ಟಿಯಿಂದ ಅಗತ್ಯವಾಗಿದೆ.

ಜನಪದ ಸಾಹಿತ್ಯದಲ್ಲಿ ಹಾಸ್ಯ

ನಾವು ಜನಪದ ಸಾಹಿತ್ಯದಲ್ಲಿ ಕಾಣುವುದು ಮುಗ್ಧ ಮನಸ್ಸಿನಿಂದ ಹೊರಟ ಹಾಸ್ಯದ ಪರಿಮಳ. ಸಹಜವಾಗಿ ಜೀವನದ ಅನುಭವದಿಂದಲೇ ಚಿಮ್ಮಿಬಂದ ಅಕೃತಕವಾದ ನೈಜಹಾಸ್ಯ. ಜನಪದ ಕವಿಗಳ ದೃಷ್ಟಿಯಲ್ಲಿ ಹಾಸ್ಯರಸ ಪ್ರಚೋದನೆಗೆ 'ವಿದೂಷಕ'ನೇ ಆಗಬೇಕಿಲ್ಲ. ಕಥಾನಾಯಕನೂ, ನಾಯಕಿಯೂ ಅದಕ್ಕೆ ಕಾರಣರಾಗ ಬಹುದು. ಮಾನವ ಜೀವನದಲ್ಲಿ ಹಾಸುಹೊಕ್ಕಾಗಿರುವ 'ಹಾಸ್ಯ'ಕ್ಕೆ ವಿಶಿಷ್ಟವಾದ ಪಾತ್ರವೇ ಆಗಬೇಕಾಗಿಲ್ಲವೆಂದು ಜನಪದ ಕವಿಗಳು ತೋರಿದ್ದಾರೆ. ಅದು ಯಾರಿಂದಲಾದರೂ ಯಾವ ಸನ್ನಿವೇಶದಲ್ಲಾದರೂ ಚಿಮ್ಮಿ ಬರಬಹುದು; ದೇವರು ದಿಂಡರೂ ಅದಕ್ಕೆ ತುತ್ತಾದರೆ ಆಶ್ಚರ್ಯಪಡಬೇಕಿಲ್ಲ.

ನಂಜನಗೂಡಿನ ನಂಜಯ್ಯನ ಕಥೆಯನ್ನು ಕೇಳಿಲ್ಲವೆ? ಬೆಟ್ಟದ ಚಾಮುಂಡಿ ಯೊಡನೆ ರಹಸ್ಯ ಸಂಪರ್ಕವನ್ನು ಇಟ್ಟುಕೊಂಡ ಮೋಜಿನ ಕಥೆ ಅದು. ಚಾಮುಂಡಿಯ ಚೆಲುವಿಗೆ ನಂಜಯ್ಯ ಮಾರುಹೋಗಿದ್ದಾನೆ. ಹೇಗಾದರೂ ಮಡದಿ ದೇವೇರಿಯ ಕಣ್ಣುತಪ್ಪಿಸಿ ಅಲ್ಲಿಗೆ ಹೋಗಬೇಕು. ಹಗಲಿನಲ್ಲಂತೂ ಸಾಧ್ಯವಿಲ್ಲ. ರಾತ್ರಿಯಾದರೂ ದೇವೇರಿಗೆ ಬೇಗ ನಿದ್ದೆ ಹತ್ತುತ್ತದೆಯೆ! ನಂಜಯ್ಯ ಹೇಗಾದರೂ ಅವಳಿಗೆ ಬೇಗ ನಿದ್ದೆ ತರುವಂತೆ ಭಾವಮೈದುನ ಬಸವಯ್ಯನನ್ನೇ ಬೇಡಿಕೊಳ್ಳುತ್ತಾನೆ.

> ಮಲ್ಲನ ಮೂಲೆ ಬಸವಯ್ಯ ಒಂದು ಮಾತುಂಟು ಕೇಳಯ್ಯ
> ನಿಮ್ಮಕ್ಕ ದ್ಯಾವೀರಿಗೆ ನಿದ್ರೆ ಬರಸಿದರೆ । ನಿನಗೆ
> ಬೆಳ್ಳಿ ಮೊಕರಂಬ ಮಾಡಿಸೇನು

ದೇವೀರಿ ಎಷ್ಟು ಹೊತ್ತು ಎಚ್ಚರವಾಗಿದ್ದಾಳು! ಅವಳಿಗೆ ಸುಳಿವು ಕೊಡದಂತೆ, ಬಸವಯ್ಯನಿಗೂ ಅರಿವಿಲ್ಲದಂತೆ ಕದವನ್ನು ತೆರೆದು ಹೆಜ್ಜೆಯನ್ನು ಕೀಳುತ್ತಾನೆ.

> ಎಲ್ಲ ದೇವರಿಗೆ ಹರಕೆ ಮಾಡಿಕೊಂಡು
> ಹೊರಟಾನು ದೂರ ಪಯಣಾವ

ಹೊರಟುದುದಾಯಿತು. ಇನ್ನೇನು ಕತ್ತಲಲ್ಲಿ ಕರಗಬೇಕು, ಜಗಲಿಯಲ್ಲಿ ಯಾರದೊ ದನಿಯನ್ನು ಕೇಳಿ ನಂಜಯ್ಯ ಬೆಚ್ಚಿಬಿದ್ದ. ತುಂಟ ಬಸವ–

> ಪಟ್ಟೆಯ ಸೀರೆಯ ಬಗಲಲ್ಲಿಟ್ಟುಕೊಂಡು
> ಎಲ್ಲಿಗೆ ಮಾವಯ್ಯ ನಿಮ ಪಯಣ?

ಎಂದುಬಿಡುವುದೇ? ನಂಜಯ್ಯ ಒಂದು ಕ್ಷಣ ತತ್ತರಿಸಿದ. ಮತ್ತೆ ಚೇತರಿಸಿಕೊಂಡ; ಧೈರ್ಯವಾಗಿಯೇ ಉತ್ತರಿಸಿದ.

ಎಲ್ಲಿಗೆ ಮಾವಯ್ಯ ನಿನ್ನ ಪಯಣ ಎಂದರೆ
ಮೈಸೂರಲ್ಲೊಂದು ಘನ ನ್ಯಾಯ

ಮೈಸೂರಿನ ಘನ ನ್ಯಾಯವನ್ನು ಹರಿಸಲು ಹೊರಟಿದ್ದಾನೆ. ಆದರೆ ಪಟ್ಟೆಯ ಸೀರೆಯೇಕೊ? ನಡುರಾತ್ರಿಯ ಪಯಣವೇಕೊ? ಬಸವಯ್ಯ ಮತ್ತೆ ಕೇಳಲಿಲ್ಲ. ಮುಸಿಮುಸಿನಕ್ಕು ಕಂಬಳಿಯನ್ನು ಎಳೆದುಕೊಂಡ.

ಇಂಥ ವಿನೋದ ಪ್ರಸಂಗಗಳನ್ನು ಜನಪದ ಕಥೆಗಳಲ್ಲಿ ಹೇರಳವಾಗಿ ಕಾಣಬಹುದು. ಗಂಗೆ ಗೌರಿಯರ ಜಗಳ, ಕೃಷ್ಣ ಕೊರವಂಜಿಯರ ಕಥೆ, ಅರ್ಜುನ ಜೋಗಿಯ ಕಥೆ ಮುಂತಾದ ದೀರ್ಘ ಕಥನಗೀತೆಗಳಲ್ಲಿ, ಗದ್ಯಕಥೆಗಳಲ್ಲಿ ಅದೆಷ್ಟು ಬಗೆಯ ಹಾಸ್ಯಮಯ ಸನ್ನಿವೇಶಗಳು ಬರುತ್ತವೆ: ಗಂಗೆಯ ವಿವಾಹದ ಸ್ವಾರಸ್ಯ ಪ್ರಸಂಗವನ್ನು ವರ್ಣಿಸುವ ಕಥೆಯಂತೂ ಹಾಸ್ಯಪ್ರಧಾನವಾದುದೇ ಆಗಿದೆ.

ಬಿಡಿ ಹಾಡುಗಳಲ್ಲಿಯೂ ಹಾಸ್ಯವನ್ನು ತರುವುದರಲ್ಲಿ ಜನಪದ ಕವಿಗಳು ಹಿಂದೆಬಿದ್ದಿಲ್ಲ. ಅವರ ರಸಿಕತೆ, ವಿನೋದಪ್ರಿಯತೆಗಳನ್ನು ಕಾಣಬೇಕಾದರೆ ನಾವು ಮುಕ್ತಕಗಳಂಥ ಬಿಡಿಹಾಡುಗಳನ್ನೇ ಆಶ್ರಯಿಸಬೇಕು.

ನಾಗಮಂಗಲದಾಚೆ ನಾನೊಂದು ಹೆಣ್ಣ ತಂದೆ
ನಾಕು ಮಾರುದ್ದ ಜಡೆಯೋಳ । ತಂದರೆ
ನಾಚಿಗ್ಗೇಡಾಯ್ತು ಸಭೆಯಲ್ಲಿ

ತನ್ನ ಸುತ್ತಿನ ಯಾವ ಹೆಣ್ಣೂ ಆ ರಸಿಕನಿಗೆ ಹಿಡಿಸಲಿಲ್ಲವೇನೋ! ನಾಗಮಂಗಲದಾಚೆಯಿಂದ ಮೆಚ್ಚಿತಂದ ಆ ಹೆಣ್ಣಿಗೆ ನಾಲ್ಕು ಮಾರುದ್ದ ಜಡೆ! ಈ ವಿಚಿತ್ರಕ್ಕೆ ಸಭೆಯೆಲ್ಲಾ ಗೊಳ್ಳೆಂದು ನಕ್ಕು ಪೆಚ್ಚುಮಾಡುವುದೆ!

ಇನ್ನೊಬ್ಬ ರಸಿಕನ ಹಂಬಲ ನೋಡಿ :

ಪಟ್ಟಣದ ಹೆಣ್ಣಿಗೆ ಹೊಟ್ಟೇಲಿ ಕಳ್ಳಿಲ್ಲ
ಕೊಟ್ಟೇನೆಂದರೆ ಕೈಲಿಲ್ಲ । ಈ ಹೆಣ್ಣ
ಬಿಟ್ಟೇನೆಂದರೆ ಮನವಿಲ್ಲ.

ಎಂಥ ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದಿದ್ದಾನೆ! ಪಟ್ಟಣದ ಹೆಣ್ಣಿನ ಬೆಡಗು ಹಳ್ಳಿಯ ಚೆಲುವನನ್ನು ಆಕರ್ಷಿಬಿಡುವುದೆ! ಹೊಟ್ಟೆಯಲ್ಲಿ ಕರುಳೇ ಇಲ್ಲವೆನ್ನುವಷ್ಟು ಸಣ್ಣದಾದ ನಡು, ಆ ಒನಪು ಆ ಒಯ್ಯಾರ! ಅವಳಿಗೆ ತೆರವನ್ನುಕೊಟ್ಟು ತರಲು ತನಗೆ ಶಕ್ತಿಯಿಲ್ಲ; ಆದರೆ ಬಿಡುವುದಕ್ಕೂ ಮನಸ್ಸಿಲ್ಲ!

ನವರಾತ್ರಿಗೆ ಹೋಗಿ ಬಂದ ಇನ್ನೊಬ್ಬ ತರುಣನಿಗೆ ಮೈಸೂರಿನ ವೈಭವ, ಫೌಜಿನ ವೈಖರಿ ಎಲ್ಲವೂ ಮರೆತೇ ಹೋಯಿತು. ಆದರೆ ಮನಸ್ಸು ಮಾತ್ರ ಮತ್ತೆ ಮತ್ತೆ ಮೈಸೂರಿನ ಕಡೆಗೇ ಹರಿಯುತ್ತಿದೆ! ಗೆಳೆಯರೊಡನೆ ಎಷ್ಟು ಸಂಕಟದಿಂದ ಹೇಳಿಕೊಳ್ಳುತ್ತಾನೆ.

ಹಾಳಾದ ಜೀವವು ಏನೇನ ಬಯಸೀತು
ಈರ್ನಗೆರೆಯಾಚೆ ಮೈಸೂರ ! ಬೀದೀಲಿ
ಈರುಳ್ಳಿ ಮಾರೋ ಹುಡುಗೀಯ !

ಇಂಥ ರಸಿಕರ ಜೊತೆಗೆ ಇನ್ನೂ ಒಂದು ಬಗೆಯ ಜನ ಇರುತ್ತಾರೆ. ಮಡದಿಯೆಂದರೆ, ಮನೆಯೆಂದರೆ ಅವರಿಗೆ ಇನ್ನಿಲ್ಲದ ಬೇಸರ. ಮನೆಗೆ ಬರುವುದು ಎಷ್ಟು ಹೊತ್ತಿಗೋ; ಬಂದರೂ ನಗುವಿಲ್ಲ, ಗೆಲುವಿಲ್ಲ. ಇಂಥ 'ಪತಿಪುರುಷ'ನನ್ನು ಕಟ್ಟಿಕೊಂಡ ಹೆಣ್ಣು ಬೇಸತ್ತು ಹೋಗುತ್ತಾಳೆ. ತಾಯಿಯೊಡನೆ ದೂರು ಹೇಳಿಕೊಳ್ಳಬೇಕಾಗುತ್ತದೆ.

ಒಲ್ಲೆ ನಾನಿವನ ಯವ್ವ ಒಲ್ಲೆ ನಾನಿವನ
ಕಂಬಕ್ಕೆ ಉಣಲಿಕ್ಕಿ ಇಂಬಾಗಿ ಮಲಗಿದ್ದೆ
'ದೊಂಬತಿ' ಮಾಡಿ ನನ್ನ ಕೊಲ್ಲಾಕೆ ಬಂದ
ಚೆಂಬು ತಕ್ಕಂಡು ಹೊಡ್ದೆ ಕಣವ್ವ ಒಲ್ಲೆ ನಾನಿವನ

ಎಷ್ಟು ಹೊತ್ತು ಕಾಯಲಾದೀತು. ಗಂಡನ ಹೆಸರಿನಲ್ಲಿ ಕಂಬಕ್ಕೆ ಊಣ ಬಡಿಸಿದ ಅವಳದೇನು ಪ್ರಮಾದ! 'ದೊಂಬತಿ' ಎಂದು ಕೊಲ್ಲಲು ಬರುವುದೆ! ಅವಳೇನೂ ಜಗ್ಗುವಂತಿರಲಿಲ್ಲ. ಚೆಂಬನ್ನು ತೆಗೆದುಕೊಂಡು ಅಪ್ಪಳಿಸಿಯೇ ಬಿಟ್ಟಳು.

ಇಷ್ಟನ್ನೂ ಸಹಿಸಿಯಾಳು. ಗಂಡನ ಮತ್ತೊಂದು ಗುಣಕ್ಕೆ ಅವಳು ಸಿಡಿದು ಬೀಳಬೇಕಾಯಿತು.

ಹಾಸಿಗೆ ಹಾಸಿದ್ದೆ ದೀಪ ತುಂಬಿದ್ದೆ
ಚಾಪೆ ತಕ್ಕೊಂಡು ಅವ್ವ ಚಾವಡಿಗೆ ಹೋದ
ಬಾಯಿಮಾಡಿಕೊಂಡು ಹೋಗಿ
ಬಾಯಿ ಮೇಲೆ ಹೊಡ್ದೆ ಕಣವ್ವ

ಹೀಗೆ ನೋವಿನಿಂದ, ಸಂಕಟದಿಂದ ಹೇಳಿಕೊಳ್ಳುವ ಅವಳ ಪರಿತಾಪವೆಷ್ಟು! ಇಂಥ ಗಂಡನ ಜೊತೆಯಲ್ಲಿ ಅವಳು ಹೆಣಗಬೇಕಾಗಿದೆ! ಹಾಸಿಗೆ ಹಾಸಿ, ದೀಪ ಆರಿಸಿದೆ; ಚಾಪೆಯನ್ನು ತೆಗೆದುಕೊಂಡು ಚಾವಡಿಗೆ ಹೋಗುವುದೇ? ಅವಳು ಬಾಯಿಮಾಡಿಕೊಂಡು ಹೋಗಿ ಬಾಯಿ ಮೇಲೆ ಹೊಡೆದುದರಲ್ಲಾದರೂ ತಪ್ಪೇನಿದೆ?

ಕೋಲಾಟದ ಪದಗಳಲ್ಲಿ ಇಂಥ ಹಾಸ್ಯ ಪ್ರಸಂಗಗಳು ಹೇರಳವಾಗಿ ಬರುತ್ತವೆ. 'ಮಾತಾಡ್ ಮಾತಾಡ್ ಮಲ್ಲಿಗೆ'ಯ ಪ್ರಶ್ನೋತ್ತರ ರೂಪದ ಹಾಸ್ಯದ ಚಟಾಕಿಯ ಸದ್ದನ್ನು ಕೇಳದವರಾರು?

ಒಬ್ಬಾನ ಹಾಕಿದ್ದೆ ಒಬ್ಬಾನ ನೂಕಿದ್ದೆ
ಒಬ್ಬಾನ ಎಳಕೊಂಡು ಮಲಗಿದ್ದೆ ಮಲ್ಲಿಗೆ
ಮಾತಾಡ್ ಮಾತಾಡು ಮಲ್ಲಿಗೆ –

ಸಭ್ಯರ ಸಭೆಯಲ್ಲಿ ಕೋಲಾಟದ ಪಡ್ಡೆಗಳ ಈ ಚೆಲ್ಲಾಟವೇ! ಹೆಂಗಸರಿದ್ದಾರೆ, ಮಕ್ಕಳಿದ್ದಾರೆ, ಹಿರಿಯರಿದ್ದಾರೆ! ಆದರೂ ಕುತೂಹಲ, ಯಾರನ್ನು ಹಾಕಿದ್ದಳೋ! ಯಾರನ್ನು ನೂಕಿದ್ದಳೋ! ಯಾರನ್ನು ಎಳಕೊಂಡು....?

ಕದವನ್ನೆ ಹಾಕಿದ್ದೆ ಅಗಣಿಯ ನೂಕಿದ್ದೆ?
ಜಾಡಿಯಾ ಎಳಕೊಂಡು ಮಲಗಿದ್ದೆ ಮಲ್ಲಿಗೆ

– ಎಂದು ಹೇಳಿ ಸಭೆಯನ್ನು ನಗೆಯ ಮಡುವಿಗೆ ತಳ್ಳುತ್ತಾರೆ.

ಮದುವೆಯ ಸಂದರ್ಭದಲ್ಲಿ ಹಾಡುವ ಪದಗಳಲ್ಲಿಯೂ ಜನಪದ ಕವಿಗಳು ಹಾಸ್ಯವನ್ನು ಉಪೇಕ್ಷಿಸಿಲ್ಲ. ಹೆಚ್ಚು ಗಂಭೀರವಾದ ಸನ್ನಿವೇಶಗಳನ್ನು ಹೊರತು ಮಿಕ್ಕೆಲ್ಲ ಸಮಯಗಳಲ್ಲೂ ಹಾಸ್ಯಗೀತೆಗಳ ಮಾಲೆ ಮಾಲೆಗಳನ್ನೇ ಕಾಣಬಹುದು. ಗಂಡಿನ ಕಡೆಯವರು ಹೆಣ್ಣಿನ ಕಡೆಯವರನ್ನು ಜರಿಯುವುದು, ಹೆಣ್ಣಿನ ಕಡೆಯವರು ಗಂಡಿನ ಕಡೆಯವರನ್ನು ಹಾಸ್ಯ ಮಾಡುವುದು; ಮದುವೆಗೆ ನೆರೆದ ಬಂಧು ಬಳಗಕ್ಕೆ ದೊಡ್ಡ ವಿನೋದವಾಗಿರುತ್ತದೆ.

ಹೆಣ್ಣಿನ ಮನೆಗೆ ಗಂಡನ್ನು ಕರೆತರುವ ಮಂದಿ, ಬೀಗರ ಮನೆಯನ್ನು ಬೀಗ ಬೀಗತಿಯರನ್ನು ಆಡಿಕೊಳ್ಳುವ ಬಗೆ ಸ್ವಾರಸ್ಯವಾಗಿರುತ್ತದೆ. ಅವರ ಬೀಗಿತಿಗೆ ಸಾಮಾನ್ಯ ನಡವಳಿಕೆಗಳೂ ತಿಳಿಯವಂತೆ; ಬಂದ ಅತಿಥಿಗಳನ್ನು ಸತ್ಕರಿಸುವ ಬಗೆಯನ್ನು ಅವಳು ಅರಿಯಳಂತೆ!

ಗೋಡೆಯ ಒರಗಿಕೊಂಡು ಬೋಡಲ್ಲ ಬಿಟ್ಟುಕೊಂಡು
ನೋಡಿರಿ ಈ ಮನೆಯ ಗರತೀಯ । ಲಕ್ಷಣವ
ಬಂದೀರೆಂಬೊಂದು ಸೊಲ್ಲಿಲ್ಲ !

ಬಂದ ನೆಂಟರನ್ನು 'ಬಂದಿರಾ?' ಎಂದು ಕರೆಯುವಷ್ಟಾದರೂ ಅವಳಿಗೆ ನಡೆನುಡಿ ತಿಳಿಯದು. ಇಂಥ ಬೀಗಿತಿ ಮದುವೆಗಾಗಿ ಮಾಡಿದ ತಿಂಡಿ ತಿನಸನ್ನೆಲ್ಲಾ ಬಚ್ಚಿಟ್ಟುಕೊಳ್ಳುವುದರಲ್ಲೇನು ಆಶ್ಚರ್ಯವಿದೆ!

ಅಟ್ಟ ಕಜ್ಜಾಯವ ಅಟ್ಟಕೆ ತುಂಬಿಕೊಂಡು
ಅಟ್ಟಕೆದುರಾಗಿ ಮನಗವಳೆ । ಬೀಗುತಿ
ಅಟ್ಟು ಹೋಗವನೆ ಇಲಿರಾಯ

ಅಟ್ಟದಲ್ಲಿ ಕಜ್ಜಾಯವನ್ನು ಮುಚ್ಚಿಟ್ಟುಕೊಂಡಿರುವುದು ಅಂತಿರಲಿ, ಹತ್ತಿ ಹೋಗಿ ಯಾರಾದರೂ ಕಂಡಾರೆಂಬ ಭಯದಿಂದಲೇ ಏನೋ ಅಟ್ಟಕ್ಕೆ ಎದುರಾಗಿಯೇ ಮಲಗಿರುವಳಂತೆ. ಅದರ ಮೇಲೆಯೇ ಮನೆಮಾಡಿಕೊಂಡಿರುವ ಇಲಿರಾಯ ಅದನ್ನೆಲ್ಲಾ ಮುಗಿಸಿಯೇ ಹೋಗಿದ್ದಾನೆ!

ಇವರ ಅಣಕವನ್ನು ಕೇಳಿ ಹೆಣ್ಣಿನ ಕಡೆಯ ಚದುರೆಯರು ಸಮ್ಮನಿರುವರೇ! ಅವರು ನೇರವಾಗಿ ಗಂಡಿನ ಮೇಲೆಯೇ ತಮ್ಮ ಹಾಸ್ಯದ ಬಿರುಮಳೆಯನ್ನು ಕರೆದು ಬಗೆಬಗೆಯಲ್ಲಿ ಆಡಿಕೊಳ್ಳುತ್ತಾರೆ.

ಆನೆ ಮೇಲ್ಬರುವರು ಜಾಣರೆನ್ನುತ್ತಿದ್ದೆ
ಜಾಣರಲ್ಲ ಕಣೆ ಜವಗಾಲ್ನೋರು – ಅಳೀಮಯ್ಯ
ಇವರೆಲ್ಲಿ ದೊರೆತರೆ ಅಕ್ಕಯ್ಯಗೆ !

ಇಂಥ ಅಳಿಯನನ್ನು ತಮ್ಮ ಅಕ್ಕನಿಗೆ ಹುಡುಕಿ ತರುವುದೆ! ಈತನ ಜಾಣತನವಾದರೂ ಎಷ್ಟು –

ಪಂಚಾಂಗವೇಳೆಂದರೆ – ನಿಮ್ಮಳಿಯ
ಪಂಚಪಾತ್ರೆ ತಂದಿಟ್ಟರು – ಪಂಚಾಂಗ
ಎಂಬೋದ ಗುರುತರಿಯದಳಿಯಾಗೆ
ಕೊಟ್ಟಲ್ಲೆ ನಿನ್ನ ಮಗಳ – ಇಂಥವರಿಗೆ
ಕೊಡಬಹುದೆ! ನಿನಮಗಳ?

– 'ಪಂಚಾಂಗ' ಎಂಬ ಹೆಸರನ್ನೇ ಕೇಳರಿಯದ ಅಳಿಯ. ಅವನು ಪಂಚಾಂಗ ಹೇಳು ಎಂದರೆ 'ಪಂಚಪಾತ್ರೆ'ಯನ್ನು ತಂದಿಟ್ಟ, ಅವನೆಂಥ ಜಾಣ! ಇಂಥವನಿಗೆ ಮಗಳನ್ನು ಕೊಡಬಹುದೆ!

ಮದುವೆಯ ಪದಗಳಲ್ಲಿ ತೊಟ್ಟಿಲು ತೂಗುವ ಶಾಸ್ತ್ರದ ಸಂದರ್ಭವೇ ಎಲ್ಲರನ್ನೂ ನಗಿಸುವಂತಿರುತ್ತದೆ. ಅರೆಯುವ ಗುಂಡೊಂದನ್ನು ಮಗುವೆಂದು ಭಾವಿಸಿ ಅದಕ್ಕೆ ಹಾಲುಣಿಸುವ, ತೂಗಿ ಮಲಗಿಸುವ ಪದಗಳನ್ನು ಗರತಿಯರು ಹಾಡಿ ಹಾಸ್ಯದ ಹೊಳೆ ಹರಿಸುತ್ತಾರೆ.

ಅತ್ತು ಕಾಡುವುದಲ್ಲ; ಮತ್ತೆ ಬೇಡುವುದಲ್ಲ
ಎತ್ತಿಕೊಳ್ಳುವ ಛಲವಿಲ್ಲ – ನಿನ್ನಂಥ
ಹತ್ತು ಮಕ್ಕಳು ಇರಬಹುದೊ ಬಾಲ ಜೋ ಜೋ

ಅಂಥ ಅಳದ ಕಾಡದ ಮಕ್ಕಳು ಹತ್ತಾದರೂ ಇರಬಹುದಂತೆ! ಆ ಮುದ್ದು ಕಂದನಿಗೆ ಮತ್ತೆ ಹೇಳುತ್ತಾರೆ.

ನಿಮ್ಮಪ್ಪ ನೋಡಿದರೆ ಗುಂಡಕಲ್ಲು ರಾಮ
ನಿಮ್ಮವ್ವ ನೋಡಿದರೆ ಗಜನಿಂಬೆಹಣ್ಣು
ನೀನಾರಿಗ್ಹುಟ್ಟಿದೆಯೊ ಮೆಣಸರಿಯೊ ಗುಂಡೆ?

ಎಂದಾಗ ಲಗ್ನದ ಸಂದರ್ಭದಲ್ಲಿ ಲಜ್ಜೆಯ ಭಾರದಲ್ಲಿ ಕುಸಿದ ಹೆಣ್ಣೂ, ಆ ಹಾಸ್ಯದ ಮಿಂಚಿಗೆ 'ಕಿಸಕ್ಕನೆ' ನಕ್ಕು ಬಿಡುತ್ತಾಳೆ!

ಹೀಗೆ ಮಂಗಳ ಕಾರ್ಯದಲ್ಲಿ ಮಂಗಳಾಂಗಿಯರ ಈ ಹಾಸ್ಯದ ಗೀತೆಗಳು ಆ ಕಾರ್ಯಕ್ಕೆ ಕಳೆಕೊಡುತ್ತವೆ. ಅವರ ಉತ್ಸಾಹ, ಗೆಲವು, ಸಂಭ್ರಮಗಳನ್ನು ಹೆಚ್ಚಿಸುತ್ತವೆ. ಪರಸ್ಪರ ಹಾಸ್ಯ ವಿನೋದಗಳಿಂದ ಬೀಗ – ಬೀಗರ ವಧೂವರರ ನಡುವೆ ಸಲಿಗೆ ಬೆಳೆಯುತ್ತದೆ; ಆತ್ಮೀಯತೆ ಹೆಚ್ಚುತ್ತದೆ; ಬಾಂಧವ್ಯ ಬಿಗಿಯಾಗುತ್ತದೆ.

ಸಮಯೋಚಿತವಾಗಿ, ಸಂದರ್ಭಕ್ಕನುಗುಣವಾಗಿ ಹಾಸ್ಯವನ್ನು ತಮ್ಮ ಸಾಹಿತ್ಯದಲ್ಲಿ ಅಳವಡಿಸಿಕೊಂಡಿರುವ ಜನಪದ ಕವಿಗಳ ಅಪೂರ್ವ ಪ್ರತಿಭೆಯ ಸಹಜ ಶಕ್ತಿಯನ್ನು ಕಾಣಬೇಕಾದರೆ ಅವರು ರಚಿಸಿರುವ 'ಗಾದೆ'ಗಳನ್ನು ನೋಡಬೇಕು. ಸಾಮಾನ್ಯವಾಗಿ ಹಾಸ್ಯದ ಹೊರಮೈಯಲ್ಲಿ ಪ್ರತಿ ಗಾದೆಯೂ ವಿಶಿಷ್ಟ ಅರ್ಥದಿಂದ ಕೂಡಿದ್ದು, ಜನರ ನಡೆ, ನುಡಿ, ರೀತಿ ನೀತಿಗಳನ್ನು ತಿದ್ದಿ ನಡೆಸುವ ಮಂತ್ರಶಕ್ತಿಯನ್ನು ಪಡೆದಿವೆ.

ಬಾಳೆ ಕಡಿಯೋಕೆ ನನ್ನ ಗಂಡ ಗೂಳಿಯಂಗೆ!

ಕೈಲಾಗದವನು ಕೊಚ್ಚಿಕೊಳ್ಳುವುದೇ ಹೆಚ್ಚು. ಮಾಡುವುದು ಅಲ್ಪವಾದರೂ ಹೇಳಿಕೊಳ್ಳುವುದು ಅಪಾರ. ಸುಲಭವಾದ ಕೆಲಸಗಳನ್ನು ತೋರಿ ಜಾರಿಕೊಳ್ಳುವುದೇ ಹೆಚ್ಚು ಅವನ ಗುಣ. ಬಾಳೆಯನ್ನು ಕಡಿಯುವುದರಲ್ಲಿ ಗೂಳಿಯಂಥ ಸಾಹಸಿ ಇವನು!

ಆಗೋಗಂಟ ಇದ್ದೋರು ಆರೋಗಂಟ ಇರ್ಲಿಲ್ಲ

ನಿಜ. ಅಡಿಗೆ ಆಗುವವರೆಗೆ ಇದ್ದ ತಾಳ್ಮೆ ಅನಂತರ ಅಳಿಸಿಹೋಗುತ್ತದೆ. ಆದರೆ ಅದಿನ್ನೂ ಆರಬೇಕೆಂಬ ಪರಿವೆಯೇ ಇಲ್ಲದೆ, ಬಾಯಲ್ಲಿಟ್ಟುಕೊಂಡು ಪೇಚಾಡುವ ಎಷ್ಟು ಮಂದಿಯಿಲ್ಲ. ಆತುರಗಾರರ ಸ್ವಭಾವವನ್ನು ಎಷ್ಟು ಸೊಗಸಾಗಿ ಈ ಗಾದೆ ಚಿತ್ರಿಸುತ್ತದೆ.

ಸಾಯ್ತಿನಿ ಅಂತ ಸಾವಿರ ಕೋಳಿ ತಿಂದ!

ದುರಾಶೆಯ ತುತ್ತತುದಿಯನ್ನು ಚಿತ್ರಿಸುವ ಈ ಗಾದೆಯಲ್ಲಿ ಎದ್ದು ತೋರುವ ಹಾಸ್ಯ, ಅಡಕವಾಗಿರುವ ಅರ್ಥ, ಆಕರ್ಷಕವಾದುವು.

ಜನಪದ ಗಾದೆಗಳಂತೆಯೇ ಒಗಟೆಗಳೂ ಹಾಸ್ಯದ ಗಾಲಿಯ ಮೇಲೆಯೇ ಚಲಿಸುತ್ತವೆ.

'ಕಂಬದ ಮ್ಯಾಲೆ ಲಿಂಗಪ್ಪ ಕುಂತವನೆ!' ಯಾವ ಲಿಂಗಪ್ಪ ಇವನು? ಎಲ್ಲ ಸ್ಥಳವನ್ನು ಬಿಟ್ಟು ಕಂಬದ ಮೇಲಾದರೂ ಏಕೆ ಹೋದ? 'ಲಿಂಗಪ್ಪ' ಈಶ್ವರ ಲಿಂಗವೇ? ಬಣ್ಣ ಕಪ್ಪು! ಕಂಬದ ಮೇಲೆ.... ಇದೇನು ಆಭಾಸ? ಆಭಾಸವೇಕೆ? ಅರ್ಥಪೂರ್ಣ; "ಲವಂಗ"!

'ಒಂದೇ ಗೂಟಕ್ಕೆ ಒಂಭತ್ತು ಎತ್ತು!' ಹೇಗೆ ಸಾಧ್ಯ! ಒಂಭತ್ತು ಎತ್ತು ಕಟ್ಟಿದರೆ ಆ ಗೂಟದ ಗತಿಯೇನು! ಅವಾದರೂ ಪರಸ್ಪರ ತಿವಿದಾಡುವುದಿಲ್ಲವೇ? ಬಿಳಿಯ ಎತ್ತುಗಳನ್ನು ಒಂದೇ ಗೂಟಕ್ಕೆ ಕಟ್ಟಿದರೆ ನೋಡುವುದಕ್ಕೇನೋ ಚೆಂದ! ಏನಿರಬಹುದು?

"ಬೆಳ್ಳುಳ್ಳಿ!"

"ಅಂಗಿ ಕಳಿ ಒಳ್ಯಾಕ ನಡಿ."

ಇದು ಇನ್ನೂ ಸೋಜಿಗ! ಬಿಸಿಲಲ್ಲಿ ಬಳಲಿ ಬಂದಿರಬಹುದು! ಇಲ್ಲಿ, ಅಂಗಿಯನ್ನು ಕಳೆದು ಒಳಗೆ ನಡೆಯಬೇಕಂತೆ!

"ಬಾಳೆಹಣ್ಣು!"

ಹೌದು; ಸಿಪ್ಪೆಯನ್ನು ಸುಲಿದ ಮೇಲೆ ತಾನೆ ಅದು ಒಳಕ್ಕೆ ನಡೆಯುವುದು!

ಹೀಗೆ ಜನಪದ ಸಾಹಿತ್ಯದಲ್ಲಿ ಹಾಸ್ಯ ಬಹುಮುಖವಾಗಿ ಹಬ್ಬಿದೆ. ಸಹಜವೂ ಸುಂದರವೂ, ಅಪೂರ್ವವೂ ಆದ ಹಾಸ್ಯ ದೊರೆಯಬೇಕಾದರೆ ನಾವು ಜನಪದ ಸಾಹಿತ್ಯವನ್ನೇ ಮರೆಹೊಗಬೇಕು.*

---

* ಶ್ರೀಗಳಾದ ಕರಾಕೃ, ಎನ್ .ಆರ್. ರಂಗಯ್ಯ, ಈಶ್ವರಚಂದ್ರ ಚಿಂತಾಮಣಿ ಹಾಗೂ ಸ್ವಂತ ಸಂಗ್ರಹದಿಂದ ಪದ್ಯಗಳನ್ನು ಬಳಸಿಕೊಳ್ಳಲಾಗಿದೆ.

ಸಮೀಕ್ಷೆ ೨

Knowledge of a nation's folklore is the knowledge of the creative working of the mind of its folk. It is a key to open the gate of the nation's value, a high way that leads to the heart of its people.

- Chittaranjan Chatterjee
"Folklore Research in India"

ತೌರೂರ ಯುಗಾದಿ

ಹಳ್ಳಿಯ ಗರತಿ ಕುರಿತು ಹಾಡದ ಹಬ್ಬವಿಲ್ಲ. ವರ್ಷವರ್ಷವೂ ಹರ್ಷದ ಹೊನಲನ್ನು ಹರಿಸುತ್ತ ಸಾಗಿ ಬರುವ ಹಬ್ಬಗಳು ಮಧುರ ಅನುಭವಗಳ ರಸ ಸೇತುವನ್ನು ನಿರ್ಮಿಸುತ್ತವೆ. ತೌರ ಸುಖದ ಸವಿನೆನಪು ಅಂತರಂಗದಲ್ಲಿ ಮಲ್ಲಿಗೆಯ ಮುಗುಳನ್ನು ಚೆಲ್ಲಿದಾಗ, ನಿಟ್ಟುಸಿರೊಂದು ಹೊರಚಿಮ್ಮುತ್ತದೆ –

ಏಕಾಶಿ ಹಬ್ಬ ಲೋಕಕ್ಕೆ ದೊಡ್ಡದು
ಏಕೆ ತಮ್ಮಯ್ಯ ಬರಲಿಲ್ಲ!

ಲೋಕಕ್ಕೆ ದೊಡ್ಡ ಹಬ್ಬ ಏಕಾದಶಿ, ತೌರಿಗೆ ಕರೆದೊಯ್ಯಲು ಸೋದರನಿನ್ನೂ ಬರಲಿಲ್ಲವೆಂಬ ಹಂಬಲ! ಉಳಿದ ಹಬ್ಬಗಳ ಬಗೆಗೂ ಆಕೆಗೆ ತೌರ ಕನಸೇ ನೇಯುತ್ತದೆ.

ಗಂಗೇಗೌರಿ ಹಬ್ಬ ಮುಂದೆ ದೀವಳಿಗೆ ಹಬ್ಬ
ಎಂದಿಗೆ ಬಂದಿತೊ ಶಿವರಾತ್ರಿ

ಒಂದೊಂದು ಹಬ್ಬವೂ ತನ್ನ ತೌರನ್ನು ಕಾಣುವ, ತನ್ನವರನ್ನು ಕಂಡು ನಲಿಯುವ ಸವಿದಿನಗಳನ್ನು ತರಬಲ್ಲವು. ಶಿವರಾತ್ರಿಯಂದು ತೌರೂರ ಮನೆಯಲ್ಲಿ ತಾಯಿಯೊಡನೆ, ಸೋದರಿಯರೊಡನೆ, ತನ್ನೆಲ್ಲ ಮಂದಿಯೊಡನೆ ಅವಳೆಷ್ಟು ಬೆರೆತು ಹಿಗ್ಗಿದ್ದಳು, ತಾನೆಷ್ಟು ಅಭಿಮಾನದಿಂದ ತಲೆದೂಗಿದ್ದಳು.

ಶಿವರಾತ್ರಿ ಹಬ್ಬ ಸಿರಿಕಾಣೆ ನಮ್ಮನೆಯಲ್ಲಿ
ಶಿವಶಿವನೆಂಬೊ ಗಿಣಿ ಬಂದು–ಕೂದsವಲ್ಲೆ
ಶಿವನ ಕೆಂಜೆಡೆಗೆ ಮರುಗsವ

ಶಿವರಾತ್ರಿ ಜಾರಿ ತಿಂಗಳಾಗಿಲ್ಲ. ಆ ನೆನಪಿನ್ನೂ ಹಸಿರಾಗಿಯೇ ನಿಂತಿದೆ. ಹಿಂದೆಯೇ ಬರುವ ಯುಗಾದಿಗೆ ಇನ್ನೆಲ್ಲಿಯ ಕರೆ! ತನ್ನ ಪತಿಯೂರಿನಲ್ಲೇ ತನ್ನ ಮನೆಯಲ್ಲೇ ಕುಳಿತ ಅವಳ ಜೀವ ಅಲ್ಲಿ ಉಳಿದಿದೆ. ಎಳೆತನದಿಂದ ಕಂಡುಂಡ ತೌರ ಯುಗಾದಿ ತೆರೆತೆರೆಯಾಗಿ ಸ್ಮೃತಿಯಲ್ಲಿ ಹರಿದು ಸಾಗುವಾಗ ಕಲ್ಲಿಗೆ ಕೈಹಚ್ಚಿ ನಾಳಿನ ಹಬ್ಬದ ಬೆಡಗಿನ ಲೋಕಕ್ಕೇರಿ ಹಾಡಿದ್ದಾಳೆ......

ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಜುಣಾವ
ಮೆಲ್ಲ ಮೆಲ್ಲನೆ ಉದುರಮ್ಮ–ನಮ್ಮನೆಯ
ಬೆಲ್ಲದಾರತಿಯ ಬೆಳಗೇನು

ಬೆಲ್ಲದಾರತಿಯ ಜೊತೆ ಜೊತೆಯಲ್ಲೇ ಬೇವು ಬೆಲ್ಲದ ಹಬ್ಬ ಕೌಮುದಿಯಾಗಿ ಕವಿದಿದೆ, ತಂಗಾಳಿಯಾಗಿ ತೀಡಿದೆ, ದೇವಗಣಿಗಲೆಯ ಕಂಪಾಗಿ ಹರಿದಿದೆ.

ಕಣಗೆಲಸ ಮುಗಿದ ಹೊಸ್ತಿಲಲ್ಲೇ ಯುಗಾದಿಯ ಸಡಗರ! ಮೇದರ ಗುಡ್ಡದ ಕಿಬ್ಬಿಯಲ್ಲಿ ಕೆಂಪು ಹೂವನ್ನು ಹೊತ್ತು ನಲಿದ ಮುತ್ತುಗ ಆಗಲೇ ನಲುಗುವ ತಳಿರೆಲೆಗಳ ಮುಸುಕನ್ನು ಹಾಕಿದೆ. ಹಬ್ಬದೂಟಕೆ ಎಳೆಯ ಮುತ್ತುಗದ ಎಲೆಯೇ ಯುಗಾದಿಯ ಹೊಸ ಬಗೆಯ ಕುರುಹು. ಕಣದ ನೆರೆಯ ಮಾವು ಚಿಗುರೊಡೆದು, ಹೂಚೆಲ್ಲಿ ಸೊನೆಯಾಡಿದೆ. ಊರ ಮುಂದಿನ ಸಾಲು ಹಿಪ್ಪೆಯ ಮರದ ಕಂಪು ಕವಿಯುವಾಗಲೇ ದೇವರ ಬೇವಿನ ಮರ ಚಿಗುರಿ ಹಸೆಯಲ್ಲಿಯೇ ಹೂವಿನ ಮುತ್ತನ್ನು ನೇದು ಕರೆದಿದೆ.

ಅಪ್ಪನ ಪೂಜಾರಿ ಚಿಕ್ಕೋನು ಕಂದಯ್ಯ
ಇಪ್ಪತ್ತಾಳುದ್ದ ತಳಕೀನ – ತೋಟಕೆ ಹೋಗಿ
ಸಣ್ಣ ಮಲ್ಲಿಗೆಯ ಬಿಡಿಸ್ಯಾನೆ
ಸಣ್ಣ ಮಲ್ಲಿಗೆಯ ಬಿಡಿಸಿ ಮಾಲೆಯ ಕಟ್ಟಿ
ಸ್ವಾಮಿ ಸಿಂಗಾರಕೆ ಕಳಿಸ್ಯಾನೆ

ಊರ ಹಳ್ಳದಲ್ಲಿ ನೀರು ತಿಳಿಯಾಗಿದೆ, ವೀರವೈಷ್ಣವೆಯ ಮಡುಗಳೆಲ್ಲ ಕುಗ್ಗಿ ಕುಗ್ಗಿ ತಿಳಿಮುಗಿಲನ್ನು ಹೊತ್ತು ಕನ್ನಡಿಯಾಗಿವೆ. ತೊರೆಯಂಚಿನ ತೋಟದ ಮಲ್ಲಿಗೆಯೆಲ್ಲ ಹನುಮಯ್ಯನ ಸಿಂಗಾರಕ್ಕೆ ಬಂದಿವೆ. ಹಳ್ಳದ ಬಳಿಯ ಕಣಿಗಲೆಯೆಲ್ಲ ಬುಟ್ಟಿಯನ್ನು ತುಂಬಿವೆ.

ಹನುಮನ ಪೂಜೆಗೆ ಏನೇನು ಐಭೋಗ
ಜೇನುತುಪ್ಪದ ಅಭಿಷೇಕ – ಹನುಮಯ್ಗೆ
ಹಾಲು ಅನ್ನದ ನೈವೇದ್ಯ

ಎಳನೀರ ಗೊನೆಗಳನ್ನು ತೂಗಿ ತೆಂಗು ಹಬ್ಬದ ಹರ್ಷಕ್ಕೆ ಹಿಮ್ಮೇಳದ ಸೊಲ್ಲನ್ನು ಕೊಟ್ಟಿದೆ. ಗರಿಯ ಮರ್ಮರ ನಾದದಲ್ಲಿ ತುಂಬಿದ ಮನೆಯ ಆನಂದ ಮೇರೆವರಿದಿದೆ. ಮನೆಯನ್ನು ಸಾರಿಸಿ ರಂಗವಲ್ಲಿ ಇಟ್ಟು ಅಪ್ಪನ ಎಣ್ಣೆ ಮಜ್ಜನಕ್ಕೆ ನೀರನ್ನು ಅವ್ವ ಹದಗೊಳಿಸುವಲ್ಲಿ ಹುಡುಗರಾಗಲೇ ಹೊಸ ಅಂಗಿಯನ್ನು ತೊಟ್ಟು ಬೀದಿಯ ಧೂಳನ್ನು ಮೆಟ್ಟಿದ್ದಾರೆ. ಮನೆಯ ಬಾಗಿಲ ತೋರಣದ ಮಾವಿನ ಎಲೆಗಳ ಮಾಲೆಯ ಎರಡು ಕೈಯಲ್ಲೂ ಬೇವಿನ ಹಸಿರ ಕೋಲು ತೂಗಿದೆ. ಊರ ಗುಡಿಗಳಲ್ಲೆಲ್ಲ ಪೂಜೆಯ ಸಂಭ್ರಮ ಸಾಗುವಲ್ಲಿ ಒಬ್ಬೊಬ್ಬರಾಗಿ ಮಂದಿ ಬಂದಿದ್ದಾರೆ, ಹಿರಿಯರು, ಕಿರಿಯರು –

ಹನುಮಯ್ನ ನೋಡೇನು ತಾವ ಬಿಡೊ ತಮ್ಮಯ್ಯ
ದೀವಿಗೆಗೆ ತುಪ್ಪ ಎರೆದೇನು ! ಜೀರಹಳ್ಳಿ
ಸ್ವಾಮಿಗೆ ಕೈಯ ಮುಗಿದೇನು

ಸ್ವಾಮಿಯ ಗುಡಿಯ ಗಂಟೆಯ ಮೊಳಗು ಮನೆಮನೆಯ ಬಾಗಿಲಿಗೂ ತೇಲಿದಾಗ ಮೈ ಪುಳಕಗೊಳ್ಳುತ್ತದೆ. ಆ ದಿವ್ಯಮೂರ್ತಿಯ ಪದತಲದಲ್ಲಿ ಮನ

ಮಣಿಯುತ್ತದೆ. ಮನೆ ಸ್ವಾಮಿಯನ್ನು ನೆನೆಯುತ್ತ ನೆನೆಯುತ್ತಲೇ ಭಕ್ತಿಪರವಶತೆ ಹರಿದಾಡಿ ಗರಗರ ನಾದದೊಡನೆ ರಾಗಿಯ ಕಲ್ಲಿನ ಕೈಸಾಗಿದೆ.

ಚಿಕ್ಕ ಚಿಕ್ಕ ಜೀರಹಳ್ಳಿ ಚಿನ್ನದ್ಹೆಬ್ಬಾಗಿಲು
ಆತ ಹನುಮಯ್ನ ದೊರೆತನ,
ಗಂಡುಮಕ್ಕಳ ಬೇಡಿ ಬಿಂದಿಗ್ಹೊನ್ನ ಬೇಡಿ
ಚಿನ್ನದ ಕುವಾಲಿ ಹನುಮಯ್ನ ಬೇಡಿದರೆ
ಬೇಡಿದ ವರವ ಕೊಡುತಾನೆ.....

ಬೇವು ಬೆಲ್ಲದ ಜೀವನದ ಕಷ್ಟ – ಸುಖಗಳ ಜೊತೆಗೆ ಯುಗಾದಿಯ ಪುಣ್ಯದಿನದಂದು ಊರ ದೊರೆ ಹನುಮಯ್ಯ ಎಲ್ಲ ಸಿರಿಸಂಪತ್ತನ್ನು ಕರುಣಿಸಬಲ್ಲ. ಸೊಪ್ಪಿನ ಮಡಿಗಳಲ್ಲಿ ಕೀರೆಯನ್ನು ಬಿತ್ತುವ ಪವಿತ್ರ ಯುಗಾದಿ, ಬಯಲ ಬಿತ್ತರವೆಲ್ಲ ಬಿಸಿಲಿಗೆ ಮೈಯೊಡ್ಡಿ ಮಲಗಿದಾಗ ಮಳೆಯ ದಿನಗಳನ್ನು ಕರೆಯುವ ಯುಗಾದಿ, ಸಂಜೆಗೆ ಗಾಡಿಯನ್ನು ಕಟ್ಟಿಸಿಕೊಂಡು ಬೆಳ್ಳೂರ ಜೋಯಿಸರು ಬರುತ್ತಾರೆ. ಯುಗಾದಿಯ ಫಲಗಳನ್ನೆಲ್ಲಾ ಹೇಳುತ್ತಾರೆ. ದೊಡ್ಡಮನೆಯ ಜಗಲಿಯಲ್ಲಿ ಉರಿವ ದೀಪದ ಮಂದ ಬೆಳಕಿನಲ್ಲಿ ಪಂಚಾಂಗವನ್ನು ಹರಡಿ ಹೆಸರ ಬಲವನ್ನು, ಮಳೆಬೆಳೆಗಳನ್ನು ಕುತೂಹಲದ ಕಿವಿಗಳು ತಣಿಯುವಂತೆ ಹೇಳುತ್ತಾರೆ. ಯುಗಾದಿಯ ಉಡುಗೊರೆಗಳನ್ನು ನೀಡುವಾಗ 'ಗುರುಬಲ'–ಶನಿಬಲ'ಗಳನ್ನು ತಿಳಿದ ಮಂದಿಗೆಷ್ಟು ಹೆಮ್ಮೆ, ಅದೆಷ್ಟು ಆಮೋದ.

ಸಂಜೆಯ ಸವಿಯೇನು, ಯುಗಾದಿಯ ನಡುಹಗಲೂ, ಉರಿಬಿಸಿಲೂ ಊರಿನ ಪಡ್ಡೆಗಳಿಗೆ ಹಾಲ ಬೆಳುದಿಂಗಳು. ಕೆಸವೆಯ ದಂಟಿನ ಪಲ್ಲೆಯವನ್ನು ಸವಿಯುವುದಂತಿರಲಿ, ಹೋಳಿಗೆಯ ಹೊರೆಯನ್ನು ಅರಗಿಸುವಂತೆ ಆಡುವ ಲಗ್ಗೆಯ ಚೆಂಡು ಬಾಳಸಂಜೆಯ ಅಜ್ಜಗಳಿಗೂ ಹೊಸಹುರುಪು! ಅರಳಿಯ ಮರದ ಬುಡಕ್ಕೆ ಲಗ್ಗೆಯನ್ನು ಒಡ್ಡಿ, ಚೆಂಡನ್ನು ಬೀಸಿ ಎಸೆಯುವಾಗ ಮೈ ಹಣ್ಣಾದರೇನು? ಇಂದು ಯುಗಾದಿ, ಯುಗಾದಿಯ ಚೆಂಡಾಟದಲ್ಲಿಯೇ ನಾಗಲಾಪುರದ ಗೌಡರೊಬ್ಬರು ಪಕ್ಕೆಗೆ ಏಟು ತಿಂದು ಮಡಿದ ಸುದ್ದಿ ಯಾರ ಮನಸ್ಸಿನಿಂದ ಮಾಸಿದೆ. ಹರೆಯದ ಕಲಿಗಳು ಚೆಂಡಾಡಿ ಸೋಲುತ್ತಾರೆ. ಗುಡಿಯಲ್ಲಿ ಅಯ್ಯನವರು ಹೆಸರುಬೇಳೆ, ನೀರುಮಜ್ಜಿಗೆಗಳನ್ನು ಇವರಿಗಾಗಿ ಅಣಿಗೊಳಿಸುವಾಗ –

ಹಾಲು ಅನ್ನವು ಚೆಂದ
ಮೇಲು ಮಾಳಿಗೆ ಚೆಂದ
ಹೋಳಿಗೆ ತುಪ್ಪ ಬಲು ಚೆಂದ

ಎನ್ನುವುದೆಲ್ಲ ಮರೆತು ಕರಗಿ ಅದೆಷ್ಟು ದೊನ್ನೆಗಳ ಮಜ್ಜಿಗೆಯನ್ನು ಹೀರಬಲ್ಲರು ಅವರು! ಹಿಪ್ಪೆಯ ಮರದ ಕೆಳಗೆ ಹೊಸ ಚೌಕಗಳನ್ನೇ ಹಾಸಿ ದುಡ್ಡಿನಾಟಕ್ಕೆ ಕುಳಿತ ಹಲವರು ಸಂಜೆಯ ಮಬ್ಬಿಗೆ ಮರಳುವಾಗ, ಊರ ಹುಡುಗರ ಧೂಳಾಟ

ಕೊನೆಯಾದಾಗ, ಉಳಿದ ಹೋಳಿಗೆಯ ಸವಿಯನ್ನು ಮತ್ತೆ ನೋಡಿ, ಜೋಯಿಸರನ್ನು ಬೀಳ್ಕೊಟ್ಟು, ಸರಸ ಸಲ್ಲಾಪಕ್ಕೆ ಮನೆಮನೆಯ ಮುಂದೆ ಈಚಲು ಚಾಪೆಗಳನ್ನೋ, ಕಂಬಳಿಗಳನ್ನೋ ಹಾಸಿ ಕುಳಿತಾಗ ಇದೇನು ಆಲಿಕಲ್ಲು ಮಳೆಯೇ!

ಊರೆಲ್ಲ ಮೌನದ ಮಡುವಿನಲ್ಲಿ ಮುಳುಗಿ, ಮಂದಿಯೆಲ್ಲ ಸಂತೃಪ್ತಿಯ ನಿಟ್ಟುಸಿರಿನಲ್ಲಿ ಹಾಯಾಗಿ ಕುಳಿತಾಗ ಅಲ್ಲೆಲ್ಲೋ ಛಾವಣಿಯ ಮೇಲೆ 'ಚಟ್ ಚಟೀರ್' ಶಬ್ದ! ಇಲ್ಲ ಇತ್ತಲೇ ಈ ಮನೆಯ ಮೇಲೆ ಸಣ್ಣ ಕಲ್ಲು ಕಟಕ್ ಎಂದು ಉರುಳಿಹೋದ ಪರಿ!

ಹುಣಿಸೆ ಬೀಜ ಎಸೆದು
ಹುಲ್ಲಕೊಪ್ಪಲಲ್ಲಿ ಅವಿತಾಡುವರೇ !

ಹಳೆಯ ಹೆಂಚಿನ ಛಾವಣಿ, ಹುಣಿಸೆಯ ಬೀಜವೇಕೆ ದೊಡ್ಡಕಲ್ಲೇ ರಭಸವಾಗಿ ಬಿದ್ದು ಜಾರಿರಬೇಕು. ತೊಟ್ಟಿಯ ಮನೆಯ ಮಲ್ಲಿಗವ್ವ ಬೇಡ ಬೇಡವೆಂದರೂ ಬೈಗುಳನ್ನು ಆರಂಭಿಸಿರಬೇಕು. ಇತ್ತ ಮೇಗಲ ಮನೆ ರಂಗವ್ವ, ಅತ್ತ ಕೆಳಮನೆ ಹೊಂಬವ್ವ, ಯುಗಾದಿಯಂದು ಗರತಿಯಿಂದ ಬೈಸಿಕೊಳ್ಳುವುದೂ ಮೋಜಲ್ಲ – ಮಹಾಪುಣ್ಯ. ಇಂದೊಮ್ಮೆ ಬೈಸಿಕೊಂಡರೆ ವರ್ಷವೆಲ್ಲ ಆನಂದ, ಶಾಂತಿ, ನೆಮ್ಮದಿ! ಆದರೂ ಎಸೆದವರು ಎಲ್ಲಿಯೋ ಅಡಗಿ, ಯಾವುದೋ ಹಾದಿಯಲ್ಲಿ ಮನೆ ಸೇರಿಕೊಳ್ಳುವುದರಲ್ಲಿ. ಗುಡಿಯ ಮುಂದಿನ ರಂಗದಲ್ಲಿ ಕೋಲಾಟದ ಕಣಿಕಣಿ ನಾದ ಹರಡಿದೆ. ಕುಳಿತವರು ನಿಂತವರು, ತೂಕಡಿಸಿ ತಲೆ ಒಗೆದವರು ಎಲ್ಲರೂ ಎದ್ದು ಅತ್ತ ನಡೆದಾಗ ಧ್ವನಿ ಸ್ಪಷ್ಟವಾಗುತ್ತದೆ.

ಹುಬ್ಬೆಯ ಮಳೆ ಚೆಂದ
ಹಬ್ಬದ ದಿನ ಚೆಂದ
ತಬ್ಬಲಿ ಮಕ್ಕಳು ಬಲು ಚೆಂದ – ರನ್ನದ

ಕೋಲು ಕೋಲಣ್ಣ ಕೋಲೆ
ಸುವ್ವನಾರಿ – ರನ್ನದ–
ಕೋಲು ಕೋಲಣ್ಣ ಕೋಲೆ *

---

* ನಾಗಮಂಗಲ ತಾಲ್ಲೂಕಿನ ಅಂಬಲ ಜೀರಹಳ್ಳಿಯಲ್ಲಿ ಆಚರಿಸುವ 'ಯುಗಾದಿ' ಯನ್ನನುಸರಿಸಲಾಗಿದೆ.

ಹಳ್ಳಿಯ ಬದುಕಿನಲ್ಲಿ ವಿಜಯದಶಮಿ

ನವರಾತ್ರಿಯ ನವಧಾತ್ರಿಯ
ಈ ಶ್ಯಾಮಲ ವನಧಿಯಲಿ
ಹಸಿರಾದುದು ಕವಿಯಾತ್ಮಂ
ರಸಪಾನ ಸ್ನಾನದಲಿ

ಎಂದು ಕುವೆಂಪು ಅವರು ನವರಾತ್ರಿಯ ಕಾಲದ ಪ್ರಕೃತಿಯ ಐಸಿರಿಯನ್ನು ಕುರಿತು ಹಾಡಿದ್ದಾರೆ. ಮಳೆಯ ಮುಸುಕನ್ನು ಕೊಡಹಿ ಭೂಮಿ ಉಲ್ಲಾಸಗೊಳ್ಳುವ ಕಾಲ ಅದು. ಎಲ್ಲೆಲ್ಲಿಯೂ ಹಸಿರು ನೆಲದಮೇಲೆ ಲಾಸ್ಯವಾಡುತ್ತದೆ. ವರ್ಷಕಾಲದ ಕಾರ್ಮೋಡಗಳು ಜಾರಿ ಶರತ್ಕಾಲದ ಮುಗಿಲು ತೊಳೆದಂತೆ ಫಳಚ್ಚನೆ ಬೆಳ್ಳಗಾಗುತ್ತವೆ. ಆಕಾಶ ನಿರ್ಮಲವಾಗುತ್ತದೆ. ಬೆಳ್ಳಕ್ಕಿಗಳು ಮಾಲೆಮಾಲೆಯಾಗಿ ಹಾರಿಹೋಗುತ್ತಿರುತ್ತವೆ. ನೆಲಕ್ಕಾದರೋ ಇನ್ನಿಲ್ಲದ ಬಿಂಕ. ತನ್ನ ಹಸಿರ ಉಡುಪನ್ನು ನೋಡಿ ತಾನೇ ಹೆಮ್ಮೆಪಡುವ ದಿನಗಳವು. ಕೆರೆ, ಕಟ್ಟೆಗಳ ನೀರು ಸ್ಫಟಿಕದಂತೆ ಶುಭ್ರವಾಗುತ್ತದೆ. ಮುಗಿಲು ಅದರಲ್ಲಿ ಮುಖನೋಡಿಕೊಳ್ಳುತ್ತದೆ. ರೈತ ತನ್ನ ಬೆಳಸನ್ನು ನೋಡಿ ಹಿರಿಹಿರಿ ಹಿಗ್ಗುವ ಸಂಭ್ರಮದ ಜೊತೆಯಲ್ಲೇ 'ನವರಾತ್ರಿ' ತನ್ನ ಮೆಲ್ಲಡಿಗಳನ್ನಿಡುತ್ತ ಬಂದು, ಅವನ ಮನಸ್ಸನ್ನು ಅರಳಿಸುತ್ತದೆ, ಅವನ ಉತ್ಸಾಹವನ್ನು ಮೇರೆವರಿಸುತ್ತದೆ.

'ನವರಾತ್ರಿ' ಎಂದಮಾತ್ರಕ್ಕೆ ಒಂಬತ್ತು ದಿನಗಳ ಹಬ್ಬ ಇದಲ್ಲ. ಹತ್ತನೆಯ 'ವಿಜಯದಶಮಿ'ಯೂ ಜೊತೆಗೆ ಸೇರಿಕೊಂಡಿದೆ. ಇದೇ 'ದಸರಾ'. 'ದಶಹರ' ಎಂಬ ಸಂಸ್ಕೃತದ ಮಾತಿನಿಂದಲೇ 'ದಸರಾ' ಬಂದಿದೆ. ಅಂದರೆ ಹತ್ತುರಾತ್ರಿಗಳೆಂದೇ ಆಗುತ್ತದೆ. ನಮ್ಮ ಹಳ್ಳಿಗಳಲ್ಲಿ 'ಮಾರಲಮ್ಮಿ' ಎನ್ನುವುದಿಲ್ಲವೇ? ಅದು ಮಾರಲಮ್ಮಿ ಅಲ್ಲ, 'ಮಹಾನವಮಿ.' ಬನ್ನಿಯ ಹಬ್ಬವೆಂತಲೂ ಕರೆಯುತ್ತಾರೆ. ಒಟ್ಟಿನಲ್ಲಿ ಇದು ಕನ್ನಡಿಗರ ನಾಡಹಬ್ಬ, ಹೆಮ್ಮೆಯ ಉತ್ಸವ. ಭಾರತದ ಎಲ್ಲ ಕಡೆಗಳಿಗಿಂತಲೂ ವಿಶಿಷ್ಟ ರೀತಿಯಲ್ಲಿ ಕರ್ನಾಟಕದಲ್ಲಿ ಆಚರಿಸಲ್ಪಡುತ್ತದೆ. ಗುರುಮನೆ, ಅರಮನೆಗಳಷ್ಟೇ ಅಲ್ಲ, ಗ್ರಾಮಾಂತರ ಪ್ರದೇಶಗಳಲ್ಲೂ ಇದರ ವೈಭವಕ್ಕೇನೂ ಕೊರತೆಯಿಲ್ಲ. ಆದುದರಿಂದ ಮೈಸೂರಿನ 'ಫೌಜು' ನೋಡಲು ಹೋಗದೆ ಉಳಿದವರು ತಮ್ಮ ಊರಿನಲ್ಲೇ ಈ ಹಬ್ಬವನ್ನೂ ಉತ್ಸವವನ್ನೂ ವಿಜೃಂಭಣೆಯಿಂದಲೇ ನಡೆಸಿ ಆನಂದಪಡುತ್ತಾರೆ.

ನವರಾತ್ರಿಯನ್ನು ವಸಂತಕಾಲದಲ್ಲಿಯೂ ಆಚರಿಸುವ ವಾಡಿಕೆ ಕೆಲವು ಕಡೆ ಉಂಟು. ಶರತ್ಕಾಲ, ವಸಂತಕಾಲ ಎರಡರಲ್ಲೂ ಜಗತ್ತಿನಲ್ಲಿ ರೋಗರುಜಿನಗಳು ಹೆಚ್ಚುವುವಂತೆ. ಇವುಗಳ ಪರಿಹಾರಾರ್ಥವಾಗಿ ಜಗನ್ಮಾತೆಯಾದ 'ಆದಿಶಕ್ತಿ'ಯ

ಉಪಾಸನೆ 'ನವರಾತ್ರಿ'ಯಲ್ಲಿ ನಡೆಯುತ್ತದೆ. ಆಶ್ವಯುಜ ಶುದ್ಧ ಪಾಡ್ಯಮಿಯಿಂದ ಹತ್ತು ದಿನಗಳವರೆಗೆ ಶರನ್ನವರಾತ್ರಿ ಜರುಗುತ್ತದೆ. ಮೂರು ಹಂತಗಳಲ್ಲಿ ಶಕ್ತಿ ಪೂಜೆ ನಡೆಯುತ್ತದೆ. ಮೊದಲನೆಯ ಮೂರು ದಿನ ರೋಗ, ದಾರಿದ್ರ್ಯ, ದುಃಖಗಳ ಪರಿಹಾರಾರ್ಥವಾಗಿ ದುರ್ಗಾಪೂಜೆ, ಎರಡನೆಯ ಮೂರು ದಿನ ಅಭಿವೃದ್ಧಿ, ಸಂಪದಗಳನ್ನು ಹೆಚ್ಚಿಸುವಂತೆ ಮಹಾಲಕ್ಷ್ಮಿಯ ಅರ್ಚನೆ, ಕೊನೆಯ ಮೂರು ದಿನ ವಿದ್ಯೆ, ಬುದ್ಧಿ, ಜ್ಞಾನಗಳನ್ನು ಹೆಚ್ಚಿಸಲು ಸರಸ್ವತಿಯ ಆರಾಧನೆ – ಹೀಗೆ ಮೂರು ರೂಪದಲ್ಲಿ 'ಶಕ್ತಿಯ' ಆರಾಧನೆ ಒಂಬತ್ತು ದಿನಗಳು ನಡೆಯುತ್ತದೆ. ಪರಿಸಮಾಪ್ತಿಯಾಗಿ ಹತ್ತನೆಯ ದಿನ 'ಬನ್ನಿಯ ಪೂಜೆ'. ಇದರ ಅಂಗವಾಗಿ ಉತ್ಸವ, ಮೆರವಣಿಗೆ ಮುಂತಾದುವು ನಡೆದು ನವರಾತ್ರಿಯ ಆಕರ್ಷಣೆಯನ್ನು ಹೆಚ್ಚಿಸುತ್ತವೆ. ಇದೇ 'ವಿಜಯದಶಮಿ'.

ನವರಾತ್ರಿಯಲ್ಲಿ ವಿಜಯದಶಮಿಯ ದಿನವನ್ನು ವೈಭವದಿಂದ ಆಚರಿಸುವುದಕ್ಕೂ ಕಾರಣಗಳಿವೆ. ಕೌರವರ ಕುತಂತ್ರಕ್ಕೊಳಗಾದ ಪಾಂಡವರು ಹನ್ನೆರಡು ವರ್ಷಗಳ ವನವಾಸದ ಅನಂತರ ಒಂದು ವರ್ಷದ ಅಜ್ಞಾತವಾಸವನ್ನು ಮುಗಿಸಿದ ದಿನ ಅದು. ಗೋಗ್ರಹಣಸಂದರ್ಭದಲ್ಲಿ ಬೃಹನ್ನಳೆಯ ವೇಷದಲ್ಲಿದ್ದ ಅರ್ಜುನ ಉತ್ತರನಿಗೆ ಸಾರಥಿಯಾಗಿ ಬರುತ್ತಾನೆ. ಆದರೆ ಉತ್ತರನಿಗೆ ಬದಲಾಗಿ ತಾನೇ ಯುದ್ಧಮಾಡಬೇಕಾದ ಪ್ರಸಂಗ ಬರುತ್ತದೆ. ಅಂದಿಗೆ ತಮ್ಮ ಅಜ್ಞಾತವಾಸದ ಕೊನೆಯ ದಿನ. ತಮ್ಮ ಶಸ್ತ್ರಾಸ್ತ್ರಗಳನ್ನು ಬನ್ನಿಯ ಮರವೊಂದರಲ್ಲಿ ತೂಗುಹಾಕಿ ಇಂದ್ರಾದಿ ದೇವತೆಗಳನ್ನು ಸಾಕ್ಷಿಯಾಗಿ ಇಟ್ಟು ಹೋಗಿರುತ್ತಾರೆ. ಅರ್ಜುನ ಬನ್ನಿಯನ್ನು ಪೂಜಿಸಿ ತನ್ನ ಶಸ್ತ್ರವನ್ನು ಹಿಂದಕ್ಕೆ ಪಡೆದು ಕೌರವರನ್ನು ಜಯಿಸಿದ ವಿಜಯದ ದಿನ ಅದು.

ಪಾಂಡವರು ತಮ್ಮ ವನವಾಸ ಅಜ್ಞಾತವಾಸದ ಕಾಲದಲ್ಲಿ ಅನುಭವಿಸಬೇಕಾದ ಕಷ್ಟಗಳನ್ನು ನೆನೆದು ಕನ್ನಡಿಗರು ಮರುಗಿದ್ದಾರೆ. ಅಂಥ ಧರ್ಮಾತ್ಮರಿಗೆ ಹೀಗೆ ಕಷ್ಟಪರಂಪರೆ ಬರಬಹುದೆ? ಆದರೂ 'ಧರ್ಮ'ಕ್ಕಾಗಿ ತಾಳ್ಮೆಯಿಂದ ಸಹಿಸಿಕೊಂಡ ಅವರನ್ನು ನೆನೆಯುತ್ತಾರೆ.

ಅವರ ನೆನೆದೇವು ಅವರೈದುಮಂದಿಯ
ಅವರೈವರಲ್ಲಿ ಹಿರಿಯೋರ – ಧರ್ಮರ
ಅವರೊಂದು ಗಳಿಗೆ ನೆನೆದೇವು

ಅವರನ್ನು ಭಕ್ತಿಯಿಂದ ನೆನೆದಿದ್ದಾರೆ. ಅವರಿಗಾಗಿ ಕಂಬನಿದುಂಬಿದ್ದಾರೆ.

ಪಾಂಡವರನ್ನೂ ಅವರ ವನವಾಸದ ಸ್ಥಿತಿಯನ್ನೂ ವರ್ಣಿಸುವ ಧರ್ಮರ ಪದ ಕರ್ನಾಟಕದ ಎಲ್ಲಾ ಕಡೆಯಲ್ಲೂ ಪ್ರಚಾರದಲ್ಲಿದೆ. ಅವರ ವೈಭವ, ಸತ್ಯ, ನ್ಯಾಯ, ಧರ್ಮ, ನಿಷ್ಠೆಗಳನ್ನು ಕಂಡು ನಮ್ಮ ಜನ ಮೆಚ್ಚಿಕೊಂಡಿದ್ದಾರೆ.

ಮೂಗಳ ಮುತ್ತಿನೋರು ನಾಗಳ ಹೊನ್ನಿನೋರು
ಸಾಲುಮಾಳಿಗೆ ಮನೆಯೋರು – ಪಾಂಡವರು
ಅರಣ್ಯಕೆ ಬಂದ ಬಗೆಯೇನು?

ಎಂದು ಅವರಿಗಾದ ಅನ್ಯಾಯಕ್ಕೆ ವ್ಯಥೆಪಟ್ಟರೆ –

ಅತ್ತಿಯ ಮರದಡಿ ಅಟ್ಬುಂಡೋರಿವರ್‍ಯಾರು
ಅತ್ತಿಯ ಕಾಯ ಒಲೆಹೂಡಿ – ಪಾಂಡವರು
ಅಟ್ಬುಂಡು ಹೋಗವರೆ ವನವಾಸ
ಪಾಂಡವರ ಬದುಕು ಏನಾದೊ ಎಂತಾದೊ
ತಳಿಗೆ ತಾವರೆ ಎಲೆಯಾದೊ – ಪಾಂಡವರ
ಚಂಬು ತುಂಬೆಯ ಗಿಡವಾದೊ

ವನವಾಸದ ಸಮಯದಲ್ಲಿ ಅವರು ಕುಳಿತ ಸ್ಥಳ, ನಿಂತಸ್ಥಳ, ಅಡಿಗೆಮಾಡಿ ಊಟ ಮಾಡಿಹೋದ ಸ್ಥಳ ಕರ್ನಾಟಕದಲ್ಲಿ ಎಷ್ಟಿಲ್ಲ! ತಾವರೆ ಎಲೆಯೇ ಅವರ ಊಟದ ತಟ್ಟೆಯಾದವು. ತುಂಬೆಯ ಗಿಡವೇ ಅವರು ಕುಡಿಯುವ ತಂಬಿಗೆಯಾದವು. ಅರಮನೆಯ ಆ ರಾಜಭೋಗವೆಲ್ಲಿ, ಮಳೆ, ಬಿಸಿಲು, ಬಡತನಗಳ ಈ ಕಡುಕಷ್ಟವೆಲ್ಲಿ! ಎಲ್ಲಾ ಧರ್ಮಕ್ಕಾಗಿ, ನ್ಯಾಯಕ್ಕಾಗಿ, ಸತ್ಯಕ್ಕಾಗಿ! ಇಂಥ ಒಂದು ವಿಷಮಸ್ಥಿತಿಯಿಂದ ಅವರು ಮುಕ್ತರಾದ ದಿನ, 'ವಿಜಯದಶಮಿ' ಎಂದರೆ ಯಾರಿಗೆ ಹರ್ಷವಿಲ್ಲ; ಯಾರಿಗೆ ಆನಂದವಿಲ್ಲ.

ಪಾಂಡವರ ಅಜ್ಞಾತವಾಸದ ಸಂದರ್ಭದಲ್ಲಿ ಅವರ ಶಸ್ತ್ರಾಸ್ತ್ರಗಳನ್ನು ಕಾಪಾಡಿದ ಬನ್ನಿಯಮರವೂ ಸಾಮಾನ್ಯವಾದುದಲ್ಲ. ಅದರಲ್ಲಿ ಮಹಾಕಾಳಿಯು ವಾಸಿಸುವಳಂತೆ! ಆದುದರಿಂದಲೇ ಅದನ್ನು 'ಬನ್ನಿಮಹಾಕಾಳಿ' ಎಂದು ಕರೆಯುವುದು. ಕರ್ನಾಟಕಕ್ಕೂ ಪಾಂಡವರ ವನವಾಸ – ಅಜ್ಞಾತವಾಸಗಳಿಗೂ ನಿಕಟ ಸಂಬಂಧವಿದೆ. ಅವರು ಇದ್ದು ಹೋದ ಗುಹೆಗಳು, ಮಿಂದು ಹೋದ ಕೊಳಗಳು ಕರ್ನಾಟಕದಲ್ಲಿಯೇ ಹೆಚ್ಚಾಗಿವೆ. ಈಗಿನ 'ಹಾನಗಲ್ಲು' ವಿರಾಟನ ರಾಜಧಾನಿಯಾಗಿದ್ದಿತೆಂದು ಹೇಳುತ್ತಾರೆ. ಎಂದಮೇಲೆ ಪಾಂಡವರ ಕಷ್ಟ ಪರಿಹಾರವಾಗಿ, ವಿಜಯ ದೊರೆತ ದಿನ ನಿಜಕ್ಕೂ ವಿಶಿಷ್ಟವಾದುದೇ.

ಗ್ರಾಮಾಂತರ ಪ್ರದೇಶಗಳಲ್ಲಿ ವಿಜಯದಶಮಿಯನ್ನು ಆಚರಿಸುವಲ್ಲಿ ಗ್ರಾಮ ಗ್ರಾಮದವರಲ್ಲಿಯೇ ಸ್ಪರ್ಧೆ ಇರುತ್ತದೆ. ಮುಖ್ಯವಾದ ಗ್ರಾಮಗಳಲ್ಲಿ ಮಾತ್ರ ಈ ಉತ್ಸವ ಜರುಗುತ್ತವೆ. ಇದಕ್ಕಾಗಿಯೇ ಗೊತ್ತಾದ 'ಬನ್ನಿಯ ದಿಬ್ಬ' ಆಯಾ ಊರಿನ ಗಡಿಯಲ್ಲಿರುತ್ತದೆ. ಅದರ ನಡುವೆ 'ಮಾನವಮಿ ಮಂಟಪ'ವನ್ನು ಸೊಗಸಾಗಿ ಕಟ್ಟಿರುತ್ತಾರೆ. ದೇವರು, ವಿಜಯಯಾತ್ರೆ ಹೊರಡುವುದು ಈ ಗಡಿಯ ಮಂಟಪಕ್ಕೆ.

ಮಾನವಮಿ ಹಬ್ಬದ ಹತ್ತುದಿನಗಳೂ ರೈತರ ಬದುಕಿನಲ್ಲಿ ಹೊಸ ಉತ್ಸಾಹ ಲವಲವಿಕೆಯನ್ನು ತುಂಬುತ್ತವೆ. ತಮ್ಮ ಗ್ರಾಮದೇವತೆಯ ಉತ್ಸವ ಮೂರ್ತಿಯನ್ನು ಪಾಡ್ಯದ ದಿನ ಪಟ್ಟಕ್ಕೆ ಕೂರಿಸುವ ಸಮಾರಂಭ ಜರುಗುತ್ತದೆ. ಉತ್ಸವ ಮೂರ್ತಿಯನ್ನು ಸಕಲ ವಸ್ತ್ರಾಭರಣಗಳೊಡನೆ ಚೆನ್ನಾಗಿ ಅಲಂಕರಿಸಿ ಪೂಜೆ ನಡೆಸುತ್ತಾರೆ. ದೇವರು ಎದುರು ಅಂದು ಹಚ್ಚಿದ ದೀಪ ದಶಮಿಯವರೆಗೆ ಆರುವುದಿಲ್ಲ. ಹಗಲು, ರಾತ್ರಿ ಅದಕ್ಕೆ ಎಣ್ಣೆಯನ್ನು ಎರೆದು ಕಾಯುತ್ತಾರೆ. ಮನೆಮನೆಯಲ್ಲೂ ದೀಪಕ್ಕೆ ಎಣ್ಣೆಯನ್ನು, ಕಾಣಿಕೆಯನ್ನು ಎತ್ತುತ್ತಾರೆ. 'ನಂದಾದೀಪ'ದ ಬೆಳಕಿನಲ್ಲಿ ಪಟ್ಟಕ್ಕೆ ಕುಳಿತ ಗ್ರಾಮದೇವತೆಗೆ ನಿತ್ಯಪೂಜೆ ಜರುಗುತ್ತದೆ. ನವಮಿಯ ದಿನ ರೈತರು ತಮ್ಮ ವ್ಯವಸಾಯದ ಸಲಕರಣೆಗಳನ್ನು ಪೂಜಿಸುತ್ತಾರೆ. ನಾಳಿನ ಉತ್ಸವಕ್ಕೆ ಅಣಿಮಾಡಿಕೊಳ್ಳುತ್ತಾರೆ, ಮಕ್ಕಳು ಮರಿಗೆ ಹೊಸ ಬಟ್ಟೆಬರೆಗಳನ್ನೂ ಹೊಲಿಸುತ್ತಾರೆ.

ಮಹಾನವಮಿಯ ದಿನಗಳಲ್ಲಿ ನಡೆಯುವ ಮೇಳಗಳು ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಸಾರುತ್ತವೆ. 'ಮಾನವಮಿ ಪದಗಳ' ಸೊಬಗಿಗೆ ಮಾರು ಹೋಗದವರಾರು? ಮಹಾನವಮಿಗೆ ಎರಡು ತಿಂಗಳ ಮುಂಚೆಯೇ ಶಾಲೆಯ 'ಓಜಯ್ಯ'ನವರು ವಿದ್ಯಾರ್ಥಿಗಳಿಗೆ 'ಹರಕೆ'ಯ ಪದಗಳನ್ನು ಕಲಿಸುತ್ತಾರೆ. ಮಹಾನವಮಿ ಬರುತ್ತಿದ್ದಂತೆಯೇ ವಿದ್ಯಾರ್ಥಿಗಳು ಹೊಸ ಉಡುಪನ್ನು ಧರಿಸಿ, ಬಣ್ಣದ ಕೋಲುಗಳನ್ನು ಹಿಡಿದು 'ಊರಾಡಲು' ಹೊರಡುತ್ತಾರೆ. ಜೊತೆಯಲ್ಲಿ ಅವರ ಗುರುಗಳು ಇರುತ್ತಾರೆ. ತಮ್ಮ ಊರಿನ ಮನೆಮನೆಗೆ ಹೋಗಿ ಅವರು 'ಹರಕೆ'ಯ ಪದಗಳನ್ನು ಹಾಡುತ್ತಾರೆ.

ಶ್ರೀ ಸಕಲ ಸಾಮ್ರಾಜ್ಯ ಲಕ್ಷ್ಮೀನಿವಾಸ
ವಿಜಯೀಭವ ದಿಗ್ವಿಜಯೀ ಭವ

ಎಂದು ಹೊಮ್ಮುವ ಅವರ ಮೇಳಗಾನ ಹಳ್ಳಿಗರ ಮನವನ್ನು ಸೆಳೆಯುತ್ತದೆ. ಮನೆಮಂದಿಯೆಲ್ಲಾ ಉತ್ಸಾಹದಿಂದ ಹೊರಗೆ ಬಂದು ಅದನ್ನು ಕೇಳಿ ಆನಂದಿಸುತ್ತಾರೆ.

ಆಶ್ವಯುಜ ಶುದ್ಧ ಮಾನವಮಿ ಬರಲೆಂದು
ಐಶ್ವರ್ಯ ಸಕಲ ಸಂಪದ ಹೆಚ್ಚಲೆಂದು
ಈಶ್ವರನ ಕೃಪೆ ನಿಮಗೆ ಸುಖಿಯಾಗಲೆಂದು
ಶಾಶ್ವತದಿ ಹರಸಿದೆವು ಬಾಲಕರು ಬಂದು

ಹೀಗೆ ಆರಂಭಿಸಿದ 'ಹರಕೆ'ಯ ಪದಗಳ ಚೌಪದಿಗಳು ಬಾಲರ ತರಳಕಂಠದಲ್ಲಿ ಮೋಹಕವಾಗಿರುತ್ತವೆ. ಇವರು ಹರಸುವುದಾದರೂ ಏನು? ಮಳೆ ಬೆಳೆ ಹೆಚ್ಚಲಿ; ಶಾಂತಿ ಸುಖಗಳು ನೆಲಸಲಿ ಎಂದು ನುಡಿಯುವ ಈ ಬಾಲಯೋಗಿಗಳ ಮಾತು ಸತ್ಯವೇ ಆಗುವಂತೆ ಭೂಮಿತಾಯಿ ಕರುಣೆಯ ಕಣ್ಣು ಬಿಡುವ ದಿನವವು.

ಮಳೆ ಬಂದು ಬೆಳೆಬೆಳೆದು ಇಳೆ ತಣಿಯಲೆಂದು
ತಿಳಿಗೊಳಗಳುಕ್ಕಿ ಗೋವ್ಗಳು ಕರೆಯಲೆಂದು
ನಳಿನಮುಖಿಯರು ಸುಪುತ್ರರ ಪಡೆಯಲೆಂದು
ಗೆಲವಿಂದ ಹರಸಿದೆವು ಬಾಲಕರು ಬಂದು

ಬಾಲಕರ ಹರಕೆಯ ಪದಗಳನ್ನು ಕೇಳಿದವರಲ್ಲಿ ಮುಖ ಅರಳುತ್ತದೆ. ಮನಸ್ಸು ಉಲ್ಲಸಿತವಾಗುತ್ತದೆ. ಉಡುಗೊರೆಗಳನ್ನು ಕೊಡುವುದರಲ್ಲಿ ಹಿಂದೆಗೆಯವವರೇ, ಆದರೆ ಬಾಲಕರು ಬೇಡುವುದಾದರು ಏನು?

ಕಡಲೆ ಬೆಲ್ಲವು ಕೊಬರಿ ನಮಗಾಗಬೇಕು
ಉಡುಗೊರೆಯು ತೇಜಿನಮ್ಮಯ್ಯಗಳಿಗೆ ಬೇಕು
ಕಡುಕು ಕಂಠಾಭರಣ ನಿಮಗಿರಲಿಬೇಕು
ಸಡಗರದ ಹೂಗಂಧ ನಮಗೆ ಕೊಡಬೇಕು

ನಗ ನಾಣ್ಯಗಳು ಅವರಿಗೆ ಬೇಕಿಲ್ಲ. ಕಡಲೆ ಬೆಲ್ಲಗಳಲ್ಲಿಯೇ ತೃಪ್ತಿಪಟ್ಟುಕೊಳ್ಳುವ ಸರಳ ಸ್ವಭಾವದವರವರು. ಆದರೆ, ತಮ್ಮ ಗುರುಗಳಿಗೆ ಮಾತ್ರ ಉಡುಗೊರೆಯಾಗಿ ತೇಜಿಯನ್ನು ಕೊಡುವಷ್ಟು ಉದಾರಮನಸ್ಕರಾಗಬೇಕು ಗ್ರಾಮಸ್ಥರು.

ಹಳ್ಳಿಗರ ಮನಸ್ಸಿನಲ್ಲಿ ನಲವನ್ನು ತುಂಬಿ, ದಾನಬುದ್ಧಿಯನ್ನು, ಮನೋ ವೈಶಾಲ್ಯವನ್ನು ಬೆಳೆಸುವ ಈ 'ಮಾನವಮಿಯ' ಹಾಡುಗಳು ಈಗೀಗ ಕಡಿಮೆಯಾಗುತ್ತಿದ್ದರೂ, ಅವುಗಳನ್ನು ಕಂಡು, ಕೇಳಿದವರು ಆ ಸೊಬಗನ್ನು ಆ ಸೌಂದರ್ಯವನ್ನು ಇನ್ನೂ ಮರೆತಿಲ್ಲ.

ವಿಜಯದಶಮಿಯ ದಿನ ಸಂಜೆಯ ಉತ್ಸವಕ್ಕೆ ಬೆಳಗಿನಿಂದಲೇ ಸಿದ್ಧತೆ ಸಾಗುತ್ತದೆ. ಮನೆಮನೆಯ ಮುಂದೆ ಗುಡಿಸಿ ಸಾರಿಸಿ ಗರತಿಯರು ರಂಗವಲ್ಲಿ ಇಡುತ್ತಾರೆ. ಊರ ಮಂದಿಯೆಲ್ಲಾ ಮಿಂದು ಹೊಸ ಬಟ್ಟೆ ತೊಡುತ್ತಾರೆ. ನೆಂಟರಿಷ್ಟರನ್ನು ಬರಮಾಡಿಕೊಂಡಿರುತ್ತಾರೆ. ಊರಿನಲ್ಲಿ ಯಾವುದೋ ಜಾತ್ರೆಯ ಸಂಭ್ರಮ ತಲೆದೋರುತ್ತದೆ. ಅಷ್ಟು ಲವಲವಿಕೆ ಅಷ್ಟು ಉತ್ಸಾಹ.

ಇತ್ತ ದೇವಾಲಯದಲ್ಲಿ ದೇವರ ಅಲಂಕಾರ ಸಂಜೆಯವರೆಗೂ ಸಾಗುತ್ತದೆ. ತೋಟದ ಹೂವೆಲ್ಲ ಬರಿದಾಗುತ್ತವೆ. ಅಲಂಕರಿಸಿದ ಅರ್ಚಕರ ಕೈ ಸೋಲುತ್ತದೆ. ನಂದಿಕೋಲಿನವರು, ದೀವಟಿಗೆಯವರು ಸಂಜೆಯ ವೇಳೆಗೆ ಸಿದ್ಧರಾಗುತ್ತಾರೆ. ತಮಟೆ ಡೋಲಿನವರು ಇನ್ನಿಲ್ಲದ ಉತ್ಸಾಹದಿಂದ ಹೊರಗೆ ಕಾಯುತ್ತಾರೆ. ಹಾಡಲು ಗುಂಪುಗೂಡಿದ ಗರತಿಯರು ಊರ ಮಂದಿ, ಹೊರಗಿನ ಮಂದಿ ದೊಡ್ಡ ಜಾತ್ರೆಯೇ ಆಗುತ್ತದೆ. ಉತ್ಸವ ವಿಜೃಂಭಣೆಯಿಂದ ಇಳಿಹೊತ್ತಿಗೆ ಊರನ್ನು ಬಿಡುತ್ತದೆ.

ದೀವಟಿಗೆಯನ್ನು ಬೆಳಗಿ ಮಡಿವಾಳ ಮುಂದೆ ಸಾಗುತ್ತಾನೆ. ದೇವತೆಗೆ ಛತ್ರಿ ಹಿಡಿದವರು ಹಿಂದೆ ಹಿಂದೆ ನಡೆಯುತ್ತಾರೆ. ತಮ್ಮಟೆ, ಡೋಲಿನವರು ಉತ್ಸವವನ್ನು

ತಮ್ಮ ಕಿವಿ ಬಿರಿಯುವಂಥ ಭೇರಿಯಿಂದ ಮುಂದೆ ನಡೆಸುತ್ತಾರೆ. ಮುಂದೆ ಗಂಡಸರ ತಂಡ, ಹಿಂದೆ ಹೆಂಗಸರ ತಂಡ; ನಡುವೆ ಊರಿನ ಯುವಕರ ಹೆಗಲೇರಿ ಸಾಗುವ ಗ್ರಾಮದೇವತೆಯ ಗಂಭೀರ ನಡಿಗೆ, ಕಣ್ಣಿಗೆ ಹಬ್ಬವಾಗುವ ಉತ್ಸವದ ವೈಖರಿಯ ದೇವತೆಯ ಗುಣಗಾನ ಮಾಡುತ್ತ ಮಂಜುಳವಾಗಿ ಹಾಡುತ್ತ ಬರುವ ಗರತಿಯರ ಹಾಡಿನ ಮಾಧುರ್ಯ – ಹೀಗೆ ಉತ್ಸವ ನಿಧಾನವಾಗಿ ಸಾಗಿಬರುತ್ತದೆ, ದೂರದ ಮಾನವಮಿ ಮಂಟಪದ ದಿಕ್ಕಿನಲ್ಲಿ.

ಊರು ದೊಡ್ಡದೆಂದು ಬೀದಿ ಚಿಕ್ಕದೆಂದು
ಯಾಕೆ ಕೆಂಪವ್ವ ಮುನಿದಲ್ಲೆ – ಗೌಡಗಳಿರ
ನೀವು ಬಿಡಿರಯ್ಯ ಬೀದಿ ಚೌಕಾವ

ಎಂದು ಗರತಿಯರು ದನಿಯೆತ್ತಿ ಹಾಡಬೇಕು. ಊರಿನ ಕಿರುಓಣಿಗಳಲ್ಲಿ ದೇವಿ ಸರಾಗವಾಗಿ ಸಾಗಲಾರಳು. ಅದಕ್ಕಾಗಿ ಅವಳಿಗೆ ಕೋಪ. ಒಮ್ಮೊಮ್ಮೆ ಪಕ್ಕನೆ ನಿಂತುಬಿಡುತ್ತಾಳೆ. ಹಿಂದೆ ಮುಂದೆ ಜಗ್ಗುತ್ತಾಳೆ. ನಡೆಮುಡಿ ಹಾಸುತ್ತ ಮುಂದೆ ಸಾಗಿದ್ದ ಮಡಿವಾಳ ಹಾಗೆಯೇ ನಿಲ್ಲುತ್ತಾನೆ. ಹೆಂಗಸರು ಹಾಡುತ್ತಾರೆ. ದೇವಿಗೆ ತೃಪ್ತಿಯಾಗದು, ಅವಳ ಕೋಪ ಶಮನವಾಗದು. ತಳವಾರ ತಮಟೆಯೊಡನೆ ಮುಂದೆ ಬರುತ್ತಾನೆ.

ಕೆಂಪವ್ವ ಕೆಂಪವ್ವ ನಿನ ಮುಖವೆಲ್ಲ ಸಪ್ಪಗೆ
ರಂಗಕೆ ಬಂದೋರು ನಗುತಾರೆ – ಕೆಂಪವ್ವ
ಕಾಲಿಗೆ ಬಿದ್ದೇನು ಕಲಿಯಾಗೆ

ಎಂದು ಎದ್ದ ದನಿಯಲ್ಲಿ ಹಾಡಿ ತಮಟೆಯನ್ನು ಆವೇಶದಿಂದ ಚಚ್ಚುತ್ತಾನೆ. ಅವನ ಹಾಸ್ಯದ ಕಿರುನುಡಿಗೆ ದೇವಿ ನಸುನಕ್ಕು ಮುಂದೆ ಸಾಗುತ್ತಾಳೆ.

ಹೀಗೆ ವಾದ್ಯದ ಮೂಲಕ, ಹಾಡಿನ ಮೂಲಕ, ಸ್ತುತಿಯ ಮೂಲಕ ಹೆಜ್ಜೆ ಹೆಜ್ಜೆಗೂ ದೇವಿಯನ್ನು ನಲಿಸುತ್ತ ನಿಧಾನವಾಗಿ ಮೆರವಣಿಗೆ ಸಾಗುತ್ತದೆ. ಡೋಲು, ತಮ್ಮಟೆ, ಹರೆಗಳ ನಾದ ನೆರೆಯ ಹಳ್ಳಿಗಳವರೆಗೂ ಹರಡುತ್ತದೆ. ಮಾನವಮಿಯ ದಿಬ್ಬವನ್ನು ತಲುಪುವುದರಲ್ಲಿ ಆಗಲೇ ಮಬ್ಬು ಕವಿದಿರುತ್ತದೆ. ಸಾಲು ದೀವಟಿಗೆಗಳು ಸಿದ್ಧವಾಗಿರುತ್ತವೆ; ಒಂದೆರಡು ಮೈಲಿಗಳ ಹಾದಿಯನ್ನು ಸಾಗಿ ಬಂದಿರುತ್ತಾರೆ.

ಬನ್ನಿಯ ದಿಬ್ಬವನ್ನು ಹತ್ತಿ, ಮಾನವಮಿ ಮಂಟಪವನ್ನು ಮುಟ್ಟಿದ ಮೇಲೆ ದೇವಿ ಅಲ್ಲಿ ಆಸೀನಳಾಗುತ್ತಾಳೆ. ಇದಕ್ಕೆ ಪೂರ್ವಭಾವಿಯಾಗಿ ಅರ್ಚಕರು ಬನ್ನಿಯ ರೆಂಬೆಯೊಂದನ್ನು ತಂದು ಕಂಬಕ್ಕೆ ಕಟ್ಟಿರುತ್ತಾರೆ. ಅದರ ಜೊತೆಯಲ್ಲಿಯೇ ಒಂದು ಬಿಲ್ಲು ಮತ್ತು ಬಾಣಗಳನ್ನು ಸಿಕ್ಕಿಸಿರುತ್ತಾರೆ. ಸರಿ, ನಂದಿಯ ಕೋಲು ಕುಣಿತ, ಕೋಲಾಟಗಳು ಸಾಗುತ್ತವೆ. ಗೌಡರ ಅಪ್ಪಣೆ ಪಡೆದು ಅರ್ಚಕರು ಬನ್ನಿಯನ್ನು

ಪೂಜಿಸುತ್ತಾರೆ. ಬಿಲ್ಲುಬಾಣಗಳನ್ನು ಕೈಗೆತ್ತಿಕೊಳ್ಳುತ್ತಾರೆ. ಪೂರ್ವಾಭಿಮುಖವಾಗಿ ನಿಂತು ಮೂರು ಬಾರಿ ಬಾಣಪ್ರಯೋಗ ಮಾಡುತ್ತಾರೆ. ಬಿಲ್ಲಿನಿಂದ ಜಿಗಿದ ಬಾಣ ಹೋಗಿ ನೆಲದಲ್ಲಿ ನಾಟಿಕೊಳ್ಳುವುದುಂಟು. ಹಾಗೆ ನಾಟಿಕೊಂಡ ವರ್ಷ ಸುಖ ಸಂಪದ ಹೆಚ್ಚೆಂದು ನಂಬುತ್ತಾರೆ.

ಪೂಜೆಯಾದ ನಂತರ ಬನ್ನಿಯ ಎಲೆಗಳನ್ನು ರಾಗಿಯ ತೆನೆಗಳನ್ನು ಎಲ್ಲರಿಗೂ ಮುಡಿಯಲು ಕೊಡುತ್ತಾರೆ. ಪ್ರಸಾದ ವಿನಿಯೋಗವು ಆಗುತ್ತದೆ.

ಹೀಗೆ 'ವಿಜಯ'ವನ್ನು ಸಾಧಿಸಿ, ಅಪಾರ ಸಂತೋಷ, ಸಡಗರಗಳಲ್ಲಿ ಮರಳಿ ದೇವಿಯನ್ನು 'ಗುಡಿದುಂಬಿಸುವುದರಲ್ಲಿ' ಕತ್ತಲು ಮಡುಗಟ್ಟಿರುತ್ತದೆ. 'ವಿಜಯದಶಮಿ' ಕಳೆದರೂ ಜನರಲ್ಲಿ ಅದೇ ಸಂತೋಷ, ಅದೇ ಆನಂದ, ಅದೇ ಉತ್ಸಾಹ ಮನಸ್ಸಿನ ಮೇಲೆ ಅಚ್ಚಳಿಯದೆ ಇರುತ್ತದೆ.*

* ನಾಗಮಂಗಲ ತಾಲ್ಲೂಕು ಕದಬಹಳ್ಳಿಯಲ್ಲಿ ಆಚರಿಸುವ ನವರಾತ್ರಿ ಈ ಲೇಖನಕ್ಕೆ ಆಧಾರ.

ಜನಪದ ಜೀವನದಲ್ಲಿ ದೀವಳಿಗೆ

ಹೊಳೆಯಲ್ಲಿ ನೀರು ತುಂಬಿ ಹೊಲದಲ್ಲಿ ಬೆಳೆ ತುಂಬಿ
ಊರೂರಿನ ಗುಡಿ ಮನೆ ತುಂಬಿ । ಜನ ತುಂಬಿ
ದೀವಳಿಗೆ ಬರಲಿ ದಿನಬರಲಿ ॥

ನಾಡಿನ ಮೇಲೆ ಹರ್ಷದ ನಗೆಯನ್ನು ಸೂಸುತ್ತ, ರೈತರ ಬದುಕಿಗೆ ಒಂದು ಹೊಸ ಉತ್ಸಾಹವನ್ನು ತುಂಬುತ್ತ ಭೂಮಿಯಲ್ಲಿ ನಂದನದ ಸಿರಿಯನ್ನು ಮೆರೆಯುವ ಆನಂದದ ದೀವಳಿಗೆ ಬರಲಿ; ವರ್ಷಕಾಲದ ಕಾರ್ಮೋಡಗಳು ಎಲ್ಲಿಯೋ ತೇಲಿಹೋಗಿ, ಅಲ್ಲಲ್ಲಿ ಶ್ವೇತಾಭ್ರಗಳ ಮೂಲಕ ಕಲೆಯುವಾಗ – ಅಷ್ಟು ಚಳಿಯೂ ಅಲ್ಲದ, ಅಷ್ಟು ಸೆಕೆಯೂ ಅಲ್ಲದ ಸುಖದ ದಿನಗಳು ಬರಲಿ; ಆಶ್ವಯುಜ ಹಿಂದೆ ಹಿಂದೆ ಸರಿದು ನೆಲದ ಮೇಲೆ ಕಾರ್ತಿಕದ ಮಧುಸ್ವಪ್ನ ಸುಳಿಯುತ್ತಿರಲು ಮೃದು ಅಡಿಗಳನ್ನಿಡುತ್ತ ಮೋದದ ದೀವಳಿಗೆ ಬರಲಿ.....

ಗ್ರಾಮವಾಸಿಗಳ ಬಹುದಿನದ ಹಂಬಲವನ್ನು ತುಂಬಲು ಹೊಲಗಳಲ್ಲಿ ಬೆಳೆದು ತೂಗುವ ಹಸಿರ ತೆನೆಗಳ ಮೇಲೆ ಹೊಂಬಣ್ಣದ ಅನುಲೇಪನದಿಂದ ರೈತನ ಮನಕ್ಕೆ ನೆಮ್ಮದಿಯನ್ನು ನೇಯುತ್ತ, ನಲಿಯುತ್ತ ನಾಡಿನ ಮೇಲೆ ಆಡಾಡಿ ಬರಲಿ ದೀವಳಿಗೆ.....

ದೀವಳಿಗೆ ಹಬ್ಬ ದೇವೇಂದ್ರನೈಭೋಗ
ಬೆಳೆದು ಬೀಗ್ಯಾಳೊ ಭೂಮಿತಾಯಿ ತಾನಂದನೊ

ದೇವೇಂದ್ರನ ಕರುಣೆಯಿಂದ ಬಸವೇಶ್ವರನ ತ್ಯಾಗಶೀಲ ದುಡಿಮೆಯಿಂದ, ತನ್ನ ಅವಿಶ್ರಾಂತ ಶ್ರಮದಿಂದ ಊರಿನ ಸುತ್ತ ಅನಂತ ವಿಸ್ತಾರದಲ್ಲಿ ಹಬ್ಬಿ ಬೆಳೆದು ಬೀಗುವ ಭೂಮಿಯನ್ನು ನೋಡಿದ ರೈತನ ಮನದಲ್ಲಿ ಹಿಗ್ಗಿನ ಬುಗ್ಗೆಯೇಳುತ್ತದೆ... ಕಣ್ಣಿಗೆ ಹಬ್ಬವನ್ನು ತರುವ ಆ ಭವ್ಯ ನೋಟಕ್ಕೆ ನಾಲಗೆ ಆನಂದದ ಹಾಡೊಂದನ್ನು ಉಲಿಯುತ್ತದೆ.....

ಬೆಳೆದು ಬೀಗ್ಯಾಳೊ ಭೂಮಿತಾಯಿ ತಾನಂದನೊ
ಬೆಳೆದು ಬೀಗ್ಯಾಳೊ ಭೂಮಿತಾಯಿ.....

ದೀವಳಿಗೆಯ ಹೊತ್ತಿಗೆ ನಾಲ್ಕಾರು ತಿಂಗಳು ಹಸಿರನ್ನು ಮೇದು ದಷ್ಟಪುಷ್ಟವಾಗಿ ಮೈತುಂಬಿಕೊಂಡು ಅಡ್ಡಾಡುವ ದನಕರುಗಳು, ಕೈಗಿನಿತು ಬಿಡುವು ದೊರಕಿ ಬೆಳೆದ ಹೊಲಗಳ ಬಳಿ ಹಾಗೇ ಸುತ್ತಾಡಿ ಬರುವ ಮಣ್ಣಿನ ಮಕ್ಕಳು.... ಎಲ್ಲರ ಹೊಲದಲ್ಲಿಯೂ ಸಾಲುಗಟ್ಟಿ ಬೆಳೆದ ಹುಚ್ಚೆಳ್ಳು ಗಿಡಗಳಲ್ಲಿ ಭೂಮಿತಾಯಿ ದೀವಳಿಗೆಯನ್ನು ಸ್ವಾಗತಿಸಲು ಹಚ್ಚಿಟ್ಟ ನೂರು ನೂರು ದೀಪಗಳೋ ಎನ್ನುವಂತೆ

ಅರಳಿ ನಿಂತ ಹೂವುಗಳು – ಓಹ್! ಎತ್ತ ನೋಡಿದರೂ ಹರ್ಷದ ನಗೆಯೇ; ಎಲ್ಲಿ ನೋಡಿದರೂ ಹಸಿರಿನ ಸೊಗವೇ.... ಅದೆಷ್ಟು ದಿನಗಳಿಂದ ಹಾರೈಸಿ ಕಾತರದಿಂದ ಕಾದಿದ್ದ ಬೆಳಕಿನ ಹಬ್ಬ ದೀವಳಿಗೆ ಬಂದಿದೆ! – ಗ್ರಾಮ ನಾಡಿನ ಮೇಲೆ ಹೊಸ ಕಾಂತಿಯನ್ನು ಚೆಮ್ಮಿದೆ!

ದೀವಳಿಗೆಯ ಬರವನ್ನು ಹಾರೈಸಿದ ಹಂಬಲಿಸಿದ ಜನ ಅಷ್ಟೇ ಭರದಿಂದ ಹಬ್ಬಕ್ಕೆ ಸಿದ್ಧತೆಗಳನ್ನೂ ಮಾಡುತ್ತಾರೆ, ವೈಭವದಿಂದ ಆಚರಿಸಲು ಅನುವಾಗುತ್ತಾರೆ. ಬಂಧುಬಳಗವನ್ನು ಕರೆಸಿಕೊಂಡು ಎಲ್ಲರಿಗೂ ತಮ್ಮ ಸಂತಸವನ್ನು ಹಂಚಿ ನಲಿಯಲು ಬಯಸುತ್ತಾರೆ. ಈ ವರ್ಷ ಮಗಳನ್ನು ತನ್ನ ತಮ್ಮನಿಗೇ ಕೊಟ್ಟು ಲಗ್ನಮಾಡಿದ ಅಕ್ಕನೊಬ್ಬಳು ಹಬ್ಬಕ್ಕೆ ಅಳಿಯನನ್ನು ಕರೆಸಿಕೊಳ್ಳಬೇಕಂತೆ. ಪತಿಯನ್ನು ಕರೆದು ಹೇಳುತ್ತಾಳೆ –

> ಹಬ್ಬದೂರಿಗೆ ಹೆಬ್ಬುಲಿಯ ಬರಹೇಳಿ
> ಚೆಬ್ಲೇಲಿ ಅಡಿಕೆ ಚಿಗುರೆಲೆ । ತಕ್ಕೊಂಡು
> ನನ್ನೊಬ್ಬನೆ ತಮ್ಮಯ್ನ ಬರಹೇಳಿ ।

ದೀವಳಿಗೆಗೆ ಕರೆಬಂದೀತೆಂದು ಹೊಸ ಅಳಿಯ ಹಾದಿ ಕಾಯದಿರುವನೇ! ತನ್ನ ನಲ್ಲೆಯನ್ನು ನೋಡಿ ನಲಿಯಲು ದೀವಳಿಗೆಯ ನೆಪದಲ್ಲಿಯಾದರೂ ಅಕ್ಕನೂರಿಗೆ ಹೋಗಿ ಬರಬಹುದು! ಆ ದೀವಳಿಗೆ ಬಂದಿದೆ! ತನಗೆ ಕರೆಯೂ ಬಂದಿದೆ. ಗೆಳೆಯರೊಡನೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ –

> ಹರಿದಾರಿಲವಳೆ ಅತಿರಂಭೆ ಅಕ್ಕನ ಮಗಳು
> ನನ್ನ ಬರಹೇಳಿ ಓಲೆ ಬರೆದವಳೆ

ಎಷ್ಟಾಗಲಿ ರಸಿಕ ತರುಣ! ದೀವಳಿಗೆಗೆ ಬಂದ ಕರೆ, ತನ್ನ ಮಡದಿಯೇ ಕಳುಹಿಸಿದ ಪ್ರೇಮದ ಸಂದೇಶ ಎನ್ನುತ್ತಾನೆ, ನಗುತ್ತ! ಅಂತೆಯೇ ಮಿಗಿಲಾದ ಉತ್ಸಾಹದಿಂದಲೇ ಹೊರಡುತ್ತಾನೆ. ಅವನಂತೆಯೇ ಇನ್ನೂ ಹತ್ತಾರು ಮಂದಿ ಹೊಸ ಅಳಿಯಂದಿರು ನಲ್ಲೆಯೂರಿನ ದೀವಳಿಗೆಯಲ್ಲಿ ಭಾಗಿಗಳಾಗುತ್ತಾರೆ!

ಊರಿನ ಗೋಪಾಲರಿಗಂತೂ ಇದಕ್ಕಿಂತ ಹಿಗ್ಗಿನ ಹಬ್ಬವಿಲ್ಲ, ಇದಕ್ಕಿಂತ ಹೆಚ್ಚಳದ ದಿನವಿಲ್ಲ. ದೀವಳಿಗೆಯಲ್ಲಿ ಅವರದೇ ಮುಖ್ಯಪಾತ್ರ, ಅವರದೇ ಹಬ್ಬ! ಹಿಂದೊಮ್ಮೆ ದ್ವಾಪರಯುಗದಲ್ಲಿ ನಡೆದ ಘಟನೆಯದು. ಅನಾದಿಕಾಲದಿಂದಲೂ ದೀವಳಿಗೆಯ ದಿನ ದೇವೇಂದ್ರನನ್ನೇ ಪೂಜಿಸಿಕೊಂಡು ಬಂದಿದ್ದರು ನಂದಗೋಕುಲದ ಗೋಪಾಲರು. ಆದರೆ ಒಮ್ಮೆ ದೇವೇಂದ್ರನು ಗೋಕುಲದ ಮೇಲೆ ಅನಂತವರ್ಷವನ್ನು ಕರೆಯಲು ಶ್ರೀಕೃಷ್ಣನು ಗೋವರ್ಧನಗಿರಿಯನ್ನು ಎತ್ತಿಹಿಡಿದು ಅವರನ್ನು ರಕ್ಷಿಸಬೇಕಾಯಿತು. ಅಂದಿನಿಂದ ದೇವೇಂದ್ರನ ಪೂಜೆ ತಪ್ಪಿಹೋಗಿ ಗೋವರ್ಧನ ಗಿರಿಯ ಪೂಜೆ ಆರಂಭವಾಯಿತು. ಈಗ ಗೋಪೂಜೆಯಾಗಿದೆ.

ದೀವಳಿಗೆಗೆ ಐದು ಆರು ದಿನ ಮುಂಚೆಯೇ ಊರಿನ ಗೋವಳರೆಲ್ಲಾ ಕಲೆತು ದೊಡ್ಡದೊಂದು ದೀವಿಗೆಯನ್ನು ಹೊಂದಿಸಿಕೊಂಡು, ಕಾಡುಮೇಡನ್ನೆಲ್ಲಾ ಶೋಧಿಸಿ ಒಂದು ದೊಡ್ಡ ವಸ್ತ್ರದಲ್ಲಿ ತಂಗಟೆ, ಕಣಿಗಲೆ ಮುಂತಾದ ಹೂಗಳನ್ನು ಸಂಗ್ರಹಿಸಿಕೊಂಡು ರಾತ್ರಿಯ ಮಬ್ಬು ಊರನ್ನು ಮುಸುಗಿದಾಗ ಗುಂಪುಕಟ್ಟಿಕೊಂಡು ಹೊರಡುತ್ತಾರೆ. ಬೆಳಗುವ ಆ ದೊಡ್ಡ ಹಣತೆಯನ್ನು ಹಿಡಿದವನು ಮುಂದೆ ಸಾಗುತ್ತಾನೆ. ಅವನ ಹಿಂದೆ ಇತರರು ನಡೆದು ಒಕ್ಕೊರಲಲ್ಲಿ –

ಆಹೋ ಅಲ್ಲರೆ ಗೋಡೆ ಬಿದ್ರೆ ಜಲ್ಲರೆ
ಅಲ್ಲಾಡ್ ಇಲ್ ಬಂದೆವು ಕಾಲೆಲ್ಲ ನೊಂದವು
ವರ್ಷಕೊಂದ್‌ಪಟ್ ಬಂದೆವು ದೊಣ್ಣೆ ಪೆಟ್ಟು ತಿಂದೆವು
ಆಮನೆಯಿಂದ ಈಮನ್ಗೆ – ನೆರೆಮನೆ ಅಜ್ಜಿ ಹಲ್ಲುಜ್ಜ ಹಲ್ಲುಗಳೊ
ಸಿರ್‌ಪಲ್ಲುಗಳೊ! *

ಎಂದು ಹಾಡುತ್ತ ಮನೆಮನೆಯ ಬಾಗಿಲಿಗೂ ಬರುತ್ತಾರೆ. ಇಬ್ಬರ ಸೊಲ್ಲಿಗೆ ಮತ್ತಿಬ್ಬರು ಸೊಲ್ಲನ್ನು ಕೊಡುತ್ತ, ಉಳಿದೆಲ್ಲರೂ ಪಲ್ಲವಿಯನ್ನು ಹಾಡುತ್ತ ಬಾಗಿಲ ಮುಂದೆ ಬಂದೊಡನೆಯೇ ಹಿರಿಯ ಗೋವಳನೊಬ್ಬ ಹಾಡುತ್ತಾನೆ –

ಬಾಗಿಲು ತೆಗಿರಮ್ಮ ಭಾಗ್ಯವುಳ್ಳ ಲಕ್ಷ್ಮಮ್ಮ
ಜ್ಯೋತೀಗೆ ಎಣ್ಣೆ ಎರೆಬನ್ನಿ
ಸಾಲುಕೊಡದೆಣ್ಣೆ ಮೊಗೆ ತಂದು ನೀವೀಗ
ಜ್ಯೋತಿಗೆಣ್ಣೆಯ ಎರೆಬನ್ನಿ
ಎಣ್ಣೆ ಎರೆದಾರೆ ಪುಣ್ಯವು ನಿಮಗಾದೊ
ಮುಂದೆ ಶಿವನಲ್ಲಿ ಫಲವಾದೊ.....

ಮನೆಯ ಬಾಗಿಲು ತೆರೆದು ದೊಡ್ಡ ಹಣತೆಯ ಪ್ರಕಾಶ ಮನೆಯೊಳಗೂ ಹರಡುತ್ತದೆ. ಹೆಣ್ಣುಮಗಳೊಬ್ಬಳು ಕುಡಿಕೆಯಲ್ಲಿ ಎಣ್ಣೆಯನ್ನು ತಂದು ಹಣತೆಗೆ ಹಾಕಿ ಕಾಣಿಕೆಯನ್ನೂ ಸಲ್ಲಿಸಿ ಕೈಮುಗಿಯುತ್ತಾಳೆ. ಗುಂಪಿನಲ್ಲಿ ಯಾರೋ ಒಬ್ಬ ವಿನೋದಪ್ರಿಯ ಅವಳ ತಲೆಯನ್ನು ಕಾಣುತ್ತಿದ್ದಂತೆಯೇ ಹಾಡಲು ಮೊದಲು ಮಾಡುತ್ತಾನೆ.

---

* ಚಿತ್ರದುರ್ಗ ಜಿಲ್ಲೆಯಲ್ಲಿ ಆಚರಿಸಲಾಗುವ ದೀವಳಿಗೆಗೂ, ಶಿವಮೊಗ್ಗ ಜಿಲ್ಲೆಯ ದೀವಳಿಗೆಗೂ ಸ್ವಲ್ಪಮಟ್ಟಿನ ಸಾಮ್ಯವಿದೆಯೆಂದು ಶ್ರೀ ರಾ.ವೆಂ.ಶ್ರೀ. ಯವರು ನನಗೆ ಇತ್ತೀಚೆಗೆ ತಿಳಿಸಿದರು. ಮಲೆನಾಡಿನ ದೀಪ ನೀಡುವ ಸಂಪ್ರದಾಯ ಚಿರಪರಿಚಿತವಾದುದು. ಅಂಟಿಕೆ – ಪಂಟಿಕೆ ಪದಗಳನ್ನು ಕುರಿತು ಶ್ರೀ ಕೆ. ವಿ. ಸುಬ್ಬಣ್ಣನವರೂ ಶ್ರೀ ಡಿ.ಟಿ. ಚಂದ್ರಶೇಖರ ಅವರೂ ಲೇಖನಗಳನ್ನು ಬರೆದಿದ್ದಾರೆ. ನನ್ನ ಈ ಲೇಖನಕ್ಕೆ ವಿಷಯಗಳನ್ನೂ ಪದ್ಯಗಳನ್ನೂ ಒದಗಿಸಿದವರು ಮಿತ್ರರಾದ ಪಿ.ಆರ್. ತಿಪ್ಪೇಸ್ವಾಮಿ ಹಾಗೂ ಪರಮೇಶ ಅವರು. ಹಿರಿಯೂರು ತಾಲ್ಲೂಕು ಹರ್ತಿಕೋಟೆಯ ದೀವಳಿಗೆಯ ಆಚರಣೆಯೇ ಇದಕ್ಕೆ ಹಿನ್ನೆಲೆ.

ತರ್ಕ ತಲೆ ಮುರ್ಕು ಸೌಟು
ಕರ್ದು ಹುಯ್ಯೆ ಡುಮ್ಮಕ್ಕ
ಎಣ್ಣೆ ಹುಯ್ಯೆ ಡುಮ್ಮಕ್ಕ
ಕಾಲಿಗೆ ಬೀಳೆ ಡುಮ್ಮಕ್ಕ *

ಮನೆಯವರೆಲ್ಲಾ ಆ ಹಾಡನ್ನು ಕೇಳಿ ನಗುತ್ತಾರೆ. ದೀಪದವರನ್ನು ಹಿಂಬಾಲಿಸಿ ಬಂದ ಹುಡುಗರ ತಂಡವೂ ಕೇಕೇ ಹಾಕುತ್ತದೆ. ಹೆಣ್ಣುಮಗಳು ನಾಚುತ್ತ ಒಳಗೆ ಓಡುತ್ತಾಳೆ! ದೀಪಕ್ಕೆ ಎಣ್ಣೆಯೆರೆದು ಕಾಣಿಕೆಯನ್ನು ಸಲ್ಲಿಸಿದ ಮನೆಯವರ ಔದಾರ್ಯವನ್ನು ಕೊಂಡಾಡಿ ಹರಸುತ್ತಾರೆ ಗೋವಳರು.

ಮನೆ ತುಂಬ ರೊಕ್ಕ ಕೊಡೊ
ಕರೆಕಾಟ್ ಲಿಂಗ – ಬಿಳಿಕಾಟ್ ಲಿಂಗ
ಹುಗ್ಗ್ಯೋ.... ಹುಗ್ಗ್ಯೋ....

ಎಂದು ಧ್ವನಿಯೆತ್ತರಿಸಿ ಕೂಗಿ ಕಾಡಿನಿಂದ ಬಿಡಿಸಿ ತಂದ ಹೂವನ್ನು ಆ ಮನೆಯೊಳಗೆ ಎರಚಿ, ದೀಪದೊಡನೆ ಮುಂದೆ ಸಾಗುತ್ತಾರೆ, ಮತ್ತೊಂದು ಮನೆಯ ಮುಂದಕ್ಕೆ.

ಹೀಗೆ ಮನೆಮನೆಯ ಮುಂದಕ್ಕೂ ಹೋಗಿ ಎಣ್ಣೆ ಕಾಣಿಕೆಗಳನ್ನು ಕೊಳ್ಳುವ ಸಂಪ್ರದಾಯ ದೀವಳಿಗೆಗೆ ಪೂರ್ವಭಾವಿಯಾಗಿ ಐದು ಆರು ದಿನಗಳವರೆಗೆ ಸಾಗಿರುತ್ತದೆ. ನರಕ ಚತುರ್ದಶಿಯ ದಿನ ದೀಪದವರು ಬರುವುದಿಲ್ಲ; ಅದರ ಮರುದಿನವೇ ದೀವಳಿಗೆ – ದೊಡ್ಡ ಹಬ್ಬ!

ಇಂದು ಪಾಡ್ಯಮಿ. ಹಬ್ಬದ ಸಿದ್ಧತೆಗಳು ಸಾಗಿವೆ, ನೆನ್ನಿನ ಸೂರ್ಯಾಸ್ತಮ ದೊಡನೆಯೆ! ಮನೆಯವರೆಲ್ಲ ಮೀಯಬೇಕು; ಬಾವಿಯಲ್ಲಿ ನೀರು ಸೇದಿಸೇದಿ ಹೆಣ್ಣುಮಕ್ಕಳ ತೋಳುಗಳು ಸೋತುಹೋಗಿವೆ. ಮನೆಯನ್ನೆಲ್ಲ ಸಗಣಿಯಲ್ಲಿ ಸಾರಿಸಿ ರಂಗವಲ್ಲಿಯನ್ನು ಬಿಡಬೇಕು. ಮನೆಯ ಮುಂದೆಯೂ ಸಾರಿಸಿದ ಅಷ್ಟು ಜಾಗದಲ್ಲಿ ರಂಗವಲ್ಲಿಯ ಅಲಂಕಾರವಾಗಬೇಕು. ಗಂಡಸರು ಮಬ್ಬಿನಲ್ಲಿಯೇ ಮನೆಯನ್ನು ಬಿಟ್ಟು ದನಗಳ ಅಲಂಕಾರಕ್ಕೆ ಬೇಕಾಗುವ ಹೂಗಳನ್ನರಸಿಹೋಗಿದ್ದಾರೆ. ಹುಡುಗರು ಸಡಗರದಿಂದ ಮಾವಿನೆಲೆಗಳನ್ನು ಕಿತ್ತುತಂದು ಪ್ರತಿಬಾಗಿಲಿಗೂ ತೋರಣವನ್ನು ತಂದು ಕಟ್ಟಿ ಹಬ್ಬದೂರಿನಲ್ಲಿ ಹಸಿರ ಸೊಂಪನ್ನು ಮೆರೆಯುತ್ತಾರೆ !

ಬಿಸಿಲೇರುವ ಮುನ್ನವೇ ಊರಿನ ಯುವಕರು ತಮ್ಮ ತಮ್ಮ ದನಕರುಗಳನ್ನು ನದಿಗೆ ಹೊಡೆದುಕೊಂಡು ಹೋಗುವ ಸಡಗರ ಹೇಳತೀರದು. ಹೊಳೆಯ ಆಳವಾದ ಮಡುವೊಂದರಲ್ಲಿ ಅವನ್ನು ಈಜುಬಿಟ್ಟು – ಮೈಯುಜ್ಜಿ ನೀರೆರಚಿ ತಾವು ನಡುವುದ್ದ

* ಮಲೆನಾಡಿನಲ್ಲಿ ಪ್ರಚುರವಾಗಿರುವ ಮತ್ತೊಂದು ಪಾಠವನ್ನು ಶ್ರೀ ರಾ.ವೆಂ.ಶ್ರೀ. ಯವರು ನನಗೆ ತಿಳಿಸಿದ್ದಾರೆ :

ತರ್ಕಲ್‌ತಲೆ ಮುರ್ಕುಲ್ ಸೌಟು
ಎಣ್ಣೇ ಬಿಡೇ 'ದ್ಯಾಮವ್ವ'

ನೀರಿನಲ್ಲಿ ಇಳಿದು ಗದ್ದಲಮಾಡುವುದನ್ನು ಕೇಳಿಸಿಕೊಂಡು ಉಬ್ಬಿಹೋಗುತ್ತಾಳೆ ನೀರಿಗೆ ಹೊರಟ ಹೆಣ್ಣುಮಗಳೊಬ್ಬಳು.

ನಮ್ಮೂರ ಹೊಳೆಯಲ್ಲಿ ಇನ್ನೇನು ಗದ್ದಲ
ಜಾಲ ಬಸವಯ್ನ ಹೊಳೆಸ್ನಾನ

ಹೊಳೆಯಲ್ಲಿ ಮಿಂದು ಎಳೆಬಿಸಿಲಿಗೆ ಮಿಂಚುತ್ತಿರುವ ಮೈಯನ್ನು ಕುಣಿಸುತ್ತ ಲವಲವಿಕೆಯಿಂದ ಊರಿನ ದಾರಿ ಹಿಡಿದ ಹೋರಿಗಳ ನಡಿಗೆಗೆ ಭೂಮಿಯೇ ಅದುರುತ್ತದೆ; ಅವುಗಳ ಕೊರಳ ಗಂಟೆಯ ನಾದವಂತೂ ಆಪ್ಯಾಯಮಾನವಾಗಿ ತೇಲಿಬರುತ್ತದೆ. ಬಾವಿಗೆ ಹೊರಟ ಹೆಣ್ಣುಮಕ್ಕಳು ಇದೇನು ಝಣತ್ಕಾರವೆಂದು ಕಿವಿಗೊಡುತ್ತಾರೆ!

ಜಾಲ ಬಸವಯ್ಯ ಹೊಳೆಮಿಂದು ಬರುವಾಗ
ಸಾಲು ಸರಗಂಟೆ ನುಡಿದಾವು....

ಮನೆಯ ಮಂದಿಯ ಸ್ನಾನವೂ ಮುಗಿಯುತ್ತದೆ. ಹಬ್ಬಕ್ಕಾಗಿಯೇ ಹೊಲಿಸಿದ ಹೊಸಬಟ್ಟೆಗಳನ್ನು ತೊಟ್ಟು ಹುಡುಗರು ಬೀದಿಗಳಲ್ಲಿ ಕುಣಿದಾಡುತ್ತಾರೆ. ಇನ್ನು ಸಂಜೆಯ ಮೆರವಣಿಗೆಗೆ ಮನೆಯ ದನಕರುಗಳನ್ನೆಲ್ಲಾ ಅಲಂಕರಿಸಬೇಕು. ಬಿಸಿಲೇರಿ ಬಿಸಿಲಿಳಿಯುವವರೆಗೂ ಎಷ್ಟೆಷ್ಟು ಬಗೆಯಲ್ಲಿ ಸಿಂಗರಿಸಿದರೂ ತೃಪ್ತಿಯಾಗದು ತಮ್ಮ ತಮ್ಮ ಮೆಚ್ಚಿನ ಹೋರಿಗಳನ್ನು. ಕೋಡಿಗೆ ಬಣ್ಣ ಬಳಿದು ಗುನ್ನಂಪಟ್ಟಿಯನ್ನು ಅಂಟಿಸಿ ಮೇಲೆ ಗುಮ್ಮಟ್ಟಕಟ್ಟಿ ಮೈಮೇಲೆ ಬಣ್ಣದ ವಸ್ತ್ರವನ್ನು ಹೊದಿಸಿ ಮನೆಯ ಮಕ್ಕಳೆಲ್ಲಾ ಮೆಚ್ಚುವುದರಲ್ಲಿ ಸಂಜೆ ಸಮೀಪಿಸುತ್ತದೆ. ಪಟೇಲರ ಆಣತಿಯನ್ನು ಪಡೆದು ಮೇಳದವರು ಚಾವಡಿಯ ಮುಂದೆ ವಾದ್ಯಘೋಷವನ್ನು ಆರಂಭಿಸುತ್ತಾರೆ. ಕುಳವಾಡಿ ಕೂಗುಹಾಕುತ್ತಾನೆ.

ಎಲ್ಲ ಅಲಂಕಾರವೂ ಮುಗಿದ ಮೇಲೆ ಚಾವಡಿಯತ್ತ ಓಡಿಸುವಾಗ ಹೂಮಾಲೆಯನ್ನು ಹಾಕಬೇಕು. ಆ ಹೂಮಾಲೆಯಾದರೂ ಎಂತಹುದು!

ಹೊತ್ತಾರೆ ಮುಂಚೆದ್ದು ಚಿನ್ನದ ಚಿಬ್ಬಲಿನೊಳಗೆ
ಮರುಗ ಮಲ್ಲಿಗೆ ಕುಯಿತಂದು! ಮಾಲೆಯ ಮಾಡಿ
ಅಣ್ಣ ಬಸವಯ್ಗೆ ವನಮಾಲೆ

ದೊಡ್ಡ ದೊಡ್ಡ ಹೂಮಾಲೆಗಳನ್ನು ಕೊರಳಲ್ಲಿ ಹೊತ್ತು, ಗುಮ್ಮಟಗಳನ್ನು ನೆತ್ತಿಯಲ್ಲಿ ತೂಗುತ್ತ ಮನೆಮನೆಯ ಮುಂದಿನಿಂದ ಸಾಲಂಕೃತ ಹೋರಿಗಳು ಹೊರಟು ಚಾವಡಿಯನ್ನು ಸೇರುವುದರಲ್ಲಿ ಕೆಲಸಕಾರ್ಯಗಳನ್ನು ಅಷ್ಟಷ್ಟಕ್ಕೇ ತೊರೆದು ಆ ವೈಭವದ ನೋಟವನ್ನು ಸವಿಯಲು ಹೆಂಗಸರು ಮಕ್ಕಳೂ ಕಿಕ್ಕಿರಿಯುತ್ತಾರೆ. ಹೆಣ್ಣೊಬ್ಬಳು ತನ್ನ ಮನೆಯ ಜೋಡೆತ್ತುಗಳನ್ನು ನೋಡಿ ಹಿಗ್ಗಿ ಹೋಗಿದ್ದಾಳೆ – ನೆರೆಯವಳಿಗೆ ಹೆಮ್ಮೆಯಿಂದ ಹೇಳುತ್ತಾಳೆ.

ಕರಿಯೆತ್ತು ಕಾಳಿಂಗ ಬಿಳಿಯೆತ್ತು ಮಾಲಿಂಗ
ಸರದಾರ ನನ್ನೆತ್ತು ಸಾರಂಗ । ಬರುವಾಗ
ಮನೆಯ ಮಾಳಿಗ್ಯೆಲ್ಲ ನಡುಗ್ಯಾವು

ತಮ್ಮ ಹೋರಿಗಳನ್ನು ಶಕ್ತಿಮೀರಿ ಕಲಾತ್ಮಕವಾಗಿ ಅಲಂಕರಿಸಿದ ಯುವಕರ ಉತ್ಸಾಹ ಮಿಗಿಲಾದುದು. ಹೋರಿಗಳೊಡನೆ ನಡೆದು ಬರುವ ಅವರ ಠೀವಿಗೆ ಬೆರಗಾಗಬೇಕು, ಹೆಂಗಸರ ಗುಂಪಿನ ಯುವತಿಯರು! ಅದೇನು ವರ್ಣ ಮೋಡಿ! ಅದೇನು ಪುಷ್ಪರಾಶಿ! ಅದೇನು ಕಲಾಕೌಶಲ! ಹೋರಿಗಳ ದೊಡ್ಡ ಸಮೂಹ ಊರನಡುವಿನ ವಿಶಾಲ ನೆಲೆಯಲ್ಲಿ ನೆರೆದ ಅದ್ಭುತ ನೋಟವನ್ನು ಕಣ್ತುಂಬ ನೋಡಿ ತಣಿಯುತ್ತಾರೆ ಭಾಗ್ಯವಂತರು!

ಆ ದಿವ್ಯದೃಶ್ಯವನ್ನು ಹೆಚ್ಚು ಹೊತ್ತು ನೋಡಗೊಡದೆ ಪಾಡ್ಯಮಿಯ ಕತ್ತಲಹೆಡೆ ಹಳ್ಳಿಯನ್ನು ಬಳಸಿಬಿಡುವಂತೆ ಚಾಚಿಕೊಂಡು ಬರುತ್ತದೆ. ಆಗಲೇ ಬೇಗಾರರು ಹತ್ತಾರು ಪಂಜುಗಳನ್ನು ಹಚ್ಚಿ ಕತ್ತಲೊಡನೆ ಸೆಣಸಲು ಸಿದ್ಧರಾಗಿ ನಿಂತಿದ್ದಾರೆ. ಪಂಜಿನವರ ಸಾಲನ್ನು ಎರಡು ಕಡೆಯೂ ಬಿಟ್ಟುಕೊಂಡು ದನಗಳ ದಿಬ್ಬಣ, ಬೊಬ್ಬಿಡುವ ತಮ್ಮಟೆ, ವಾದ್ಯ ಘೋಷಣೆಗಳೊಡನೆ ಊರ ಹೊರಗೆ ಸಾಗುತ್ತದೆ; ಹಳ್ಳಿಯ ಮುಖ್ಯಸ್ಥರೂ, ಅವರ ಹಿಂದೆ ರೈತಾಪಿಗಳೂ ಎಲ್ಲರಿಗೂ ಮುಂದೆ ಹುಡುಗರೂ ಓಣಿಗಳನ್ನು ಹಾದು ಬಂಡಿಯ ಜಾಡಿನ ಮೂಲಕ ಎರಡು ಕೂಗು ದೂರದ ಕಾಟಲಿಂಗನ ದೇವಾಲಯದ ಬಳಿ ಬರುತ್ತಾರೆ. ಹೊಲಗಳ ರಕ್ಷಕನಾದ ಕಾಟಲಿಂಗನ ಮಣ್ಣಿನ ಗುಡಿ ಅನೇಕ ದೀಪಮಾಲೆಗಳಿಂದ ಅಲಂಕೃತವಾಗಿ ಅಪೂರ್ವ ಶೋಭೆಯಿಂದ ಕಂಗೊಳಿಸುತ್ತದೆ. ಪ್ರಥಮ ಪೂಜೆ ಇಲ್ಲಿ ನಡೆದು ತೀರ್ಥವನ್ನು ದನಗಳ ಮೈಮೇಲೆ ಎರಚಿದ ಮೇಲೆ ದಿಬ್ಬಣ ಅಲ್ಲಿಯೇ ಸಮೀಪದ ಈಡಿನತ್ತ ತಿರುಗುತ್ತದೆ. ಬೆಳಗಿನಿಂದ ಶ್ರಮಪಟ್ಟು ಸೌದೆ ಸೊಪ್ಪುಗಳನ್ನು ಸೇರಿಸಿ ಗೋಪುರಾಕೃತಿಯ ಈಡನ್ನು ಬೇಗಾರರು ನಿರ್ಮಿಸಿರುತ್ತಾರೆ. ಬಳಿಯ ಪಾಳುಬಯಲಿನಲ್ಲಿ ಎಡೆಯಿಟ್ಟು ಇಲ್ಲಿಯೂ ಪೂಜೆ ನಡೆಯುತ್ತದೆ. ಗೌಡರ ಅಪ್ಪಣೆಯನ್ನು ಪಡೆದು ಕುಳವಾಡಿ ಈಡಿಗೆ ಬೆಂಕಿ ತೋರುತ್ತಾನೆ. ವಾದ್ಯಗಳು ಮೊರೆಯುತ್ತವೆ! ತಮ್ಮಟೆಗಳು ಭೋರಿಡುತ್ತವೆ!

ನೆರೆದ ರೈತರ ಹೃದಯದಲ್ಲಿ ಉತ್ಸಾಹ ತುಳುಕುತ್ತಿರಲು, ಮೈಪುಳಕ ಗೊಳ್ಳುತ್ತಿರಲು, ಹೋರಿಗಳ ಕಣ್ಣಿನಲ್ಲಿ ಬೆದರುನೋಟ ಚಿಮ್ಮುತ್ತಿರಲು, ಹುಡುಗರ ಕೇಕೆ ಮುಗಿಲಿಗೆ ಮುತ್ತುಕೊಡುತ್ತಿರಲು ಭೂಮಂಡಲವನ್ನೇ ಬೆಳಗುವಂತೆ ಧಗಧಗನೆ ಹೊತ್ತಿ ಉರಿಯುತ್ತದೆ ರಣಕಾಳಿಯ ರುದ್ರನರ್ತನದಂತೆ ಭೋರ್ಗರೆಯುವ ಈಡು, ತನ್ನ ನೀಳನಾಲಗೆಯನ್ನು ನಭೋ ಮಂಡಲಕೆ ಚಾಚಿ! ರೈತನ ಬದುಕಿನ ಬಡತನವನೆಲ್ಲ ಒಮ್ಮೆಗೇ ದಹಿಸಿ ಬಿಡುವಂತೆ ಉರಿಯನ್ನು ಚಾಚಿ ರಾಚುತ್ತಿರುವ ಈಡನ್ನು ಊರಿನ

ಬಳಿ ಹೆಂಗಸರ ಗುಂಪು ಕೌತುಕದಿಂದ ಈಕ್ಷಿಸುವಾಗಲೇ ವಾದ್ಯರವ ಇಮ್ಮಡಿಸುತ್ತದೆ... ಜೊತೆಯಲ್ಲೇ ಕೇಳಿಬರುತ್ತದೆ.

ಸುವ್ವಿರೊ ಸಂಗಯ್ಯ ಸುವ್ವಿರೊ ಲಿಂಗಯ್ಯ
ಸುವ್ವೆಂದು ಬಾರೊ ಬಸವಯ್ಯ । ನೀನು
ಸುವ್ವೆಂದು ಬಾರೊ ಬಸವಯ್ಯ

ಕುಲವಾಡಿ ತಮ್ಮಟೆಯನ್ನು ನಿಲ್ಲಿಸಿ ಒಂದು ಸೊಲ್ಲು ಹಾಡನ್ನು ಹೇಳಿ ಉನ್ಮತ್ತನಾಗಿ ತಮ್ಮಟೆಯನ್ನು ಚೆಚ್ಚತೊಡಗುತ್ತಾನೆ. ಅಗ್ನಿದೇವನ ಸುತ್ತಲೂ ಮೂರುಬಾರಿ ಪ್ರದಕ್ಷಿಣೆ ಹಾಕುತ್ತವೆ ಬಂದ ದನಕರುಗಳೆಲ್ಲ. ಅಲ್ಲಿನ ಕೂಗಾಟ, ಕೇಕೆ, ಆರ್ಭಟಗಳು ಊರಿನಮೇಲೆ ಮಿಂಚಿನ ಬರೆಗಳಂತೆ ಬೀಳುತ್ತಿರುತ್ತವೆ. ಹೋಹೋಕಾರ ನೆರೆಯೂರಿನ ಕಿವಿಗಳನ್ನು ಮುಟ್ಟುವಂತಿರುತ್ತದೆ.

ಸರದಾರ ನನ್ನೆತ್ತು ಸರಗಂಟೆ ಕಟ್ಟಿಕೊಂಡು
ಸೂಡಿನ ಸುತ್ತ ತಿರುಗುತ । ನಮ್ಮೆತ್ತಿನ
ತೆಳ್ಳನೆ ಹೊಟ್ಟೆ ಹಸಿದಾವೊ

ಎಂದು ಮನೆಯ ಗೃಹಿಣಿ ಸೂಡಿನ ಬಳಿಯ ಕೇಕೆಯನ್ನು ಕೇಳಿ ತನ್ನ ಮನೆಯ ಹೋರಿಗಳನ್ನು ಮರುಕದಿಂದ ನೆನೆದುಕೊಳ್ಳುತ್ತಾಳೆ. ಹಸಿದು ಬರುವ ಬಸವನಿಗೆ ಅಡಿಗೆಯನ್ನು ಅಣಿಮಾಡಲು ಒಳಗೆ ಸಾಗುತ್ತಾಳೆ. ಇತ್ತ ಪ್ರದಕ್ಷಿಣೆ ಮುಗಿದು ಎಲ್ಲರ ದೃಷ್ಟಿಯೂ ಊರಿನತ್ತ ಹೊರಡುತ್ತದೆ. ಬೆಳೆಯನ್ನು ಹಾಳುಮಾಡುವ ಲಕ್ಷಾಂತರ ಕ್ರಿಮಿಕೀಟಗಳನ್ನು ಬಲಿತೆಗೆದುಕೊಳ್ಳುತ್ತ ಬೆದರಿಸಿ ಓಡಿಸುತ್ತ ಬಹಳ ಹೊತ್ತಿನವರೆಗೂ ಉರಿದು ಅಗ್ನಿದೇವ ಕೆಂಡವಾಗಿ ಮಲಗುತ್ತಾನೆ! ಬಯಲು ಮತ್ತೆ ಪ್ರಶಾಂತವಾಗುತ್ತದೆ.

ದನದ ದಿಬ್ಬಣ ಊರಿಗೆ ಮರಳುವುದರಲ್ಲಿ ಮನೆ ಮನೆಯ ಬಾಗಿಲುಗಳಲ್ಲೂ ಸಗಣಿಯ ಉಂಡೆಗಳ ಮೇಲೆ ಮಂದ ಪ್ರಕಾಶವನ್ನು ಬೀರುತ್ತ ಸೊಡರುಗಳು ಸ್ವಾಗತವನ್ನು ಕೋರುತ್ತವೆ. ಊರ ದೇವಾಲಯದಲ್ಲಿಯೂ ಮನೆಗೆ ಬರುವ ಮುನ್ನ ಪೂಜೆಯನ್ನು ಮುಗಿಸಿಕೊಂಡು, ಅಲ್ಲಿನ ನೂರೊಂದು ಹಣತೆಗಳಿಗೂ ಕೈಮುಗಿದು, ತೀರ್ಥವನ್ನು ಹಾಕಿಸಿಕೊಂಡು ಹೋರಿಗಳನ್ನು ಮನೆಗಳತ್ತ ತಿರುಗಿಸುತ್ತಾರೆ!

ಮನೆಯ ಬಾಗಿಲಿನಲ್ಲಿ ದೀಪಾರತಿಯನ್ನು ಹಿಡಿದು ಹೆಂಗೆಳತಿಯರು ತವಕದಿಂದ ಕಾದಿರುತ್ತಾರೆ. ದೀವಳಿಗೆಗಾಗಿ ಹಚ್ಚಿಟ್ಟ ದೀವಿಗೆಯ ಬೆಳಕಿನಲ್ಲಿ ಕಂಗೊಳಿಸುತ್ತ ಉಟ್ಟ ಹೊಸ ಸೀರೆಯ ರೇಸಿಮೆಯ ಅಂಚಿನ ಮೇಲೆ ಬೆಳಕು ಆಟವಾಡುತ್ತದೆ; ಅವರ ಚೆಲುಮೊಗಕ್ಕೊಂದು ಹೊಸ ಕಳೆಯನ್ನು ತರುತ್ತದೆ! ಹೋರಿಗಳನ್ನು ಹಿಡಿದು ತರುವ ಯುವಕನಿಗೂ ಸ್ಫೂರ್ತಿ ಕಿರಣವಾಗಿರುತ್ತದೆ; ಅದೋ ತನ್ನ ಮನೆಯ ಬಸವಣ್ಣ ಬರುತ್ತಿದ್ದಾನೆ.

ರಾಯರ ಸಂಗಾಟ ಹಾರ್‍ಯಾನೊ ಬಸವಣ್ಣ
ಹಾದಿಯ ಕಲ್ಲೆಲ್ಲ ಹಿಡಿಮುಡಿ ! ಬಸವಣ್ಣ
ನೀ ಬರುವ ಬೀದ್ಯೆಲ್ಲ ಗಲಸದ್ದೋ

ಅಷ್ಟು ಆರ್ಭಟದಲ್ಲಿ, ಅಷ್ಟು ಸಡಗರದಲ್ಲಿ ತನ್ನ ಮನೆಯ ಶೂರ ಬಸವಣ್ಣಗಳು ರಾಯರನ್ನು ಕೂಡಿ ಬರುತ್ತಿವೆ. ಇನ್ನು ಊರಗೌಡರ ಹೋರಿಗಳೆಂದ ಮೇಲೆ ಕೇಳಬೇಕೆ?

ಗೌಡರ ಬಸವಣ್ಣ ಎಲ್ಲರಂಥವನಲ್ಲ
ಗಾರು ಮಾಡವನೆ ಗೌಡರ । ಹೆಣ್ಣುಮಕ್ಕಳ
ನೂರೊಂದು ಆರತಿ ತರಲೆಂದು

ಹೋರಿಗಳು ಮನೆಯ ಬಾಗಿಲಿಗೆ ಬರುವುದರಲ್ಲಿ ಆರತಿ ಹಿಡಿದ ಹೆಣ್ಣುಗಳು ಹಾಡಿಕೊಂಡು ಬೆಳಗುತ್ತಾರೆ. ಎರಡು ಹೋರಿಗಳ ನಡುವೆ ಮೂಗುದಾರವನ್ನು ಹಿಡಿದು ನಿಂತ ಚೆಲುವ, ಗೌಡರ ಹಿರಿಯ ಮಗ ಮಡದಿ ತಂದ ಆರತಿಯನ್ನು ಮುಗುಳುನಗೆಯಿಂದ ಸ್ವೀಕರಿಸುತ್ತಾನೆ. ಜೇಬಿನಿಂದ ತೆಗೆದು ಒಂದು ಹಣವನ್ನೂ ಆರತಿಯ ತಟ್ಟೆಗೆ ಹಾಕುತ್ತಾನೆ. ಹೋರಿಗಳ ವಿಶಾಲ ಹಣೆಗೂ, ಪತಿರಾಯನ ಪ್ರೀತಿಯ ಲಲಾಟಕ್ಕೂ ಗಂಧವನ್ನಿಟ್ಟು ಓಕುಳಿಯನ್ನು ನೀವಳಿಸಿ ಒಳಗೆ ಬರಮಾಡಿಕೊಳ್ಳುತ್ತಾಳೆ ನಲ್ಲೆ! ದೀವಳಿಗೆಯ ಸಂಭ್ರಮ ಅಲ್ಲಿಗೇ ಮುಗಿಯಿತೆ? ಸ್ವಾಗತಿಸುವ ಆ ಮಧುರ ಕಂಠವನ್ನು ಕೇಳಿ –

ಆರತಿ ಬೆಳಗಿ ಆರು ಬೆರಳುನೊಂದೊ
ಧೂಪವ ಬೀಸಿ ಭುಜನೊಂದೊ । ಬಸವಯ್ಯ
ತೆತ್ತ್ಯಸಿ ನಮ್ಮ ಮನೆಯೊಳಗೆ

ಮನೆಯೊಳಗೆ ಮತ್ತೆ ಹೋರಿಗಳ ಪೂಜೆಯಾಗುತ್ತದೆ. ಅಂದಿನ ವಿಶೇಷ ಅಡಿಗೆ, 'ಶ್ಯಾವಿಗೆ ಕಾಯ್ಹಾಲು'ಗಳನ್ನು ತಮ್ಮ ಹೋರಿಗಳಿಗೂ ಮೆಲ್ಲಲು ಕೊಟ್ಟು ಅನಂತರ ಉಳಿದವರು ಊಟ ಮಾಡುತ್ತಾರೆ – ಸಂತೋಷದಿಂದ ಸಂಭ್ರಮದಿಂದ !

ದೀವಳಿಗೆಯ ಸಡಗರ ಸಂತೋಷಗಳ ನಡುವೆ ಅಕ್ಕನ ಮನೆಗೆ ಬಂದ ತರುಣನೇನಾದನೊ! ಏಕಾಂತದಲ್ಲೊಮ್ಮೆ ಮಡದಿಯನ್ನು ಸಂಧಿಸಿ ಅವಳ ಕೆನ್ನೆಯನ್ನು ಮೃದುವಾಗಿ ಚಿವುಟಿ ನಸುನಕ್ಕು ಹೇಳುತ್ತಾನೆ, ನಗೆ ಮೊಗದ ನಲ್ಲೆಗೆ –

ತಾಳೆಯ ಹೂವ ತಾರ್ಹೆಣ್ಣೆ ಮಂಚಕ್ಕೆ
ಸಾಲು ದೀವಿಗೆಯ ಮಡಗಲ್ಲಿ ! ನನ ನಲ್ಲೆ
ವಾಲೆಯ ಕಿವಿಯ ಅರಗಿಣಿ

ಹೀಗೆ ಬಹುಬಗೆಯ ಸಂಭ್ರಮದಲ್ಲಿ, ಸಂತಸದಲ್ಲಿ ದೀವಳಿಗೆಯ ಹಬ್ಬ ಕಳೆಗಟ್ಟುತ್ತದೆ. ಅಂದು ರಾತ್ರಿ ಮನೆಗಳ ಮುಂದೆ ಉರಿಯುವ ನೂರಾರು ಹಣತೆಗಳ

ಬೆಳಕಿನಲ್ಲಿ ಊರು ಹೊಸ ಚೇತನವನ್ನು ಪಡೆದಿರುತ್ತದೆ. ಊರ ಮಂದಿಯ ಮನದಲ್ಲಿ ಆನಂದದ ನಂದಾದೀವಿಗೆಯನ್ನು ಹಚ್ಚಿ ಮುಂದೆ ಸಾಗುವ ದೀವಳಿಗೆಯ ನೆನಹು ಮುಂದೆ ಅನೇಕ ದಿನಗಳವರೆಗೆ ನಿಲ್ಲುತ್ತದೆ. ಕಾರ್ತಿಕ ಮಾಸದಲ್ಲಿ ಹೊಲದ ಹುಚ್ಚೆಳ್ಳು ಹೂಗಳನ್ನು ಕೊಯ್ದು ಪ್ರತಿನಿತ್ಯವೂ ಊರ ವನಿತೆಯರು ಬಾಗಿಲ ಗೂಡಿನಲ್ಲಿ ಸಗಣಿ ಉಂಡೆಯ ಮೇಲೆ ಹಣತೆಯನ್ನು ಹಚ್ಚಿ ಹೂ ಮುಡಿಸಿ ಕೈಮುಗಿಯುತ್ತಾರೆ – "ಈ ಹರ್ಷ ಈ ಆಮೋದ ಸದಾ ತಮ್ಮ ಬಾಳನ್ನು ಬೆಳಗುತ್ತಿರಲಿ; ಮನದ ಅಂಧಕಾರ ಅಳಿಸುತ್ತಿರಲಿ" ಎಂದು.

ಸಮೀಕ್ಷೆ ೩

.....They were composed and sung to express directly and clearly the interests of countless unkonwn people. They are therefore, of objective value in setting forth the daily concerns and emotional life of village people.

- L. Winifred Bryce
"Women's folk-songs of Rajaputana"

೧. ಮದುಮಗಳು

'ಮದುವೆ' ಹೆಣ್ಣುಮಕ್ಕಳ ಬಾಳಪುಟವನ್ನು ಬದಲಿಸುವ ಒಂದು ಘಟ್ಟ. ತಾಯಿತಂದೆಯರ ಅಕ್ಕರೆಯ ಮಗಳಾಗಿ ಬೆಳೆದವಳು ಮುಂದೆ ಒಂದು ಮನೆಯ ಜ್ಯೋತಿಯಾಗಿ ಹೋಗಲು ನಮ್ಮ ಹಿರಿಯರು ಈ ಮದುವೆಯಂಥ ಒಂದು ಸಂಭ್ರಮದ ಉತ್ಸವವನ್ನು ರೂಢಿಯಲ್ಲಿ ತಂದಿದ್ದಾರೆ. 'ನಮ್ಮ ಮನೆಯಂಗಳದಿ ಬೆಳೆದ ಈ ಹೂವನ್ನು ನಿಮ್ಮ ಮಡಿಲೊಳಗಿಡಲು ತಂದಿರುವೆವು' – ಎಂದು ಮಾತಾಪಿತೃಗಳು ತಮ್ಮ ಮಗಳನ್ನು ಧಾರೆ ಎರೆದು ಕೊಡುವ ಒಂದು ದಿವ್ಯಸನ್ನಿವೇಶ; ತಮ್ಮ ಮನೆಯನ್ನು ಬೆಳಗಲು ಈ ಹೆಣ್ಣುಮಗಳನ್ನು ವರನ ಮಾತಾಪಿತೃಗಳು ಬರಮಾಡಿಕೊಳ್ಳುವ ಒಂದು ಮಂಗಳಮುಹೂರ್ತ – ಈ ಮದುವೆ. ಹಿಂದೂ ಪದ್ಧತಿಯಂತೆ ಹೆಣ್ಣು ತನ್ನ ತೌರೂರನ್ನು ತೊರೆದು ತನ್ನ ಮುಂದಿನ ಜೀವನವನ್ನು ಗಂಡನ ಮನೆಯಲ್ಲಿ ಕಳೆಯಬೇಕು. ಹುಟ್ಟಿ, ಬೆಳೆದು, ಆಡಿ, ನಲಿದ ತನ್ನ ಹುಟ್ಟೂರನ್ನು ಬಿಡುವಾಗ ಯಾರಿಗಾದರೂ ದುಃಖವಾಗದಿರದು. ತಾವು ಸಾಕಿ ಸಲಹಿದ ಮಗಳನ್ನು ಪರರ ಮಡಿಲಿಗೆ ಅರ್ಪಿಸುವಾಗ ತಾಯಿತಂದೆಯರಿಗೂ ಇತರ ಹಿರಿಯರಿಗೂ ವ್ಯಸನವೆನಿಸದಿರದು. ಆದರೂ ಮಗಳಿಗೆ 'ಮದುವೆ'ಯಾಗಬೇಕು; ಅವಳು ಪತಿಯ ಮನೆಗೆ ಹೋಗಬೇಕು. ಅತ್ತೆಮಾವಂದಿರ ಸೇವೆಯನ್ನು ಮಾಡಬೇಕು. ಗಂಡನಿಗೆ ಉತ್ತಮ ಸಹಧರ್ಮಿಣಿಯಾಗಬೇಕು. ಇದು ನಮ್ಮ ಹಿರಿಯರು ಹಾಕಿರುವ ಸಂಪ್ರದಾಯದ ಕಟ್ಟು. ಈ ಕಟ್ಟು ಸ್ವಲ್ಪವೂ ಸಡಿಲದಂತೆ ನಮ್ಮ ಗ್ರಾಮಜೀವನ ನಡೆದುಬಂದಿದೆ. ಅಂತೆಯೇ ಅದಕ್ಕೆ ಸಂಬಂಧಪಟ್ಟ ಕೆಲವು ಮಧುರ ಜನಪದಗೀತೆಗಳೂ ಮೂಡಿಬಂದಿವೆ.

ವೃದ್ಧರೂ ಪೂಜ್ಯರೂ ಆದ ಬ್ರಾಹ್ಮಣೋತ್ತಮರಿಂದ 'ಮದುವೆ'ಯ ಕಾರ್ಯವನ್ನು ನೆರವೇರಿಸುವುದು ಒಕ್ಕಲು ಮಕ್ಕಳಲ್ಲಿ ಮೊದಲಿನಿಂದಲೂ ಬಂದ ಒಂದು ಪದ್ಧತಿ. ದಿವ್ಯಮಂತ್ರಗಳನ್ನು ಪಠಿಸುತ್ತ ಈ ಕಾರ್ಯವನ್ನು ಅವರು ಸುಸೂತ್ರವಾಗಿ ನೆರವೇರಿಸುತ್ತಾರೆ. ಮದುವೆಗೆ ಆಹ್ವಾನಿತರಾಗಿ ನೂರಾರು ಮಂದಿ ಬಂಧುಗಳೂ ಆಪ್ತೇಷ್ಟರೂ ಸೇರಿರುತ್ತಾರೆ. ಹಸಿರು ಚಪ್ಪರದಲ್ಲಿ, ತಳಿರು ತೋರಣಗಳ ಸೊಂಪಿನಲ್ಲಿ, ಜನರ ಗಜಿಬಿಜಿಯ ನಡುವಿನಲ್ಲಿಯೇ ಮಂತ್ರಪಠನೆಯ ಮಧುರನಾದ ಕಿವಿಗೆ ಬೀಳುತ್ತಿರುತ್ತದೆ. ವಧೂವರರು ಪರಸ್ಪರ ಅಭಿಮುಖರಾಗಿ ನಿಂತಿರುತ್ತಾರೆ. ವಧುವಿನ ತಗ್ಗಿದ ತಲೆಯೂ ವರನ ನೆಗಹಿದ ಶಿರವೂ, ಈವಿಯು ಅಕ್ಕಪಕ್ಕದವರ ಮುಗುಳುನಗೆಯೂ ಒಂದು ಸೊಗಸನ್ನು ತಂದರೆ, ಪುರೋಹಿತರ ಮಂತ್ರೋಚ್ಚಾರಣೆ, ಅವರ ಸಡಗರ ಮತ್ತೊಂದು ಬಗೆಯ ಪುಳಕವನ್ನುಂಟುಮಾಡುತ್ತವೆ. ಇವೆಲ್ಲವನ್ನೂ

ಮೀರಿಸಿ ಮೋಹನ ಮುರುಳಿಯ ನಿನಾದದಂತೆ ಜನಗಳ ನಡುವೆ ಹಳ್ಳಿಯ ಗರತಿಯರು ಹಾಡುವ ಗೀತೆಗಳ ಮಂಜುಳಸ್ವರ ಅತ್ತಗಮನ ಸೆಳೆಯುತ್ತದೆ.

ಎಪ್ಪತ್ತು ವರುಷಾದ ಮುಪ್ಪಿನ ಹಾರುವಯ್ಯ
ಮುತ್ತೀನ ಜನಿವಾರ ಹೆಗಲಲ್ಲಿ । ಹಾಕಿಕೊಂಡು
ಮಿತ್ರೇಗೆ ಧಾರೆ ಎರೆದಾನು॥

ಪುರೋಹಿತರು ವೃದ್ಧರು; ಅವರು ಧರಿಸಿರುವುದು ಮುತ್ತಿನ ಜನಿವಾರ – ಮುಂತಾದ ಒಂದು ಭವ್ಯಚಿತ್ರವನ್ನು ರಮ್ಯವಾಗಿ ಮೂಡಿಸುವ ಈ ಸಾಲುಗಳು ಮನವನ್ನು ಸೂರೆಗೊಳ್ಳುತ್ತವೆ. ಧಾರೆ ಎರೆಯುತ್ತಿರುವ ಪುರೋಹಿತರ ಬಗ್ಗೆ ಗೌರವ ಭಾವ ಮೂಡುವಂತೆ ಮಾಡುತ್ತವೆ. ಹಾರುವಯ್ಯನವರ ವಯಸ್ಸಿನ ಹಿರಿಮೆಯನ್ನು ಹೇಳುತ್ತ ಮುಂದುವರಿದು,

ಹನ್ನೆರಡು ವರುಷದ ಕನ್ಯೆಯ ಹಾರುವಯ್ಯ
ಚಿನ್ನದ ಜನಿವಾರ ಹೆಗಲಲ್ಲಿ । ಹಾಕಿಕೊಂಡು
ಕನ್ನೆಗೆ ಧಾರೆ ಎರೆದಾರು ॥

ಎಂದು ಕನ್ನೆಯ ಎಳೆಯ ವಯಸ್ಸನ್ನೂ, ಆ ಮಾತಿನಲ್ಲಿಯೇ ಅವಳ ಚೆಲುವನ್ನೂ ಬಿತ್ತರಿಸಿ, ಧಾರೆ ಎರೆಯುತ್ತಿರುವವರು ಧರಿಸಿರುವುದು ನೂಲಿನ ಜನಿವಾರವಾದರೂ ಅವರ ಕಣ್ಣಿಗೆ ಅದು ಚಿನ್ನದಷ್ಟು ಹಿರಿಮೆಯುಳ್ಳದ್ದಾಗಿ ತೋರುತ್ತಿದೆ ಎಂಬುದನ್ನು, ತನ್ಮೂಲಕ ಈ ಶುಭಕಾರ್ಯಕ್ಕೆ ಉಚಿತವ್ಯಕ್ತಿ ಇವರೆಂದು ತಮ್ಮ ಮೆಲುದನಿಯಲ್ಲಿ ಹಾಡುತ್ತಾರೆ ಆ ತರುಣಿಯರು!

ಇನ್ನೂ ಒಬ್ಬೊಬ್ಬರಾಗಿ ಮುಂದೆ ಬಂದು ಧಾರೆ ಎರೆದು ಹೋಗುತ್ತಾರೆ. ಹನ್ನೆರಡು ವರುಷ ಮಗಳನ್ನು ಮಮತೆಯಿಂದ ತನ್ನ ಪ್ರಾಣದಂತೆ ಸಾಕಿದ ತಾಯಿ ಮುಂದೆ ಬರುತ್ತಾಳೆ.

ಹಾಲಿನ ಹರವಿ ಅವರ ತಾಯಮ್ಮ ಹಿಡಕೊಂಡು
ಇನ್ನೇಕೆ ಮಗಳೆ ತವರಾಸೆ । ಅಂತ್ಹೇಳಿ
ಹಾಲಿನ ಧಾರೆ ಎರೆದಾಳು ॥

ಎಂಬ ನುಡಿ ಅವಳ ಹೃದಯವನ್ನು ಕಲಕುತ್ತದೆ. ಶುಭಕಾರ್ಯವಿದಾದರೂ ಯಾವುದೋ ಅಪೂರ್ವವಸ್ತು ತನ್ನಿಂದ ದೂರವಾಗುತ್ತಿದೆ ಎಂಬಂತೆ ಮನಸ್ಸಿನಾಳದಲ್ಲಿ ತಳಮಳದ ತರಂಗಪಂಕ್ತಿಗಳೇಳುತ್ತವೆ. ತಾಯಿಯ ಕಣ್ಣು ಮಂಜಾಗುತ್ತದೆ.

ತಂದೆ ಮುಂದೆ ಬರುತ್ತಾನೆ. ಅವನ ಮುಖವೂ ಗಂಭೀರವಾಗಿದೆ. ತನ್ನ ಪ್ರೀತಿಯ ಮಗಳನ್ನು ಅವನು ತುಪ್ಪದಿಂದ ಧಾರೆ ಎರೆದುಕೊಡುತ್ತಾನೆ.

ತುಪ್ಪಾದ ಹರವಿಯ ಅವರಪ್ಪಾಜಿ ಹಿಡಕೊಂಡು
ಇನ್ನೇಕೆ ಮಗಳ ತವರಾಶೆ । ಅಂತ್ಹೇಳಿ
ತುಪ್ಪದಲಿ ಧಾರೆ ಎರೆದಾನು ॥

'ಅಪ್ಪಾಜಿ' ಎಂಬ ಮಾತಿನಲ್ಲಿ ಮಗಳಿಗೆ ತಂದೆಯೆಂದರೆ ಎಂಥ ಪೂಜ್ಯ ವಸ್ತು, ಎಂಥ ಪ್ರೀತಿಯ ಪ್ರತೀಕ, ಆಕೆಗೆ ಅವನ ಹೃದಯದಲ್ಲಿ ಎಂಥ ವಾತ್ಸಲ್ಯದ ಸ್ಥಾನವಿದೆ ಎಂಬ ಅರ್ಥವೈಖರಿ ಮಿಡಿಯುತ್ತದೆ. ಎಲ್ಲರನ್ನೂ ಮೂಕಗೊಳಿಸುವಂತೆ ಆ ಸಾಲು ತೇಲಿ ಹೋಗುತ್ತದೆ.

ತಾಯಿತಂದೆಯರನ್ನುಳಿದು ಹಿರಿಯನಾದ 'ಅಣ್ಣಯ್ಯ' ಮುಂದೆ ಬಂದಿದ್ದಾನೆ. ಅವನಿಗೂ ತಂಗಿಯನ್ನು ದೂರಮಾಡಬೇಕೆಂಬ ವ್ಯಥೆ ಕಾಡುತ್ತಿದೆ. ಹಲವು ವರುಷ ಒಂದು ಮನೆಯಲ್ಲಿ ಎರಡು ಕುಡಿಗಳಾಗಿ ಬೆಳೆದವರವರು; ತನ್ನಣ್ಣನೆಂದರೆ ತಂಗಿಗೆಷ್ಟು ಮಮತೆ! ದಿನನಿತ್ಯವೂ ಅಣ್ಣನಲ್ಲಿ ಎಷ್ಟೊಂದು ಪ್ರೀತಿ ವಾತ್ಸಲ್ಯವನ್ನು ಅವಳು ತೋರುತ್ತಿದ್ದಳು! ಈಗ, ಇದೀಗ ಅವಳು ಪರರ ವಸ್ತುವಾಗುವ ಸನ್ನಿವೇಶ ಬಂದುಹೋಗಿದೆ.

ಎಣ್ಣೆಯ ಹರವಿಯ ಅವರಣ್ಣಯ್ಯ ಹಿಡಕೊಂಡು
ಇನ್ನೇಕೆ ತಂಗಿ ತವರಾಸೆ । ಅಂತ್ಹೇಳಿ
ಎಣ್ಣೇಲಿ ಧಾರೆ ಎರೆದಾನು ॥

ಊರಿನ ಹಿರಿಕಿರಿಯರೆಲ್ಲರಿಂದಲೂ ಧಾರೆಯ ಕಾರ್ಯ ನೆರವೇರುತ್ತದೆ. ಮದುವೆಯೂ ಸುಸೂತ್ರವಾಗಿ ನಡೆಯುತ್ತದೆ. ಮಿಕ್ಕ ಶಾಸ್ತ್ರಗಳೆಲ್ಲ ನಡೆದ ಮೇಲೆ ಮಗಳನ್ನು ಗಂಡನ ಮನೆಗೆ ಕಳಿಸಿಕೊಡುವ ದಿನವೂ ಸಮೀಪವಾಗಿ ಹೋಗುತ್ತದೆ. ಯಾವ ದಿನ ಇನ್ನೂ ಸ್ವಲ್ಪ ಹಿಂದೆ ಸರಿಯಲಿ ಎಂದು ತವರಿನವರೆಲ್ಲ ಹಂಬಲಿಸಿದ್ದರೋ ಆ ದಿನ ಇನ್ನೂ ಬೇಗನೆ ಬಂದುಬಿಟ್ಟಿದೆ. ಮಗಳನ್ನು ಇಂದು ಕಳಿಸಿಕೊಡಬೇಕಾಗಿದೆ. ಮೊದಲಬಾರಿಗೆ ಅವಳು ತೌರ ಹೊಸ್ತಿಲನ್ನು ದಾಟಬೇಕಾಗಿದೆ. ಆಗ :

ಬಣ್ಣವಿಲ್ಲವೆಂತ ಅವರಣ್ಣಯ್ಯ ಉರಿದೆದ್ದ
ಬಣ್ಣುಡಿಸಿ ತಂಗಿ ಕರೆಕೊಂಡು । ಹೋಗುವಾಗ
ಅಣ್ಣಯ್ಯನಿಗೆ ದುಃಖ ಎರಗೀದೊ ॥

ಹತ್ತಿರದ ಪೇಟೆಗೆ ಓಡಿಹೋಗಿ ತಂಗಿಗಾಗಿ ಒಳ್ಳೆಯ ಬಣ್ಣ (ಸೀರೆ)ವನ್ನು ತರುತ್ತಾನೆ; ತಂಗಿಯನ್ನು ಬೀಳ್ಕೊಡುವಾಗ ಅವನೆದೆ ದುಃಖದಿಂದ ಭಾರವಾಗಿದೆ. ಅದೇ ಸಮಯದಲ್ಲಿ :

ಕೊಪ್ಪು ಇಲ್ಲವೆಂದು ಅಪ್ಪಾಜಿ ಮೊರೆದೆದ್ದು
ಕೊಪ್ಪಿಕ್ಕಿ ಮಗಳ ಕರಕೊಂಡು । ಹೋಗುವಾಗ
ಅಪ್ಪಾಜಿಗೆ ಬಂದೊ ಕಡುದುಃಖ

ಮಗಳಿಗೆ ಕೊಪ್ಪು (ಒಂದು ವಿಧವಾದ ಒಡವೆ) ಇಲ್ಲವೆಂದು ಅಪ್ಪಾಜಿ ಅಕ್ಕಸಾಲಿಯ ಬಳಿ ಮಾಡಲು ಹಾಕಿದ್ದ ಒಡವೆಯನ್ನು ತಂದುಕೊಡುವಾಗ, ಮಗಳು ಹೊರಟುನಿಂತಿದ್ದನ್ನು ನೋಡಿ 'ಕಡುದುಃಖ' ಉಕ್ಕಿಬರುತ್ತದೆ. ಇನ್ನು ತಾಯಿಯನ್ನು

ಕೇಳಬೇಕೆ! ಎಲ್ಲರ ದುಃಖಕ್ಕಿಂತಲೂ ಹಿರಿದಾದುದು ಅವಳ ದುಃಖ. ತನ್ನ ಮಗಳನ್ನು ಹೆಜ್ಜೆ ಹೆಜ್ಜೆಗೂ ತಿದ್ದಿ ಬೆಳೆಸಿದ್ದಾಳೆ; ಒಳ್ಳೆಯ ಉಣಿಸನ್ನು ಕೊಟ್ಟು, ಒಳ್ಳೆಯ ನಡತೆಯನ್ನೂ ಕಲಿಸಿದ್ದಾಳೆ. ಮುಂದೆ ಒಳ್ಳೆಯ ಗರತಿಯಾಗಿ ತನ್ನ ಮಗಳು ಬಾಳಲೆಂಬ ಹೆಬ್ಬಯಕೆಯ ನಾಂದಿಯಾಗಿ ಬೀಳ್ಕೊಡಲಿದ್ದಾಳೆ. ಮನೆಗೆಲಸದಲ್ಲಿ ತನಗೆಷ್ಟೋ ನೆರವಾಗಿದ್ದಳು, ತನ್ನ ದುಃಖವನ್ನೆಷ್ಟೋ ಮರೆಸಿದ್ದಳು – ಅವಳಿಂದು ಪರ ಊರಿಗೆ ಹೊರಡಲಿದ್ದಾಳೆ! ತನ್ನ ಹೃದಯವನ್ನೇ ಕಳೆದುಕೊಂಡಷ್ಟು ದುಃಖ ಅವಳಿಗುಂಟಾಗಿದೆ. ಒಳ್ಳೊಳ್ಳೆಯ ಸೀರೆಗಳನ್ನು ಉಡಿಸಿ ನಲಿದಿದ್ದಳು; ತಲೆ ಬಾಚಿ ಒಡವೆಗಳನ್ನು ಇರಿಸಿ, ಹೂಮುಡಿಸಿ – ಗೌರಮ್ಮನಂತೆ ಅಲಂಕರಿಸಿ ಹಿಗ್ಗಿದ್ದಳು. ಇನ್ನು ಅವಳು ಪರರ ಒಡವೆ. ಈ ಅಲಂಕಾರ, ಈ ಆದರ ಅವಳಿಗಿನ್ನೆಲ್ಲಿ.... ಇನ್ನೆಲ್ಲಿ.....!

ವಾಲೆಯಿಲ್ಲವೆಂದು ತಾಯಮ್ಮ ಮೊರೆದಾಳು
ವಾಲಿಕ್ಕಿ ಮಗಳ ಒಡಗೊಂಡು । ಹೋಗುವಾಗ
ತಾಯಮ್ಮಗೆ ಬಂದೊ ಕಡುದುಃಖ ॥

ಸಹಜವಾದ ದುಃಖದೊರತೆಯಲ್ಲಿ ತಾಯಿ ಮಗಳನ್ನಪ್ಪಿಕೊಂಡು ಕಂಬನಿ ಮಿಡಿಯುತ್ತಾಳೆ. ಆ ಕಂಬನಿಯಲ್ಲಿ ಜಗತ್ತಿನ ನೋವೆಲ್ಲ ಅಡಗಿದೆ. ಬದುಕಿನ ಸಾರವೆಲ್ಲ ತುಂಬಿದೆ!

ಪತಿಯ ಮನೆಯನ್ನು ಸೇರಿದ್ದಾಯಿತು. ಇನ್ನೂ ಹೊಸ ಮನೆಯಲ್ಲಿ, ಹೊಸ ಜನರೊಡನೆ ಹೊಸ ಬಾಳುಗಳನ್ನು ಹೂಡಬೇಕು. ಹೊಸ ಜನ! ಹೊಸ ಮನೆ! ಹೊಸ ವಾತಾವರಣ! ಗಳಿಗೆ ಗಳಿಗೆಯಲ್ಲೂ ತಾಯಿ ತಿಳಿಸಿದ್ದ ಬುದ್ಧಿಯ ಮಾತುಗಳು ನೆನಪಿಗೆ ಬರುತ್ತಿವೆ. ಎಲ್ಲಿ, ಯಾವ ವಿಧದಲ್ಲಿ, ನಯದಲ್ಲಿ, ನಡತೆಯಲ್ಲಿ ಕುಂದು ಬಂದೀತೊ.... ಎನ್ನುವ ಅಂಜಿಕೆ! ಭಯ! ಸಂಕೋಚ! ಆದರೂ ಬಾಳಬಂಡಿಯನ್ನು ಹೂಡಿದ್ದಾಳೆ ! ತನ್ನ ಪತಿ ಯೋಗ್ಯನಾಗಿರುವಾಗ ಅವಳಿಗೇನು ಕೊರತೆ! ಅವಳಿಗಾವ ಭಯ!.... ಆದರೆ ... ಅವನೊಡನೆ ಕಲೆಯಬೇಕು... ಹೃದಯಗಳು ಒಂದಾಗಬೇಕು... ಒಲುಮೆಯ ಬಳ್ಳಿ ಬಿರುಮುಗುಳನ್ನು ಸೂಸಬೇಕು....

ಕೋಣೆಯಲ್ಲಿ ನಸುನಾಚಿಕೆಯಿಂದ ತುಂಬಿದ ಲಜ್ಜೆಯಿಂದ ಕುಳಿತಿದ್ದಾಳೆ ಹೊಸ ಮಡದಿ; ಬಾಳ ಗೆಳತಿ! ತನ್ನಿನಿಯಳನ್ನು ಮೊದಲ ಬಾರಿಗೆ ಕೂಡಲು, ಮೊದಲ ಬಾರಿಗೆ ನುಡಿಸಲು, ಇನಿಯ ಬರುತ್ತಿದ್ದಾನೆ... ಹೃದಯಗಳೆರಡೂ ಢವಢವ ಹೊಡೆದುಕೊಳ್ಳುತ್ತಿವೆ. ಅದು ತನ್ನ ಮಮತೆಯ ವಸ್ತುವಾದುದರಿಂದಲೇ ಅವನು ದಿಟ್ಟತನದಿಂದ ನಡೆದು ಬರುತ್ತಿದ್ದಾನೆ. ಹೃದಯಕಲಶದಲ್ಲಿ ಪ್ರೇಮ ಮಕರಂದವನ್ನು ತುಂಬಿ ತರುತ್ತಿದ್ದಾನೆ.

ಅತ್ತೆಯ ಮಗ ಬಂದ ಮುತ್ತ ಚೆಲ್ಲುತ ಬಂದ
ಮುತ್ತಿಗಿಂತವನ ಮುಖ ಚೆಂದ । ಕೋಣೇಲಿರುವ
ಅತ್ತೆಯ ಮಗಳೆ ಮುಖ ತೋರೆ ॥

ಮುತ್ತಿಗಿಂತಲೂ ಚೆನ್ನಾದ ಮುಖವುಳ್ಳ ಚೆಲುವ ಬಂದಿದ್ದಾನೆ. ಅತ್ತೆಯ ಮಗಳು ಮುಖವೆತ್ತಿ ಮುಗುಳ ಮಳೆಯನ್ನು ಕರೆಯಬಾರದೆ! ಅವಳಿಗೆ ತುಂಬ ನಾಚಿಕೆ.... ಅಂಜಿಕೆ.... ಅಂಥವಳಿಗೆ ಧೈರ್ಯದ ನುಡಿಗಳನ್ನಾಡಬಾರದೆ ! ಪ್ರೀತಿಯಿಂದ, ಮಮತೆಯಿಂದ ನೋಡಿಕೊಳ್ಳುತ್ತೇನೆಂಬ ಭರವಸೆಯನ್ನು ನೀಡಿ ಪ್ರೇಮಭಿಕ್ಷೆಯನ್ನು ಬೇಡಬಾರದೆ!

ಅತ್ತೆಯ ಮಗಳೆ ಮುಖ ತೋರೆ ನಿನ ನೋಡಿ
ಅಕ್ಕತಂಗೀರ ಮರೆತೇನು

ಅದಕ್ಕಿಂತ ದೊಡ್ಡದಿನ್ನೇನು ಬೇಕು ತನ್ನ ಪತಿಯಿಂದ.... ನಾದಿನಿಯರ ಭಯವನ್ನು ತಪ್ಪಿಸಿದ ಪತಿದೇವರು ಹೃದಯಕ್ಕೆ ಹತ್ತಿರನಾಗುತ್ತಿದ್ದಾನೆ –

ಮಾವನ ಮಗ ಬಂದ ಹೂವು ಚೆಲ್ಲುತ ಬಂದ
ಹೂವಿಗಿಂತವನ ಮುಖಚೆಂದ ! ಕೋಣೇಲಿರುವ
ಮಾವನ ಮಗಳೆ ಮುಖ ತೋರೆ

ಅವನದು ಹೂವಿನಂಥ ಮುಖ, ಹೂವಿನಂಥ ಹೃದಯ, ಅಷ್ಟೇ ಪವಿತ್ರ ಪ್ರೇಮ. ಅದೋ ಆ ಪ್ರೇಮದ ಭರವೇ ಈ ಮಾತನ್ನು ಅವನ ಬಾಯಲ್ಲಿ ನುಡಿಸುತ್ತಿದೆ....

ಮಾವನ ಮಗಳೆ ಮುಖತೋರೆ ನಿನ ನೋಡಿ
ತಾಯಿತಂದೆಯರ ಮರೆತೇನು!*

---

* ಪ್ರಿಯಮಿತ್ರ ಸಿ.ಪಿ.ಕೆ. ಅವರು ತಮ್ಮ ಅಜ್ಜಿಯವರಿಂದ ಸಂಗ್ರಹಿಸಿದ ಹಾಡುಗಳನ್ನು ೧೯೫೭ರಲ್ಲಿ ಈ ಲೇಖನದಲ್ಲಿ ಬಳಸಿಕೊಳ್ಳಲು ನನಗೆ ನೀಡಿ ಉಪಕರಿಸಿದ್ದಾರೆ.

ಕೋಲು ಕೋಲಣ್ಣ ಕೋಲೆ

ಶರಣು ಶರಣುವಯ್ಯ ಗಣನಾಯ್ಕ
ನಮ್ಮ ಚೆಲ್ಲುಮುತ್ತು ಕೋಲು ಕೋಲು ಸ್ವಾಮಿನಾಯ್ಕ
ಅಯ್ಯ ಶರಣು ಶಂಭೋಲಿಂಗ ಗಣನಾಯ್ಕ
ಸ್ವಾಮಿ ಶಿವನ ಕುಮಾರ ಲಿಂಗ ಗಣನಾಯ್ಕ

ಕೋಲು ಕೋಲು ತಾಗಿ ಹೊಮ್ಮುವ ಕಣಿಕಣಿ ನಿನಾದದಂತೆಯೇ ಪದಗಳ ಗುಂಗು ಕರ್ಣರಸನೆಯ ಮೇಲೆ ಕುಣಿಯತೊಡಗುತ್ತದೆ. ಹಿಂದೆ ಕೇಳಿದ ಕೋಲಾಟದ ಪದಗಳು ಇಂದಿಗೂ ಸ್ಮೃತಿಪಟಲದ ಮೇಲೆ ಸ್ವರ್ಣರೇಖೆಗಳಂತೆ ಮಿಂಚುತ್ತಿವೆ. ಈ ಹಾಡುಗಳನ್ನು ಹೇಳುವುದರಲ್ಲಿ ನಮ್ಮ ಹಳ್ಳಿಗರ ಉತ್ಸಾಹ, ಆನಂದಗಳನ್ನು ನೆನೆದರೆ ಹಳ್ಳಿಯ ಬಾಳಿನ ಪಾವಿತ್ರ್ಯದ ಬಗ್ಗೆ ಅಭಿಮಾನ ಮೂಡುತ್ತದೆ. ಬಿಡುವು ದೊರೆತಾಗ, ಹಬ್ಬ ಹುಣ್ಣಿಮೆಗಳಲ್ಲಿ, ಜಾತ್ರೆ ಸಮಾರಂಭಗಳಲ್ಲಿ ಕೋಲಾಟವನ್ನು ನೋಡಿ ಹಿರಿ ಹಿಗ್ಗದವರುಂಟೆ! ತಾಳಬದ್ಧವಾದ ಕುಣಿತಕ್ಕೆ ಹೊಂದಿಕೊಂಡಂತೆ ತಮ್ಮ ಹೃದಯವನ್ನು ಕುಣಿಸದವರೂ ಉಂಟೆ? ಆ ಮನಮೋಹಕ ಗೀತೆಗಳನ್ನು ಕೇಳಿ ಮೈಮರೆಯದವರು ಉಂಟೆ!

ಕೋಲಾಟ !

ಓಹೋ! ಹೌದು, ನಮ್ಮೂರಿನಲ್ಲಿಂದು ಕೋಲಾಟ! ಹುಣ್ಣಿಮೆಯ ಚಂದ್ರ ಮುಗಿಲಮಂಚದ ಮೇಲೆ ಪವಡಿಸಿ ಮಂದನಗೆಯನ್ನು ಬೀರಿ ಬುವಿಯನ್ನು ಆಕರ್ಷಿಸುವಾಗ ಕೋಲಾಟದ ವಾರ್ತೆಯನ್ನು ಕೇಳಿ ಅಲ್ಲೆಲ್ಲಿಯೋ ವನರಾಜಿಯ ನಡುವೆ ಕುಳಿತು ಆಕಳಿಸುತ್ತಿದ್ದ ಮಧುಮಂದಾನಿಲ ನುಣ್ಣನೆ ತೀಡಿಬರುವಾಗ ನಮ್ಮೂರಿನಲ್ಲಿ ಕೋಲಾಟ! ಮುದುಕರು ಮೋಟರಿಂದ ಹಿಡಿದು ಊರಿನ ಸಮಸ್ತರೂ ಆ ವಿಶಾಲ ಬಯಲಿನಲ್ಲಿ, ಸಣ್ಣ ತಿಮ್ಮನ ಪಾಳು ಹೊಲದಲ್ಲಿ ಗುಂಪು ಕೂಡುವಾಗ ಕೋಲಾಟ! ಏನು ಸಂಭ್ರಮ, ಏನು ಸಂತಸ! ಅದೇನು ವೈಭವ ನಮ್ಮ ಜನರಿಗೆ!

ಬಿಸಿಲು ಮಳೆಗಳೆನ್ನದೆ, ಹಗಲು ರಾತ್ರಿಗಳೆನ್ನದೆ ದುಡಿಯುವ ಇವರಲ್ಲಿ ಜೀವನಪರ್ಯಂತವೂ ದೇಹಶ್ರಮವನ್ನೇ ಹಾಸಿ ಹೊದೆಯುವ ಈ ಮಣ್ಣಿನ ಮಕ್ಕಳಲ್ಲಿ ಅದೇನು ಸಂಸ್ಕೃತಿ, ಅದೇನು ರಸಿಕತೆ, ಅದೇನು ದೈವಭಕ್ತಿ ! ಇಂಥ ಆನಂದದ ಕೂಟ ಒಂದು ಸೇರಿದರೂ ಆಯಿತು, ಅವರ ಕಷ್ಟಕಾರ್ಪಣ್ಯಗಳೆಲ್ಲ ಕರಗಿಹೋದಂತೆ, ಹೊಸಲೋಕ ಹೊಸನಾಕಗಳೇ ಅವರೆದುರು ಮೂಡಿನಿಂತಂತೆ. ಭೂಮಿತಾಯಿಯ ದಿವ್ಯ ಕರುಣೆಗೆ ಪಾತ್ರರಾದ ಇವರ ಸಿರಿ ಸಂತಸಗಳನ್ನು ಇಂಥ ಕುಣಿತಗಳಲ್ಲಿ ನೋಡಬೇಕು. ಲೋಕವನ್ನು ಸಾಕುವ ಈ ನೇಗಿಲ ಯೋಗಿಗಳ ಆನಂದೋನ್ಮಾದವನ್ನು

ಈ ಆಟಕೂಟಗಳಲ್ಲಿ ಕಾಣಬಹುದು. ಬಾಳಿನ ನೂರು ನೂರು ನೋವುಗಳನ್ನು ನುಂಗಿಕೊಂಡು ಶಾಂತಿಯಿಂದ, ನೆಮ್ಮದಿಯಿಂದ ಬದುಕುವ ಈ ನೀಲಕಂಠ ಹಿರಿಯರ ಸಂಸ್ಕೃತಿಯನ್ನು ಅವರ ಪದಗಳಿಂದ, ಅವರ ನುಡಿಗಳಿಂದ ಅರಿಯಬೇಕು....

ಅದೋ, ಅವರೇ ಆ ಯುವಕರು. ಕಾಲಿಗೆ ಗೆಜ್ಜೆಯನ್ನು ಕಟ್ಟಿ, ಕೈಯಲ್ಲಿ ಫಳಫಳನೆ ಮಿಂಚುವ ಕೋಲುಗಳನ್ನು ಹಿಡಿದು, ವೀರಗಚ್ಚೆಯನ್ನು ಹಾಕಿ ವೀರರಂತೆಯೇ ರಂಗಕ್ಕಿಳಿದಿದ್ದಾರೆ. ತಲೆಯ ಮೇಲೆ, ನಡುವಿಗೆ ಕೆಂಪು ವಸ್ತ್ರಗಳನ್ನು ಸುತ್ತಿದ್ದಾರೆ. ಕುತೂಹಲದಿಂದ, ಹೆಮ್ಮೆಯಿಂದ ಸುತ್ತಲೂ ದೃಷ್ಟಿಯನ್ನು ಬೀರುತ್ತಿದ್ದಾರೆ.

ಅಲ್ಲಿ ವಯೋವೃದ್ಧರು, ಹೆಂಗಸರು ಮಕ್ಕಳು, ಇಲ್ಲಿ ಕೆಲವು ಪ್ರಮುಖ ರೈತರು.... ಇತ್ತ.... ಇತ್ತ... ಯುವತಿಯರ ಗುಂಪೂ ಕುಳಿತಿದೆ! ಅದರಲ್ಲಿ ಅವರು ಇವರು ಎಲ್ಲ ಇರುತ್ತಾರೆ. ಕೆಂಪಿ, ಚೆನ್ನಿ, ಬೋರಿ, ಚೆಲುವಿ, ಸುಂದ್ರಿ, ಗೌರಿ, ಲಕ್ಷ್ಮಿ.... ನಿತ್ಯವೂ ಇವರು ಹಾಡುಗಳನ್ನು ಹೇಳುತ್ತಲೇ ಇರುತ್ತಾರೆ. ತಮ್ಮ ಮಧುರ ಕಂಠದಿಂದ ಮೋಹಕ ಗೀತೆಗಳನ್ನು ಹಾಡಿ ಹಳ್ಳಿಯ ಬಾಳನ್ನು ರಸಮಯವಾಗಿ ಮಾಡಿದ್ದಾರೆ. ಕಾಳ, ಬೋರ, ನಿಂಗ, ಕೆಂಚ, ರಾಮ, ಸಿದ್ಧ, ನಂಜ... ರಂಗ... ಅವರಿಗೂ ಪದಗಳು ಬರದಿರುವುವೆ? ಹಾಡಿಕೊಂಡು ರಾತ್ರಿಯೆಲ್ಲ ಕೋಲು ಹುಯ್ದರೂ ಮುಗಿಯುವುದಿಲ್ಲ!

ಅಯ್ಯ ನೇಮದಿಂದ ಪೂಜೆಮಾಡಿ ಗಣನಾಯ್ಕ
ಅಯ್ಯ ಹಸ್ತೇವು ಹಾಲನಿತ್ತು ಗಣನಾಯ್ಕ
ಅಯ್ಯ ಮೀರೇವು ಮಡಿಯನಿತ್ತು ಗಣನಾಯ್ಕ
ಅಯ್ಯ ನಡೆಯತಪ್ಪೊ, ನುಡಿಯತಪ್ಪೊ ಗಣನಾಯ್ಕ
ಅಯ್ಯ ಕೋಲುಗೀಲು ತಪ್ಪಿದರೆ ಗಣನಾಯ್ಕ
ಅಯ್ಯ ಬಯ್ಯದಿರಿ ಸಭೆಗಳಿರ ಗಣನಾಯ್ಕ

ಆರಂಭವಾಗಿಯೇ ಹೋಯಿತು ಕೋಲಾಟ. ನೆರೆದ ಮಂದಿ ಉತ್ಸುಕರಾಗಿ ಕುಣಿತವನ್ನು ನೋಡುತ್ತಿದ್ದಾರೆ;

ಬಿಲ್ಲುಪತ್ರೆ ಬಾಣಗಳು ಗಣನಾಯ್ಕ
ಇತ್ತುಪೂಜೆ ಮಾಡಿಯೇವೊ ಗಣನಾಯ್ಕ
ಅಯ್ಯ ಬಗ್ಗಿ ಮಡಿಲದುಂಬಿಯೇವೊ ಗಣನಾಯ್ಕ
ನಮ್ಮ ಕರುಣಾದಿಂದಲಿ ಕಾಯೊ ಗಣನಾಯ್ಕ
ಅಯ್ಯ ಶರಣು ಶಂಭೋಲಿಂಗ ಗಣನಾಯ್ಕ
ನಮ್ಮ ಚೆಲ್ಲು ಮುತ್ತು ಕೋಲು ಕೋಲು ಗಣನಾಯ್ಕ

ಸಾಮೂಹಿಕ ಗೀತೆ, ಸಾಮೂಹಿಕ ನೃತ್ಯ ಗೆಜ್ಜೆಗಳ ಝುಣಝುಣ ರವ ಕೋಲುಗಳ ಕಿವಿ ಬಿರಿಯುವ ನಾದ.... ಸಭೆಗೆ ಸಭೆಯೇ ಸೊಬಗಿನ ತೂಗುಮಂಚದ ಮೇಲೆ ಉಯ್ಯಾಲೆಯಾಡುತ್ತದೆ.

ಸುತ್ತಮುತ್ತ ಕೋಲು ಕೊಡಿ ಸೂಳೆರಾಯಗೇ
ಸೂಳೆಗೇರಿ ಮೇಲುಕೋಟೆ ಚೆಲುವರಾಯಗೇ
ಅರಸರೆಲ್ಲ ಕೋಲು ಕೊಡಿ ನಾರಸಿಂಹಗೇ
ಚುಂಚನಕಟ್ಟೆ ಚುಂಚನಗಿರಿ ಭೈರುವಗೇ
ಚಂದದಿಂದ ಕೋಲು ಕೊಡಿ ಅಂದದಿಂದ ಕೋಲು ಕೊಡಿ
ಸುತ್ತಮುತ್ತ ಸುಳಿದು ಸುತ್ತಿ ಕೋಲು ಕೊಡಿರೊ
ಅಂದ ಚಂದದ ಗೆಳೆಯರಿರ ಕೋಲು ಕೊಡಿರೊ
ರಾಗದಿಂದ ಕೋಲು ಕೊಡಿ ರಾಣಿಪುರುಷಗೆ
ತೇರುಬೀದಿ ನಂಜನಗೂಡ ನಂಜುಂಡಂಗೆ
ರಾಗದಿಂದ ಕೋಲು ಕೊಡಿ ರಚ್ಚದಿಂದ ಕೋಲು ಕೊಡಿ
ಬಾಗಿ ಬಾಗಿ ಕೋಲು ಕೊಡಿ

ಬಟ್ಟಮುಖದ ಗೆಳೆಯರಿರಾ ಕೋಲು ಕೊಡಿರೊ
ಬೆಟ್ಟದ ಮೇಲಿನ ಭೈರುವಗೆ ಕೋಲು ಕೊಡಿರೊ
ತೂಗುಮಂಚದ ತುರುವೆಕೆರೆ ಲಾಲಾದೇವಿಗೆ
ಸುತ್ತಮುತ್ತ ಕೋಲು ಕೊಡಿ ಸೂಳೆರಾಯಗೆ
ಚಂದದಿಂದ ಕೋಲು ಕೊಡಿ
ಅಂದದಿಂದ ಕೋಲು ಕೊಡಿ
ಸಂದಿಸಂದೀಲ್ ಕೋಲು ಕೊಡಿ
ಅಂದ ಚಂದದ ಗೆಳೆಯಂದಿರ ಕೋಲು ಕೊಡಿರೊ
ಸುತ್ತಮುತ್ತ ಸುಳಿದು ಸುತ್ತಿ ಕೋಲು ಕೊಡಿರೊ

ಹಾಡು ಮುಗಿದು ಉಸಿರಾಡಿಕೊಳ್ಳಲು ಕೋಲುಗಳನ್ನು ನಿಲ್ಲಿಸುತ್ತಾರೆ. ಉತ್ಸಾಹಪೂರ್ಣ ಮುಖದಿಂದ ಬೆವರಿನ ಹನಿಗಳು ಜಾರಿ ಬೀಳುತ್ತವೆ. ಒಂದೆರಡು ಪ್ರಶಂಸೆಯ ಮಾತುಗಳು ಅಲ್ಲಲ್ಲಿ ಸುಳಿದು ಕರಗುವುದರಲ್ಲಿ ಮತ್ತೆ ವೃತ್ತಾಕಾರದಲ್ಲಿ ಹೆಜ್ಜೆಗಳನ್ನಿಡತೊಡಗುತ್ತಾರೆ... ಅಕ್ಕಪಕ್ಕಕ್ಕೆ ಕೋಲು ಕೊಡಲಾರಂಭಿಸುತ್ತಾರೆ.

ಕೋಲು ಕೋಲಣ್ಣ ಕೋಲೆ ಶ್ರೀಚಂದನಾ
ಕೋಲು ಕೋಲಣ್ಣ ಕೋಲೆ

ಕೋಲು ಆಟಕೆ ಚೆಂದ ಬಾಲೆಯ ದನಿ ಚೆಂದ
ಸೂಳೆಯ ಕುಣಿತ ಬಲು ಚೆಂದ

ಚಿನ್ನದಾ ಕೋಲು ಕೋಲಣ್ಣ ಕೋಲೆ
ರನ್ನದಾ ಕೋಲು ಕೋಲಣ್ಣ ಕೋಲೆ

ಹಾಲು ಬೋನವು ಚೆಂದ ಮೇಲು ಮಾಳಿಗೆ ಚೆಂದ
ಹೋಳಿಗೆ ತುಪ್ಪದ ಸವಿಚೆಂದ

ಗಂಧದ ಕೋಲು ಕೋಲಣ್ಣ ಕೋಲೆ
ರನ್ನದ ಕೋಲು ಕೋಲಣ್ಣ ಕೋಲೆ

ಮನೆಗೆ ಮಕ್ಕಳು ಚೆಂದ ಬನಕೆ ವೃಕ್ಷವು ಚೆಂದ
ಮನೆಗೊಬ್ಬ ಮುದುಕಿ ಇರೆಚೆಂದ

ಹೂವಿನ ಕೋಲು ಕೋಲಣ್ಣ ಕೋಲೆ
ರನ್ನದ ಕೋಲು ಕೋಲಣ್ಣ ಕೋಲೆ

ಹಲಸೀನ ತೊಳೆ ಚೆಂದ ಗಳಿಸಿದ ಹಣ ಚೆಂದ
ಒಲಿಯದ ಹೆಣ್ಣ ಬಿಡೆ ಚೆಂದ

ಮುತ್ತಿನ ಕೋಲು ಕೋಲಣ್ಣ ಕೋಲೆ
ರನ್ನದ ಕೋಲು ಕೋಲಣ್ಣ ಕೋಲೆ

ನಾರಿಯ ಮುಖ ಚೆಂದ ಜಾರೆಯ ಸುಖ ಚೆಂದ
ಮಾರನ ಕೇಳಿ ಆನಂದ

ಮುದ್ದಿನ ಕೋಲು ಕೋಲಣ್ಣ ಕೋಲೆ
ರನ್ನದ ಕೋಲು ಕೋಲಣ್ಣ ಕೋಲೆ

ತಾಳಿ ಕೊರಳಿಗೆ ಚೆಂದ ಬಾಳೆ ತೋಟಕೆ ಚೆಂದ
ಗೋಳಾಡದಿರ್ಪ ಸೊಸೆ ಚೆಂದ

ಹೊನ್ನಿನ ಕೋಲು ಕೋಲಣ್ಣ ಕೋಲೆ
ರನ್ನದ ಕೋಲು ಕೋಲಣ್ಣ ಕೋಲೆ

ಗುಡಿಗೆ ದೇವರು ಚೆಂದ ಮಡಿಗೆ ನಾರುಡೆ ಚೆಂದ
ಪೊಡವಿಗೆ ಧರ್ಮ ಬಲುಚೆಂದ

ಹವಳದ ಕೋಲು ಕೋಲಣ್ಣ ಕೋಲೆ
ರನ್ನದ ಕೋಲು ಕೋಲಣ್ಣ ಕೋಲೆ

ಹಿರಿಯರು ತಲೆದೂಗಿದರು; ಅಲ್ಲಲ್ಲಿ ಮೆಚ್ಚಿಗೆಯ ದನಿಗಳೂ ಕೇಳಿಬಂದವು. ಮರುನಿಮಿಷವೇ ಮತ್ತೆ ಕೋಲು ಕೂಡಿದುವು.

ನಾನೂ ಬತ್ತೀನಿ ಜಾತ್ರಿಗೇ
ಕೇತಾರಿ ರಂಗನ ಜಾತ್ರೀಗೇ
ಉಳ್ಳೀಯ ಹುರಿಕೊಂಡು ಹುಗ್ಗೀಯ ಕರೆಕೊಂಡು
ನಾನೂ ಬತ್ತೀನಿ ಜಾತ್ರಿಗೇ ಅಹ ಕೇತಾರಿರಂಗನ ಜಾತ್ರೀಗೆ

ಕಾಳು ಹುರಿಕೊಂಡು ಕಾಳೀಯ ಕರೆಕೊಂಡು
ನಾನೂ ಬತ್ತೀನಿ ಜಾತ್ರಿಗೆ ಅಹ
ಅಂಗಿ ಇಕ್ಕೊಂಡು ನಿಂಗಿ ಕರ್ಕೊಂಡು
ನಾನೂ ಬತ್ತೀನಿ ಜಾತ್ರಿಗೆ ಅಹ

ಬೀಡಿ ಸೇದ್ಕೊಂಡು ಬೋಡಿ ಕರ್ಕೊಂಡು
ನಾನೂ ಬತ್ತೀನಿ ಜಾತ್ರೆಗೆ ಅಹ
ಮೂಗುತಿ ಇಕ್ಕೊಂಡು ಮೂಗಿ ಕರ್ಕೊಂಡು
ನಾನೂ ಬತ್ತೀನಿ ಜಾತ್ರೆಗೆ ಅಹ

ಸೀರೆ ಉಟ್ಕೊಂಡು ಸೀತೆ ಕರ್ಕೊಂಡು
ನಾನೂ ಬತ್ತೀನಿ ಜಾತ್ರೀಗೆ ಅಹ
ಪುಟ್ಟಿ ಹೊತ್ಕೊಂಡು ಪುಟ್ಟೀ ಕರ್ಕೊಂಡು
ನಾನೂ ಬತ್ತೀನಿ ಜಾತ್ರೀಗೆ ಅಹ ಕ್ಯಾತಾರಿರಂಗನ ಜಾತ್ರೀಗೆ

ಹೆಂಗಸರೆಲ್ಲ ಗೊಳ್ಳೆಂದು ಬಯಲು ಬಿರಿಯುವಂತೆ ನಕ್ಕರು. ಹುಡುಗರು ಓಹೋ ಓಹೋ ಎಂದು ಕುಣಿದರು. ಬೋರಿ, ನಿಂಗಿ, ಪುಟ್ಟಿ, ಸೀತೆ ಹಾಡಿದವನ ಬಗ್ಗೆ ಹುಸಿ ಮುನಿಸನ್ನು ನಟಿಸುತ್ತ ತಲೆ ತಗ್ಗಿಸಿದರು. ಯುವಕರ ಗದ್ದಲವಂತೂ ಮೇರೆಯನ್ನೇ ಮೀರಿತು.

"ದೇವರ ಮ್ಯಾಲೆ ಆಡ್ರೊ ಲೇ ಇನ್ನೊಂದ...." ಯಾರದೋ ದನಿ; "ಬೇಡ....ಬೇಡ.... 'ಗಂಧದ ಕೋಟೆ....' ಆಡಿ...." ದೇವರಿಗೆ ಪುರಸ್ಕಾರ ದೊರೆಯಿತು. ತಿರುಪತಿ ತಿಮ್ಮಪ್ಪ ಕೋಲಾಟದವರ ನಾಲಗೆಯ ಮೇಲೆ ಒಡಮೂಡಿ ನರ್ತಿಸತೊಡಗಿದ....

ಹೌದಿಲ್ಲಹುದೆ ಮಂದರ ಧರಗೆ
ಘಮಘಮ ಕಸ್ತೂರಿ ಗೋವಿಂದಗೆ
ಅಯ್ಯನ ಸೇವೆಗೆ ನಾಡೆಲ್ಲ ಸೇರಿತ್ತು
ಮೈಯೆಲ್ಲ ನಾಮ ತಿರುನಾಮ
ತಿಮ್ಮಪ್ಪ ಮುಂದಲ ಸೇವೆ ನಿಮಗಾದೊ
ದಾಸಯ್ಯ ಬರ್‍ತಾನೆ ಸಾರ್‍ಸಿಸಿರಿ ಗುಡಿಸಿರಿ
ಕ್ಯಾಸಕ್ಕಿ ಮುತ್ತ ಕೆದರೀರೆ
ತಿರುಪತಿಯ ಯಾಸಗಾರ ಬರ್‍ತಾನೆ ಎಡೆಮಾಡಿ

ಗಿರಿಯ ಹತ್ತುತ್ತ ಕುಡಿಬೆವರು ಬೆವರುತ್ತ
ಎಡೆ ಎಡೆಗೆ ಶಂಖವ ನುಡಿಸುತ್ತ
ದಾಸಯ್ಯ ಗಿರಿಯ ಹತ್ತುವುದೆ ಸಡಗರ
ಆರು ಸಾವೀರ ಪರಿಸೆ ಏರಿತು ಗಿರಿಗಾಗಿ
ಏರಿದ ಬಾರಕ್ಕೆ ಗಿರಿ ಜರಿದೊ
ತಿಮ್ಮಪ್ಪ ಕಾಳಿಂಗ್ನ ಕಟ್ಟಿ ಬಿಗಿಸ್ಯಾನೆ
ಹತ್ತು ಸಾವಿರ ಪರಿಸೆ ಹತ್ತೀತು ಗಿರಿಗಾಗಿ
ಹತ್ತಿದ ಬಾರಕ್ಕೆ ಗಿರಿ ಜರಿದೊ
ತಿಮ್ಮಪ್ಪ ಸರ್ಪನ ಕಟ್ಟಿ ಬಿಗಿಸ್ಯಾನೆ

* * * *

ಅವರಲ್ಲಿಯೇ ಸ್ಪರ್ಧೆ ಆರಂಭ! ಕೋಲಿಗೆ ತಕ್ಕ ಕುಣಿತ, ರಾಗಕ್ಕೆ ತಕ್ಕ ಮಣಿತ – ಬಳುಕಿ, ಬಾಗಿ, ಕುಣಿದು, ಕುಪ್ಪಳಿಸಿ ನೆಲದಲ್ಲಿ ಎದ್ದ ಕೆಂಧೂಳಿ ಚಂದ್ರನ ಮುಖಕ್ಕೆ ಮುತ್ತುವಂತೆ ಮಾಡಿ ಹಾಡುಗಳ ಮಾಲೆ ಮಾಲೆಗಳೇ ಇಳಿದು ಬರುತ್ತಿವೆ.

'ಗಂಧದ ಕೋಟೆ ಘಮ ಘಮ
ಸಿರಿಗಂಧದ ನಿರಿಯೋಳೆ....'

ಎಂದು ಒಂದು ಮುಗಿಯುವುದರಲ್ಲಿ

ಹೌದೇಳಿರಣ್ಣ ನೀವಲಪ್ಪೇಳಿರೊ
ಬಲ್ಲಂಥ ಜಾಣರು ತಿಳಿದ್ಹೇಳಿರೊ
ಕಾಯಿ ಒಡೆದರೆ ಕಂಠ ಮನೆಗೆ ಬಂದರೆ ನೆಂಟ
ಕಂಡು ಕರೆಯದ ನಂಟ ಇದ್ದರೇನೊ ಇಲ್ಲದಿದ್ದರೇನೋ

ಎಂದು ಮತ್ತೊಬ್ಬ ಆರಂಭಿಸಿತ್ತಾನೆ. ಮರುಗಳಿಗೆಯಲ್ಲೇ....

ಕಿನ್ನುಡಿ ಕಿರುಗೆಜ್ಜೆ ಕಿರುಗೆಲ್ಲ ಗೂರುಸುತ್ತು
ಕನ್ನಡಿ ಮೇಲೆ ಕಿರುಗೆ ತಂದ್ಯೆ ತನ್ನ

ಎಂದು ಮತ್ತೆ ರಾಗವೆತ್ತುತ್ತಾನೆ....ಕೊನೆಯವನು ತಾನು ಸೋಲುವುದಿಲ್ಲವೆಂಬಂತೆ....

ಕೋಲು ಕೋಲ್ಲುವಿನ ಕೋಲೆ
ಕೋಲು ಮಲ್ಲಿಗೆಯ ಕೋಲು ಕೋಲ್ಲುವಿನ ಕೋಲೆ

ಶಿವಗಂಗೆ ಸುತ್ತೆಲ್ಲ ಸುತ್ತೆಲ್ಲ ಮಲ್ಲಿಗೆ
ಶಿಶುಮಕ್ಕಳಿsಗೆಲ್ಲ ಶಿವನುಡಿಯೊಲಿಂಗಧರ....ಕೋ....
ಅಂತರಂತರ್ಗಂಗೆ ಅದರಮ್ಯಾಲ್ಶಿವಗಂಗೆ
ಸಂತೆಯ ಬಯಲಲಿ ಕಲ್ಲುಕಟ್ಟೆ ಲಿಂಗಧರ ಕೋ

ಮುಂತಾಗಿ ಹೇಳಿಮುಗಿಸುವುದರಲ್ಲಿ ಮುಗಿಲಿನಲ್ಲಿ ಶಶಿ ಎಷ್ಟೋ ಮೇಲೇರಿ ಬಂದಿರುತ್ತಾನೆ. ಗುಂಪು ಚೆದುರುವಾಗ ಹಾಡು – ಕುಣಿತಗಳ ವಿಮರ್ಶೆ ಕೆಲವರ ಬಾಯಲ್ಲಿ ಸುಳಿದರೆ ಮತ್ತೆ ಕೆಲವರು 'ಕೋಲು ಪದಗಳನ್ನೇ ಉಚ್ಚರಿಸುತ್ತ' ಹೆಜ್ಜೆಗಳನ್ನಿಡುತ್ತಾರೆ. ಕೆಲವು ಪದಗಳಲ್ಲಿ ಬರುವ ನೀತಿ, ಆದರ್ಶ, ಕೆಲವು ಪದ್ಯಗಳಲ್ಲಿ ಹೊಮ್ಮಿರುವ ಪ್ರೇಮ, ರಸಿಕತೆ, ಮತ್ತೆ ಕೆಲವದರಲ್ಲಿ ದೈವಭಕ್ತಿ ಇವೆಲ್ಲವೂ ಹಲವು ಮನಸ್ಸುಗಳ ಮೇಲೆ ವಿಧವಿಧವಾದ ಪರಿಣಾಮವನ್ನು ಮಾಡಿರುತ್ತವೆ. ಹಾಡುಗಳನ್ನು ಎಷ್ಟೋ ಬಾರಿ ಕೇಳಿದ್ದರೂ ಮತ್ತೆ ಹೊಸದಾಗಿ ಕೇಳಿದಂತೆ ಆನಂದಿಸುತ್ತ, ಮೊದಲ ಚರಣಗಳನ್ನು ಮೆಲುಕುತ್ತ, ಕೋಲಾಟದವರನ್ನು ಪ್ರಶಂಸಿಸುತ್ತ ಹೋಗುವ ಸೊಬಗೇ ಒಂದು ಸೋಜಿಗ! ಸಂಭ್ರಮ!

ಅಕ್ಕನ ಮಮತೆ

ತಾನು ಹುಟ್ಟಿಬೆಳೆದ ತೌರಿನ ಬಗೆಗೆ, ತನ್ನನ್ನು ಪರಿಪೋಷಿಸಿದ ತಾಯಿ ತಂದೆಯರ ಬಗೆಗೆ ಯಾವ ಹೆಣ್ಣಿಗಾದರೂ ಮಮತೆ ಹೆಚ್ಚು. ಅಂತೆಯೇ ತನ್ನ ಅಣ್ಣತಮ್ಮಂದಿರು, ಅಕ್ಕತಂಗಿಯರು ಮುಂತಾದವರನ್ನು ನೆನೆದಾಗಲೂ ಅವಳ ಹೃದಯದಲ್ಲಿ ಒಂದು ಬಗೆಯ ಆನಂದವುಂಟಾಗುತ್ತದೆ. ತಾಯಿಯನ್ನು ನೆನೆವಾಗಲಂತೂ ಮನ ಗೌರವದಿಂದ ಮಣಿಯುತ್ತದೆ. ಪ್ರೀತಿಯ ಕಂಬನಿ ಮುತ್ತುಗಳನ್ನರ್ಪಿಸುತ್ತದೆ.

ತಾಯವ್ವನೆಂಬೋಳು ದೇವಲೋಕದ ಘನಸು !
ಕಾಲು ಸೋಕಿದರೆ ಕರ್ಮಾವು । ತಾಯಮ್ಮೆ
ಅದು ಕಾಶಿಗೋದರೂ ಕಳಿಯಾದು ।

– ಎನ್ನುವ ಅಪೂರ್ವ ಭಕ್ತಿಭಾವಗಳನ್ನಿಟ್ಟುಕೊಂಡು ಆಕೆ ತನ್ನ ಪತಿಯ ಮನೆಯಲ್ಲಿ ಬಾಳನ್ನು ನಡೆಸುತ್ತಿರುವಾಗ ತಾಯಿಯನ್ನು ಹಲವು ಬಾರಿ ನೆನೆಯುತ್ತಾಳೆ. ಆ ನೆನಹಿನಿಂದ ಏನೋ ಒಂದು ನೆಮ್ಮದಿಯನ್ನು ತಂದುಕೊಳ್ಳುತ್ತಾಳೆ. ತೌರಿನಲ್ಲಿ ತಾಯಿಯಾದರೋ ದೂರದೂರಿನಲ್ಲಿ ಪರರ ಮನೆಯ ಬೆಳಕಾಗಿ ಬಾಳುತ್ತಿರುವ ತನ್ನೊಡಲ ಕುಡಿಯನ್ನು ಮರೆತಾಳೆ! ಇಲ್ಲ, ಯಾವಾಗಲೂ ತನ್ನ ಮಗಳ ಕನಸೇ ಆಕೆಗೆ. ಕೆಲವು ಬಾರಿ ಬಹುದಿನಗಳವರೆಗೆ ಮಗಳನ್ನು ನೋಡದಿದ್ದರಂತೂ ಕುಳಿತು ಕಣ್ಣೀರು ಮಿಡಿಯುವುದೇ ಆಗುತ್ತದೆ. ಇಬ್ಬರೂ ಏಕಕಾಲದಲ್ಲಿ ಪರಸ್ಪರ ನೆನೆದರೆ ಆ ವೇಳೆಯಲ್ಲಿ ಆಕಳಿಕೆಗಳು ಬರುವುವಂತೆ. ಮಗಳೆಂದುಕೊಳ್ಳುತ್ತಾಳೆ –

ತಾಯವ್ವ ತನ ಮಗಳ ಯಾವಾಗ ನೆನೆವಾಳೊ ।
ಉಂಬಾಗ ಮಡಿಯನುಡುವಾಗ । ತಾಯವ್ವ ।
ತನ ಮಗಳ ಕೂಗಿ ಕರೆದಾಳೊ ॥

– ಹೀಗೆ ತಾಯಿ, ಮಗಳ ಬಿಡಿಸಲಾರದ ಬಾಂಧವ್ಯ ಈ ಊರಿನಿಂದ ಆ ಊರಿನವರೆಗೆ ಪ್ರೀತಿಯ ಸೇತುವೆಯನ್ನು ಕಟ್ಟುತ್ತದೆ. ಆ ಸೇತುವೆಯ ಮೇಲೆ ಮನಸ್ಸುಗಳೆರಡೂ ಓಡಿಯಾಡುತ್ತವೆ. ತನ್ನ ಈ ಬಾಂಧವ್ಯ ಬಹುದಿನಗಳವರೆಗೆ ಉಳಿದು ಬರುವ ಬಯಕೆ ಹೆಣ್ಣಿಗೆ. ತನಗೊಬ್ಬ ತಮ್ಮನಿದ್ದಾನೆ; ಮನೆಯಲ್ಲಿ ಮಗಳು ಬೆಳೆಯುತ್ತಿದ್ದಾಳೆ. ಈ ಇಬ್ಬರ ನಡುವೆ ಸಂಬಂಧದ ಕುಡಿಯೊಡೆದರೆ ತೌರಿನ ಸಂಪರ್ಕ ಹೆಚ್ಚುತ್ತದೆ. ತಾನು ಹುಟ್ಟಿ ಬೆಳೆದ ಮನೆಯಲ್ಲಿ ತನ್ನ ಮಗಳೇ ಸೊಸೆಯಾಗಿ ಬಾಳುವುದು ಎಷ್ಟು ಆಮೋದಕರ. ತನ್ನ ತಾಯಿಯ ಸೊಸೆಯಾಗಿ, ತಮ್ಮನ ಮೆಚ್ಚಿನ ಮಡದಿಯಾಗಿ, ತನ್ನೂರಿನವರ ನೆಚ್ಚಿನ ಕೂಸಾಗಿ ತನ್ನ ಮಗಳು 'ಸೊಸೆತನ'

ಮಾಡುವುದಕ್ಕಿಂತ ಮಿಗಿಲಾದ ಆನಂದವುಂಟೆ? ಅದಕ್ಕಾಗಿಯೇ ತಮ್ಮನನ್ನು ಹೊಂದಿರುವ ಹೆಣ್ಣು ಹೊಸ ಕನಸನ್ನು ಕಟ್ಟುತ್ತಾಳೆ :

ಹೆಣ್ಣನ್ನು ಹಡೆದೇನು ತಮ್ಮನಿಗೆ ಕೊಟ್ಟೇನು ।
ನಾ ಹುಟ್ಟಿದ ಮನೆಗೆ ಸೊಸೆಯಾಗೋ । ಕಂದಮ್ಮ ।
ನನ್ನ ತಮ್ಮಾನ ಮಡದಿಯಾದಾಳು ॥

ತನ್ನ ಮಗಳೇ ತಮ್ಮನ ಕೈಹಿಡಿಯುತ್ತಾಳೆ – ಎಂದಾಗ ಅವಳ ಮನಸ್ಸು ಅಪೂರ್ವ ಸುಖವನ್ನು ಅನುಭವಿಸುತ್ತದೆ. ತೌರಿನ ಒಂದು ಸುಂದರ ಚಿತ್ರ ಸುಳಿದಂತಾಗುತ್ತದೆ.

ನನ್ನ ಹೊಟ್ಟೇಲ್ಹುಟ್ಟಿ ನನಗೆ ನಾದಿನಿಯಾಗಿ
ನನ್ನ ಹೆತ್ತಾಮನೆಗೆ ಸೊಸೆಯಾಗಿ । ನನ ಮಗಳು ।
ನನ್ನ ತಮ್ಮನ ಮಡದೀಯು ॥

ತನಗೆ ಹೆಣ್ಣುಮಗು ಹುಟ್ಟಿದಂದೇ ತಾಯಿಯ ಹೃದಯ ಕಲ್ಪನೆಯ ತೇರನ್ನೇರಿ ಸಾಗಿರುತ್ತದೆ. ತನ್ನ ಮಗಳ ಬಾಳ ಭವಿಷ್ಯವನ್ನು ರೂಪಿಸಿಕೊಂಡು ಮಧುರ ಸ್ವಪ್ನವನ್ನು ಕಾಣುತ್ತಾಳೆ. ತನ್ನ ತಮ್ಮನ ವಿಷಯದಲ್ಲಿ ಇನ್ನಿಲ್ಲದ ಪ್ರೀತಿಯನ್ನು ತಳೆಯುತ್ತಾಳೆ. ಅವನನ್ನೊಮ್ಮೆ ಕರೆಸಿ ರಸದೂಟವಿಕ್ಕಿ ಸತ್ಕರಿಸಬೇಕೆನಿಸುತ್ತದೆ. ಬಿಂಕದಿಂದ ಪತಿಯೊಡನೆ ತನ್ನ ಮನದ ಬಯಕೆಯನ್ನು ಮುಂದಿಡುತ್ತಾಳೆ :

ವೀರರಾಜಪೇಟೇಲಿ ಹರಳ ಬೆಲೆಮಾಡೋನ ।
ಹವಳದುಂಗುರದ ನಿಜಗೆಂಪಿನ । ತಮ್ಮಯ್ನ ।
ನಾ ಅಡಿಗೆ ಮಾಡುತೀನಿ ಬರಹೇಳಿ ॥

ತನ್ನ ತಮ್ಮ ಅಂಗಡಿಕಾರ, ತಕ್ಕಮಟ್ಟಿಗೆ ಶ್ರೀಮಂತನೂ ಹೌದು. ಸುಂದರನೂ ಹೌದು. ಹವಳದ ಉಂಗುರವನ್ನು ಬೆರಳಲ್ಲಿ ಧರಿಸಿ ಹರಳನ್ನು ತೂಗುತ್ತಿರುವ ಅವನನ್ನು ನೋಡುವುದೇ ಒಂದು ಸೊಗಸು. ಅಂಥ ತಮ್ಮನನ್ನು ಹೊಂದಿರುವ ತಾನೆಷ್ಟು ಭಾಗ್ಯಶಾಲಿ ಎಂದುಕೊಳ್ಳುತ್ತಾಳೆ. ಪತಿ ತಮ್ಮನನ್ನು ಕರೆಸಿ ಅವರಕ್ಕನ ಬಯಕೆಯನ್ನು ತಿಳಿಸುತ್ತಾನೆ. ಮೊದಲೇ ಸರಸಿಯಾದ ಅವನು ನಗುತ್ತಾ:

ಬರಿಯ ಊಟಕ್ಕೆ ಬರಲೊಲ್ಲೆ ಅಕ್ಕಯ್ಯ ।
ನಿನ ತೋಳ ಮೇಲಾಡೊ ಹಸುಳೆಯ । ಕಂದಮ್ನ ।
ಕೊಡುತೀನೆಂದಾದರೆ ಬರುತೀನಿ॥

ಎನ್ನುತ್ತಾನೆ. ತಮ್ಮನ ಬಾಯಲ್ಲಿ ಈ ನುಡಿ ಚಿಮ್ಮಿದಾಗ ಅಕ್ಕನ ಅಂತರಂಗ ಉಲ್ಲಾಸಗೊಳ್ಳುತ್ತದೆ. ಭವ್ಯ ಸ್ವಪ್ನವೊಂದನ್ನು ಕಂಡಂತೆ ಮಧುರಹಾಸವನ್ನು ಬೀರಿ ತನ್ನ ತೊಡೆಯ ಮೇಲೆ ಆಡುತ್ತಿರುವ ಕಂದಮ್ಮನ ಹೂಗೆನ್ನೆಗೆ ಮುತ್ತಿಟ್ಟು ಮಮತೆಯಿಂದ ಕಿರು ತಮ್ಮನನ್ನು ನೋಡುತ್ತಾಳೆ. ತಮ್ಮನ ನುಡಿಗೆ ಪ್ರತಿಯುಂಟೆ? ಅಕ್ಕನ ನಲಿವಿಗೆ ಪಾರವುಂಟೆ? ತಮ್ಮನ ಬಾಯಲ್ಲಿ ಬರುವ ನುಡಿಗಳಂತೂ ನೇರವಾಗಿ ಅವಳ ಹೃದಯವನ್ನೇ ಹೊಕ್ಕಿರುತ್ತವೆ.

ಈ ನಡುವೆ ದಿನೇಶ ದಿನಗಳ ಮಂದೆಯನ್ನು ಓಡಿಸಿಕೊಂಡು ಸಾಗುತ್ತಾನೆ. ದಿನ ಬಂದು ದಿನ ಹೋಗಿ – ಮಾಸ ಹನ್ನೆರಡಾಗಿ ವರ್ಷಗಳು ಹರ್ಷದಿಂದ ಕುಣಿದು ಸಾಗುವಲ್ಲಿ ಮಗಳು ಬೆಳೆದು ಹನ್ನೆರಡರ ಗಡಿ ಮುಟ್ಟುವಲ್ಲಿ ತಮ್ಮ ಇಪ್ಪತ್ತೊಂದರ ತಾರುಣ್ಯದ ಹುಮ್ಮಸ್ಸಿನಲ್ಲಿ ತೌರ ನೆಲವನ್ನು ತುಳಿಯತೊಡಗಿರುತ್ತಾನೆ. ಅಕ್ಕನಲ್ಲಿಯ ಬಯಕೆಯೂ ಬೆಳೆದು ನಿಂತಂತೆ ಅವನಲ್ಲಿ ಪ್ರೀತಿ, ಆದರಗಳು ಹೊಸ ರೂಪವನ್ನು ಪಡೆದು ನಿಂತಿರುತ್ತವೆ. ಅವನನ್ನು ಈಗೊಮ್ಮೆ ಕರೆಸಿ ಆದರಿಸುವ ಬಯಕೆಯುಂಟಾಗುವಾಗ ಮತ್ತೆ ಪತಿಯನ್ನೇ ಆಶ್ರಯಿಸಿ:

ತಮ್ಮನ ಬರಹೇಳಿ ತಣಿ(ಳಿ)ಗೇಲಿ ಉಣುವೋನ ।
ಹೊನ್ನಿಗರೂರ ಎಲೆಯ ಮೆಲುವೋನ । ತಮ್ಮಯ್ಗೆ
ಹೆಣ್ಣ ಕೊಟ್ಟೇನು ಬರಹೇಳಿ ॥

ಮಗಳ ಮದುವೆಯ ವಿಷಯ ತಂದೆಗಿಂತಲೂ ತಾಯಿಯ ಹೃದಯದಲ್ಲಿ ಬಹಳ ದಿನಗಳಿಂದ ಕೆಲಸಮಾಡಿಕೊಂಡಿರುತ್ತದೆ. ಆಗಾಗ ಪತಿಯೊಡನೆ ಸೂಕ್ಷ್ಮವಾಗಿ ವಿಷಯವನ್ನು ತಿಳಿಸುತ್ತಾ ಬಂದಿರುತ್ತಾಳೆ. ಮಗಳ ಕ್ಷೇಮಚಿಂತನೆಯಲ್ಲೇ ತೊಡಗಿರುವ ಮಡದಿಯ ಮಾತಿಗೆ ಅಡ್ಡಿ ಬರಲಾರದೆ ಭಾವಮ್ಮೈದುನನನ್ನು ಕರೆಸುವ ವ್ಯವಸ್ಥೆ ಮಾಡುತ್ತಾನೆ.

ತಮ್ಮ ಬಂದಾನೆಂದು ಅಕ್ಕ ಹಾದಿ ಕಾಯುತ್ತಾಳೆ. ಕುದುರೆಯನ್ನೇರಿ ಬಿಂಕದಿಂದ ಬರುವ ಅವನನ್ನು ಸ್ವಾಗತಿಸಲು ಆಗಾಗ ಬಾಗಿಲ ಬಳಿ ಬಂದು ಇಣುಕು ಹಾಕಿರುತ್ತಾಳೆ. ಮಗಳನ್ನು ಅಲಂಕರಿಸಿ ಅಂದವಾದ ಸೀರೆಯುಡಿಸಿ ಲಗುಬಗೆಯಿಂದ ಮಾತನಾಡಿಸುತ್ತಿರುತ್ತಾಳೆ. ಬಾಗಿಲ ಬಳಿ ದಾರಿಯನ್ನು ದೃಷ್ಟಿಸಿ ನೋಡುವಾಗ ಅವಳ ಮನದಾಳದ ದನಿಯೆನ್ನುತ್ತದೆ –

ಕೋಟೆಯ ಹಿಂದುಗಡೆ ಕೋಟಿಗರ ಮನೆ ಕಾಣೊ ।
ಜೋಕಾಗಿ ಬಾರೊ ಕಿರುತಮ್ಮ । ನಿನ್ನ।
ಜೋಕಿಗೆ ನಾಯಿ ಬೊಗಳ್ಯಾವು ॥

ಕೋಟಿಗರ ಮನೆಯ ಮುಂದೆ ಹಾದು ಬರುವ ತನ್ನ ತಮ್ಮನ ರಭಸಕ್ಕೆ ಬೀದಿಯ ನಾಯಿಗಳು ಬೆಚ್ಚಿ ಬೊಗಳುತ್ತವೆ. ಯಾರೋ ಹೊಸಬರು ಊರಿಗೆ ಬಂದರೆಂದು ಮನೆಯಲ್ಲಿದ್ದವರೆಲ್ಲಾ ಹೊರಗೆ ಬಂದು ನೋಡುತ್ತಾರೆ. ಆಗ ತನ್ನ ತಮ್ಮನೆಂದು ತಿಳಿದು ಅವರವರಲ್ಲಿಯೇ ಮಧುರ ನುಡಿಗಳು ತೇಲಾಡುತ್ತವೆ. ಮುಂದೆ ಈ ಊರಿನ ಅಳಿಯನಾಗುತ್ತಾನೆಂದು ಹೆಮ್ಮೆಯಿಂದ ನೋಡುತ್ತಾರೆ. ಅಕ್ಕನ ಮನ ತಮ್ಮನ ಬರುವಿಕೆಗೆ ಮತ್ತೆ ನಲಿಯುತ್ತದೆ –

ಕಿನ್ನುರಿಯ ಕಡುಜಾಣ ನಮ್ಮ ಕೇರಿಗೆ ಬಾರೊ ।
ನಮ್ಮಲ್ಲಿ ಒಬ್ಬ ಸೂಜಾಣ । ತಮ್ಮಯ್ಯ ।

* ಕಿನ್ನುರಿಯ ದನಿಯ ಕೊಡುತಾನೆ ॥

ಸೂಜಾಣನಾದ ಅವನು ಬೇಸರವಾದಾಗ ಕಿನ್ನರಿಯನ್ನು ಭಾಜಿಸುತ್ತಾ ಕೂರುತ್ತಾನೆ. ಆ ಕಿನ್ನರಿಯ ನಾದಲಹರಿ ಅಕ್ಕನ ಕರ್ಣಗಳ ಮೇಲೆ ಹಾದುಹೋದಂತಾಗುತ್ತದೆ. ಎತ್ತಣಿಂದಲೋ ಕುದುರೆಯ ಖುರಪುಟ ಧ್ವನಿ ತೇಲಿಬರುತ್ತದೆ. ಯಾವುದೋ ಬರಬಾರದ ಹಾದಿಯಲ್ಲಿ ತಮ್ಮ ಬಂದಂತೆ ಭಾಸವಾಗುತ್ತದೆ :

ನಾಕೂರ ಮೇಲೆ ಯಾಕೆ ಬಂದ ತಮ್ಮಯ್ಯ ।
ನಾಕೂರೋರ ಕಣ್ಣು ನಿನ ಮೇಲೆ । ತಮ್ಮಯ್ಯ ।
ಬೀಸೀದೆ ಧೂಳು ಮೈ ತುಂಬ ॥

ತಮ್ಮ ಬಂದ ದಾರಿಯಲ್ಲಿ ನಾಲ್ಕಾರು ಊರುಗಳೂ ಸಿಕ್ಕುತ್ತವೆ. ಇವನ ಆಕರ್ಷಕ ಚೆಲುವನ್ನು ಆ ಊರವರೆಲ್ಲಾ ಕಣ್ಣಿಂದ ಅಳೆದು ಕುಡಿದಿರುತ್ತಾರೆ. ಅವರ ದೃಷ್ಟಿ ತಾಕಿ ತಮ್ಮನಿಗೆ ಆಲಸಿಕೆ ತಲೆದೋರಬಹುದು. ಅದೂ ಹಾಗಿರಲೆಂದರೆ ಆ ಊರುಗಳನ್ನು ಬಿಟ್ಟು ಮುಂದೆ ಬಂದರೆ ದಟ್ಟವಾದ ಕಾಡು. ನಿರ್ಜನ ಪ್ರದೇಶ. ಏಕಾಂಗಿಯಾಗಿ ಬರುವಂತಹುದಲ್ಲ. ಆದರೆ ಅವಳ ತಮ್ಮ ಧೀರನೆಂಬುದು ಗೊತ್ತು:

ಯಾರು ಬರದ ಹಾದೀಲಿ ಧೀರನೊಬ್ಬನೆ ಬಂದ ।
ಸಾರಂಗ ಬರುವ ಮಿಗ ಬರುವ । ಹಾದೀಲಿ
ಧೀರ ನನ್ನವ್ವನ ಮಗ ಬಂದ ॥

ತನ್ನವ್ವನ ಮಗ ಎಲ್ಲಿಂದ ಬಂದರೂ ಅಪಾಯಗಳನ್ನು ದಾಟಿ ಬರಬಲ್ಲವನು. ಸಾಹಸಿ. ಸಾರಂಗಗಳೂ, ಕಾಡುಮೃಗಗಳೂ ಸುಳಿದಾಡುವ ದಾರಿಯಲ್ಲಿ ತಾನೊಬ್ಬನೇ ಬಂದಿದ್ದಾನೆ. ಅಕ್ಕನ ಮೇಲಿನ ಪ್ರೀತಿಯಿಂದ ಅವನು ಎಂಥ ದುರ್ಗಮ ನೆಲೆಯನ್ನಾದರೂ ಜಯಿಸಿ ಬಂದಾನು, ಎಂದು ಹಿಗ್ಗುತ್ತಾಳೆ.

ಬಿಸಿಲಿನಲ್ಲಿ ಬೆವತು ಕುದುರೆಯ ಸವಾರಿಯಿಂದ ರಂಗುಗಟ್ಟಿ ಅಕ್ಕನ ಮನೆಯ ಮುಂದೆ ತಮ್ಮ ಕುದುರೆಯನ್ನಿಳಿಯುತ್ತಾನೆ. ಬಾಗಿಲಲ್ಲೇ ಕಾದಿದ್ದ ಅಕ್ಕ ಕುಶಲವನ್ನು ಕೇಳಿ ಬರಮಾಡಿಕೊಳ್ಳುತ್ತಾಳೆ. ತೌರಿನ ವಿಷಯವನ್ನು ಕುರಿತು ಪ್ರಶ್ನೆಗಳ ಮಾಲೆಯನ್ನೇ ಹಾಕುತ್ತಾಳೆ. ಒಳಗೆ ಊಟಕ್ಕೆ ಅಣಿಮಾಡಿದ ಮಗಳು ಆಯಿತೆಂಬಂತೆ ಪಾತ್ರೆಗಳ ಸದ್ದುಮಾಡುತ್ತಾಳೆ. ಆ ಸೂಕ್ಷ್ಮಧ್ವನಿ ಬಿಸಿಲಲ್ಲಿ ಬಂದವನಿಗೂ ಪುಳಕವನ್ನುಂಟು ಮಾಡುತ್ತದೆ. ತಂಬಿಗೆಯಲ್ಲಿ ನೀರು ತಂದು ಅಕ್ಕ ಹೇಳುತ್ತಾಳೆ:

---

* 'ಕಿನ್ನರಿಗೆ ದನಿಯ ಕೊಡುತಾನೆ' ಎನ್ನುವ ಇನ್ನೊಂದು ಪಾಠ ಈ ಪದ್ಯಕ್ಕಿದೆ. ಕಿನ್ನರಿಯನ್ನು ನುಡಿಸುವ ಜಾಣ ತನ್ನ ಕೇರಿಗೆ ಬಂದರೆ ತನ್ನ ಮುದ್ದು ತಮ್ಮ ಹಾಡಿ ಅದಕ್ಕೆ ದನಿ ಕೊಟ್ಟಾನು ಎನ್ನುವ ಅರ್ಥ ಕಲ್ಪನೆ ಇನ್ನೂ ರಮ್ಯವಾಗುತ್ತದೆ.

ಕಾಲಿಗೆ ನೀರು ಕೊಳ್ಳೊ, ಕಡುಕೋಪದ ತಮ್ಮಯ್ಯ
ಬಾಯೊಳಗಿನ ಇಳ್ಯಾವ ಉಗಿಬಾರೊ । ನಿನ್ನೂರ।
ಹಾದಿಯ ನೋಡಿ ಬಡವಾದೋ ॥

ನಿತ್ಯವೂ ತಮ್ಮನ ಹಾದಿಯನ್ನು ಕಾಯ್ದು ಅಕ್ಕ ಸೋತಿದ್ದಳು. ಇಂದು ತಾಂಬೂಲವನ್ನು ಜಗಿಯುತ್ತಲೇ ಬಂದಿದ್ದಾನೆ. ಪ್ರಯಾಣದಿಂದ ಹಸಿವೆಯಾಗಿರಬೇಕು. ಬಿಸಿಯಡಿಗೆ ಅವನಿಗಾಗಿ ಕಾದಿದೆ. ತಮ್ಮ ಬೆಳೆದು ದೊಡ್ಡವನಾದರೂ ವಿನೋದವನ್ನು ಬಿಟ್ಟಿಲ್ಲ:

ಒಲ್ಲೆ ಕಾಣಕ್ಕಯ್ಯ ಉಂಡು ಬಂದೆ ಊರಲ್ಲಿ ।
ಮಿಂದು ಬಂದೆ ಗಂಗೆ ನಿಧಿಯಲ್ಲಿ । ಅಕ್ಕಯ್ಯ ।
ಅಗಿದು ಬಂದೆ ಅಂಗಡಿ ಬಿಳಿಎಲೆ॥

ಎಂದು ಸರಸಕ್ಕೆ ನುಡಿಯುತ್ತಾನೆ.

ಊಟಕ್ಕೆ ಸಿದ್ಧವಾಗುತ್ತದೆ. ಅಕ್ಕನೇ ಬಡಿಸುತ್ತ ವಿಷಯಗಳನ್ನು ಕೇಳುತ್ತಾಳೆ. ಅವುಗಳಿಗೆಲ್ಲಾ ನಾಲಗೆ ಉತ್ತರವೀಯುತ್ತಿದ್ದರೂ ಕಣ್ಣು ಯಾರನ್ನೋ ಅರಸತೊಡಗುತ್ತವೆ. ದನಿಯೆತ್ತಿ ಅಕ್ಕನಿಗೆ ಹೇಳುತ್ತಾನೆ:

ಅಕ್ಕಯ್ಯನ ಮಗಳು ಚಿಕ್ಕೋಳು ಎಂತಿದ್ದೆ ।
ಚಿತ್ತಾರಿ ಕಾಣೆ ಬಿಲುಪತ್ರೆ । ನಿನ ಮಗಳು ।
ಮುತ್ತೀನ ಚೆಂಡ ಅವಿಸ್ಯಾಳು ॥

ಬಹಳ ದಿನಗಳಿಂದ ಅಕ್ಕನ ಮಗಳನ್ನು ನೋಡಿರಲಿಲ್ಲ. ಮೊನ್ನೆ ಸಂತೆಯಲ್ಲಿ ಬಾಳೆಯಂತೆ ಬೆಳೆದು ನಿಂತ ಅವಳನ್ನು ನೋಡಿ, ಅವಳ ಸೌಂದರ್ಯಕ್ಕೆ ಬೆರಗಾಗಿದ್ದ. ಬಿಲ್ವಪತ್ರೆಯಂಥ ಚಿತ್ತಾರಿ ಅವಳೆಂದು ಅಕ್ಕನೊಡನೆ ನಗುತ್ತಾ ನುಡಿಯುತ್ತಾನೆ. ಪೇಟೆಯಲ್ಲಿ ಅವಳನ್ನು ಕಂಡಾಗ ಹಾಗೆಯೇ ಕುದುರೆಯನ್ನು ನಿಲ್ಲಿಸಿದನಂತೆ:

ವೀರರಾಜ ಪೇಟೇಲಿ ಲಾವಂಗದ ಬೀದೀಲಿ ।
ಬಾಲೇರ ನಡುವೆ ನಿನ ಮಗಳು । ಸಿಕ್ಕಿದಳು ।
ನಿಲಿಸಿದೆ ನೀಲ ಕುದುರೇಯ ॥

ಆದರೆ ಆಕೆ ಸೋದರಮಾವನ ಮುಖವನ್ನು ನೋಡುತ್ತಿದ್ದಂತೆಯೇ ಗೆಳತಿಯರ ನಡುವೆ ಅಡಗಿಕೊಳ್ಳುತ್ತಾಳೆ. ಆ ಮಧುರ ಸನ್ನಿವೇಶವನ್ನು ಇಲ್ಲಿ ನೆನೆದು ಅಕ್ಕನೊಡನೆ ಸಂತಸದಿಂದ ಹೇಳುತ್ತಾನೆ. ಅಕ್ಕನ ಮಗಳೂ ಆ ನುಡಿಗೆ ಹಿಗ್ಗದಿಹಳೆ?

ತಮ್ಮ ಊಟಮಾಡಿ ಕೂರುತ್ತಾನೆ – ತಾಂಬೂಲವನ್ನು ಮೆಲ್ಲುತ್ತಾ. ಸುಖ ಭೋಜನದಿಂದಲೋ ಎಂಬಂತೆ ಕಣ್ಣುಗಳು ಒತ್ತಿಬರುತ್ತವೆ. ಹಾಗೆಯೇ ಚಾಪೆಯ ಮೇಲೆ ಹಾಯಾಗಿ ಉರುಳುತ್ತಾನೆ. ಅಕ್ಕ ಅತ್ತಿತ್ತ ಸುಳಿಯುವಾಗ ತೋಳು ಚಾಚಿ ಮಲಗಿರುವ ತನ್ನ ತಮ್ಮನನ್ನು ನೋಡುತ್ತಾಳೆ. ನಸುಬೆವೆತ ಅವನ ತನು ಕಾಂತಿಗೊಂಡಿರುತ್ತದೆ. ಮಗಳಿಗೆ ಹೇಳುತ್ತಾಳೆ:

ಅಂಗಡಿಕಾರಾಗೆ ಅಂಗ್ಯಾಕೆ ಮಾಸ್ಯಾವೆ ।
ಬಂಗಾರ ತೂಗಿ ಬಳೆತೂಗಿ । ತಮ್ಮಯ್ಯ ।
ಶ್ರೀಗಂಧ ತೂಗಿ ಬೆವತಾನೆ ॥

ಅಂಗಡಿಯಲ್ಲಿ ಕುಳಿತು ಶ್ರೀಗಂಧವನ್ನು ತೂಗುವಾಗ, ಬಂಗಾರವನ್ನು ಬೆಲೆ ಮಾಡುವಾಗ, ಬಳೆಗಳನ್ನು ಮಾರುವಾಗ ತಮ್ಮ ಬೆವರುತ್ತಾನೆ – ಅದನ್ನು ಅಕ್ಕ ಅಭಿಮಾನದಿಂದ ನೆನೆಯುತ್ತಾಳೆ. ಹಾಗೆ ಶ್ರೀಗಂಧದ ವ್ಯಾಪಾರ ಮಾಡುವ ತನ್ನ ತಮ್ಮ ಬಂದನೆಂದರೆ:

ತಮ್ಮಯ್ಯ ಬಂದರೆ ಮನೆಯೆಲ್ಲ ಗಮ್ಮೆಂದೊ ।
ಮುಡಿದು ಬಂದವನೆ ಮರುಗಾವ । ಮಲ್ಲಿಗ್ಹೂವ ।
ಮುಡಿದು ಬಂದವನೆ ದವನಾವ ॥

ಎಂದು ಮನೆಯಲ್ಲಿ ತುಂಬಿರುವ ಸುಗಂಧಕ್ಕೆ ತಲೆದೂಗುತ್ತಾಳೆ. ತನ್ನ ತಾಯಿ ಅವನ ಹಿಂಜುಟ್ಟನ್ನು ಬಾಚಿ ಹೂಮುಡಿಸಿ ಕಳುಹಿಸಿದ್ದಾಳೆ; ಅಲ್ಲದೆ ದಾರಿಯಲ್ಲಿ ಮರುಗ, ಮಲ್ಲಿಗೆ, ದವನ ಮುಂತಾದ ಸುವಾಸನಾಯುಕ್ತ ಪತ್ರೆ, ಪುಷ್ಪಗಳನ್ನು ತಂದಿದ್ದಾನೆ. ಮನೆಯಲ್ಲಿ ಬೀಸುವ ಗಾಳಿ ಮಧುರ ಕಂಪನ್ನು ಹೊತ್ತು ತೌರಿನ ಸಂದೇಶವನ್ನು ಸಾರುವಂತೆ ಸುಳಿಯುತ್ತಿದೆ.

ಸಂಜೆ ರವಿ ಇಳಿಮುಖವಾದಾಗ ನಿದ್ದೆಯಿಂದೆದ್ದ ತಮ್ಮಯ್ಯ ತೋಟಕ್ಕೆ ಹೋದವನು ಬಹಳ ಹೊತ್ತಿನವರೆಗೂ ಬರಲಿಲ್ಲ. ಏಕೆ ತಡವಾಯಿತೆಂದು ಆತಂಕಗೊಳ್ಳುತ್ತಾಳೆ ಅಕ್ಕಯ್ಯ. ಆದರೆ ಮತ್ತೆ ಸಮಾಧಾನ ತಂದುಕೊಳ್ಳುತ್ತಾಳೆ –

ತೋಟಕ್ಕೆ ಹೋದ ತಮ್ಮ ಊಟಕ್ಕೆ ಬರಲಿಲ್ಲ ।
ತೋಟದ ಹೂವ ತಲೆತುಂಬ । ಮುಡಕೊಂಡು ।
ಅವನೂಟದಂಬಲವ ಮರೆತಾನು ॥

ತಾಯಿಯ ತವಕವನ್ನು ಕಂಡು ಮಗಳು ಮುಂದೆ ಬಂದು ತಾನೇ ಹೋಗಿ ಕರೆತರುತ್ತೇನೆ ಎಂದು ಹೇಳುತ್ತಾಳೆ ವಯ್ಯಾರದಿಂದ. ತಾಯಿ ಅವಳ ಕಿವಿಯನ್ನು ಹಿಂಡಿ ನಸುನಗುತ್ತ–

ತಾಟಗಿತ್ತೀ ಹೆಣ್ಣೇ ತೋಟಾಕೆ ಹೋಗದಿರೆ ।
ತೋಟದೊಳಗವನೆ ಕರಿ ಚೆಲುವ । ತಮ್ಮಯ್ಯ ।
ಚೆಂದಾಕೆ ಮುಂದಲೆಯ ಹಿಡಿದಾನು ॥

ಎಂದು ಹೇಳುತ್ತಾ ಅಲ್ಲಿಯೂ ತನ್ನ ತಮ್ಮನ ಬಗ್ಗೆ ಅಭಿಮಾನವನ್ನು ಸೂಸುತ್ತಾಳೆ. ತನ್ನ ಮಗಳ ಮೇಲೆ ಅವನಿಗೆ ಅಪಾರ ಪ್ರೇಮವೆಂದೂ, ಅವಳೊಡನೆ ಸರಸವಾಡುವುದೆಂದರೆ ಅವನಿಗೆ ಬಹು ಪ್ರಿಯವೆಂದೂ ಆಕೆ ಉಬ್ಬಿ ನುಡಿಯುತ್ತಾಳೆ.

ಅಷ್ಟರಲ್ಲಿ ತೋಟದಿಂದ ತಮ್ಮನೂ ಬರುತ್ತಾನೆ. ನಡುಮನೆಯಲ್ಲಿ ಎಲೆಯ ನಾರನ್ನು ತೆಗೆಯುತ್ತಾ ಕುಳಿತ ಅಕ್ಕ ಅವನ ಕಣ್ಣಿಗೆ ತುಂಬ ಕೃಶಳಾದಂತೆ ತೋರುತ್ತಾಳೆ. ಏನನ್ನೊ ಮಗಳೊಡನೆ ನುಡಿಯುತ್ತಾ ಕುಳಿತಿದ್ದ ಅಕ್ಕನನ್ನು ನೋಡಿ –

ಏಕಾಂತ ಆಡುತ್ತ ಎಲೆನಾರ ಎಬ್ಬುತ್ತ ।
ಯಾಕಾಲ ಅಕ್ಕ ಬಡವಾದೆ । ಎನ್ನುತ್ತ ।
ತವಕದಲಿ ಕುದುರೆ ಇಳಿದಾನು ॥

ತನ್ನ ಅಕ್ಕನೊಬ್ಬಳು ಕ್ಷೇಮವಾಗಿದ್ದರೆ ಎಲ್ಲರೂ ಕ್ಷೇಮವಾಗಿದ್ದಂತೆ ಎಂಬುದು ಅವನ ನಂಬಿಕೆ. ಸದಾ ಆಕೆಯ ಒಳಿತನ್ನೇ ಹಾರೈಸುವ ತಮ್ಮನಿಗೆ ಕೃಶನಾದಂತೆಯೇ ತೋರುತ್ತಾಳೆ.

ಹೀಗೆ ಅಕ್ಕತಮ್ಮಂದಿರ ಮಧುರ ಪ್ರೀತಿ ನಿರ್ಮಲವಾರಿಯಂತೆ ತಿಳಿಯಾಗಿ ನಿಂತಿರುತ್ತದೆ. ಅಕ್ಕನಲ್ಲಿ ತಮ್ಮನಿಗೆ ತುಂಬಾ ವಿಶ್ವಾಸ ಗೌರವ – ಅಷ್ಟೇ ಆಳವಾದ ಪ್ರೀತಿ ಮಮತೆಗಳು. ತನ್ನ ತಮ್ಮನಲ್ಲಿಯಂತೂ ಅಕ್ಕನ ಪ್ರೀತಿ ಅಳೆಯಲಾರದಂತಹುದು. ಅವನನ್ನು ಎಷ್ಟು ನುಡಿಸಿದರೂ, ಎಷ್ಟು ಹಾರೈಸಿದರೂ, ಎಷ್ಟು ದಿನ ತನ್ನ ಮನೆಯಲ್ಲಿಟ್ಟುಕೊಂಡು ಊಟೋಪಚಾರಗಳಿಂದ ಆದರಿಸಿದರೂ ಅವಳಿಗೆ ತೃಪ್ತಿಯಿಲ್ಲ. ಈ ಇಬ್ಬರ ನಡುವೆ ಇನ್ನೂ ಬಾಂಧವ್ಯವನ್ನು ಭದ್ರಗೊಳಿಸುವಂಥ ಹೆಣ್ಣೊಂದು ಇದ್ದಿತೆಂದರೆ 'ಅಕ್ಕ–ತಮ್ಮ'ರ ಪ್ರೀತಿ ವಾತ್ಸಲ್ಯಗಳು ಅಕ್ಕರೆಯ ಸಕ್ಕರೆಗೂ ಮಿಗಿಲಾದುದು.

ಕುದುರೆಯನ್ನೇರಿ ತನ್ನ ತೌರ ದಾರಿಯನ್ನು ತಮ್ಮ ಹಿಡಿದ ಮೇಲೆಯೂ ಅವನ ಗುಣಗಾನ ನಿಂತಿಲ್ಲ. ನೆರೆಮನೆಯ ನಾರಿಯರೊಡನೆ ಆಕೆ ನುಡಿಯುತ್ತಾಳೆ:

ಓದೊನೊಬ್ಬನೆ ಮನೆಯಲ್ಲಿ ಪಂಚಾಂಗ ।
ಸಹದೇವರಂತೆನ್ನ ಕಿರಿತಮ್ಮ । ಬೆಳಗುವ ।
ಸ್ವಾಮಿ ಚಂದ್ರಮನು ಸುಳಿದಂತೆ ॥ *

* ಬಯಲುಸೀಮೆಯ ಹೆಣ್ಣುಮಕ್ಕಳು ಬೀಸುವಾಗ ಹಾಡಿಕೊಳ್ಳುವ ಈ ಹಾಡುಗಳಲ್ಲಿ ಒಂದು ಏಕಸೂತ್ರತೆಯನ್ನು ಕಾಣುವ ಪ್ರಯತ್ನ ಈ ಲೇಖನ. ವಿಶೇಷವಾಗಿ ಬಿಡಿಹಾಡುಗಳೇ ಆದ ಇವುಗಳನ್ನು ಪ್ರತ್ಯೇಕವಾಗಿ ಒಂದೊಂದಾಗಿಯೇ ಪರಿಭಾವಿಸುವುದರಲ್ಲೇ ಸೊಗಸು ಹೆಚ್ಚು. ಅರ್ಥವ್ಯಾಪ್ತಿಯೂ ಮಿಗಿಲು; ಅಲ್ಲದೆ ಈ ಕ್ರಮದಲ್ಲಿಯೂ ಹಾಡಿಕೊಳ್ಳುವ ಸಂದರ್ಭ ವಿರಳ. ನಮ್ಮೂರಿನ ಸೋದರಿಯರಿಂದ ಸಂಗ್ರಹಿಸಿದ ಈ ಹಾಡುಗಳು ತೌರಪದಗಳ ಅತ್ಯುತ್ತಮ ಮಾದರಿ ಎನ್ನುವುದು ಸ್ಪಷ್ಟ.

ತೌರೂರ ಕನಸು *

ತೌರೂರು ಎಂದರೆ ಹೆಣ್ಣಿಗೆ ಒಂದು ಪವಿತ್ರ ಭಾವನೆ ಇರುತ್ತದೆ. ತಾನು ಹುಟ್ಟಿ ಬೆಳೆದ ಆ ಮಮತೆಯ ನೆಲೆಯನ್ನು ಆಕೆ ಸದಾ ನೆನೆಸಿಕೊಳ್ಳುತ್ತಾಳೆ. ತನ್ನ ತಾಯಿ, ತಂದೆ, ತನ್ನ ಅಣ್ಣ ತಮ್ಮಂದಿರು, ತನ್ನ ಅತ್ತಿಗೆ ನಾದಿನಿಯರು, ತನ್ನೂರಿನ ಸೋದರ ಸೋದರಿಯರು, ತನ್ನೂರಿನ ದನಕರುಗಳು, ಬಯಲು ಬೆಟ್ಟಗಳು, ಕೆರೆ ತೊರೆಗಳು ಎಂದರೆ ಅವಳಿಗೊಂದು ಹೆಮ್ಮೆ. ಎಷ್ಟೇ ದೂರದ ಊರಿನಲ್ಲಿರಲಿ, ಇವೆಲ್ಲವನ್ನೂ ಆಕೆ ಮರೆಯಲಾರಳು. ಅದರಲ್ಲೂ ತನ್ನ ತೌರುಮನೆ ಎಂದರಂತೂ ಅವಳಿಗೆ ಪ್ರಾಣ. ತಾಯಿಯ ಅತೀವ ಪ್ರೀತಿ, ಅಣ್ಣ ತಮ್ಮಂದಿರ ಮಮತೆ – ಮುಂತಾದುವನ್ನು ನೆನೆದಾಗ ಅವಳ ಮನಸ್ಸು ಹಗುರವಾಗುತ್ತದೆ, ಯಾವ ದುಃಖವನ್ನಾದರೂ ಅವಳು ಮರೆಯುತ್ತಾಳೆ. ತನ್ನ ತೌರಿಗೆ ತಾನು ಹೋದರೆ ಅವರೆಲ್ಲ ತನ್ನನ್ನು ಕಾಣುವ ಬಗೆ, ತಾನು ಅವರೊಡನೆ ನಡೆದುಕೊಳ್ಳುವ ರೀತಿ, ನಡೆಸುವ ಸಂಭಾಷಣೆ ಮುಂತಾದ ರಸಸನ್ನಿವೇಶಗಳನ್ನೆಲ್ಲ ಅವಳು ಕಲ್ಪಿಸಿಕೊಳ್ಳುತ್ತಾಳೆ. ಇಲ್ಲಿ ಆ ರೀತಿಯ ಕೆಲವು ಜನಪದ ಗೀತೆಗಳನ್ನು ಕಾಣಬಹುದು.

ತನ್ನ ತೌರುಮನೆಯೆಂದರೆ,

ಹಣ್ಣು ಹಾಲಿsಗಿಂತ ಬೆಣ್ಣೆ ತುಪ್ಪಾsಕಿಂತ
ಚೆನ್ನಾsಗಿ ಕಳಿತ ರಸಬಾಳೆ ಹಣ್ಣಿಗಿಂತs

ಚೆನ್ನ, ಎನ್ನುವ ಭಾವನೆಯುಳ್ಳ ಹೆಣ್ಣೊಬ್ಬಳು ತನ್ನ ತೌರಿಗೆ ಹೋಗಿ ಬರುವ ಕನಸನ್ನು ಮಾವನ ಮನೆಯಲ್ಲಿ ಕಾಣುತ್ತಾಳೆ. ಒಮ್ಮೆ ತೌರನ್ನು ನೆನೆದಾಗ ಮಧುರ ಭಾವನೆಗಳು ಅವಳ ಮನಸ್ಸಿನಲ್ಲಿ ಮೂಡುತ್ತವೆ. ತೌರನ್ನು ನೋಡಬೇಕೆಂಬ ಹಂಬಲ ಹೆಚ್ಚುತ್ತದೆ. ಅಂತೆಯೇ ಅವಳ ತಮ್ಮ ಅಕ್ಕನನ್ನು ತೌರಿಗೆ ಕರೆಯಲು ಬರುವುದನ್ನು ಕಾಣುತ್ತಾಳೆ.

ಹಾಲಿsಗಕ್ಕೀ ಹಾಕಿ ನೀರಿsಗೆ ನಾಹೋದೆ,
ದೂರsದಿಂದಲಿ ಕಂಡೆ ಕುದುರೆsಯ । ತಮ್ಮಯ್ಯ
ಕಾಲಾಳುs ಕಂಡು ತಿರುಗಿsದೆ

ಆಳಾಳಿಗೆಲ್ಲ ಬಾಲೆಯ ಎಲೆಯsವೆ
ಮೇಲಾಳಿsಗೆಲ್ಲ ತ್ರಣಿಗ್ಯಾವ್ಲೆ ** । ತಮ್ಮಯ್ಯ
ನಿನಗsದೆ ಚಿನ್ನದ್ಹರಿವಾಣ

---

* ಬೆಳ್ಳೂರ ನೆರೆಯ ಕೆಲವು ಹಳ್ಳಿಯ ಸೋದರಿಯರಿಂದ ಸಂಗ್ರಹಿಸಿ ಸಂಪಾದಿಸಿದ ಜನಪದ ಗೀತೆಗಳು.

** ತ್ರಣಿಗೆ = ತಳಿಗೆ, ಕಂಚಿನತಟ್ಟೆ

ಅಕ್ಕ ಆದವಳಿಗೆ ತಮ್ಮನ ಮೇಲಿರುವ ಮಮತೆ ಈ ಕೊನೆಯ ಸಾಲಿನಲ್ಲಿ ವ್ಯಕ್ತವಾಗಿದೆ. ತಮ್ಮನನ್ನು ಕರೆಯಲು ತನ್ನ ಗಂಡನಿಗೆ ಹೇಳುತ್ತಾಳೆ.

ತಮ್ಮನ ಬರಹೇಳಿ ತ್ರಣಿಗೇಲಿ ಉಣ್ಣೋನ
ಹೊಂದಿ ನೂರೆಲೆ ಮೆಲುವೊಽನ । ತಮ್ಮಯ್ನ
ಬಂದಽರು ಬರಹೇಳಿ ನಗುವೋನ

ಬಂದನು ತಮ್ಮಯ್ಯ ಬಾಣಾವರದು ಮೇಲೆ
ಕುಂದೂರ ಮೇಲೆ ಕುದುರೆಽಯ । ಏರಿಕೊಂಡು
ಬಂದರು ನಮ್ಮವ್ವನ ಮಗದೀರು

ನಡುವೆ ಬಗಲಲ್ಲಿ ನೆಲ್ಲಕ್ಕಿ ಗಮ್ಮಂದೊ
ನೆನದಂಗೆ ಬಂದ ನನ ತಮ್ಮ । ಬಾಳೆಽಯ
ಗೊನಿಯಂಗೆ ತೋಳ ತಿರುವುಽತ

ತನ್ನ ಪ್ರೀತಿಯ ತಮ್ಮನನ್ನು ಕರೆಯಲು ತನ್ನ ಪತಿಗೆ ಈ ರೀತಿ ಹೇಳಿದ್ದಳಂತೆ –

ನಾಗಮಂಗಲದ ಗಾರೆ ಚಾವಡಿ ಒಳಗೆ
ನಾರೆಬ್ಬಿಽ ಎಲೆಯ ಮೆಲುವೋನು । ತಮ್ಮಯ್ನ
ನೋಡಬೇಕೆಂದು ಬರಹೇಳಿ

ಬರಹೇಳಿ ಬಡವಾದೆ – ಹೇಳ್ಹೇಳಿ ಸಣ್ಣಾದೆ
ಬಾಳೆ ಎಲಿಯಂಗೆ ಬಳುಕಿಽದೆ । ತಮ್ಮಯ್ನ
ನೋಡಬೇಕೆಂದು ಬರಹೇಳಿ

ತಮ್ಮ ಬಂದುದಕ್ಕೆ ಮನವುಬ್ಬಿ ಹೊಗಳುತ್ತಾಳೆ.

ಹಡಗಿನ ತೌರೂರು ದಿಡಿಗಿನೇರಿಯ ಮೇಲೆ
ಒಡೆದು ಜೋತುರದ ಉಡುವೋನೆ । ತಮ್ಮಯ್ಯ
ನಿನ್ನುಡುದಾರವೆಲ್ಲ ಅಪರಂಜಿ

ತಮ್ಮ ಬಿಸಿಲಲ್ಲಿ ಬಂದುದಕ್ಕೆ ಮರುಗುತ್ತಾಳೆ:

ಬೇಸಿಗೆ ಬಿಸಿಲಲ್ಲಿ ಯಾಕೆ ಬಂದೊ ತಮ್ಮಯ್ಯ
ನೀ ಬಾಡಿ ನಿನ್ನ ಮಕ ಬಾಡಿ । ಕೈಯೊಳಗಿರುವ
ಚಿಗುರೆಲೆಽ ಬಾಡಿ ತರುಗಾದೊ

ತನ್ನ ತಮ್ಮನ ಹಿರಿಮೆ ಎಷ್ಟೆಂಬುದನ್ನು ಹೇಳುತ್ತಾಳೆ:

ಕಾಲುಂಗರ ತೂಕ ಸೇರುಮಲ್ಲಿಗೆ ತೂಕ
ನಾಕು ಜನ ತಮದಿಽರು ಸಮತೂಕ । ಮೈಸೂರ
ದೊರಿ ತೂಕ ನಮ್ಮ ಕಿರಿದಮ್ಮ

ತಮ್ಮನನ್ನು ನೋಡಿದೊಡನೆಯೇ ಅವನೊಡನೆ ನಲಿಯುವ ತನ್ನ ನಾದಿನಿ ತಮ್ಮನೊಡನಿರುವ ಚಿತ್ರವನ್ನು ಕಲ್ಪಿಸಿಕೊಳ್ಳುತ್ತಾಳೆ :

ಮೈಸೂರ್ಧೆಣ್ಣಿಗೆ ಮಂಚ ಸುಪ್ಪೊತ್ತಿಗೆ
ಮಂಚದಾ ಕೆಳಗೆ ಎಳನೀರು
ಮಂಚದಾ ಕೆಳಗೆ ಎಳನೀರಿಂಬೀಹಣ್ಣು (ನಿಂಬೇಹಣ್ಣು)
ಮೇಲೇಳೆs ಇನ್ನು ಬೆಳಗಾಯ್ತು

ಮುತ್ತಿನ ಮಣಿ ಸೋಕಿ, ರತ್ನಗಂಬಳಿ ಸೋಕಿ
ರಾಯ ತಮ್ಮಯ್ಯ ಭುಜ ಸೋಕಿ । ಮಲಗಿರುವ
ಕಟ್ಟಾಣಿ ಏಳೆ ಬೆಳಗಾಯ್ತು

ತಮ್ಮ ತನ್ನ ಮಡದಿಯನ್ನು ನೋಡಿಕೊಳ್ಳುವ ಬಗೆಯನ್ನು ನೆನೆಯುತ್ತಾಳೆ:

ವಾಲಿಗೊಜ್ಜುರ – ಕಪ್ಪಿಗೆ ಚರತುಂಬು
ಮೀನು ಬಾಬುಲಿಗೆ ಜರತಾರಿ । ತಾಯಮ್ಮ
ರಾಯ ಬೆಂಗಳೂರ ಘನಪೇಟೆಯೊಳಗಿರುವ
ಏರೋ ರಾಯನ ಮಗಳೆಂದು
ಏರೋರಾಯರ ಮಗಳೆ ತೋಳುಚಿತ್ತರದೋಳೆ
ಬಾಳೆಯ ವನದ ಕಮಲಾವೆ । ಬಾ ಎಂದು
ಭಾವಿಸುತ್ತಾನೆ ಮಡದೀಯ

ತನ್ನ ತಮ್ಮ ಬಂದ ಮೇಲೆ ಇನ್ನು ಆಕೆ ತೌರಿಗೆ ಹೊರಡುವ ಸಿದ್ಧತೆ ಮಾಡಿಕೊಳ್ಳುತ್ತಾಳೆ. ಹೊರಟ ಮೇಲೆ ಎಲ್ಲರಿಗೂ ಹೇಳಬೇಕು. ಮೊದಲು ಅವಳ ಮೈದುನ ಸಿಕ್ಕುತ್ತಾನೆ:

ಮೂಡಲು ತೋಟದಲಿ ಸುರಿದಿರುವ ರವಿಯಲ್ಲಿ
ಬಾಳಿಗೆs ನೀರ ಬಿಡುವೋರೆs । ಮೈದಯ್ಯ
ನಾ ಹೋಗಿ ಬತ್ತೀನಿ ತೌರಿಗೆ

ಅತ್ತಿಗೆಯ ಮಾತಿಗೆ ಅವನು ಬಿಂಕದಿಂದಲೇ ಹೇಳುತ್ತಾನೆ:

ಹೋಗಿ ಬಾರತ್ತೀಗೆ ಹೊನ್ನೋಲೆ ಕಿವಿಯೋರೆ
ನಾಗsರಾ ಶೆಡಿಯ ನೆರಿಗೋರೇ। ಅತಿಗಮ್ಮ
ನೀವೀಗ್ಹೋಗಿ ಈಗ ಬರಬೇಕು

ಮೈದುನನ ಮಾತಿಗೆ ಆಕೆ ಮುನಿದು ಹೇಳುತ್ತಾಳೆ:

ಈಗ್ಹೋಗಿ ಈಗ ಬರುವುದಕೆ ಮೈದಯ್ಯ
ಈ ಊರ ನಾಡಲ್ಲ ಬಲುದೂರ । ಮೈದಯ್ಯ
ಚಂದುರ ಗಿರಿಯಾಚೆ ಮಲೆನಾಡು । ಮೈದಯ್ಯ
ತಿಂಗಳ ಹಾದಿ ತಿರುಗೇವು!

ಅಲ್ಲಿಂದ ಮುಂದೆ ಹೊರಡುತ್ತಾಳೆ. ತನ್ನ ಮಾವ ಸಿಕ್ಕಾಗ ನಿಲ್ಲುತ್ತಾಳೆ :

ಅತ್ತೀಯ ಮರದಡಿ ಎತ್ತು ಮೇಸೊ ಮಾವಯ್ಯ
ನಾನ್ಹೋಗಿ ಬತ್ತೀನಿ ತವರೀಗೆ

ಅದಕ್ಕೆ ಮಾವ ಹೇಳುತ್ತಾನೆ:

ತೌರಿಗ್ಹೋಗಾಕೆ ಅಳಕಾಯ ಮುಗಿದಿಲ್ಲ
ತಿಟ್ಟು ಮ್ಯಾಲೆಳ್ಳ ಕುಯ್ದಿಲ್ಲ । ಗೌರಮ್ಮ
ಈಗ್ಹೋಗಿ ಈಗ ಬರಬೇಕು.
ಈಗ್ಹೋಗಿ ಈಗ ಬರಬೇಕು ಗೌರಮ್ಮ
ತೌರೊಳ್ಳೇದೆಂತ ಇರಬೇಡ

ವಿನಯದಿಂದಲೇ ಉತ್ತರವೀಯುತ್ತಾಳೆ:

ಹಾಲ್ಹಾಲಿಗಿಂತ ಜೇನುತುಪ್ಪಾಕ್ಕಿಂತ
ವಾಲಾಡಿ ಬೆಳೆಯೊ ರಸಬಾಳೆ । ಹಣಿಗಿಂತ
ನಮ ತೌರೂರೆ ಚೆಂದ ಮಾವಯ್ಯ

ಎಂದು ಹೇಳುತ್ತ ತಮ್ಮನೊಡನೆ ತೌರದಾರಿಯನ್ನು ಹಿಡಿಯುತ್ತಾಳೆ.

ತೌರಿಗೆ ಹೊರಟರೆ ಪತಿಯ ಜೊತೆಯಲ್ಲಿಯೇ ಹೋಗಬೇಕೆಂಬ ಹಂಬಲ ಅನೇಕ ಹೆಣ್ಣುಗಳಿಗಿರುವುದು ಸಹಜ. ಈಕೆಯೂ ಹಾಗೆ ಹೋಗಿಬರುತ್ತಿದ್ದುದುಂಟು. ಹಾಗೆ ಹೋದಾಗ ದಾರಿಯಲ್ಲಿ ಸಿಕ್ಕ ಊರಿನ ಸೋದರಿಯರು ವಿನೋದಕ್ಕಾಗಿ ಕೇಳುತ್ತಿದ್ದರು:

ದುಂಡುದೋಳಿಗೆ ರವಕೆ–ಉಂಡಬಾಯಿಗೆ ಎಲೆ
ತುಂಬಿದೂರಿಂದ ಬರುವೋಳೆ। ತಂಗ್ಯಮ್ನ
ಮುಂದೆಹೋಗುವರ ಹೆಸರೇನು?

ಅದಕ್ಕೆ ಇವಳು ಮುಗುಳ್ನಗೆಯಿಂದ ಉತ್ತರಿಸುತ್ತಿದ್ದಳು:

ಹೆಸರ ಹೇಳಾಕೆ ಹೆಚ್ಚಳವೇನಕ್ಕ
ಸಣ್ಣಂಗಿ ಮೇಲೆ ಸರಪಽಳಿ । ಸುಣಕಾಯಿ
ಸರದಾರ ಕಾಣೆ ನಿನ್ನ ಮೈದ

ಎಂಥ ಮನೋಜ್ಞವಾದ ಉತ್ತರವಿದು. ಆದರೆ ಇಂದು ಆಕೆ ತಮ್ಮನೊಡನೆಯೇ ತೌರಿಗೆ ಹೊರಟಳು, ತೌರು ಹತ್ತಿರವಾಯಿತು.

ಆಲೆ ಆಡುತಽವೆ ಗಾಣ ತಿರುಗುತಽವೆ
ಸಾರಂಗ, ನವಿಲು ಗರಿಬಿಟ್ಟು । ಆಡುವಾಗ
ಅದು ನಮ್ಮಪ್ಪನ ಅರಮಽನೆ

ಎಂದು ಹೆಮ್ಮೆಯಿಂದ ಉತ್ಸಾಹ ಕಾತರಗಳಿಂದ ತೌರನ್ನು ಗುರುತಿಸುತ್ತಾಳೆ. ಜೊತೆಯಲ್ಲಿದ್ದ ತಮ್ಮ,

ಅಕ್ಕನ ಕರಕೊಂಡು ಅಕ್ಕನ ಮಗನೆತ್ತಿಕೊಂಡು
ಅಕ್ಕನ ಮಗನಿಗೆ ಬಿಸಿಲೆಂದು । ತಮ್ಮಯ್ಯ
ಮುತ್ತಿನ ಕೊಡೆಯ ಹಿಡಿದಾನು

ಈ ರೀತಿ ಕರೆತಂದವನು,

ಮುತ್ತಿsನ ಕೊಡೆಯ ಹಿಡುಕೊಂಡು ತಮ್ಮಯ್ಯ
ಮುಂದಿನಾಲದ ಮರದಡಿಯ
ಮುಂದಿನಾಲದ ಮರದ ನೆರಳಿಗ್ಹೋಗಿ
ಕುಂತೀರಕ್ಕಯ್ಯ ಬರುತೀನಿ

ಎಂದು ಅಕ್ಕನನ್ನು ನೆರಳಿನಲ್ಲಿ ಕೂರಿಸಿ ತಾನು ಮೊದಲು ಮನೆಗೆ ಬಂದು ತನ್ನ ಹೆಂಡತಿಯನ್ನು ಕೂಗುತ್ತಾನೆ.

ಮಾವಯ್ಯನಾ ಮಗಳೆ ಮಲ್ಲಿಗ್ಹೂವಿನ ಸವತಿ
ಅಪರಂಜಿ ಚಂದ ಅತಿರಸವೆ । ಬೆಲೆವೆಣ್ಣೆ
ನಮ್ಮಕ್ಕ ಬಂದವಳೆ ಕರಿಬಾರೆ

ಎಷ್ಟೇ ಆಗಲಿ ಅವನ ಹೆಂಡತಿ ಪಟ್ಟಣದ ಹುಡುಗಿ. ಇವನ ಮಾತನ್ನು ಲೆಕ್ಕಿಸದೆ

ಒಲಿಮ್ಯಾಲನ್ನಾದೆ ಕೆಂಡದಲಿ ತುಪ್ಪಾದೆ
ತೊಡೆಮ್ಯಾಲೆ ಪುತ್ತೂರು ಮಲಗವನೆ । ರಾಯರೆ
ಕುಂತಿರಲಿ ಹೇಳಿ ನೆರಳಲ್ಲಿ

ಎಂದು ಹೇಳಿ ಮುಖ ತಿರುವಿಬಿಡುತ್ತಾಳೆ.

ಆ ಉತ್ತರಕ್ಕೆ ಹೆಂಡತಿಯ ಮೇಲೆ ರೇಗಿ ತಮ್ಮ ಅಕ್ಕನ ಬಳಿ ಬಂದು ವಿಷಯವನ್ನು ತಿಳಿಸುತ್ತಾನೆ:

ಪಾಪಗೇಡಿ ತಮ್ಮನ ಮನಿಗೆ ಯಾಕೆ ಬಂದೆ ಅಕ್ಕಯ್ಯ
ರಾಕಾಷಿ ಅವಳೆ ರವಣಿವಳೆ । ನನ್ನಕ್ಕ
ನೀ ಕೋಟೆಯಾ ನೋಡಿ ತಿರುಗವ್ವ

ತಮ್ಮನ ಆ ಮಾತಿಗೆ ಅಕ್ಕನಿಗೆ ಕೋಪವೇ ಬರುತ್ತದೆ.

ಕ್ವಾಟೆ ನೋಡಾಕೆ ಬಂದೆ ಊಟಾಕೆ ಬರಲಿಲ್ಲ
ನೀ ಹೆಚ್ಚಾಳವಾಗಿ ಬದುಕಪ್ಪ

ಎಷ್ಟಾದರೂ ಹೆಣ್ಣುಹೃದಯ. ತಮ್ಮನಲ್ಲಿ ಯಾವೊಂದು ಸದ್ಭಾವನೆಯನ್ನು ಇಟ್ಟುಕೊಂಡು ಬಂದಳೋ ಅದು ಇಲ್ಲಿ ಸಂಪೂರ್ಣವಾಗಿ ಮಾಯವಾಯಿತು. ಹೆಂಡತಿಯ ಮಾತಿಗೆ ಮಾರುಹೋಗಿ ಅವನು ಅಕ್ಕನಿಗೆ ಹಾಗೆ ನುಡಿದುಬಿಟ್ಟ, ತನ್ನ ಪ್ರೀತಿಗೆ ಪ್ರತಿಯಾದ ಪ್ರೀತಿ ದೊರೆಯದುದಕ್ಕಾಗಿ ಅವಳು ಅನುತಾಪಪಟ್ಟಳು. ಮತ್ತೆ ಅವನು ಹೇಳಿದ :

ಕಟ್ಟಿದ ಬುತ್ಯಾದೆ – ಕೈತುಂಬ ಬಳಿಯಾವೆ
ನಿಟ್ಟೂಸರಸಂತೆ ನೆರಳಾದೆ । ನನ್ನಕ್ಕ
ನಿನ್ಹೋಗಿ ಬಾರಿನ್ನು ಊರಿsಗೆ

ಮತ್ತೆ ಅದೇ ಬಗೆಯ ಉತ್ತರ. ಹೆಣ್ಣು ಬಿಕ್ಕಿಬಿಕ್ಕಿ ಅತ್ತಳು. ಅಷ್ಟರಲ್ಲಿ ಮಗಳು ಬಂದ ಸುದ್ದಿ ತಾಯಿಗೆ ತಿಳಿಯಿತು. ಓಡಿಬಂದು ಅವಳನ್ನು ಮನೆಗೆ ಕರೆದೊಯ್ದಳು. ಆಗ ಮನೆಯವರಲ್ಲಿ ಸಂಭ್ರಮ.

ಇಂಬಿ ಹಣ್ಣಿನಂಗೆ ತುಂಬಿದ ಪಟ್ಟಣದಂಗೆ
ತಂಗಮ್ಮ ಬಂದವಳೆ ತವರೀಗೆ । ಬ್ಯಾಡರಯ್ಯ
ನೀ ತಿಂಗಳೀಗೆ ಸೀರೆ ನೇಯಿಕೊಡೊ

ಎಂದು ಮನೆಯಲ್ಲೇ ಇದ್ದ ವಿಧವೆ ಅಕ್ಕ ಸಂತೋಷದಿಂದ ಹೇಳಿದರೆ ನಾದಿನಿ:

ಈದ ನಾಯಂಗೆ ಕಾದ ಕಬ್ಬಿಣದಂಗೆ
ನಾದೀನಿ ಬಂದವಳೆ ತವರೀಗೆ । ಬೇಡರಯ್ಯ
ನಾಳೀಕೆ ಸೀರೆಯ ನೇಯಿಕೊಡೋ

ಎಂದು ವ್ಯಂಗ್ಯವಾಗಿ ಹೇಳುತ್ತಾಳೆ, ಇದಕ್ಕೆಲ್ಲ ಹೆಣ್ಣು ದುಃಖಪಡುತ್ತಾಳೆ.

ಕಸಗೈಯ್ಯ ತೊಳೆದು ಮೊಸರಿಗೆ ಮಂತನ್ಹೂಡಿ
ಹಸಿದು ನಮ್ಮವ್ವನ ಮನೆಗ್ಹೋದೆ । ಕೋಣೇಲಿರೋ
ನಾದಿನಿ ಕಣ್ಣ ತಿರುವೋಳೆ।

ಇದನ್ನೆಲ್ಲ ಎದುರಿಸಲು ಅವಳು ಸಿದ್ಧಳಿರಲಿಲ್ಲ. ತನ್ನ ಗಂಡನ ಮನೆಯೇ ಸರಿಯೆಂದು ಹೊರಡಲನುವಾಗುತ್ತಾಳೆ. ಆಗ ಮತ್ತೆ ತಾಯಿ ಬಂದು ತಡೆಯುತ್ತಾಳೆ:

ಕಣ್ಣು ತಿರುವಿದ ಕಂಡು ನಡುವೆ ಬಾಗಿಲಿಗೆ ಬಂದು
ಹಡೆದವ್ವ ಬಂದು ತಡೆದಾಳೋ

ತಡೆದ ತಾಯಿ:

ಹಡೆದವ್ವ ಬಂದು ತಡೆದು ಏನಂದಾಳೋ
ತಮ್ಮಯ್ಯ ಬೆಳೆದವನೆ ಸಣಬತ್ತ । ತೊಗರೀಬೇಳೆ
ನೀ ಉಂಡ್ಹೋಗೆ ಕಂದ ತಡೆದಿಲ್ಲ

ಅದಕ್ಕೆ ಮಗಳು :

ಹೀರೆ ಹೂವಿನಂಗೆ ಈಗ ಕಾಸಿದ ತುಪ್ಪ
ಉಂಡುಬಂದೇ ತಾಯಿ ಹಸಿವಿಲ್ಲ

ಎಂದು ಊಟವನ್ನು ತಿರಸ್ಕರಿಸಿದರೂ ಹೆತ್ತ ಕರುಳು! ಕೇಳದೆ ಮಗಳನ್ನು ತಡೆದು ಊಟಮಾಡಿಸುತ್ತಾಳೆ.

ಆಗ ಮಗಳಾದವಳು ಕಂಬನಿಯ ಕೋಡಿಯಲ್ಲಿ ತಾಯ ತೋಳನ್ನು ತಬ್ಬಿಕೊಂಡು:

ಹೆಣ್ಣು ಮಕ್ಕಳಿಗೆ ತವರಾಸೆ ತಾಯವ್ವಾ
ನೀನ್ನಾಸೆ ನಮಗೆ ಅನುಗಾಲ
ತಾಯಿ ಇದ್ದರೆ ಭೋಗ ತಂದೆ ಇದ್ದರೂ ಭೋಗ
ನೀರಿದ್ರೆ ಬಾಳೆಗೊನೆಗೆ ಭೋಗ । ತಾಯವ್ವ
ನೀನಿದ್ರೆ ನನಗೆ ಐಭೋಗ

ಎಂದು ತಾಯ್ತನದ ಹಿರಿಮೆಯನ್ನು ಕೊಂಡಾಡುವಳು.

ಬಡಗು ಬಾಗಲಮನೆ ದಿಡಗಿನ ಕಂಬಸಾಲೆ
ಎತ್ತ ನೋಡಿದರು ಅಪರಂಜಿ । ಅಪ್ಪನ ಮನೆ
ಬಿಟ್ಟು ಹೋಗಾಕೆ ಮನಸಿಲ್ಲ

ಎನ್ನುವ ಮನೋಭಾವ ಮೂಡಬೇಕಾದರೆ ತಾಯೊಬ್ಬಳೇ ಕಾರಣಳಾಗಬೇಕಾಯಿತು. ಈಗ ತಾಯಿಗಾಗಿ ತೌರುಬೇಕಾಯಿತು.

ಹೀಗೆ ತೌರ ಬಳಗದ ಸುತ್ತ ಸುತ್ತಿಕೊಂಡ ಈ ಗೀತೆಯ ಬಳ್ಳಿಯಲ್ಲಿ ಒಂದು ಸಂಸಾರದ ಸ್ವಾರಸ್ಯ ಚಿತ್ರವನ್ನು ನಾವು ಕಾಣಬಹುದು. ತೌರೆಂದರೆ, ತಾಯೆಂದರೆ, ತನ್ನ ಅಣ್ಣತಮ್ಮ ಅಕ್ಕತಂಗಿಯರೆಂದರೆ ಹೆಣ್ಣಿಗೆ ಅದೆಷ್ಟು ಮಮತೆ ಇರುತ್ತದೆ, ಆದರೆ ನಿರಾಶೆಯಾದರೆ ಅವಳ ಉತ್ಸಾಹಭಂಗವೇನು, ಎಂಬುದರ ಹೃದಯಂಗಮ ನೋಟವನ್ನು ಈ ಗೀತೆಗಳಲ್ಲಿ ನಾವು ಕಾಣಬಹುದು. ಈ ರೀತಿಯಲ್ಲಿ ಜನಪದಗೀತಗಳು ನಮ್ಮ ಹಳ್ಳಿಯ ಬಾಳಿನ ರಸ–ವಿರಸಗಳನ್ನು ನಮ್ಮ ಚಿತ್ತಭಿತ್ತಿಯಲ್ಲಿ ಮೂಡಿಸುತ್ತವೆ. ನಿರಾಡಂಬರವಾಗಿ, ಮಧುರವಾಗಿ, ಮೋಹಕವಾಗಿ, ಅರ್ಥಪೂರ್ಣವಾಗಿ ಶೋಭಿಸುತ್ತವೆ. ಊರೂರುಗಳಲ್ಲಿ ಸಂಚಾರ ಮಾಡಿ ಸಂಗ್ರಹಮಾಡಿದರೆ ಇನ್ನೂ ಎಂತಹ ಅಮೂಲ್ಯ ರತ್ನಗಳು ಸಿಗಬಹುದೋ!

ಆದಿಚುಂಚನಗಿರಿ ಜನಪದಗೀತೆಗಳು *

ಶ್ರೀ ಆದಿಚುಂಚನಗಿರಿ ಪವಿತ್ರವಾದ ಒಂದು ಯಾತ್ರಾಸ್ಥಳ. ವರ್ಷಂಪ್ರತಿ ಸಾವಿರಾರು ಜನ ಯಾತ್ರಾರ್ಥಿಗಳು ನಾನಾ ಕಡೆಗಳಿಂದ ಇಲ್ಲಿಗೆ ಬರುತ್ತಾರೆ. ಬೆಳ್ಳೂರಿಗೆ ಎರಡು ಮೈಲಿಗಳ ದೂರದಲ್ಲಿ ಉನ್ನತಗಿರಿಗಳ ನಡುವೆ, ಶ್ರೀ ಆದಿಚುಂಚನ ಗಿರಿ ಮುಗಿಲನ್ನು ಮುಟ್ಟುವಂತೆ ಭವ್ಯವಾಗಿ ತೋರುತ್ತದೆ. ಈ ಗಿರಿಯಲ್ಲಿ ಬಹು ಪುರಾತನವಾದ ಶ್ರೀ ಗಂಗಾಧರೇಶ್ವರ ದೇವಾಲಯ ಬಹಳ ಸುಂದರವಾಗಿದೆ. ಇಲ್ಲಿನ ಶ್ರೀಮಠ, ಕಲ್ಯಾಣಿ, ಗುಡಿಗೋಪುರಗಳು, ಗಳಿಗೆಗಲ್ಲು, ಚೋಳೂರು ಕಂಬ, ಗವಿಸಿದ್ಧನಗುಡಿ, ಕತ್ತಲು ಸೋಮೇಶ್ವರನ ಗುಡಿ, ಬಾಗಿಲು ಭೈರವನ ಗುಡಿ ಮುಂತಾದವುಗಳನ್ನು ಕುರಿತು ಭಕ್ತಾದಿಗಳು ನಾನಾವಿಧವಾಗಿ ಹಾಡಿದ್ದಾರೆ. ಶ್ರೀಗಿರಿಯ ಸುತ್ತಣ ಹಳ್ಳಿಗರು ಹಾಡಿಕೊಳ್ಳುವ ಹಲಕೆಲವು ಗೀತೆಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಿ ಹೇಳಲಾಗಿದೆ.

---

* ಶ್ರೀ ಆದಿಚುಂಚನಗಿರಿಯನ್ನು ಕುರಿತು ಜನಪದ ಸಾಹಿತ್ಯ ವಿಪುಲವಾಗಿದೆ. ನಾಡಿನ ನಾನಾ ಕಡೆಗಳಲ್ಲಿ ಹಬ್ಬಿರುವ ಆ ಅಪಾರ ಸಾಹಿತ್ಯವನ್ನು ಅನೇಕ ಮಂದಿ ಉತ್ಸಾಹಿಗಳು ಇತ್ತೀಚೆಗೆ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಶ್ರೀ ಆದಿಚುಂಚನಗಿರಿಯ ಮಠದ ಜಗದ್ಗುರು ಶ್ರೀ ಚಂದ್ರಶೇಖರನಾಥ ಸ್ವಾಮೀಜಿಯವರು 'ಆದಿಚುಂಚನಗಿರಿ ಜನಪದ ಗೀತೆಗಳು' ಎಂಬ ಅಪೂರ್ವ ಸಂಕಲನವನ್ನೇ ಪ್ರಕಟಿಸಿದ್ದಾರೆ. ಶ್ರೀ ಕ.ರಾ.ಕೃ. ಅವರು ತಮ್ಮ 'ಶ್ರೀ ಆದಿಚುಂಚನಗಿರಿ' ಕೃತಿಯಲ್ಲಿ ಚುಂಚನಗಿರಿಯನ್ನು ಕುರಿತ ವಿಶೇಷ ಸಾಹಿತ್ಯವನ್ನೆಲ್ಲ ಕಲೆಹಾಕಿದ್ದಾರೆ. ನನ್ನ 'ಅವರ ನೆನೆದೇವು' ಕೃತಿಯಲ್ಲಿಯೂ ಶ್ರೀ ಚುಂಚನಗಿರಿಯ ಬಗ್ಗೆ ಸಾಕಷ್ಟು ಜನಪದ ಗೀತೆಗಳು ಪ್ರಕಟವಾಗಿವೆ. ಚೆನ್ನಪಟ್ಟಣ ಸುತ್ತಿನಲ್ಲಿ ಶ್ರೀ ಎನ್.ಆರ್. ರಂಗಯ್ಯನವರು ಅಷ್ಟಿಷ್ಟು ಹಾಡುಗಳನ್ನು ಆಯ್ದಿದ್ದಾರೆ. ಹೇಮಗಿರಿಯ ಶ್ರೀ ಅರ್ಚಕ ರಂಗಸ್ವಾಮಿಯವರು ೧೯೬೩ರ ವೇಳೆಗೆ ಪ್ರಕಟವಾದ ಅವರ 'ಹುಟ್ಟಿದ ಹಳ್ಳಿ – ಹಳ್ಳಿ ಹಾಡು' ಕೃತಿಯಲ್ಲಿ ಚುಂಚನಗಿರಿಯ ಭೈರವನ ಮೇಲಿನ ಕೆಲವು ಹಾಡುಗಳನ್ನು ಪ್ರಕಟಿಸಿದ್ದಾರೆ. ಹಳೆಯ ಮೈಸೂರಿನ ಹಾಸನ, ತುಮಕೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳ ಬಹು ಭಾಗಗಳಲ್ಲಿ ಈ ಸಾಹಿತ್ಯ ವಿಪುಲವಾಗಿ ಹಬ್ಬಿದೆ ಎನ್ನುವುದು ಇದರಿಂದ ಶ್ರುತಪಡುತ್ತದೆ. ೧೯೬೦ರ ವೇಳೆಗೆ ಚುಂಚನಗಿರಿಯ ಜನಪದ ಸಾಹಿತ್ಯದ ಒಂದು ಕ್ರಮಬದ್ಧ ಪರಿಚಯವಾಗುವಷ್ಟು ಸಾಹಿತ್ಯವನ್ನು ನಾನು ನಾಗಮಂಗಲ ತಾಲ್ಲೂಕಿನ ಚುಂಚನಗಿರಿಯ ಸುತ್ತಮುತ್ತಣ ಹಳ್ಳಿಗಳಲ್ಲಿ ಸಂಗ್ರಹಿಸಿದೆ. ಸಂಗ್ರಹಿತ ಸಾಹಿತ್ಯವನ್ನು ಒಂದು ವ್ಯವಸ್ಥಿತ ಕ್ರಮದಲ್ಲಿ ಅಳವಡಿಸಿ 'ಪುಸ್ತಕ ಪ್ರಪಂಚ' ಪತ್ರಿಕೆಗೆ ೧೯೬೪ರಲ್ಲಿ ಅಣಿಮಾಡಿಕೊಟ್ಟೆ, ಅದರಲ್ಲಿ ಯಾವ ಬದಲಾವಣೆಯನ್ನೂ ಮಾಡದೆ ಯಥಾರೀತಿಯಾಗಿ ಇಲ್ಲಿ ಪ್ರಕಟಿಸಲಾಗಿದೆ.

ಶಿವರಾತ್ರಿ ನವರಾತ್ರಿಗಳನ್ನು ಶ್ರೀ ಆದಿಚುಂಚನಗಿರಿಯಲ್ಲಿ ವಿಶೇಷ ರೀತಿಯಲ್ಲಿಯೇ ಆಚರಿಸಲಾಗುತ್ತದೆ. ಗಿರಿಗೆ ಒಂದೂವರೆ ಮೈಲಿ ದೂರದಲ್ಲಿರುವ ಅಂಬಲಜೀರಹಳ್ಳಿಯ ಭಕ್ತರಿಗೆ

ಗಂಗಾಧರನಿಗೆ ಅಸಂಖ್ಯಾತ ಭಕ್ತರು. ಆಗಾಗ ಬಂದು ದೇವರ ದರ್ಶನ ಮಾಡಿ ಹೋಗುತ್ತಾರೆ. ಮನೆದೇವರಾದ ಇವನ ಬಳಿ ಬಂದು ಅವರು ಹೇಳುವರು–

ಹಿಡಿಹೊನ್ನ ಹಿಡುಕೊಂಡು ಗುಡಿಸುತ್ತ ನಾವ್ ಬಂದೊ
ಗುಡೀಲಿ ಪೂಜಾರಿ ಇರಲಿಲ್ಲಾ। ಲಿಂಗಯ್ಯ
ಹಿಡಿಹೊನ್ನ ಇಕ್ಕೇವು ಮಡಿಲೊಡ್ಡೊ

ಕಾಯೊಂದು ಕೈಯ್ಯಾಯ್ತು ಹೂವೊಂದು ಮಡಿಲಾಯ್ತು
ಸಂಪಿಗೆ ಹೂವೊಂದು ಸೆರಗಾಯ್ತು । ಭೈರುವಾ
ಸಂಪನ್ನsನೆಂದು ಮರೆಬಿದ್ದೊ ।

ಬಾಗಿಲು ಮುಚ್ಚಿರುತ್ತದೆ. ದೂರದಿಂದ ಬಂದ ಅವರು ವಿಷಾದದಿಂದ

ಒಕ್ಕಲು ಬತ್ತೀವಿ ಒಡೆಯ ಬಾಕಲು ತೆಗಿಯೋ,
ತೊಟ್ಟಿಲು ತತ್ತೀವಿ ತೊಳುಗಾಕೆ । ಭೈರುವs
ಶಿಶುವ ತತ್ತೀವಿ ಹೆಸರ್ಹೇಳೋ

ತಮ್ಮ ಮಗುವಿಗೆ ಹೆಸರನ್ನು ಕೇಳಲು ದೇವರ ಬಳಿ ಬಂದಾಗ ಅವನ ಉತ್ತರ –

ಅಂದು ವಿಶೇಷವಾದ ಹಕ್ಕೊಂದನ್ನು ನೀಡಲಾಗಿದೆ. ಅಸಂಖ್ಯಾತ ಭಕ್ತರು ದೂರದೂರದ ಗ್ರಾಮಗಳಿಂದ ಬಂದು ಗಿರಿಯಲ್ಲಿ ನೆರೆದಿದ್ದರೂ ಜೀರಹಳ್ಳಿಯವರು ಬಂದೇ ದೇವರಿಗೆ ಅಭಿಷೇಕ ಮಾಡಬೇಕಾಗುತ್ತದೆ. ದೇವರ ಉತ್ಸವವನ್ನು ನಡೆಸಬೇಕಾಗುತ್ತದೆ. ಗ್ರಾಮದ ಮುಖಂಡರೊಬ್ಬರು ಅರ್ಚಕರ ಸ್ಥಾನದಲ್ಲಿ ನಿಂತು ಪೂಜಾದಿಗಳನ್ನು ನಡೆಸುತ್ತಾರೆ. ಶಿವರಾತ್ರಿ ತನ್ನದೇ ಆದ ಆಕರ್ಷಕ ರೀತಿಯಲ್ಲಿ ಚುಂಚನಗಿರಿಯಲ್ಲಿ ನೆರವೇರುತ್ತದೆ.

ಶಿವರಾತ್ರಿಯ ದಿನ ರಾತ್ರಿ ಸದ್ದಡಗುವ ವೇಳೆಗೆ ಬೆಟ್ಟಕ್ಕೆ ಹಣ್ಣಿನ ಗೂಡೆಗಳು ಹೊರಡುತ್ತವೆ. ಮೊಸರು, ಹಾಲು, ತುಪ್ಪ ಮುಂತಾದವುಗಳ ಜೊತೆಗೆ ಶಿವರಾತ್ರಿಗಾಗಿಯೇ ಹಣ್ಣು ಮಾಡಿದ ಬಾಳೆಯ ಗೊನೆಗಳಿಂದ ಚಿಪ್ಪನ್ನು ಮುರಿದು ಗೂಡೆಗಳಲ್ಲಿ ತುಂಬಿಕೊಂಡು ಗರತಿಯರು ಹೊತ್ತು ಗುಂಪುಕೂಡುತ್ತಾರೆ. ಹರಸಿಕೊಂಡಿದ್ದ ಊರಿನ ಹೆಣ್ಣುಮಕ್ಕಳು ಬಾಯಿ ಬೀಗಗಳನ್ನು ಚುಚ್ಚಿಕೊಂಡು ಜೊತೆಗೂಡುತ್ತಾರೆ. ವಾದ್ಯವಿಶೇಷಗಳೊಡನೆ ದೊಡ್ಡ ಮೆರವಣಿಗೆಯೇ ಚುಂಚನಗಿರಿಯ ದಿಕ್ಕಿನಲ್ಲಿ ಸಾಗುತ್ತದೆ. ದೀವಟಿಗೆಗಳ ಬೆಳಕಿನಲ್ಲಿ ಊರಿನ ಯುವಕರು, ಯುವತಿಯರು, ಹಿರಿಯರು, ಕಿರಿಯರು, ಮಕ್ಕಳು ಮಂದಿಯೆಲ್ಲ ಬೆಟ್ಟದ ತಪ್ಪಲಿನ ಚುಂಚನಹಳ್ಳಿಯನ್ನು ತಲಪುವ ವೇಳೆಗೆ ಸಮರಾತ್ರಿ ಎಟುಕಿಸಿಕೊಂಡಿರುತ್ತದೆ. ವಾದ್ಯರವ ಚುಂಚನಗಿರಿಯನ್ನೂ ಮುಟ್ಟಿ ವಿಶಾಲವಾದ ಅರೆಯಮೇಲೆ ಅಲ್ಲಲ್ಲಿ ನಿದ್ದೆಯ ಮಂಪರಿನಲ್ಲಿ ಒರಗಿದ ಇತರ ಹಳ್ಳಿಗಳ ಭಕ್ತರನ್ನು ಎಚ್ಚರಗೊಳಿಸುತ್ತದೆ.

ಚುಂಚನಗಿರಿಯನ್ನು ಕುರಿತಾದ ಜನಪದ ಗೀತೆಗಳನ್ನು ಕೇಳುವವರು ಆ ರಾತ್ರಿ ಗಿರಿಯಲ್ಲಿ ನಿಲ್ಲಬೇಕು. ಜೀರಹಳ್ಳಿಯವರ ಹಾಡಿನ ಉಕ್ಕುಹೊಳೆಯ ಜೊತೆಗೆ ಉಳಿದವರ ಹಾಡುಗಳು ಬೆರೆತು ಅದಾವುದೋ ಮಂಗಳಮಯ ಸಂಗೀತ ಲೋಕವನ್ನೇ ಹೊಕ್ಕಂತೆ ಭಾಸವಾಗತೊಡಗುತ್ತದೆ. ಮಂಟಪಗಳಲ್ಲಿ, ಮೆಟ್ಟಿಲುಗಳಲ್ಲಿ, ಬಂಡೆಯ ಮೂಲೆಮೂಲೆಯಲ್ಲಿ ಕುಳಿತ ಭಕ್ತತತಿ ಹಲವು ಬಗೆಯಲ್ಲಿ ಗಂಗಾಧರನನ್ನು ಕುರಿತು ಹಾಡುತ್ತಾರೆ. ತಮ್ಮ ಅಧಿದೈವದ ವಿವಿಧ ಲೀಲೆಗಳ ಬಣ್ಣನೆಗಳಲ್ಲಿ

ಹೆಸರೇನ ಹೇಳಲಿ ಹಸುಳೆ ನಮ ಮಾದನಿಗೆ
ನನ್ನ ಹೆಸರು ನಿಮ್ಮ ಶಿಶುವೀಗೇ

ಪೂಜೆ ಮುಗಿದು ಈಶ್ವರ ತನ್ನ ಹೆಸರನ್ನೇ ಆ ಮಗುವಿಗೆ ಹೇಳಿದ ಮೇಲೆ ಆ ಮಗುವಿನ ತಾಯಿ –

ಮಲ್ಲಿಗೇ ಹೂವ ಅಲ್ಲಿಟ್ಟೆ ಇಲ್ಲಿಟ್ಟೆ
ಕಲ್ಲು ಮ್ಯಾಲಿಟ್ಟೆ ಕೈಬಿಟ್ಟೆ । ಗಂಗಾಧರುನ
ಪಾದಕೇ ಇಟ್ಟೆ ಜವನಾವ

ಹೀಗೆ ಹೇಳಿಕೊಂಡು ಹೋಗುತ್ತಾರೆ.

ಶಿವರಾತ್ರಿ ಮುಂತಾದ ಹಬ್ಬಹರಿದಿನಗಳಲ್ಲಿ ಬಾಯಿಬೀಗದವರು ಬರುತ್ತಾರೆ. ಆ ಬಾಲೆಯರು ಅಗಾಧ ಗಿರಿಯನ್ನೇರಲಾರದೆ ಹೇಳುವರು:

ಒಪ್ಪೊತ್ತಿನೂಟ ಚುಚ್ಚು ಬಾಯಿ ಬೀಗ
ಉಕ್ಕೊ ಮರಳಲ್ಲಿ ಬರಲಾರೆ । ಭೈರುವ
ನೀನೊಪ್ಪಿಸಿಕೊಳ್ಳೊ ಹರಕೇಯ

ದೇವರಾದವನು ಅದನ್ನು ಒಪ್ಪಿಯಾನೆ? ತನ್ನ ದೇಗುಲದವರೆಗೂ ಅವರು ಬಂದೇ ತೀರಬೇಕೆಂದು ಅವನ ಛಲ –

ಮೈಮರೆಯುತ್ತಾರೆ. ಜೀರಹಳ್ಳಿಯವರು ಗಿರಿಯನ್ನೇರಿ ಹೋಗಿ ಗಂಗಾಧರನ ಗುಡಿಯನ್ನು ಸೇರಿ ಪೂಜೆಯಲ್ಲಿ ತೊಡಗಿ, ಉತ್ಸವಮೂರ್ತಿಯನ್ನು ಅಲಂಕರಿಸಿ, ದೇವರ ಮೆರವಣಿಗೆ ಇಳಿದು ಬರುವವರೆಗೆ ಕಂಬದಮ್ಮನ ಅರೆಯ ಮೇಲೆ ಎತ್ತೆತ್ತಲೂ ಹಾಡಿನ ಹಾಲ್ಬೆಳಕು ಹರಿದಾಡಿ ರಸರೋಮಾಂಚನವನ್ನುಂಟು ಮಾಡುತ್ತದೆ. ಭಕ್ತಿತನ್ಮಯತೆಯನ್ನು ತರುತ್ತದೆ.

ವಿಶೇಷವಾಗಿ ಹೆಣ್ಣುಮಕ್ಕಳೇ ಹಾಡುವ ಈ ಹಾಡುಗಳಲ್ಲಿ ಭಕ್ತಿರಸ ಉಕ್ಕಂದವಾಗಿ ಹರಿಯುವುದನ್ನು ಕಾಣಬಹುದು. ಅಪೂರ್ವ ಕಲ್ಪನಾರಮ್ಯತೆಗೆ ಚುಂಚನಗಿರಿಯ ಹಾಡುಗಳು ಅತ್ಯುತ್ತಮ ನಿದರ್ಶನ. ಕನ್ನಡ ಜನಪದ ಭಕ್ತಿಗೀತೆಗಳ ಲಾಲಿತ್ಯ, ವರ್ಣನೆಯ ಬೆಡಗುಗಳನ್ನು ಅರಿಯಬೇಕಾದರೆ ಈ ಹಾಡುಗಳ ಮೊರೆಹೋಗಬೇಕು. ಭಕ್ತರು ಗಿರಿಗೆ ಯಾತ್ರೆ ಬರುವ ಬಗ್ಗೆ ಗಿರಿಯ ಸುಂದರ ದೃಶ್ಯಗಳು, ಮನೆಸ್ವಾಮಿ ಗಂಗಾಧರನೊಡನೆ ಅವರ ಸರಸ ಲೀಲೆಗಳು, ಕುಲಗುರುವಿನ ಮಹಿಮೆಗೆ ಅವರು ಮಾರುಹೋದ ಬಗೆ, ಗಂಗಾಧರಮಾಳವ್ವರ ಪ್ರಣಯ ಪ್ರಸಂಗ, ಜಾತ್ರೆಯ ಬೆಡಗು, ತೇರಿನ ವೈಭವ, ದಿಕ್ಕುದಿಕ್ಕಿನ ಹಳ್ಳಿಗಳಿಂದ ಬರುವ ಭಕ್ತರ ಬಣ್ಣನೆ, ಶಕ್ತಿದೇವತೆ ಕಂಬದವ್ವನ ಪ್ರಭಾವ ಹೀಗೆ ಅವರು ಬಣ್ಣಿಸಿ ಮನಸೋಲದ ಸಂದರ್ಭವಿಲ್ಲ. ಭಕ್ತಿಸ್ಥಾಯಿಯ ಹಿನ್ನೆಲೆಯಲ್ಲಿ ಅತ್ಯುಜ್ವಲ ಭಾವೋತ್ಕಟತೆಯಿಂದ ರಂಜಿಸುವ ಈ ತ್ರಿಪದಿಗಳು ಉತ್ಕೃಷ್ಟ ಕಾವ್ಯದ ಗದ್ದುಗೆಯನ್ನೇ ಏರಿ ನಿಲ್ಲುತ್ತವೆ. ಒಂದೊಂದು ತ್ರಿಪದಿಯನ್ನು ಮತ್ತೆಮತ್ತೆ ಪರಿಭಾವಿಸಿ ಅವುಗಳ ಅರ್ಥವೈಶಾಲ್ಯದಲ್ಲಿ ನಮ್ಮ ಮನ ಸಂಸ್ಕಾರವಾದರೆ ನಿಸರ್ಗ ಸುಂದರ ಚುಂಚನಗಿರಿಗೆ ಯಾತ್ರೆಯನ್ನು ಕೈಕೊಂಡಷ್ಟೆ ಹರ್ಷ, ಆಮೋದ, ಸಂತೃಪ್ತಿ ಮನಸ್ಸಿನಲ್ಲಿ ನೆಲಸುತ್ತದೆ.

ಶಿವರಾತ್ರಿಯ ಈ ಪವಿತ್ರ ಹಿನ್ನೆಲೆಯಲ್ಲಿ ಮನಸ್ಸನ್ನು ಸೂರೆಗೊಳ್ಳುವ ಆ ಸಾಹಿತ್ಯ ಕುಸುಮವನ್ನೆಲ್ಲ ಸುಮಾರು ಒಂದೂವರೆ ದಶಕದ ಹಿಂದೆಯೇ ಆಯ್ದ ಸೌಭಾಗ್ಯ ನನ್ನದು. ಈ ಹಾಡುಗಳನ್ನು ಹೇಳಿದ ಚಿಂತಮ್ಮ, ಲಕ್ಷ್ಮಮ್ಮ, ನಂಜಮ್ಮ ಹಾಗೂ ನನ್ನ ಮಾತೃಶ್ರೀಯವರಿಗೆ ಸಂಗ್ರಾಹಕ ಋಣಿ.

ಒಪ್ಪೀಸಿಕೊಳುವುದಕೆ ಚಿಕ್ಕೋಳು ಮಗಳೇನೇ?
ಸುತ್ತಿ ಬಾರೆ ನನ್ನ ಶಿಖರಾವ । ಬಾಗಿಲು ಮುಂದೆ
ನಾ ಒಪ್ಪಿಸಿ ಕೊಳುತೀನಿ ಹರಕೇಯ ॥

ಹಾಗೆ ಬಾಯಿಬೀಗ ಹಾಕಿಕೊಂಡು ಬಂದ ಹೆಣ್ಣುಮಕ್ಕಳನ್ನು ಕಂಡು ಅನುಕಂಪದಿಂದ ಶಿವನ ಮಡದಿ ಸಡಗರದಿಂದ ಎದುರುಗೊಳ್ಳುತ್ತಾಳೆ.

ಬಾಯಿ ಬೀಗದೋರು ಬಾಯಾರಿ ಬಂದವರೆ
ತಾರೊ ಭೈರೂವ ಚವರಿಗೆಯಽ । ಚಿನ್ನದಾಽ
ದಾರವಾ ತಾರೊ ಸಿವಡಿಗ್ಗೆ

ಆ ರೀತಿ ಸ್ವಾಗತಿಸಲು ಪಾರ್ವತಿಯನ್ನು ಅವರು ಪ್ರಾರ್ಥಿಸುತ್ತಾರೆ.

ಮಲ್ಲಿಗೇ ಹೂವ ನಲ್ಲೇರೈವರು ಕೂಡಿ,
ನಲ್ಲೇ ಪಾರ್ವತಿ ಸುಳಿದಾಳು । ಮಂಡೆಯ ಮೇಲೆ
ಮಲ್ಲಿಗೇ ಹೂವು ನಗುತಾವೆ । ತಾಯವ್ವ
ನಿನ ಪಾದಕೆ ನಾವು ಶರಣೆಂದೊ

ಭಕ್ತಾದಿಗಳು ಆಗಾಗ ಈ ಗಿರಿಗೆ ಬಂದು ಕಾಣುವುದು.

ಅರಿಮ್ಯಾಲೆ ಅಂದಾನಿ ಗಿರಿಮ್ಯಾಲೆ ಭೈರುವಾಽ
ಕೋಡುಗಲ್ಲ ಮೇಲೆ ಗವಿಸಿದ್ದ । ಕೂತುಕೊಂಡು
ಚೋಳೂರಿಗ್ವಾಲೆ ಬರೆದಾನು
ಚೋಳೂರಿಗ್ವಾಲೆ ಏನೆಂದು ಬರೆದಾನೋ
ಬಿದರೆ ಚೋಳೂರ ದೊರೆಗೋಳು । ಬಂದಲದೆ
ಮಾವಿನ ಕೆರೆಯೋರು ಹೊಲೆಗಳೆದು । ಬಲ್ಲಾವಳ್ಳಿ
ರಾಯರ್ಹಾಕ್ಯಾರು ಚವರಾವ । ಜೀರಹಳ್ಳಿ
ಮಾಲಿಂಗಾಗೊಸ್ತ ಧರಿಸ್ಯಾರು

ಭಕ್ತಾದಿಗಳು ಚುಂಚನಗಿರಿಯಲ್ಲಿ ನಡೆಯುವ ಶಿವಪೂಜೆಯ ವಿಧಾನವನ್ನು ಹೇಳುವ ಬಗೆ :

ಚುಂಚನ ಗಿರಿಯೋರು ತುಂಬಂಚಿನ ಸೀರೆಯೋರು
ತುಂಬೆ ಹೂವಿನ ತುರುಬೋರು । ಚುಂಚನಗಿರಿಯ
ತುಂಬ ಕುಂತವರೆ ದೊರೆಗಳು ।

ಚುಂಚನಗಿರಿಯಲ್ಲಿ ಕಂಚಿನ ಕಲ್ಯಾಣಿ
ಪಂಚಮುಖಿದ್ಯೆಗೆ ಶಿವಪೂಜೆ । ಆಗುವಾಗ
ಕಂಚಿನಾ ಕಹಳೆ ನುಡಿದಾವು ।

ಹಳ್ಳ ಕೊಳ್ಳದ ನೀರು ಬೆಳ್ಳಿಯ ಕೈಚೊಂಬು
ಅಲ್ಲಿ ಲಿಂಗ್ಯೆಗೆ ಶಿವಪೂಜೆ । ಆಗುವಾಗ
ಬೆಳ್ಳಿಯಾ ಗಂಟೆ ಢಣಿರೆಂದೊಽ ।

ಸ್ವಾಮಿ ಭೈರುವ ಜಡೆಯಲ್ಲಿ ಒದಿರ್‍ಯಾನೆ,
ಮಾಯಸಂದರದ ಮುದಗೆರೆಯ ।

ಮಾಯಸಂದುರದ ಮುದೆಗೆರೆಯೇರಿಯ ಮೇಲೆ,
ಹೂಕಂಡು ಜಡೆಯಾ ಒದಿರಾನೆ । ಭೈರುವ
ನೀರಕಂಡು ಲಿಂಗ ಬೆಳಿಗ್ಯಾನೆ

ಪೂಜೆಗೆ ಶಿವ ಬರುವ ರೀತಿಯನ್ನು ನೋಡಿ –

ಕಾವಿಯ ಜೋತುರ – ಕಾವಿಯ ನೇತುರ
ಕಾವೇರ್ಹೊಳೆಯಿಂದ ಬರುವೋನೆ । ಗಂಗಾಧರನೆ
ಕಾವಿ ಹೊಳೆದಾವೊ ಬಿಸಿಲೀಗೆ

ಪೂಜೆಯ ವೇಳೆಗೆ ಭಕ್ತಾದಿಗಳು ಬರುವ ರೀತಿಯಿದು –

ನೆತ್ತಿಯ ಮನಿಮೇಲೆ ಹೊತ್ತುರಿದು ಬೆಳಿಗ್ಯಾನೆ
ನಾವ್ಹತ್ತೂ ಮೈಲಿಂದ ಬರುತೀವಿ । ಗಂಗಾಧರನೆ
ನಿನಗೊಪ್ಪುವಾ ಹಣ್ಣ ತರತೀವಿ !

ಶ್ರೀ ಚುಂಚನಗಿರಿಯ ಶ್ರೀ ಗಂಗಾಧರೇಶ್ವರನಿಗೆ ಇಬ್ಬರು ಮಡದಿಯರು. ಒಬ್ಬಳು ಪಾರ್ವತಿ, ಮತ್ತೊಬ್ಬಳು ಮಾಳವ್ವ – ಕುರುಬರ ಹುಡುಗಿ.

ಗಂಡಹೆಂಡಿರ ಜಗಳ ಸವತಿ ಮಾತ್ಸರ್ಯ ಮುಂತಾದುವನ್ನು ಮನಮುಟ್ಟುವಂತೆ ಸ್ವಾರಸ್ಯಪೂರ್ಣವಾಗಿ, ತಿಳಿಯಾದ ಹಾಸ್ಯದ ಹಿನ್ನೆಲೆಯಲ್ಲಿ ಹಾಡಿದ್ದಾರೆ. ಮಾಳಮ್ಮ ಪಾರ್ವತಿಗೆ ಸವತಿ ಎನಿಸಿದಳು. ಒಬ್ಬರ ಮುಖವನ್ನು ಕಂಡರೆ ಒಬ್ಬರಿಗಾಗದು. ಈಗಲೂ ದೇವಾಲಯದಲ್ಲಿ ಈ ದೇವತೆಯರ ವಿಗ್ರಹಗಳನ್ನು ಒಂದರ ಎದುರಿಗೆ ಒಂದನ್ನು ತರುವುದಿಲ್ಲವಂತೆ! ಅಂತು ಪಾರ್ವತಿಗಿಂತಲೂ ಜನರಿಗೆ ಮಾಳಮ್ಮನ ಮೇಲೆಯೇ ಪ್ರೀತಿ ಹೆಚ್ಚೆಂದು ಈ ಕೆಳಗಿನ ಹಲವು ಸಾಲುಗಳಿಂದ ವ್ಯಕ್ತವಾಗುತ್ತದೆ. ಜನ ಮಾಳಮ್ಮನನ್ನು ನೆನೆಯುವ ರೀತಿ –

ಪಿಲ್ಲಿ ಕಾಲಿನೋಳೆ ಚೆಲ್ಲಿದ ನೆರಿಗೋಳೆ
ಕಲ್ಲುಮ್ಯಾಲೆ ಕಾಲ ತೊಳಿಯೋಳೆ । ಮಾಳವ್ವ
ನಿನ್ನ ಪಿಲ್ಲಿ ಸಾವಿರಕೆ ಬೆಲಿಯಾದೊ

ದಾರಿಮನಿಯೋಳೆ ದಾರಿಗರಿಗಾದೋಳೆ
ದಾರಕೂ ಸಣ್ಣ ದನಿಯೋಳೆ । ಮಾಳವ್ವ
ದಾರ ಬಂದಾವೆ ಬೆಲೆ ಮಾಡೆ

ಬೀದಿ ಮನೆಯೋಳೆ ಬೀಸಣಿಗೆ ನೆರಿಗೋಳೆ ।
ಜಾಲದ್ಹೂವಿನ ಜಡೆಯೋಳೆ । ಮಾಳವ್ವ
ಜಾಣೆ ತೇರುತವ ಕೊಡುಬಾರೆ

ಹರಿಶಿನದುಂಡೆಯ ಸರಸಕೀಡಾಡುತ್ತ
ವರುಷದ ಮಗನ ನಡೆಸೂತ । ಮಾಳವ್ವ
ಪುರುಷರ ತೇರ ಹರಿಸ್ಯಾಳೆ

ಗಂಧದುಂಡೇಯ ಚಂದಕ್ಕೀಡಾಡುತ್ತ
ತಿಂಗಳಾಽ ಮಗನ ನಡೆಸೂತ । ಮಾಳವ್ವ
(ಶ್ರೀ) ಗಂಡನಾ ತೇರ ಹರಿಸ್ಯಾಳೆ

ಅಲ್ಲವಳೆ ಇಲ್ಲವಳೆ ಗೊಲ್ಲರ ಕೇರೀಲವಳೆ
ಪಲ್ಲಕ್ಕೀಲವಳೆ ಕುಸುಮಾಲೆ । ಮಾಳವ್ವ
ಉಯ್ಯಾಲೆ ಇಳಿಯೆ ದನ ಬಂದೋ । ಮಾಳವ್ವ
ಉಯ್ಯಾಲೆಗ್ಹೂವ ಬಿಡಿಸೇವು

ಮೂಗುತಿ ಮುಂಭಾರ ಹೆಣೆಗಂಟು ಹಿಂಭಾರ
ಜಗಜಂಪೀನೋಲೆ ಕಿವಿಭಾರ । ಮಾಳವ್ವ
ದೊಡ(ಡ್ಡ) ಗುಂಡಿನ ಸರ ಎದಿಭಾರ । ಮಾಳವ್ವ
ಗೇಣಂಚಿನ ಸೀರೆ ನಡುಭಾರ

ಹುಣಸೂರು ಬಣ್ಣ ಹುಣಿಸೆ ಹೂವಿನ ಬಣ್ಣ.
ಮಾಗಡೀ ಬಣ್ಣ ಎಳೆಸಣ್ಣ । ಮಾಳವ್ವ
ನಡುಸಣ್ಣ ಬಣ್ಣ ಉಡುಬಾರೆ

ಆದರೆ ತ್ರಿಶೂಲಿಗೆ ಪಾರ್ವತಿಯ ಮೇಲೆ ತಿರಸ್ಕಾರವಿಲ್ಲ. ಅವನಿಗೆ ಇಬ್ಬರು ಮಮತೆಯ ಮಣಿಗಳು, ಪ್ರೀತಿಯ ಪುತ್ಥಳಿಗಳು, ಇಬ್ಬರೊಡನೆಯೂ ಅವನು ಆಡಬೇಕು; ಹಾಡಬೇಕು, ಒಲಿಯಬೇಕು; ನಲಿಯಬೇಕು!

ಅಪ್ಪನಾ ಗಿರಿಮ್ಯಾಲೆ ಏನೇನು ಮಾರ್‍ಯಾವೆ?
ಬಾಯಾರಿ ಬಂದೋರಿಗೆ ಎಳೆನೀರು । ಇಂಬೀಹಣ್ಣು
ಸಾರಿಮಾರ್‍ಯಾರೆ ಗಿರಿಮ್ಯಾಲೆ॥

ಇಂಥ ಗಿರಿಯಿಂದ ವಾರದ ಅಯ್ಯಂದಿರು ಊರಿಗೆ ಬಂದಾಗಲಂತೂ ಹೆಣ್ಣು ಮಕ್ಕಳ ಸಡಗರ ಹೇಳತೀರದು –

ವಾರದ ಅಯ್ಯೋರು ಊರಿಗೆ ಬಂದವರೆ
ವಾರವಾ ಕೇಳೆ ಹಿರಿಯಕ್ಕ ।

ವಾರದ ಅಯ್ಯನೇ ಅದಕ್ಕೆ ಉತ್ತರ ಕೊಡುತ್ತಾನೆ –

ವಾರ ಆಯಿತು ವಾರ ತೇರು ಮಂಗಳವಾರ
ಭೂತನಾ ಸೇವೆ ಬುಧುವಾರ । ತಂಗ್ಯಮ್ಮ
ಆಗ ಸ್ವಾಮಿಯ ಕರೆದಾರು

ಮತ್ತೆ ತಂಗಿಯ ಸಂಭ್ರಮ:

ಜೋಗಪ್ಪ ಬಂದು ಬಾಗಲಲಿ ನಿಂತವನೆ
ಏನ ಇಡಲೇ ಹಿರಿಯಕ್ಕ?

ಅಕ್ಕ ಹೇಳುತ್ತಾಳೆ:

ತೊಳಿಸಿದಕ್ಕೀನಿಡು ಒಡೆದ ಬ್ಯಾಳೆನಿಡು
ಸಾಂಭ್ರಾಣಿನ್ಹಾಕಿ ಶರಣೆನ್ನು । ತಂಗ್ಯಮ್ಮ
ಆಗ ಭೈರುವ ಬರುತಾನೆ॥

ಇಷ್ಟಾಯಿತು, ಅವರು ಚುಂಚನಗಿರಿ, ಗಂಗಾಧರೇಶ್ವರ, ಅವನ ಮಡದಿಯರು, ಅಯ್ಯಂದಿರು ಮುಂತಾಗಿ ಕುರಿತು ಹಾಡಿದ್ದು. ಇನ್ನು ತಮ್ಮ ಮನೆಗಳಲ್ಲಿ ಆ ಹರನನ್ನು ಕರೆಯುವ ರೀತಿಯಿದು –

ಎಂಜಲೆಂಜಾಲೆಂದು, ಅಂಜದಿರೋ ಭೈರುವ
ಗಂಜಲ ಹಾಕೇವು ಮನಿತುಂಬ । ಭೈರುವ
ಅಂಜದೇ ಮನಿಗೆ ದಯಮಾಡೊ

ಇಂಬೆಹಣ್ಣಿನಂಗೆ ತುಂಬೀತು ಜೀರಹಳ್ಳಿ
ಲಿಂಗಾವಂತರು, ಬಣಜಿಗರು । ಕೇರೀಲಿ
ಸ್ವಾಮಿ ಭೈರುವ ನೆರೆದಾರು

ಕಂಚನಹಳ್ಳಿ ತಂಕ ಚುಂಚನಗಿರಿತಂಕ
ಗಂಗೆ ಮಾಳವ್ನ ಗುಡಿತಂಕ । ಭೈರುವ್ನ
ಹಂತಾದ ಕಲ್ಲ ಹದಿಸೇವು

ತುಂಬೆ ಹೂವಾದೊ ಎಂಬತ್ತು ಎಸಳಾದೊ
ಎಂಬತ್ತು ವರಹಕ್ಕೆ ಬೆಲೆಯಾದ । ವಸ್ತ್ರವ
ಸ್ವಾಮಿ ಲಿಂಗೈಗೆ ಧರಿಸ್ಯಾರೊ

ಹಿಪ್ಪೆಹೂವಾದೊ ಎಂಬತ್ತೊಂದು ಎಸಳಾದೊ
ಎಂಬತ್ತು ವರಹಕೆ ಬೆಲೆಯಾದ । ವಸ್ತ್ರವ
ಅಪ್ಪ ಲಿಂಗೈಗೆ ಧರಿಸ್ಯಾರೊ

ಕಾಸೀನ ಹೊಂಬಾಳೆ ಸಾಕೇನೊ ಭೈರುವ
ಲೋಕದ ಹೊಂಬಾಳೆ ಸುಖಿಬಾಳು । ಜೀರಹಳ್ಳಿ
ತೋಟ ಗುತ್ತಿಗೆ ಹಿಡಿದಾರು

ವಿವಿಧ ರೀತಿಯಲ್ಲಿ ದೇವರನ್ನು ಪ್ರಾರ್ಥಿಸುತ್ತಾರೆ. ಎಲ್ಲವೂ ಮುಗಿದಮೇಲೆ ಹತ್ತಾರು ಜನ ಮುತ್ತೈದೆಯರು ಈ ಹಾಡನ್ನು ಹೇಳಿ ಮುಗಿಸಿದ ಮೇಲೆ ಪೂಜೆಯ ಅಂತ್ಯದಲ್ಲಿ –

ಹೊತ್ತು ಮುಳುಗೀತು ಒಳಗ್ಹೋಗೊ ಭೈರುವ
ಕತ್ತಲೆ ಮಾಡ ಸುಳಿಗಾಳಿ। ಬೀಸುವಾಗ
ಸ್ವಾಮಿ ಭೈರುವ ಒಳಗ್ಹೊಂಡೊ

ಎಂದು ಹೇಳಿ ಕೈಮುಗಿಯುತ್ತಾರೆ.

ಗಂಧದ ಕಡ್ಡಿಯ ಧೂಮ ಉಂಗುರಾಕಾರದಲ್ಲಿ ಎದ್ದು ಆ ಭಕ್ತಾದಿಗಳ ಮನಸ್ಸನ್ನು ದೇವರು ಹರಸಿದಂತೆ ಮುತ್ತುತ್ತದೆ.

ಮಲೆಯ ಮಾದೇಶ್ವರ

ಕನ್ನಡ ಜನಪದ ವಾಙ್ಮಯದಲ್ಲಿ ಕಥಾಸಾಹಿತ್ಯ ಒಂದು ಪ್ರಧಾನ ಅಂಗವಾಗಿ ನಿಲ್ಲುತ್ತದೆ. ತಮ್ಮ ಆದರ್ಶ ಗುಣಗಳಿಂದ, ವ್ಯಕ್ತಿಮಹಿಮೆಯಿಂದ ಅನೇಕ ಪೌರಾಣಿಕ ಹಾಗೂ ಐತಿಹಾಸಿಕ ಸ್ತ್ರೀಪುರುಷರು ಜನಪದ ಕಥಾಲೋಕವನ್ನು ಪ್ರವೇಶಿಸಿ ತಮ್ಮದೇ ಆದ ಒಂದು ಬಗೆಯ ಅಲೌಕಿಕ ಪ್ರಪಂಚವನ್ನು ನಮ್ಮೆದುರು ಸೃಜಿಸುತ್ತಾರೆ. ಅವರ ತ್ಯಾಗ, ಧರ್ಮ, ಶೌರ್ಯ ಮುಂತಾದ ಉದಾತ್ತಗುಣಗಳಿಂದ ಸ್ಫೂರ್ತಿಗೊಂಡ ಜನಪದ ಕವಿಗಳು ಅವರ ಕೀರ್ತಿಯನ್ನು, ಅವರ ಮಂಗಳ ಜೀವನವನ್ನು ಕುರಿತು ಹಾಡುತ್ತಾರೆ. ಅವರ ಸುತ್ತಲೂ ಅನೇಕ ಪವಾಡಗಳನ್ನು ಹೆಣೆದು ಅದ್ಭುತವಾದ, ವಿಸ್ಮಯಕಾರಿಯಾದ ಕಥಾಪರಿವೇಷದಲ್ಲಿ ಅವರ ಶ್ರೇಷ್ಠ ವ್ಯಕ್ತಿತ್ವವನ್ನು ಬೆಳಗುತ್ತಾರೆ. ಹೀಗೆ ಹಾಡಿನ ರೂಪ ತಳೆದ ಕಥೆಗಳು ಕನ್ನಡದಲ್ಲಿ ಹೇರಳವಾಗಿ ದೊರೆಯುವುದಾದರೂ ಇನ್ನೂ ವಚನರೂಪದಲ್ಲಿಯೇ ಉಳಿದು ಆ ಸಂಸ್ಕಾರಕ್ಕಾಗಿ ಕಾಯ್ದು ಮಲಗಿರುವ ಅಸಂಖ್ಯಾತ ಕಥೆಗಳನ್ನು ಹಳ್ಳಿಗರ ಬಾಯಿಂದ ಕೇಳಿ ನಲಿಯುತ್ತೇವೆ.

ಹೀಗೆ ಜನಪದ ಕಥೆಗಾರನ ಸ್ಮೃತಿಪಂಜರದಲ್ಲಿ ಹುದುಗಿರುವ ಆ ಕಥೆಗಳಿಗೆ ಕೇಳುವ ಕಿವಿಯೊಂದು ಕುತೂಹಲವನ್ನು ವ್ಯಕ್ತಪಡಿಸಿದರೆ ಆ ಹಕ್ಕಿ ಗರಿಗೆದರಿ ಮುಗಿಲಿಗೆ ಹಾರಿ ತನ್ನದೇ ಕಲ್ಪನಾರಮ್ಯತೆಯಿಂದ ವಿಸ್ಮಯವನ್ನುಂಟುಮಾಡುತ್ತದೆ. ಸನ್ನಿವೇಶ ಬಲದಿಂದ ಪ್ರಚೋದಿತನಾದ ಜನಪದ ಕತೆಗಾರ ತನ್ನ ಪ್ರತಿಭಾಬಲದಿಂದ ಜಾಣ್ಮೆ ಕೌಶಲ ಕಲ್ಪನಾಶಕ್ತಿಗಳಿಗೆ ತಕ್ಕಂತೆ ಆ ಕಥೆಯ ಹಂದರಕ್ಕೆ ಇನ್ನಿಲ್ಲದ ಪುಷ್ಟಿಯನ್ನು ನೀಡಿ ಅದು ಜೀವಂತವಾಗಿ ನಮ್ಮ ಮುಂದೆ ನರ್ತಿಸುವಂತೆ ಮಾಡುತ್ತಾನೆ. ಒಬ್ಬೊಬ್ಬ ಚತುರನ ಕೈಯಲ್ಲೂ ಒಂದೊಂದು ಬಗೆಯ ರೂಪವೈಭವವನ್ನು ಪಡೆದು ರಂಜಿಸುವ ಈ ವಚನರೂಪದಲ್ಲಿರುವ ಕಥೆಗಳ ಸೌಭಾಗ್ಯವೇ, ಹಾಡಿನ ಚೌಕಟ್ಟಿಗೆ ಒಳಗಾಗಿ ಒಂದು ಪರಿಮಿತಿಯನ್ನು ಹಾಕಿಕೊಂಡ ಕಥನಗೀತೆಗಳಿಗಿಂತ ಹಿರಿಯದೆಂದು ಹೇಳಬಹುದು.

ಈ ಎರಡು ಕಥನಮಾರ್ಗಗಳಿಗೂ ಒಳಗಾಗದ ಜನಪದ ಚಂಪು ಎನ್ನಬಹುದಾದ ಇನ್ನೊಂದು ಬಗೆ ಕನ್ನಡದಲ್ಲಿ ಪ್ರಚುರವಾಗಿದೆ. ವಚನ ಹಾಗೂ ಗೀತಭಾಗಗಳೆರಡನ್ನೂ ಒಳಗೊಂಡ ಈ ಬಗೆಯ ರಚನೆ ಅನೇಕ ದೃಷ್ಟಿಗಳಿಂದ ವಿಸ್ತಾರವಾದ ಕಥೆಗಳನ್ನು ಹೇಳುವ ಉತ್ತಮ ಸಾಧನವಾಗಿದೆ. ಒಂದು ನಿಯತವಾದ ಛಂದಸ್ಸಿನ ಚೌಕಟ್ಟಿನಲ್ಲಿ ಕಡೆದು ಮೂಡುವ ಕಥನಗೀತೆಗಳಲ್ಲಿ ಹೆಚ್ಚು ಭಾವವಿಲಾಸಗಳಿಗೆ

ನಿರ್ಬಂಧ ಉಂಟಾಗಿ ಗೊತ್ತಾದ ಎರಡು ತಟಗಳ ನಡುವೆ ತುಂಬಿ ಹರಿಯುವ ಕಾಲುವೆಯ ನೀರಿನಂತೆ ಕಥೆ ಸಾಗಿರುತ್ತದೆ. ಇಲ್ಲಿ ಒಂದೇ ಬಗೆಯ ಧಾಟಿ ಅಲ್ಲಲ್ಲಿ ಬೇಸರವನ್ನು ತರುವ ಸಂಭವವೂ ಉಂಟು. ಇನ್ನು ಆಡುವ ಮಾತಿನ ರೂಪದಲ್ಲೇ ಉಳಿಯುವ ಕಥೆಗಳು ಯಾವ ಬಗೆಯ ಅಡೆತಡೆಗಳಿಗೂ ಒಳಗಾಗದೆ ಬಯಲಿನಲ್ಲಿ ಚೆಲ್ಲಿಕೊಳ್ಳುವ ನೀರಾಗಬಹದು. ಆದರೆ ಪದ್ಯಗದ್ಯಗಳೆರಡರ ಸಾಮರಸ್ಯವನ್ನೂ ಸಾಧಿಸಿಕೊಂಡು ಬರುವ ಮೂರನೆಯ ವಿಧಾನದ ಕಥನಮಾರ್ಗ ಅಚ್ಚುಕಟ್ಟಾದ, ಕ್ರಮವಾದ ಗದ್ದೆಗಳಲ್ಲಿ ನಾಲ್ಕು ಬದುಗಳ ನಡುವೆ ಹರಿದು ನಿಲ್ಲುವ ಜಲವಿದ್ದಂತೆ. ಇಲ್ಲಿ ಪ್ರತಿಬಿಂಬಿತವಾಗುವ ಮುಗಿಲಿನ ಅಂದವೂ, ನೀರಿನ ಸ್ವಚ್ಛಂದವೂ ಚೆಲುವೆನಿಸುತ್ತವೆ, ಹಿತವೆನಿಸುತ್ತವೆ.

ಈ ಚಂಪು ವಿಧಾನದ ಕಥನಮಾರ್ಗದಲ್ಲಿ ವಚನಭಾಗ ಘಟ್ಟದಿಂದ ಘಟ್ಟಕ್ಕೆ, ತಿರುವಿನಿಂದ ತಿರುವಿಗೆ ಎಷ್ಟು ಬೇಕೋ ಅಷ್ಟೇ ಮಾತುಗಳಲ್ಲಿ, ಒಂದು ಹದದಲ್ಲಿ, ಒಂದು ತೂಕದಲ್ಲಿ ಎಲ್ಲಿಯೂ ಬೇಸರ ತೋರದಂತೆ ಹೋದರೆ ನಡುವೆ ಬಣ್ಣಬಣ್ಣದ ಕಸೂತಿಯಂತೆ ಸ್ವಾರಸ್ಯವಾದ ಕೆಲವು ಭಾಗಗಳನ್ನೂ, ಪಲ್ಲವಿಯನ್ನೂ ಹಾಡಿ ಕೇಳುವವರ ಆಸಕ್ತಿಯನ್ನು ಕೆರಳಿಸಲು, ಉತ್ಸಾಹವನ್ನು ಇಮ್ಮಡಿಸಲು, ಮನಸ್ಸನ್ನು ಒಂದೆಡೆಗೆ ಕೇಂದ್ರೀಕರಿಸಿ ಮುಂದಿನ ಕಥಾಪ್ರವೇಶಕ್ಕೆ ಅಣಿಮಾಡಲು ಗೀತರೂಪದಲ್ಲಿ, ಜನಪದ ವಾದ್ಯಗಳ ನೆರವಿನಿಂದ ಹಾಡುತ್ತಾರೆ. ಹೀಗೆ ಹಾಡುವವರು ಎರಡು ಮೂರು ಮಂದಿಯಾದರೂ, ಕಥೆಯನ್ನು ವಚನರೂಪದಲ್ಲಿ ಹೇಳುತ್ತಾ ಹೋಗುವವನು ಒಬ್ಬನೇ. ಇವನು ಸೂತ್ರಧಾರನಂತೆ ಆ ಗುಂಪಿನ ಪ್ರೌಢನೂ, ಅನುಭವಿಯೂ ಆಗಿರುತ್ತಾನೆ. ಒಂದು ಬಗೆಯ ಹಾಡುವ ಧಾಟಿಯಲ್ಲೇ ಪದ್ಯಗಂಧಿಯಾದ ವಚನದಲ್ಲಿ ಕಥೆಯನ್ನು ಮುಂದುವರಿಸಿಕೊಂಡು ಹೋಗುತ್ತಾನೆ. ರಸಸ್ಥಾನದಲ್ಲಿ ಎಲ್ಲರೂ ಒಟ್ಟಿಗೆ ದನಿಗೂಡಿಸಿ ಹಾಡುತ್ತಾರೆ.

ಮಲೆಯ ಮಾದೇಶ್ವರನನ್ನು ಕುರಿತು ಜನಪದ ಕವಿಗಳು ಕಟ್ಟಿರುವ ಕಥೆಗಳು ವಿಶೇಷವಾಗಿ ಈ ವರ್ಗಕ್ಕೆ ಸೇರುತ್ತವೆ. ಕಂಸಾಳೆಗಳ ನೆರವಿನಿಂದ ಗೀತಭಾಗಗಳನ್ನು ಬಹು ರಮ್ಯವಾಗಿ ಹಾಡುತ್ತಾರೆ. ವಂಶಪಾರಂಪರ್ಯವಾಗಿ ಈ ಕಥೆಗಳನ್ನು ಕಲಿತು ಇಂದಿಗೂ ಅದನ್ನು ಉಳಿಸಿಕೊಂಡು ಬಂದಿದ್ದಾರೆ. ಎಲ್ಲಿಯೋ ಕೆಲವು ವಂಶದವರು ಮಾತ್ರ ಇಂಥ ಸಾಹಿತ್ಯವನ್ನು ಒಂದು ವ್ರತದಂತೆ ಕುರಿತು ಕಾಪಾಡಿಕೊಂಡು ಬರುವುದು ವಾಡಿಕೆಯೆನ್ನುತ್ತಾರೆ. ಸುತ್ತೂರಿನಲ್ಲಿ ಸಂಗ್ರಹಿಸಿದ ಅಂಥ ಒಂದು ಕಥೆಯ ಸ್ವಾರಸ್ಯವನ್ನು ಇಲ್ಲಿ ಗಮನಿಸಬಹುದು.

ಮಾದೇಶ್ವರ ಕ್ಷೇತ್ರ ಬಹು ಪ್ರಸಿದ್ಧವಾದ ಯಾತ್ರಾಸ್ಥಳವಾಗಿದೆ. ಕನ್ನಡನಾಡಿನ ನಾನಾಕಡೆಗಳಿಂದಲೂ, ತಮಿಳುನಾಡಿನಿಂದಲೂ ಅಲ್ಲಿಗೆ ಯಾತ್ರಾರ್ಥಿಗಳು ವರ್ಷಂಪ್ರತಿ ತಂಡತಂಡವಾಗಿ ಬರುತ್ತಾರೆ. ಅನೇಕ ವರ್ಷಗಳ ಹಿಂದೆ ಮಾದೇಶ್ವರನಿನ್ನೂ ಏಳು

ಮಲೆಗಳ ನಡುವೆ ಹೋಗಿ ನೆಲಸದ ಮುನ್ನ ಕನ್ನಡನಾಡಿನ ಅನೇಕ ಶೈವಕ್ಷೇತ್ರಗಳನ್ನು ಹಾದುಹೋಗುತ್ತ ಬಹುಬಗೆಯ ಪವಾಡಗಳಿಂದ ತನ್ನ ಮಹಿಮೆಯನ್ನು ಮೆರೆದು ಹೋದ ಸುಂದರ ಕಥೆಗಳು ದೊರೆಯುತ್ತವೆ. ಬಾಲಜಂಗಮನಾದ ಮಾದೇಶ್ವರ ಉತ್ತರದ ಕಡೆಯಿಂದ ದಕ್ಷಿಣಕ್ಕೆ ಬರಲು ಆಗ್ಗೆ ಜ್ಞಾನದಾಸೋಹಗಳ ಪುಣ್ಯ ನೆಲೆಯೆನಿಸಿದ್ದ ಸುತ್ತೂರಿನ ಕೀರ್ತಿಯೇ ಕಾರಣವೆಂಬ ಐತಿಹ್ಯಗಳಿವೆ. ಕಲ್ಯಾಣದ ತರುವಾಯ ಸುತ್ತೂರು ಎರಡನೆಯ ಅನುಭವಕೇಂದ್ರವಾಗಿ ಅಲ್ಲಿನ ಶ್ರೀಶ್ರೀಯವರು ಧರ್ಮಪ್ರಸಾರಕ್ಕಾಗಿ ಅನುಭವಮಂಟಪವನ್ನು ಏರ್ಪಡಿಸಿ ನಾಡಿನಾದ್ಯಂತ ಶಿವಶರಣರನ್ನು ಇತ್ತ ಸೆಳೆದರು. ಇಂಥ ಒಂದು ಪುಣ್ಯ ಸನ್ನಿವೇಶದಲ್ಲಿ ಶ್ರೀಶೈಲದ ಕಡೆಯಿಂದ ಕೆಲವು ಶರಣರಿಗೆ ಮಾರ್ಗದರ್ಶಕನಾಗಿ ತೇಜಸ್ವಿಯಾದ ಬಾಲಜಂಗಮನೊಬ್ಬ ಬಂದನೆಂದೂ, ಅವನು ಸುತ್ತೂರಿನಲ್ಲಿ ಕೆಲವು ದಿನಗಳವರೆಗೆ ಶ್ರೀಶ್ರೀಯವರ ಶಿಷ್ಯವೃತ್ತಿಯಲ್ಲಿದ್ದು ಅನಂತರ ಏಳುಮಲೆಗಳ ನಡುವೆ ಹೋಗಿ ನೆಲಸಿ ಮಹಿಮಾಪುರುಷನಾದನೆಂದೂ ಸ್ಥಳಚರಿತ್ರೆ ಮುಂತಾದ ಕೆಲವು ಆಧಾರಗಳಿಂದ ತಿಳಿದುಬರುತ್ತದೆ. ಸುತ್ತೂರಿನಲ್ಲಿದ್ದಾಗ ಶ್ರೀಮಾದೇಶ್ವರನು ರಾಗಿಯನ್ನು ಬೀಸಿ ಊಳಿಗವನ್ನು ಮಾಡಿದನೆಂಬುದರ ನಿದರ್ಶನವೋ ಎಂಬಂತೆ ಒಂದು ದೊಡ್ಡ ರಾಗಿಯಕಲ್ಲು ಸೋಮೇಶ್ವರ ದೇವಾಲಯದ ಹೊರಾಂಗಣದ ಮೂಲೆಯಲ್ಲಿ ಇಂದಿಗೂ ಇದೆ. ಅಲ್ಲಿನ ಶ್ರೀಮಠದಲ್ಲಿ ಶ್ರೀ ಮಾದೇಶ್ವರ ಗದ್ದುಗೆಯು ಸ್ಥಾಪಿಸಲ್ಪಟ್ಟಿದೆ. ಕ್ರಿ.ಶ. ಸು. ೧೧೭೦–೧೨೪೦ರಲ್ಲಿ ಸುತ್ತೂರು ವೀರಸಿಂಹಾಸನ ಮಠದ ಅಧ್ಯಕ್ಷರಾಗಿದ್ದ ಶ್ರೀ ಸಿದ್ಧನಂಜದೇಶಿಕೇಂದ್ರರ ಕಾಲದಲ್ಲಿಯೇ ಮಾದೇಶ್ವರನು ಇಲ್ಲಿಗೆ ಬಂದುದಾಗಿಯೂ, ತನ್ನ ಪವಾಡಗಳಿಂದ ಗುರುಗಳನ್ನು ವಿಸ್ಮಯಗೊಳಿಸಿ, ತನ್ನ ಮಹಿಮೆ ಪ್ರಕಟವಾಗುತ್ತಿದ್ದಂತೆಯೇ ಆ ನೆಲೆಯನ್ನು ತೊರೆದು ಹೊರಟುಹೋದನೆಂದೂ ಹೇಳುತ್ತಾರೆ. ಇದಕ್ಕೆ ಸಂವಾದಿಯಾಗಿ ಜನಪದ ಕಥೆಗಳಿಂದಲೂ ಪೋಷಣೆ ದೊರೆಯುತ್ತದೆ. ಅದರ ಸ್ವಾರಸ್ಯವನ್ನು ಆ ಜನಪದ ಕಥೆಗಾರರ ಬಾಯಿಂದಲೇ ಕೇಳಬೇಕು. ಗದ್ಯಪದ್ಯಗಳ ಮಿಶ್ರಧಾಟಿಯಲ್ಲಿ ಮಾದೇಶ್ವರನ ಮಹಿಮೆಯನ್ನು ಬಣ್ಣಿಸುವ ಅನೇಕ ಕಥೆಗಳ ಒಂದು ಮಾಲೆಯಿಂದ ಸುತ್ತೂರಿನ ಪ್ರಸಂಗಕ್ಕೆ ಅನ್ವಯಿಸುವ ಭಾಗವನ್ನು ಪ್ರತ್ಯೇಕಿಸಿ ಇಲ್ಲಿ ಪರಿಚಯಿಸಿಕೊಂಡರೆ ಸಾಕು.

ಕಥೆಯ ಆರಂಭದಲ್ಲಿ ಪೀಠಿಕಾರೂಪವಾಗಿ ಮಾದೇಶ್ವರನ ಸೂಕ್ಷ್ಮ ಪರಿಚಯವನ್ನು ನೀಡಿ ಉತ್ತರದಿಂದ ಹೊರಟು ದಕ್ಷಿಣದ ಕಡೆಗೆ ಬರುವ ಮಂಗಳಮೂರ್ತಿಯನ್ನು ನೇರವಾದ, ಸರಳವಾದ ಮಾತುಗಳಲ್ಲಿ ಹಾಡಿ ಪರಿಚಯಮಾಡಿಕೊಡುತ್ತಾರೆ :

ಮಲೆಯ ಮಾದೇವ ಬರುವ ಚಂದವ
ನೋಡಿ ನಮ್ಮ ಶಿವನ......

ಎನ್ನುವ ಪಲ್ಲವಿಯನ್ನು ಮುಗಿಸುತ್ತಿದ್ದಂತೆಯೇ ವಚನದಲ್ಲಿ ಅವನ ಪರಿಚಯಕ್ಕೆ ತೊಡಗುತ್ತಾನೆ ಕಥೆಗಾರ.

ನಮ್ಮಪ್ಪಾಜಿ ಹುಟ್ಟಿದ್ದು ಉತ್ತರದೇಶದಂತೆ,
ಬೆಳದದ್ದು ಕತ್ತಲರಾಜ್ಯವಂತೆ, ನಿಂತಿದ್ದು ಏಕಾಂಗಿಮಲೆ......

ಉದ್ದಕ್ಕೂ ಮಾದೇಶ್ವರನನ್ನು 'ನಮ್ಮಪ್ಪಾಜಿ' ಎಂದೇ ಮಮತೆಯಿಂದ, ಆತ್ಮೀಯತೆಯಿಂದ ಸಂಬೋಧಿಸುವುದರಲ್ಲಿಯೇ ಒಂದು ಸೊಗಸು ಕಾಣಿಸುತ್ತದೆ. ಹೀಗೆ ಗದ್ಯಗತಿಯಲ್ಲಿ ಹರಿಯುವ ಕಥೆ ಇದ್ದಕ್ಕಿದ್ದಂತೆಯೇ ಪದ್ಯದ ಲಯವಿನ್ಯಾಸಕ್ಕೆ ಇಳಿದು ನರ್ತಿಸ ತೊಡಗುತ್ತದೆ.

ಕುಳಬಾಳ್ ಕುಳಬಾಳ್ ದಿಕ್ಕ ನೋಡಿ
ಕುರಬನ ಕಟ್ಟೆ ಚಾರಿ ನೋಡಿ
ನೂರೊಂದಯ್ಯನ ಗಿರಿಗಳ ನೋಡಿ
ಒಪ್ಪಿದ ಸೀಮೇಲಿ ಮಜ್ನ ಮಾಡಿ.

'ಬೀರಂಬಳ್ಳೀಲಿ ಹಗಲು ಬಿನ್ನ ತೀರಿಸ್ಕೊಂಡು ಬಂದ್ರೂ' ಎಂದು ಮೊದಲ ನಾಲ್ಕು ಪಾದಗಳಲ್ಲಿ ತಾಳದೊಡನೆ ಹಾಡುತ್ತಿದ್ದವರು ಹಠಾತ್ತನೆ ಗದ್ಯಲಯಕ್ಕೆ ಜಿಗಿದುದು ಕಾಣುತ್ತದೆ. ಇಂಥ ವಿಶ್ರಾಂತಿ ನೆಲೆಗಳಲ್ಲಿ ಕಥೆಯ ಒಂದು ಘಟ್ಟ ಮುಗಿಯುವುದೋ ಅಥವಾ ಆರಂಭದ ಸೂಚನೆಯೋ ಕಂಡುಬರುತ್ತದೆ. ಪ್ರಕೃತ ಕಥೆಯ ಮೊದಲಲ್ಲೇ 'ಮಾಯಕಾರಿ ದೇವಮ್ಮ'ನ ಪ್ರಸ್ತಾಪ ಬರುತ್ತದೆ. ಬಂದ ಅತಿಥಿಗಳಿಗೆಲ್ಲಾ ವಿಷವಿಕ್ಕಿ ಕೊಲ್ಲುತ್ತಿದ್ದ ಅವಳನ್ನು ಮಾದೇಶ್ವರನು ಶಿಕ್ಷಿಸಿದ ಒಂದು ಸ್ವಾರಸ್ಯ ಪ್ರಸಂಗವನ್ನು ವರ್ಣಿಸುತ್ತಾನೆ ಕಥೆಗಾರ. ಮುಂದೆ ಕಥೆ ನೇರವಾಗಿ ನಮ್ಮನ್ನು ಪುಣ್ಯನೆಲೆಯಾದ ಸುತ್ತೂರಿಗೆ ಕರೆತಂದು ನಿಲ್ಲಿಸುತ್ತದೆ. ಒಂದೇ ಕೃತಿಯ ಎರಡನೆಯ ಘಟ್ಟಕ್ಕೆ ಬಂದಾಗ ಬೇರೊಂದು ರೀತಿಯ ಪ್ರಸಂಗವನ್ನಿಲ್ಲಿ ಪರಿಚಯಿಸಿಕೊಂಡು, ಮಾದೇಶ್ವರನ ಹಿರಿಮೆಗೆ ತಲೆದೂಗುತ್ತೇವೆ.

ಮಾದೇಶ್ವರ ನಾಡಿನಲ್ಲಿ ಸಂಚಾರ ಹೊರಟವನು ಒಂದೇ ನೆಲೆಯಲ್ಲಿ ನಿಲ್ಲುವವನಲ್ಲ. ಎಲ್ಲೆಲ್ಲಿ ತನ್ನ ಮಹಿಮೆಯನ್ನು ಮೆರೆಯಬಹುದೋ, ಯಾರಲ್ಲಿ ತಾನಷ್ಟು ದಿನ ತಂಗಿ ಮುಂದುವರಿಯಬಹುದೋ ಅಂಥ ನೆಲೆಗಳನ್ನೇ ಅರಸಿಕೊಂಡು ಬಂದವನು. ಅವನು ದುಷ್ಟರನ್ನು ಹುಡುಕಿಕೊಂಡು ಹೋಗಿ ಅವರ ಅನ್ಯಾಯ, ಅಧರ್ಮಗಳಿಗೆ ತಕ್ಕ ದಂಡನೆಯನ್ನು ವಿಧಿಸಿದಂತೆಯೇ ಶಿಷ್ಟರನ್ನು ಕಂಡರೆ ಅವರಲ್ಲಿ ಊಳಿಗವನ್ನಾದರೂ ತಾನು ಮಾಡಿಯಾನು. ಸುತ್ತೂರಿನ ಗುರುಗಳ ಕೀರ್ತಿಯನ್ನು ಕೇಳಿದ್ದ ಅವನು ಒಬ್ಬ ಸಾಮಾನ್ಯ ಬಾಲಕನಂತೆ ಅವರಲ್ಲಿಗೆ ಬರುತ್ತಾನೆಂದು ಕಥೆಗಾರ ಹೇಳುತ್ತಾನೆ. ಹಾಗೆ ಬಂದು ಗುರುಗಳ ಸಂದರ್ಶನವನ್ನು ಪಡೆದುದು ಹೀಗೆ –

ಆಗ ನಮ್ಮಪ್ಪಾಜಿ ಸುತ್ತೂರು ಮಠಕೆ ಬಂದರಂತೆ
ಸುತ್ತೂರು ಮಠಕೆ ಬಂದು, ನನಗೊಂದು ನಾಮಕರಣ ಮಾಡಬೇಕು
ಅಂತ ಕೇಳಿದ್ನಂತೆ

ಹೀಗೆ ಅಪರಿಚಿತನಾದ ಬಾಲಕ ಬಂದು ತನಗೆ ನಾಮಕರಣವನ್ನು ಮಾಡಬೇಕೆಂಬುದನ್ನು ಕೇಳಿ ಗುರುಗಳಿಗೆ ಸೋಜಿಗವೆನಿಸಿತು. ವಿನೋದವೆನಿಸಿತು. ಆಗ :

ಮೂರು ಕಂಡ್ಗ ರಾಗಿ ಮೂರೆ ಸುತ್ತಿಗೆ ಬೀಸಿ ಎತ್ತಿ ಮಡಗಿದ್ರೆ ನಿಮಗೆ
ನಾಮಕರಣ ಮಾಡ್ತೀವಿ ಎಂದರಲ್ಲೊ ಗುರುಗಳು.

ಮಾದೇಶ್ವರನ ಬಲವನ್ನು ತಿಳಿದೇ ದಿವ್ಯಜ್ಞಾನಿಗಳಾದ ಅವರು ಹಾಗೆ ಹೇಳಿದರೇನೋ! ಮಾದೇಶ್ವರ ಸಂತೋಷದಿಂದಲೇ ಒಪ್ಪಿಕೊಂಡ, ಮಹಿಮಾ ಶಾಲಿಯಾದ ಅವನೇನು ತನ್ನ ಕೈಯಿಂದಲೇ ಬೀಸಬೇಕೆ?

ಮೂರು ಜನ ಮಾರಿರ ಕರೆದು ನಮ್ಮ ಅಪ್ಪಾಜಿ, ಮೂರು ಸುತ್ತಿಗೆ ಬೀಸಿ
ದ್ರಲ್ಲೋ ಜಗದೊಡೆಯಾ.....

ಗುರುಗಳಿಗೂ ಸೋಜಿಗವಾಯಿತು. ಮಹಾಮಹಿಮಶಾಲಿಯಾದ ಬಾಲಜಂಗಮನೊಬ್ಬ ಅಪ್ರಾರ್ಥಿತನಾಗಿ ತಮ್ಮೆಡೆಗೆ ಬಂದಿದ್ದಾನೆ, ಭಗವಂತನೇ ಈ ರೂಪಿನಲ್ಲಿ ಬಂದನೇನೋ ಎನಿಸತು. ಅವನನ್ನು ಅಲ್ಲಿಯೇ ಉಳಿಸಿಕೊಳ್ಳುವ ಪ್ರಯತ್ನವನ್ನೂ ಮಾಡಿದರು. ಆ ಮಠಕ್ಕೆ 'ಮರಿದೇವರಾಗಿ'ರುವಂತೆ ಕೇಳಿದರು. ಆದರೆ ಮಾದೇಶ್ವರ ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಾನೆ:

ಸಹಬಾಸ್ ನನ್ನಪ್ಪ – ಇವರೆಲ್ಲ ದೊಡ್ಡದೇವರಂತೆ
ನಾನು ಈ ಮಠಕೆ ಮರಿದೇವರಾಗಿರಬೇಕಂತೆ!'
ಸುತ್ತೂರು ಮಠ ಸುಖಾ ಅಂತ ಬಂದರೆ
ಕುಕ್ಕೇಲಿ ರಾಗಿ ಮಡಗ್ಯವರಲ್ಲೊ ಜಗದೊಡೆಯಾ!

ಹೀಗೆ ಮಾದೇಶ್ವರನ ಲೀಲಾವಿನೋದಗಳನ್ನು ಬಹು ಮನೋಹರವಾಗಿ ವರ್ಣಿಸುವ ಸಾಲುಗಳನ್ನು ಕಥೆಗಾರ ಹೇಳುತ್ತ ಉದ್ದಕ್ಕೂ ಅಪಾರ ಆದರ ಗೌರವಗಳನ್ನು ತನ್ನ ಮೆಚ್ಚಿನ ದೈವಕ್ಕೆ ಆಭರಣವಾಗಿ ತೊಡಿಸುತ್ತಾ ಹೋಗುತ್ತಾನೆ. ಕಥೆ ಎಲ್ಲಿಯೂ ಬೇಸರವಾಗದಂತೆ, ಅಲ್ಲಲ್ಲಿ ಲಘು ವಿನೋದಗಳಿಂದಲೂ, ಮಧುರವಾದ ಸಂಭಾಷಣೆಯಿಂದಲೂ, ಸೊಗಸಾದ ಗೀತಭಾಗಗಳಿಂದಲೂ, ಆಕರ್ಷಕ ಸನ್ನಿವೇಶ ರಚನೆಯಿಂದಲೂ ಕಥೆಗಾರ ತನ್ನ ನೈಜ ಕಲೆಗಾರಿಕೆಯನ್ನು ಪರಿಚಯಿಸುತ್ತಾನೆ.

ಮುಂದೆ –

'ಈ ಮಠವೂ ತನಗೆ ತರವಲ್ಲ'

ಎಂದು ಮಾದೇಶ್ವರ ಕುಂತೂರು ಮಠಕ್ಕೆ ಹೊರಟುಹೋದ ಪ್ರಸಂಗ ಬರುತ್ತದೆ. ಅಲ್ಲಿನ ಕಥೆ ಇನ್ನೂ ವಿಸ್ತಾರವಾಗಿ, ಸುಂದರವಾಗಿ ಹೇಳುವವರ ಬಗೆಯನ್ನು ಗೆದ್ದುಕೊಳ್ಳುತ್ತದೆ. ಅಲ್ಲಿ ಹಾವು ಚೇಳುಗಳನ್ನೇ ಬಡಿದು ಹೂವಾಗಿ ಪರಿವರ್ತಿಸಿ ಗುರುಗಳಿಗೆ ತಂದುಕೊಡುವ ಸಂದರ್ಭ, ಮಾಯದ ಭರ್ಗವನ್ನೇರಿ ಗುರುಗಳೆದುರಿಗೆ ಕಾಣಿಸಿಕೊಂಡು ಅವರಿಗೆ ಸೋಜಿಗವನ್ನುಂಟುಮಾಡುವ ಪ್ರಸಂಗ ಮುಂತಾದ ಅನೇಕ ರಮ್ಯ ಸನ್ನಿವೇಶಗಳು ಬರುತ್ತವೆ. ಕೊನೆಗೆ ಅಲ್ಲಿಯೂ ನಿಲ್ಲದೆ ಮುಖದ ಹಳ್ಳಿಗೆ ಹೋಗಿ ಅಲ್ಲಿಯೂ ಪವಾಡಗಳನ್ನು ತೋರಿ ಏಳುಮಲೆಗಳ ನಡುವೆ ಹೋಗಿ ಒಂದು ಕಡೆ ತಪೋರೂಢನಾಗಿಬಿಡುತ್ತಾನೆ. ಅಲ್ಲಿಗೆ ಕಥೆ ಕೊನೆಗೊಳ್ಳುತ್ತದೆ.

ಜನಪದ ಕಥೆಗಳಲ್ಲಿ ಪವಾಡ ಬಹು ಮುಖ್ಯಪಾತ್ರವನ್ನು ವಹಿಸುತ್ತದೆ. ಪವಾಡಗಳ ಮೋಡಿಯೇ ಈ ಕಥೆಗಳ ಜೀವಾಳವೆಂದೂ ಹೇಳಬಹುದು. ಕಥಾವಸ್ತು ಪೌರಾಣಿಕವಾಗಿರಲಿ, ಐತಿಹಾಸಿಕವಾಗಿರಲಿ, ಸಾಮಾಜಿಕವಾಗಿರಲಿ ಅಲ್ಲಿ ಅಸಂಭಾವ್ಯತೆಯ ಪ್ರಶ್ನೆಯೇ ಇಲ್ಲ. ಜನಪದ ಕಥೆಗಳು ತಮ್ಮದೇ ಆದ ಆವರಣವನ್ನು ಸೃಷ್ಟಿಸಿಕೊಂಡು ತಮ್ಮದೇ ಆದ ಕಲ್ಪನಾರಮ್ಯತೆಯಿಂದ ರಂಜಿಸಬೇಕಾದರೆ ಅಲ್ಲಿನ ಪವಾಡದ ಹಿರಿಮೆಯೇನೆಂಬುದನ್ನು ನೋಡಬೇಕು. ಜನಪದ ಕವಿಗಳ ದೃಷ್ಟಿಯಲ್ಲಿ ಒಂದು ಕಲ್ಲಿಗೆ ಜೀವ ಬರಬಲ್ಲದು, ಮೋಡ ಮಾತನಾಡಬಬಲ್ಲುದು, ಹೆಂಚಿಯ ಕಡ್ಡಿ ರಥವಾಗಬಹುದು.

ಇನ್ನು ದೈವಸ್ತುತಿ ಪ್ರಧಾನವಾದ ಕಥೆಗಳಲ್ಲಿ ಹೆಜ್ಜೆಹೆಜ್ಜೆಗೂ ಪವಾಡವಿಲ್ಲದೆ ಕಥೆ ಸಾಗದು. ಜಗತ್ತಿನ ಅನಿಷ್ಟಗಳು ಕಳೆದು ತಮಗೆ ದೈವಕೃಪೆಯೊದಗಿ ತಮ್ಮ ಆರಾಧ್ಯದೈವದ ಹಿರಿಮೆ ಹೆಚ್ಚಬೇಕಾದುದು ಪವಾಡದ ಮಹತ್ವದಿಂದಲೇ. ದುಷ್ಟಶಕ್ತಿಗಳನ್ನು ಸದೆಬಡಿದು ಶಾಂತಿ ತುಷ್ಟಿಗಳು ನೆಲಸಲು ಕಾರಣನಾದ ಒಬ್ಬ ಐತಿಹಾಸಿಕ ವ್ಯಕ್ತಿಯೂ ಕೆಲವೇ ದಿವಸಗಳಲ್ಲಿ ಜನಪದದ ದೃಷ್ಟಿಯಲ್ಲಿ ಪುರಾಣಪುರುಷನಾಗುತ್ತಾನೆ; ಅವನ ಸುತ್ತ ನೂರೆಂಟು ಪವಾಡದ ಬಳ್ಳಿಗಳು ಹಬ್ಬಿಕೊಳ್ಳುತ್ತವೆ. ತನ್ನ ಒಂದು ತ್ಯಾಗ, ವೀರ, ನಿಷ್ಠೆ, ಸತ್ಯ, ಧರ್ಮಗಳಿಂದ ಜನತೆಯ ಶ್ರೇಯಸ್ಸಿಗಾಗಿ ಪ್ರಾಣಾರ್ಪಣ ಮಾಡಿದವರಿಗೆಲ್ಲ ಕಾಲಕ್ರಮದಲ್ಲಿ ದೇವರ ಪಟ್ಟವೇ ದೊರಕುತ್ತದೆ. ಅವರು ತಮ್ಮ ಪುಣ್ಯಕಾರ್ಯಗಳಿಂದ ಅಜ್ಞಾತವಾದ ಸ್ವರ್ಗದಲ್ಲಿ ಸುರಸಂಪತ್ತನ್ನು ಪಡೆದು ಧನ್ಯರಾಗುವುದಕ್ಕಿಂತ ಇಂಥ ಜನಪದ ಕಥೆಗಳ ದಿವ್ಯಮಂಗಳ ಜೀವನದ ಪ್ರತೀಕಗಳಾಗಿ ಜನಪದರ ಬಾಯಲ್ಲಿ ಚಿರಂತನವಾಗಿ ಉಳಿಯುವ ಪುಣ್ಯ ದೊಡ್ಡದು; ಅದರಿಂದ ಆರಾಧಿತರಾಗುವ ಬದುಕಿನ ಭಾಗ್ಯ ಹಿರಿಯದು.

ಜನತೆಯ ಸತ್ಕಾರ್ಯಶೀಲರಿಗೆ ಇಂಥ ಅಪೂರ್ವ ಸ್ಮಾರಕಗಳನ್ನು ತಮ್ಮ ನಾಲಗೆಯಲ್ಲಿಯೇ ನಿರ್ಮಿಸಿಕೊಂಡು ಅವರ ಆದರ್ಶ ಜೀವನವನ್ನು ಸ್ಮರಿಸುತ್ತ,

ಅವರ ಹಿರಿಮೆಯನ್ನು ಕೊಂಡಾಡುತ್ತ ಕಷ್ಟಕಾರ್ಪಣ್ಯಗಳನ್ನೂ ತಮ್ಮ ಆರಾಧ್ಯದೈವದ ಪಾಲಿಗೊಪ್ಪಿಸಿ ಬಾಳಿಗೊಂದು ಬೆಳಕನ್ನು, ಶಾಂತಿ ನೆಮ್ಮದಿಯ ಅಮೃತಹಸ್ತವನ್ನು ಕಂಡುಕೊಳ್ಳುತ್ತಾರೆ. ಬದುಕಿನ ದುರ್ಘರತೆ, ಜೀವನದ ಸಮಸ್ಯೆ, ಅವರ ಅಸಹಾಯಕತೆಗಳನ್ನು ನೋವು – ಸಂಕಟಗಳನ್ನು ಮೆಟ್ಟಿ ನಿಲ್ಲಬೇಕಾದರೆ ಸಾಮಾನ್ಯರಿಂದ ಸಾಧ್ಯವಾಗದೆಂದೂ ಅವೆಲ್ಲದರಿಂದಲೂ ತಮ್ಮನ್ನು ಪಾರುಮಾಡಬೇಕಾದರೆ ಅತಿಮಾನವ ಶಕ್ತಿಯೇ ಮೂಡಿ ಬರಬೇಕೆಂಬ ನಂಬುಗೆಯ ಬುನಾದಿಯ ಮೇಲೆ ವಿಶಿಷ್ಟ ರೀತಿಯ ಈ ಪವಾಡ ಕಥೆಗಳು ಬೆಳೆದು ನಿಂತಂತೆ ತೋರುತ್ತವೆ. ಆ ಕಥೆಗಳ ಜಾಯಮಾನಕ್ಕೆ ಪವಾಡಗಳೂ ಒಗ್ಗಿಕೊಳ್ಳುತ್ತವೆ. ಎಂದಮೇಲೆ ಆ ಅಪೂರ್ವವಾದ, ಅಲೌಕಿಕವಾದ ಕಥಾ ಪ್ರಪಂಚದಲ್ಲಿ ಅನ್ಯೆಜತೆಯ, ಕೃತ್ರಿಮತೆಯ ಮಾತೆಲ್ಲಿ? ಲೌಕಿಕ ವ್ಯಾಪಾರಗಳನ್ನು ತಮ್ಮ ದೈವಗಳಿಗೂ ಆರೋಪಿಸಿ, ಪುರಾಣಲೋಕದ ವ್ಯಕ್ತಿಗಳಾಗಿದ್ದರೂ, ಮಾನವ ಸಹಜ ಸ್ವಭಾವಗಳನ್ನು ತಂದು ಯಾವುದೋ ಒಂದು ಅಲೌಕಿಕವಾದ ಶಕ್ತಿಯಿಂದ ಅವರು ಬದುಕಿನ ಅಡಚಣೆಗಳನ್ನು ಗೆದ್ದು ಆನಂದವನ್ನು ಕಾಣುವ ದಿವ್ಯಜೀವನ ಇವರಿಗೆ ದಾರಿದೀಪವಾಗಬೇಕು; ಇವರ ನೋವು – ನಲಿವುಗಳ ಸೂತ್ರಧಾರನಾಗಬೇಕು. ತಮ್ಮ ನಡುವೆಯೇ, ತಮ್ಮ ನಿತ್ಯಜೀವನದಲ್ಲಿಯೇ ಆರಾಧ್ಯದೈವಗಳನ್ನು ಹತ್ತಿರಹತ್ತಿರ ತಂದುಕೊಂಡು ಸಜೀವವಾಗಿ ಓಡಿಯಾಡುವ, ತಮ್ಮ ಚಲನವಲನಗಳನ್ನು ಸದಾ ಗಮನಿಸುವ, ತಮ್ಮನ್ನು ಸನ್ಮಾರ್ಗದಲ್ಲಿ ಕರೆದೊಯ್ಯುವ ಪುಣ್ಯಮೂರ್ತಿಗಳಾಗಬೇಕು. ಇಂಥ ಒಂದು ಹಿನ್ನೆಲೆಯನ್ನು ಯಾವ ದೈವವನ್ನು ಕುರಿತಾದ ಜಾನಪದ ಕಥೆಗಳಲ್ಲಿಯಾದರೂ ಕಾಣಬಹುದು.*

---

* ೧೯೫೭ರಲ್ಲಿ ಸುತ್ತೂರಿನಲ್ಲಿ ಸಂಗ್ರಹಿಸಿದ ಒಂದು ಜನಪದ ಕಥೆಯ ಆಧಾರದ ಮೇಲೆ.

ಕಾವೇಟಿ ರಂಗ*

ಕಾವೇಟಿ ರಂಗನ ಭವ್ಯ ದೇವಾಲಯ ಕದಬಹಳ್ಳಿಯ ಪಕ್ಕದಲ್ಲಿಯೇ ಉತ್ತರ ದಿಸೆಯಲ್ಲಿದೆ. ಬೆಳ್ಳೂರಿನಿಂದ ಚೆನ್ನರಾಯಪಟ್ಟಣಕ್ಕೆ ಹೋಗುವ ಮೋಟಾರು ರಸ್ತೆಯೂ ಅದರ ನೆರೆಯಲ್ಲಿಯೇ ಇದೆ.

ನಾಗಳ ಹೊನ್ನಿಗೆ ಗೆಯ್ಯಿತು ಕದಬ್ಬಳ್ಳಿ
ನಾಗಾಲ ಗೇದ ಬಡಗಾಲ । ಕೇರೀಲಿ
ಕಟ್ಟಿತು ರಂಗಯ್ನ ಅರಮನೆ ॥

ಕದಬಹಳ್ಳಿ ಸಿರಿಸಂಪತ್ತಿನ ಆಗರ. ನಾಗಾಳ ಹೊನ್ನನ್ನು ರಂಗಯ್ಯನ ಗುಡಿಗಾಗಿ ವೆಚ್ಚಮಾಡಲು ಆ ಭಕ್ತರು ಹಿಂದೆಗೆಯುವರೆ? ಶಿಲ್ಪಿ ಬಚ್ಚಣ್ಣನನ್ನು ಕರೆಸಿ, ಅವನಿಗೆ ಹೊಕ್ಕಳ ಹೊನ್ನನ್ನು ಕೊಟ್ಟರಂತೆ.

ಹೊಕ್ಕಳ ಹೊನ್ನಿಗೆ ಕಟ್ಟಿತು ಕದಬ್ಬಳ್ಳಿ
ಬಚ್ಚಣ ಗೇದ ಬಡಗಾಲ । ಕೇರೀಲಿ
ಕಟ್ಟಿತು ರಂಗಯ್ನ ಅರಮನೆ ॥

ಶಿಲ್ಪಚತುರನಾದ ಬಚ್ಚಣ್ಣ ಮನೋಹರವಾಗಿ ದೇಗುಲವನ್ನು ನಿರ್ಮಿಸಿದ. ಸುಂದರ ಮೂರ್ತಿಯನ್ನು ಕಡೆದು ಹೆಸರಾದ. ಲಕ್ಷ್ಮೀಪುತ್ರರ ಪ್ರಶಸ್ತಿಗೂ ಪ್ರಶಂಸೆಗೂ ಪಾತ್ರನಾದ. ಅಷ್ಟೇ ಅಲ್ಲದೆ ರಂಗಯ್ಯನ ಕೀರ್ತಿ ದಿಕ್ಕುದಿಕ್ಕುಗಳಲ್ಲೂ ಹರಡುವಂತೆ ಮಾಡಿದ. ತಂಡೋಪತಂಡವಾಗಿ ಜನ ಬಂದು ದೇಗುಲವನ್ನು ನೋಡಿ ಬೆರಗಾದರು. ಅದರಲ್ಲೂ ಚೋಳ ಪ್ರಭುಗಳೇ ಆಸಕ್ತಿ ವಹಿಸಿದ್ದರೆಂದ ಮೇಲೆ ಕೇಳಬೇಕೆ! ಅವನಿಗೆ ಇನ್ನೂ ಶ್ರದ್ಧೆ ಹೆಚ್ಚು.

ಚೋಳರು ಕಟ್ಟಿದ ಗುಡಿಯ
ಹೋಗಿ ನೋಡೋಣ ಬನ್ನಿ
ಸೂಜೀಲಿ ಬೀಗ ತೆಗಿಯೋದ ।
ಸೂಜೀಲಿ ಬೀಗ ತೆಗಿಯೋ ರಂಗಯ್ಯನ
ಗುಡಿಯ ಕಟ್ಟಿದರು ದೊರೆಗಳು ॥

ಜನ ಬಂದೇ ಬಂದರು; ಸೂಜಿಯಲ್ಲಿ ಬೀಗ ತೆಗೆಯವಷ್ಟು ನವುರಾಗಿ ನಯವಾಗಿ ಕಡೆದ ಬಾಗಿಲು, ಅಂದವಾದ ಬಾಗಿಲುವಾಡ, ಸುಂದರವಾದ ಗೋಪುರ,

---

* ಬೆಳ್ಳೂರು ಬಳಿಯ ಕೆಲವು ಹಳ್ಳಿಗಳಿಂದ ಆಯ್ದ ಜನಪದ ಗೀತೆಗಳ ಆಧಾರದ ಮೇಲೆ.

ಬಂಧುರ ವಿಗ್ರಹ! ಅಂದಿನಿಂದಲೇ ಪ್ರಸಿದ್ಧಿಯಾಯಿತು ಕಾವೇಟಿ ರಂಗನ ದೇವಾಲಯ. ರಂಗಯ್ಯನ ಮಹಿಮೆಯೂ ಹರಡಿತು. ಭಕ್ತಾದಿಗಳೂ ಹೆಚ್ಚಿಕೊಂಡರು. ಹಾಗೆಯೇ ಭಕ್ತಿಯು ನಾನಾ ಮುಖವಾಗಿ ಹರಿದು, ಮನಸ್ಸಿನಲ್ಲಿ ರಸವಾಹಿನಿ ಚಿಗಿದು ಭವ್ಯಕಲ್ಪನೆಯ ಗೀತೆಗಳೂ ಹುಟ್ಟಿಕೊಂಡವು. ವರ್ಷವರ್ಷಗಳಾಚೆಯಿಂದ ಭಕ್ತರ ನಾಲಗೆಯ ಮೇಲೆ ರಂಗಯ್ಯನನ್ನು ಕುರಿತು ವಿಧವಿಧವಾಗಿ ಹಾಡಿರುವ ಈ ಗೀತೆಗಳು ಇಂದಿಗೂ ಉಳಿದು ಬಂದಿವೆ. ಹಬ್ಬ ಹರಿದಿನಗಳಲ್ಲಿ ಹೆಣ್ಣುಮಕ್ಕಳು ಅವನ್ನು ಹಾಡಿಕೊಂಡು ನಲಿದರೆ, ಗಂಡುಮಕ್ಕಳು ಕೋಲು ಹೊಯ್ದು ಕುಣಿಯುತ್ತಾರೆ, ಉತ್ಸಾಹದ ಎಲ್ಲೆಯನ್ನು ಮೀರುತ್ತಾರೆ!

ಎತ್ತ ನೋಡಿದರತ್ತ ಕವಿದುಕೊಂಡ ತೆಂಗಿನತೋಟಗಳು ಕದಬಹಳ್ಳಿ ಗ್ರಾಮವನ್ನು ಹಸಿರ ತೊಟ್ಟಿಲಲ್ಲಿ ತೂಗುತ್ತಾ ಸಂಪತ್ತಿನ ಜೋಗುಳ ಹಾಡಿವೆ. ರಂಗನಾಥನ ದಿವ್ಯ ಕರುಣೆಯಿಂದ ಊರು ಬೆಳೆದು ದೊಡ್ಡದಾಗಿದೆ. ಸುತ್ತುವರಿದು ಸುವಿಶಾಲವಾಗಿ ಹರಡಿಕೊಂಡಿರುವ ಹಸಿರ ಬಯಲು, ದಟ್ಟೈಸಿ ಕವಿದುಕೊಂಡು ಸೊಂಪನ್ನೆರಚುತ್ತಿರುವ ದ್ರುಮಗಳು, ನೀರನ್ನು ತುಂಬಿ ಸದಾ ತುಳುಕುವ ಹಳ್ಳಕೊಳ್ಳಗಳು, ಕೆರೆಕಟ್ಟೆಗಳು.... ಎಂಥ ಸೌಭಾಗ್ಯದ ಬೀಡು ಕದಬಹಳ್ಳಿ.... ಇಂಥ ಊರಿಗೆ ಸುಗ್ಗಿ ಕಾಲಿಡುವುದೆಂದರೆ ಸಾಮಾನ್ಯವೆ? ಆಗಲೇ ರಂಗಯ್ಯನ ಹಬ್ಬವನ್ನು ಆಚರಿಸುತ್ತಾರೆ. ಈ ಊರಿನ ಸಂಕ್ರಾಂತಿ ವಿಶೇಷ ಉತ್ಸವಾದಿಗಳಿಂದ ಕಳೆಗಟ್ಟುತ್ತದೆ. ಆಗ ನೆರೆಯುವ ಭಕ್ತಾದಿಗಳಿಂದ ಊರು ತುಳುಕಾಡುತ್ತದೆ, ಕಂಗೊಳಿಸುತ್ತದೆ.

ಬಾಳೆಯ ವನದಲ್ಲಿ ತಿಳಿನೀರ ಕೊಳದಲ್ಲಿ
ಬಾಗಿ ಜೋತುರವ ಒಗಿಯೋನೆ । ರಂಗಯ್ಯ
ಬಳಲೀದನೇನೆ ಬಿಸಲೀಗೆ ॥

ಮುದ್ದೇನದ ಮಳೆಹೂದು ಮಜ್ಜನದ ಕೊಳ ತುಂಬಿ
ಮೊಗ್ಗು ಮಲ್ಲಿಗೆ ಅರಳೀದೊ । ರಂಗಯ್ಗೆ
ಮದ್ದೇನದ ಪೂಜೆ ಹಸನಾದೊ ॥

ರಂಗಯ್ಯನ ಮಧ್ಯಾಹ್ನದ ಪೂಜೆಯ ಸಮಯದಲ್ಲಿ ಹೀಗೆ ಹಾಡಿದರೆ ಸಂಜೆಯ ಪೂಜೆಗೆ

ಸಂಜೆಯ ಮಳೆಹುಯ್ದು ಚಂದಿರನ ಕೊಳ ತುಂಬಿ
ಚೆಂಡು ಮಲ್ಲಿಗೆ ಅರಳೀದೊ । ರಂಗಯ್ಗೆ
ಸಂಜೆ ಪೂಜೆಗೆ ಹಸನಾದೊ ॥

ಎಂದು ಹೇಳುತ್ತಾರೆ. ಅಲ್ಲದೆ ಅಭಿಷೇಕಕ್ಕಾಗಿ ಜೇನುತುಪ್ಪದ ಕೊಡಗಳೇ ಬಂದಿವೆ.

ಜೇನುತುಪ್ಪವ ತಂದು ಅಭಿಷೇಕ ಮಾಡಿಸೇವು
ಆನಂದ ಉಕ್ಕಿ ಮನದಲ್ಲಿ । ರಂಗಯ್ಯ
ಬಾಲರ ಕೊಡೊ ಮನೆ ತುಂಬ ॥

ಜೇನುತುಪ್ಪದ ಅಭಿಷೇಕವನ್ನು ಮಾಡಿಸಿ ಮನೆತುಂಬ ಮಕ್ಕಳನ್ನು ಕೊಡುವಂತೆ ಬೇಡುತ್ತಾರೆ, ಹಾಡುತ್ತಾರೆ. ಆಗಲೇ ಹೊರಗೆ ಕೋಲಾಟದ ತರುಣರ ದನಿಯೂ ಸೇರಿಕೊಳ್ಳುತ್ತದೆ.

ತೂಗುದೇವರು ತೂಗುತ್ತಾರಲ್ಲೊ
ಸ್ವಾಮಿ ನಿನ್ನ ಗುಡಿಯ ಮುಂದೆ
ಭಗವಂತರಾಡುತ್ತಾರಲ್ಲೋ॥

ಸಂಜೆ ಹುಣ್ಣಿಮೆಯ ಬೆಳುದಿಂಗಳು ಹರಡಿಕೊಂಡಿದೆ. ರಂಗನಾಥನ ಉತ್ಸವಕ್ಕೆ ಎಲ್ಲವೂ ಅಣಿಯಾಗುತ್ತಿದೆ. ತಮ್ಮಟೆ, ವಾದ್ಯದವರು ಸಿದ್ಧರಾಗಿದ್ದಾರೆ. ಹಿರಿಯರು, ಕಿರಿಯರು, ಹೆಂಗಸರು, ಮಕ್ಕಳಾದಿಯಾಗಿ ಎಲ್ಲರೂ ಸಂಭ್ರಮದಿಂದ ಓಡಿಯಾಡುತ್ತಿದ್ದಾರೆ. ಯುವಕರಿಗೂ, ಯುವತಿಯರಿಗೂ ಆ ಕೆಲಸ – ಈ ಕೆಲಸಗಳನ್ನು ಮಾಡುವಂತೆ ಹೇಳುತ್ತಿದ್ದಾರೆ.

ಗಂಡು ಮಕ್ಕಳು ಬನ್ನಿ ನೀರನ್ನೆ ಹುಯ್ಯ ಬನ್ನಿ
ಸಣ್ಣ ದೋತುರವ ಉಡ ಬನ್ನಿ । ರಂಗಯ್ಗೆ
ಮೂರು ನಾಮವ ಇಡ ಬನ್ನಿ ॥

ಹೆಣ್ಣು ಮಕ್ಕಳು ಬನ್ನಿ ಪಟ್ಟೆಯ ಉಡ ಬನ್ನಿ
ಹಣ್ಣು ಗೂಡೆಯ ಹೊರ ಬನ್ನಿ। ರಂಗಯ್ಗೆ
ಹೊನ್ನಿನ ಒಡವೆ ಇಡ ಬನ್ನಿ ।

ರಂಗಯ್ಯನನ್ನು ನಾನಾ ಬಗೆಯಲ್ಲಿ ಅಲಂಕರಿಸುತ್ತಾರೆ. ಆ ವೈಭವಕ್ಕೆ ತಾವೇ ಆನಂದದಿಂದ ಮೈಮರೆಯುತ್ತಾರೆ.

ಕಂಡಾವೆ ಹೂವು ಕೆನ್ನೆಯ ಸಾಲಲಿ
ದುಂಡು ಮಲ್ಲಿಗೆಯ ಧರಿಸ್ಯಾನು । ರಂಗಯ್ಯ
ಒಪ್ಪಿತೇ ನಿನ್ನ ಮನಸೀಗೆ ॥

ಹೊತ್ತಾನೆ ಹೂವ ಕುತ್ತಿಗೆ ಸಾಲಲ್ಲಿ
ಜಾಜಿ ಮಲ್ಲಿಗೆಯ ಧರಿಸ್ಯಾನು । ರಂಗಯ್ನ
ವಾಹನ ಹೊಂಟೀತು ಹೊರಬನ್ನಿ ॥

ವಿಗ್ರಹವನ್ನು ಹೆಗಲಲ್ಲಿ ಹೊತ್ತು ಕುಣಿಸುತ್ತಾ ಬರುವಾಗ ನಾನಾ ಬಗೆಯ ವಾದ್ಯರವಗಳೂ, ಜೈಕಾರಗಳೂ, ಸಂಭ್ರಮದ ನುಡಿಗಳೂ ದಶದಿಕ್ಕುಗಳನ್ನು ಅಡರುತ್ತವೆ. ಹಣ್ಣಾಗಿ ಕಳಕಳಿಸುವ ನಿಂಬೆಯಲ್ಲಿ ರಸ ತುಂಬಿತುಳುಕುವಂತೆ ಕದಬಹಳ್ಳಿಯಲ್ಲಿ ಜನರ ಗುಂಪು ಎಲ್ಲೆಲ್ಲಿಯೂ ಗುಂಪುಕಟ್ಟಿ ಹರಿಯತೊಡಗುತ್ತದೆ. ಆ ವೈಭವಕ್ಕೆ ತನು ರೋಮಾಂಚನಗೊಳ್ಳುತ್ತದೆ.

ಎದ್ದ ಬೋರೆಯ ಮೇಲೆ ಇದ್ದಾನೆ ರಂಗಯ್ಯ
ಕಗ್ಗಾಲ ಕಣಿವೆ ಹುಣಸೆಯ । ತೋಪಲ್ಲಿ
ಅವನಿದ್ದಾನು ಮುದ್ದು ಮುಖದವನು ॥

ಮುದ್ದುಮುಖದ ರಂಗಯ್ಯನನ್ನು ನೋಡಲು ಆ ಸುತ್ತಿನ ಮಂದಿ ಬರುತ್ತದೆ. ಹೆಣ್ಣುಮಕ್ಕಳ ಸಂಭ್ರಮ ಅತೀವವಾಗಿರುತ್ತದೆ.

ಬಾರಕ್ಕ ಗುಡಿಗ್ಹೋಗನಾ
ಅಂಪಿಗೆ – ಸಂಪಿಗೆ –
ಸಂಪನ್ನ ಮರದಡಿಯ – ಬಾರಕ್ಕ ಗುಡಿಗ್ಹೋಗಾನ !

ಎಂದು ಉತ್ಸಾಹದ ತುಂಬುಭಕ್ತಿಯಿಂದ ಅವರು ಹೊರಟುಬರುತ್ತಾರೆ. ಗುಡಿಗೆ ಹರಕೆಗಳನ್ನು ಹೊತ್ತು ಹೋಗುವುದೇ ಅವರಿಗೊಂದು ಆನಂದ. ಕೆಲವರು ಬಾಯಿಬೀಗಗಳನ್ನು ಚುಚ್ಚಿಕೊಂಡೂ ಹೋಗುತ್ತಾರೆ. ಕೆಲವು ದಿನ ವ್ರತ ನಿಯಮಗಳನ್ನನುಸರಿಸಿ, ಉಪವಾಸವಿದ್ದು ರಂಗನಾಥನ ಜಾತ್ರೆಗೆ ಬರುವ ಅವರು ನಡೆದು ನಡೆದು ಸೋಲುತ್ತಾರೆ. ರಂಗಯ್ಯನನ್ನು ಕೇಳಿಕೊಳ್ಳುತ್ತಾರೆ.

ಒಪ್ಪೊತ್ತಿನೂಟ ಚುಚ್ಚು ಬಾಯಿಬೀಗ
ನಾನುಕ್ಕೊ ಮರಳಲ್ಲಿ ಬರಲಾರೆ । ರಂಗಯ್ಯ
ನೀ ಒಪ್ಪಿಸಿಕೊಳ್ಳೋ ಹರಕೇಯ

ರಂಗಯ್ಯ ಒಪ್ಪಿಯಾನೆ? ಒಪ್ಪಲು ಅವರೇನು ಅವನ ಚಿಕ್ಕಮ್ಮನ ಮಕ್ಕಳೆ? ಅವರ ಬೇಡಿಕೆಯನ್ನು ನಿರಾಕರಿಸಿ ಹೇಳುತ್ತಾನೆ:

ಒಪ್ಪಿಸಿಕೊಳ್ಳೋಕೆ * ಚಿಕ್ಕವ್ವನ ಮಗಳೇನೆ
ಸುತ್ತಿಬಾರೆ ನನ್ನ ಪಾಳೆಯವ । ಗುಡಿ ಮುಂದೆ
ಒಪ್ಪಿಸಿಕೊಳುತೀನಿ ಹರಕೇಯ ॥

ಪಾಳೆಯ ಸುತ್ತಿ ಬರಬೇಕು; ಗುಡಿಯ ಮುಂದೆ ಹರಕೆಯನ್ನು ಸಲ್ಲಿಸಬೇಕು. ಇದು ರಂಗಯ್ಯನ ಕಟ್ಟಾಜ್ಞೆ.

ಬಾಯಿ ಬೀಗದವರ ಪರಿ ಹೀಗಾದರೆ ಇನ್ನು ಮಿಕ್ಕ ಭಕ್ತರಿಗೂ ಮನಸ್ಸಿನಲ್ಲಿ ಒಂದು ಬಗೆಯ ಅಳುಕು. ರಂಗಯ್ಯನ ವಿಷಯದಲ್ಲಿ, ಎಲ್ಲಿ ಏನು ಅಪಚಾರ ಮಾಡಿಯೇವೋ, ಎಲ್ಲಿ ಮೈಲಿಗೆಯ ಸೋಂಕು ತಗುಲೀತೋ ಎನ್ನುವ ಅಂಜಿಕೆ.

ದೇವರಿಗೆ ಹೋಗುತೀನಿ ಹೂವಿನ ಕಣಗಾಲ
ಹೂವೆಂಜಲಾದೊ ಹುಳು
ಕಾಯೆಂಜಲಾದೊ ಕಪಿ ಕುಡಿದು ।
ಕಾಯೆಂಜಲಾದೊ ಕಪಿ ಕುಡಿದು ಬಾಳೆಯ
ಹಣ್ಣೆಂಜಲಾದೊ ಗಿಣಿ ಕುಡಿದು ಹಸುವಿನ
ಹಾಲೆಂಜಲಾದೊ ಕರು ಕುಡಿದು ॥

ದೇವರಿಗೆ ಅರ್ಪಿಸಲೆಂದು ತಂದ ಎಲ್ಲ ಪದಾರ್ಥಗಳೂ ಒಂದಲ್ಲ ಒಂದು ಬಗೆಯಲ್ಲಿ ಎಂಜಲಾದಂತಿವೆ. ಇಂಥ ಮೈಲಿಗೆ ಪದಾರ್ಥಗಳಿವೆಂದರೆ – ರಂಗಯ್ಯನ

* 'ಚಿಕ್ಕೋಳು ಮಗಳೇನೆ' ಎಂಬ ಇನ್ನೊಂದು ಪಾಠ ಇದಕ್ಕಿದೆ.

ತೇರಿಗೂ ಇದೇ ಗತಿಯಾಗಬೇಕೆ? 'ರಂಗಯ್ಯನ ತೇರೆಂಜಲಾಯ್ತು ಹಿಮ ಬಿದ್ದು.'

ಶುದ್ಧವಾದ ಪದಾರ್ಥ ದೊರೆಯಲಿಲ್ಲ ನಿಜ. ನಿರ್ಮಲ ಭಕ್ತಿಯ ನಿಶ್ಚಲ ಮತಿಯೊಂದೇ ಶುಚಿಯಾದುದು, ಪವಿತ್ರವಾದುದು. ಅಂಥ ಶುದ್ಧ ಭಕ್ತಿಯ ಜನ ಜಾತ್ರೆಗೆ ಬಂದಿದ್ದಾರೆ. ಆದರೂ ಹೂವು ಹಣ್ಣುಗಳನ್ನು ರಂಗಯ್ಯನಿಗೆ ಅರ್ಪಿಸುವುದು ಅವರ ಕರ್ತವ್ಯವಾಗಿ ಕಂಡಿದೆ.

ಹಲಸೀನ ಹಣ್ಣು ಕೊಳ್ಳೊ – ರಂಗಯ್ಯ
ತುಳಸೀಯ ಮಾಲೆ ಕೊಳ್ಳೊ ।
ಬಾಳೆಯ ಹಣ್ಣಕೊಳ್ಳೊ – ರಂಗಯ್ಯ
ಕಬ್ಬಿನ ಜಲ್ಲೆ ಕೊಳ್ಳೊ ।

ಎಂದು ನಾನಾ ಬಗೆಯ ಫಲಪುಷ್ಪಗಳನ್ನು ಗೂಡೆ ಗೂಡೆಗಳಲ್ಲಿ ಹೊತ್ತು ಗಾವುದ ಗಾವುದ ದೂರದಿಂದ ರಂಗಯ್ಯನ ಸನ್ನಿಧಿಗೆ ಬರುತ್ತಾರೆ. ಆಗ ರಂಗಯ್ಯನ ಗುಡಿಯ ಬಾಗಿಲು ಅವರಿಗೊಂದು ವಿಶೇಷ ತರಹದ ಅನುಭವವನ್ನುಂಟು ಮಾಡುತ್ತದೆ.

ಅಪ್ಪ ರಂಗಯ್ಯ್ನ ತುಪ್ಪುಂಡ ಕದಗಳು
ತೆಪ್ಪಿಲ್ಲದೆ ನಾವು ತೆಗೆದೇವು । ರಂಗಯ್ಯ
ನಿನ್ನ ಚಿನ್ನಾದುಯ್ಯಾಲೆ ಚಿಲಕಾವ ॥

ಅಣ್ಣ ರಂಗಯ್ಯ್ನ ಎಣ್ಣುಂಡ ಕದಗಳ
ಸನ್ನೇಲಿ ನಾವು ತೆಗೆದೇವು । ರಂಗಯ್ಯ
ನಿನ್ನ ವಜ್ರದುಯ್ಯಾಲೆ ಚಿಲಕಾವ ॥

ಕಾವೇಟಿರಂಗನ ಬಾಗಿಲ ಚಿಲಕಗಳು ಅವರ ಕಣ್ಣಿಗೆ, ಚಿನ್ನದಂತೆ ವಜ್ರದಂತೆ –ಉಯ್ಯಾಲೆಯಾಡುವ ಅರಿವಾಗುತ್ತದೆ.

ಅಗೋ ರಂಗಯ್ಯನ ದಿವ್ಯದರ್ಶನ! ಅವರ ಮೈ ಪುಳಕಗೊಳ್ಳುತ್ತದೆ. ಭಕ್ತಿ ಪರಾಕಾಷ್ಠೆಯನ್ನು ಮುಟ್ಟುತ್ತದೆ.

ಕಂಡುಗಕ್ಕಿಯ ಪರ ದುಂಡುಮಲ್ಲಿಗೆ ಸರ
ಕಂಡೀರಿ ರಂಗಯ್ಯ್ನ ಬಲಪಾದ
ಆರು ತಿಳಿದೇವು ಅಂಗೈಯ್ಯ ನೆನೆದೇವು
ಮುಂಗೈಯ್ಯ ಹವಳಾವ ಜಡಿದೇವು
ರಂಗಯ್ಯ – ವಪ್ಪಿಸಿಕೊಳ್ಳೊ ಹರಕೇಯ ॥

ದೇಗುಲಕ್ಕೆ ಬಂದ ಹೆಣ್ಣು ಮಕ್ಕಳು ರಂಗಯ್ಯನನ್ನು ಕುರಿತು ನಾನಾ ಬಗೆಯ ಗೀತೆಗಳನ್ನು ಹಾಡುತ್ತಾರೆ. ರಂಗಯ್ಯನ ನಾನಾ ಲೀಲೆಗಳನ್ನು ವರ್ಣಿಸುತ್ತಾರೆ. ಅವರ ಮಧುರ ಕಂಠದಂತೆಯೇ ಮಧುರ ಭಾವಗಳು ಹೊಮ್ಮಿರುವ ಆ ಹಾಡುಗಳು

ನೆರೆದವರ ಮೇಲೆ ಅಪಾರ ಪರಿಣಾಮವನ್ನು ಬೀರುತ್ತವೆ. ನಾಸ್ತಿಕನನ್ನು ಆಸ್ತಿಕನನ್ನಾಗಿ ಮಾಡುತ್ತವೆ.

ಬಾಳೆಯ ವನದ ನಡುವೆ ಇರುವ ಕೊಳದಲ್ಲಿ ತನ್ನ ವಸ್ತ್ರವನ್ನು ಮಡಿಮಾಡಿಕೊಂಡು ಬರಲು ರಂಗಯ್ಯ ಹೋಗಿದ್ದಾನೆ.

ಇಂಬಿಯ ಹಣ್ಣಿನಂಗೆ ತುಂಬೀತು ಕದಬ್ಳಳ್ಳಿ
ಆಳೊಂಟರಡಿಕೆ ದಸಿಯಂಗೆ । ರಂಗಯ್ಯ
ತಾನೊಂಟ ತಾಳೆಗರಿಯಂಗೆ ॥

ತಾಳೆಯ ಗರಿಯಂತೆ ರಂಗಯ್ಯ ದೇಗುಲದಿಂದ ಹೊರಬರುತ್ತಾನೆ. ಕಿಕ್ಕಿರಿದ ಜನ ಜಾತ್ರೆಯ ನಡುವೆ ಆಮೋದ ಲಹರಿಗಳನ್ನು ಚಿಮ್ಮುತ್ತ ಬರುತ್ತಿರುವ ಸ್ವಾಮಿಯ ಎದುರಿನಲ್ಲಿ ಭಕ್ತರ ಸಂಭ್ರಮವೇ ಸಂಭ್ರಮ.

ಹೊಡೆಗಾಯಿ ಹೊಡೆದೇವು ಈಡುಗಾಯಿ ಹಿಡಿದೇವು
ಸ್ವಾಮಿ ರಂಗಯ್ನ ಬಾಗಿಲಲ್ಲಿ ।
ಸ್ವಾಮಿ ರಂಗಯ್ನ ಬಾಗಿಲ ಮುಂದೆ ।
ಎಳನೀರ ಕೋಡಿ ಹರಿಸೇವು ।

ಈಡುಗಾಯಿಗಳನ್ನು ಹೊಡೆದಾಗ ಚೂರುಚೂರಾಗುವ ತೆಂಗನ್ನು ಆರಿಸಿಕೊಳ್ಳಲು ಹುಡುಗರು, ದೊಡ್ಡವರಾದಿಯಾಗಿ ಮುಂದೆ ನುಗ್ಗುತ್ತಾರೆ; ಎಳನೀರಿನ ಕೋಡಿಯೇ ಹರಿಯುವಷ್ಟು ಕಾಯಿಗಳನ್ನು ಹೊಡೆದರೂ ಅವರಿಗೆ ತೃಪ್ತಿಯಿಲ್ಲ!

ರಂಗಯ್ಯ ಗುಡಿಯನ್ನು ತೊರೆದು ಹೊರಟನೆಂದರೆ ಅವನ ಸುತ್ತಲೂ ಹರಿದು ಬರುವ ಬೆಳಕು ಕಣ್ಣನ್ನು ಕೋರೈಸುತ್ತದೆ. ಜನಗಳ ನೂಕು ನುಗ್ಗಲಿನ ನಡುವೆ ಸಾಗರದಲ್ಲಿ ತೇಲಿಬಿಟ್ಟ ಹೊನ್ನದೋಣಿಯಂತೆ ಪ್ರಕಾಶಮಾನವಾಗಿ, ಆಕರ್ಷಕವಾಗಿ ತೋರುವ ಸ್ವಾಮಿಯನ್ನು ಎಷ್ಟು ಹೊಗಳಿದರೂ ತೃಪ್ತಿಯಾಗದು.

ರಂಗಯ್ಯ ಹೊರಟರೆ ಬೀದೆಲ್ಲ ಬೆಳ್ಳಗಾದೊ ।
ಧಾಳಾಧೂಳೀಲಿ ಬರುವೋನೆ । ರಂಗಯ್ಯ
ನಿನ್ನ ದಾಳಾದ ಬೆಳಕು ಹಗಲಾದೊ ॥

ರಂಗಯ್ಯ ನಟ್ಟನಟ್ಟಿರುಳಿನಲ್ಲಿ ಹೊರಟು ಬರುತ್ತಿದ್ದರೂ ಅವನ ತನುವಿನ ಕಾಂತಿಗೆ ಹೊಸ ಹಗಲು ಮೂಡಿತೋ ಎಂಬ ಭ್ರಾಂತಿಯುದಯಿಸುತ್ತದೆ. ಅವನ ಉತ್ಸವ ಹೆಬ್ಬಾಗಿಲ ಬಳಿ ಬಂದಾಗಲಂತೂ ತಮ್ಮಟೆಗಳ, ಡೋಲುಗಳ ಬಡಿತ ಇಮ್ಮಡಿಸುತ್ತದೆ. ಆಕಾಶವೇ ನಡುಗುವಂತೆ ಕೇಳಿಬರುತ್ತಿರುವ ಮದ್ದಳೆಗಳ ನಾದದ ನಡುವೆ ಸ್ವಾಮಿ ತೇಲಿಬಂದ –

ಹೆಬ್ಬಾಕಲ ತವ ದಬ್ಬೆನ್ನೊದೇನಯ್ಯ
ಹೆಬ್ಬಾವಿನಂಗೆ ಬರುತಾನೆ । ರಂಗಯ್ಯ
ದಬ್ಬನ್ನ ದೋಣಿನ ಸರಚೆನ್ನ ॥

ಇಂಥ ವಾದ್ಯಘೋಷಗಳ ನಡುವೆ ಮೆರವಣಿಗೆ ಹೊರಟ ರಂಗಯ್ಯನನ್ನು ತಮ್ಮ ಮಧುರವಾಣಿಯಲ್ಲಿ ಊರಿನ ಹೆಣ್ಣುಮಕ್ಕಳು ಪ್ರಶ್ನಿಸುತ್ತಾರೆ.

ಎತ್ತಲಾರದ ಶಂಖ ಹೆಗಲಲ್ಲಿ ರಾಂ ಬಾಣ
ಎತ್ತಲಾಗಿ ಹೊರಟೀರಿ ಹೊರಪಯಣ । ರಂಗಯ್ಯ
ಬಡವಾರ ಮನೆಯ ಹರಿಸೇವೆ ॥

ಬಡವರ ಮನೆಯ ಹರಿಸೇವೆಗೆ ರಂಗಯ್ಯ ಗುಡಿಯನ್ನು ಬಿಟ್ಟು ಬಂದಿದ್ದಾನೆ, ತನ್ನ ಕಾಣಿಕೆಯನ್ನು ಸ್ವೀಕರಿಸಲು ಬಂದಿದ್ದಾನೆ!

ಬಂದಾನು ರಂಗಯ್ಯ ನಿಂದಾನು ಮನೆ ಮುಂದೆ
ಬಂಡು ಮಾಡ್ಯಾನು ಬಡವಾರ । ರಂಗಯ್ಯ
ಹೊತ್ತಿಗೆ ತುಪ್ಪವ ಎರೆಯೇಳು ॥

ಬಡವರಾದರೇನು; ಬಲ್ಲಿದರಾದರೇನು? ತನಗೆ ಸಲ್ಲಬೇಕಾದ ಕಾಣಿಕೆಯನ್ನು ಅವನು ಪಡೆಯದೇ ಹಿಂದಿರುಗುವುದಿಲ್ಲ. ಸ್ವಾಮಿ ರಂಗಯ್ಯ ಬಂದಾನೆಂದು ಹೆಣ್ಣುಮಕ್ಕಳು ಕಾದಿದ್ದಾರೆ. ಅವನನ್ನು ಹಲವು ಬಗೆಯಲ್ಲಿ ಸತ್ಕರಿಸಲು ಹವಣಿಸಿದ್ದಾರೆ.

ರಂಗಯ್ಯ ಬಂದಾನೆ ನಾಮ ಕಗ್ಗಾಗಲಿಲ್ಲ
ತಾರೆನಾಚಾರಿ ಚವರೀಯ । ಚೆನ್ನಾದ
ದಾರವ ತಾರೆ ಶಿವಡೀಗೆ ॥

ಸ್ವಾಮಿಗೆ ಬಾಗಿಲಲ್ಲಿ ಕಾಯಿ ಹೊಡೆದು ಸ್ವಾಗತಿಸಬೇಕು; ಇಲ್ಲವಾದರೆ ಮುಂದೆ ಒಂದು ಹೆಜ್ಜೆಯನ್ನೂ ಅವನು ಇಡುವುದಿಲ್ಲ.

ರಂಗಯ್ಯನ ನಾವು ಲಾಲಿಸಿ ಕೈ ಮುಗಿದೇವು
ಜೋಡಿಸಿ ಕಾಯ ಹೊಡೆದೇವು । ರಂಗಯ್ಗೆ
ಆನಂದವೇನೊ ಮನಸೀಗೆ ॥

ಬಹಳ ಮಡಿಯನ್ನು ಗಮನಿಸುತ್ತಾನೆ ಮಡಿಪುರುಷ ರಂಗಯ್ಯ. ಮುನ್ನೆಚ್ಚರಿಕೆ ಭಕ್ತರಿಗಿಲ್ಲವೆ? ತಮ್ಮ ದೊರೆಯನ್ನು ಸ್ವಾಗತಿಸಲು ಮಿಂದು ಮಡಿಯುಟ್ಟು, ಉಪವಾಸವಿದ್ದು ಕಾದಿರುತ್ತಾರೆ. ಮನೆಗಳನ್ನು ಸಗಣಿಯಿಂದ ಸಾರಿಸಿ ಅಪವಿತ್ರವಾಗದಂತೆ ಗೋಮೂತ್ರವನ್ನು ಚಿಮುಕಿಸಿ ರಂಗವಲ್ಲಿಯನ್ನು ಬಿಟ್ಟಿದ್ದಾರೆ–

ಎಂಜಲೆಂಜಾಲೆಂತ ಅಂಜಬೇಡ ರಂಗಯ್ಯ
ಅಂಜಾದೆ ಬಾರೊ ನಡುಮನೆಗೆ ।
ರಂಗಯ್ಯ ಬತ್ತಾನೆಂದು ರಂಗವಲ್ಲಿ ನಾವು ಬಿಟ್ಟು
ರಂಗನಾಥನ್ನಿಂದೆ ರಮಣೀರು । ಬತ್ತಾರೆಂದು
ರಂಗಯ್ಯಗಾರತಿ ಬೆಳಗೇವು॥

ಆರತಿಯನ್ನು ಬೆಳಗುವ ಹೆಣ್ಣುಮಕ್ಕಳು ಅನನ್ಯ ಭಕ್ತಿಯಿಂದ ತಮ್ಮ ಮಧುರ ಕಂಠದಲ್ಲಿ ರಂಗಯ್ಯನನ್ನು ಕೊಂಡಾಡುತ್ತಾರೆ.

ವಾನ ವಾನದ ಮೇಲೆ ಗರುಡಾನ ವಾಹನ
ಮೇಗಲ ಗುಡಿಯಿಂದ ಬರುವೋನೆ । ರಂಗಯ್ಯ
ಹೆಣ್ಣು ಮಕ್ಕಳಾರಾತಿ ಹಿಡಿದೇವು॥
ಬಾಳೆಯ ಎಲೆ ಮೇಲೆ ಭಗವಂತರ ಮಗ ಬಂದ
ಏಳೆ ನಾಚಾರಿ ದೊರೆ ಬಂದ । ರಂಗಯ್ಯ
ಬಾಲೇರಾರಾತಿ ತರುವಾಗ ॥

ಆರತಿಯನ್ನು ಬೆಳಗಿ, ಮತ್ತೆ ವಿನಯಪೂರ್ವಕವಾಗಿ ರಂಗಯ್ಯನನ್ನು ಒಳಗೆ ದಯಮಾಡುವಂತೆ ಬೇಡುತ್ತಾರೆ.

ಮುತ್ತು ರತ್ನವ ಹಾಸೀದೆ ರಂಗಯ್ಯ
ಅಂಜಾದೆ ಬಾರೊ ನನ ಮನೆಗೆ ।
ಎಂಜಲೆಂಜಾಲಂತ ಅಂಜಬೇಡ ರಂಗಯ್ಯ॥
ಎಂಜಲಿಗೆ ಹಾಸಿವಿನಿ ಗಂಜಲಾವ ।
ಎಂಜಲಿಗೆ ಹಾಸಿವಿನಿ ಗಂಜಲಸಗಳೀನೀರ
ಅಂಜಾದೆ ಬಾರೊ ನಡುಮನೆಗೆ ॥

ರಂಗಯ್ಯ ಇಂಥ ಭಕ್ತರ ಮನೆಯನ್ನು ಹೊಗುತ್ತಾನೆ. ಅವರ ಶುದ್ಧಭಕ್ತಿಗೆ ಶ್ರದ್ಧೆ, ನೈರ್ಮಲ್ಯಗಳಿಗೆ ತಲೆದೂಗಿ ಒಲಿಯುತ್ತಾನೆ. ಮನೆಮನೆಯ ಪೂಜೆಯನ್ನೂ ಸ್ವೀಕರಿಸಿ ಊರೆಲ್ಲವನ್ನೂ ಸುತ್ತಿಬರುವುದರಲ್ಲಿ ಬೆಳಗಿನ ಜಾವ ಎಟುಕಿಸಿಕೊಂಡಿರುತ್ತದೆ. ಮುಂಜಾವಿನ ಕೋಳಿ ಕೂಗುತ್ತದೆ.

ತಾಯಿ ಬಾರವ್ವ ಸ್ವಪ್ನಕೆ

ತಾಯಿ ಕೆಂಚಮ್ಮನಿಗೆ ತನ್ನ ಹರಕೆಯನ್ನು ಸಲ್ಲಿಸುವ ದಿನ ಹತ್ತಿರವಾಗಿದೆ. ಅಮ್ಮನ ಗುಡಿಗೆ ಹೋಗಿ ಆ ಮಹಿಮಾನ್ವಿತೆಯ ದರ್ಶನ ಪಡೆದು ಬರಬೇಕು. ತಾಯಿಯ ಕರುಣೆಗೆ ಪಾತ್ರಳಾಗಬೇಕು. ತನ್ನ ಬಾಳಿನ ಬೇಗುದಿಗಳನ್ನೆಲ್ಲಾ ತೊಳೆದು ಬಾಳಪಥದಲ್ಲಿ ಸೌಭಾಗ್ಯದ ನೆರಳನ್ನು ಹಾಸುವ ಕರುಣಾಮಯಿ ಪುಣ್ಯದೇವತೆ; ಅವಳನ್ನು ಸೇವಿಸುವುದೇ ಮಹಾಪುಣ್ಯ. ಅವಳ ಕರುಣೆಯ ದೃಷ್ಟಿ ತನ್ನತ್ತ ಜಾರಿದರೆ, ಹುಟ್ಟಿದ ಮನೆಗೆ, ಕೊಟ್ಟ ಮನೆಗೆ ಎರಡಕ್ಕೂ ಹೆಸರನ್ನು ತಂದಾಳು! ಎಲ್ಲದಕ್ಕೂ ತಾಯಿಯ ಕರುಣೆ ಬೇಕು. ತನ್ನ ಶಕ್ತಿಗೆ ತಕ್ಕಂತೆ ತಾಯಿಯ ಪಾದಕ್ಕೆ ಹರಕೆಯನ್ನು ಹೊತ್ತಾಳು.

ಸಣ್ಣಕ್ಕಿ ಸಾವಿರ ಎಣ್ಣೆ ಮೂಗಂಡುಗ ।
ಹಣ್ಣಿನಗೂಡೆ ಹದಿನಾರು। ಕೆಂಪವ್ವ
ನಾ ಬಡವೆ ಬರುತೀನಿ ದಯಮಾಡು॥

ಹದಿನಾಲ್ಕರ ಹರೆಯದ ಮುಗ್ಧ ಮನಸ್ಸಿನ ವಿವಾಹಪೂರ್ವ ಕಲ್ಪನೆಗಳು, ಕುಲದೇವತೆಯಲ್ಲಿ ಕೋರುವ ಬಯಕೆಗಳು, ತನ್ನ ಮುಂದಿನ ನೆಮ್ಮದಿಯ ಬಾಳಿಗಾಗಿ ಹೊರುವ ನೂರೆಂಟು ಹರಕೆಗಳು! ಹಳ್ಳಿಯ ಚೆಲುವೆ ತನ್ನ ಭಕ್ತಿಭಾವ ಪರವಶತೆಯಲ್ಲಿ ದೇವಿಯ ವೈಭವವನ್ನು ನೆನೆದು ಕಾಣುವ ಭವ್ಯತಮ ಕನಸುಗಳು ಅವೆಷ್ಟು ಬಂಧುರವಾದುವು!

ಗಂಗೆಯ ದಡದಲ್ಲಿ ಲಿಂಗವ ಪೂಜೆಮಾಡಿ।
ಜಂಗಮರ ನಡುವೆ ಬರುವ್ಹೋಳೆ । ಕೆಂಪವ್ವ
ನಿನ ಲಿಂಗ ಹೊಳೆದಾವು ಬಿಸಿಲಿಗೆ ॥

ಯಾರಿವಳು? ಉಟ್ಟ ಕಾವಿಯ, ಬಳಿದ ವಿಭೂತಿಯ, ಹೊಳೆವ ಜಡೆಯ ಜಂಗಮರ ನಡುವೆ ನದಿಯತ್ತಣಿಂದ ವಯ್ಯಾರದ ಹೆಜ್ಜೆಗಳನ್ನು ಹಾಕುತ್ತ ನಡೆದುಬರುವ ಅವಳ ಸೊಬಗೇನು? ಮೂಡಣ ರವಿಯ ಮುಂಜಾವಿನ ಹೊಂಗಿರಣಗಳು ಅವಳ ಕೊರಳಲ್ಲಿ ಹೊಳೆಯುವ ಲಿಂಗದ ಮೇಲೆ ಮೈತಳೆದು ಮಿರುಗಿವೆ? ಇಂಥವಳು ತಾಯಿ ಕೆಂಪವ್ವನಲ್ಲದೆ ಮತ್ತಾರು?

ಹೌದು, ಅವಳೇ; ಆ ಸುಖ್ಯಾತೆಯೆ? ಆ ಶ್ರೀಮಂತೆಯೆ ! ದೇಗುಲದ ಬಳಿ ಬಂದು ಗುಡಿಯನ್ನು ಹೊಗುವ ಮುನ್ನ ಕಾಲು ತೊಳೆದುಕೊಳ್ಳುತ್ತಿದ್ದಾಳೆ.

ಪಿಲ್ಲಿಕಾಲಿನೋಳೆ ಚೆಲ್ಲಿದ ನೆರಿಗೋಳೆ।
ಕಲ್ಲಮೇಲೆ ಕಾಲ ತೊಳೆಯೋಳೆ । ಕೆಂಪವ್ವ
ನಿನ್ನ ಪಿಲ್ಲಿ ಸಾವಿರಕೆ ಬೆಲೆಯಾದೊ ॥

ಚೆಲ್ಲಿದ ನೆರಿಗೆಗಳನ್ನು ತುಸು ಹಿಂದಕ್ಕೆ ಸರಿಸಿ ಆ ಸುಶೀಲ ಪದಪಂಕಜವನ್ನು ಸಲಿಲದಿಂದ ತೊಳೆಯುವಾಗ ಕಾಲುಬೆರಳಿನ ಮೇಲೆ ಹೊಳೆಯುವ ಬೆಳ್ಳಿಯ ಪಿಲ್ಲಿಯ ಆಕರ್ಷಣೆಯೇನು! ಸಾವಿರವಾದರೂ ಬೆಲೆ ಕಟ್ಟಲಾದೀತೆ! ಕಾಲಿನ ಪಿಲ್ಲಿಗಳಂತಿರಲಿ. ತಾಯಿ ಅಲಂಕರಿಸಿಕೊಂಡಿರುವ ಬಹುಬಗೆಯ ಆಭರಣಗಳನ್ನು ನೋಡಲು ಈ ಕಣ್ಣು ಸಾಲವು. ಸೂಕ್ಷ್ಮಕಾಯಳಾದ ದೇವಿಗೆ ಒಂದೊಂದು ಆಭರಣವೂ ಒಂದೊಂದು ಹೊರೆಯಾಗಿ ತೋರಬಹುದು. ಆದರೂ ಆಭರಣಗಳ ಕಾಂತಿಯಲ್ಲಿ ಪುಷ್ಪವನ್ನು ಹೊತ್ತು ಬೀಗುವ ವಲ್ಲರಿಯಂತೆ ತೋರುವ ಆ ಅವಳ ಬೆಡಗನ್ನು ನೋಡಬೇಕು.

ಮೂಗುತಿ ಮುಂಭಾರ ಹೆಣೆಗಂಟು ಹಿಂಭಾರ ।
ಸಣ್ಣ ಕಲ್ಲಿನ ವಾಲೆ ಕಿವಿಭಾರ । ಕೆಂಪವ್ವ ।
ದೊಡ್ಡ ಗುಂಡಿನ ಹಾರ ಎದೆ ಭಾರ ॥

ಅವಳ ಚೆಲುವಿಗೆ ತಕ್ಕ ಅಲಂಕಾರ, ಅದಕ್ಕೆ ತಕ್ಕ ವದನ ಕಾಂತಿ; ಮದುಮಗಳಂತೆ ಅಲಂಕರಿಸಿಕೊಂಡ ದೇವಿಯ ದಿವ್ಯರೂಪ, ಅದೆಷ್ಟು ಆಮೋದಕಾರಿ, ಕಂಗಳಿಗೆಷ್ಟು ಹರ್ಷಕಾರಿ! ಇಂಥ ಸೌಭಾಗ್ಯನಿಧಿಯಾದ ಅವಳನ್ನು ಕಂಡ ನಯನಗಳೇ ಸಾರ್ಥಕ!

ಪಾದಗಳನ್ನು ತೊಳೆದುದಾಯಿತು; ಅವಳ ರೂಪಲಾವಣ್ಯಗಳನ್ನೂ, ಒಡವೆ ವಸ್ತ್ರಗಳನ್ನೂ ಇನ್ನೂ ಇನ್ನೂ ನೋಡಬೇಕೆನಿಸುತ್ತದೆ; ಆದರೆ ಕೆಂಪವ್ವನೇಕೋ ಒಳಗೆ ನಡೆಯುವಂತಿದೆ; ಇನ್ನೂ ಕ್ಷಣಕಾಲ ಕಣ್ಣೆದುರು ನಿಲ್ಲಬಾರದೆ? ಹತ್ತಿರ ಸರಿದು ಇನ್ನೂ ಸ್ಪಷ್ಟವಾಗಿ ಅಲಂಕಾರಗಳನ್ನು ಕಂಡು ಮೈಮರೆಯುವಾಸೆ –

ತಾಳೆ ಕೆಂಪವ್ವ ತಾಲಿಯ ನೋಡೇನು।
ತಾಲಿಯ ಮೇಗಲ ಕಡೆತವ । ನೋಡ್ಯೇನು ।
ನಿಲ್ಲಮ್ಮ ನಿಂತ ನೆಲೆಯಲ್ಲಿ ॥

ನಿಲ್ಲೆ ಕೆಂಪವ್ವ ಪಿಲ್ಲಿಯ ನೋಡ್ಯೇನು।
ಪಿಲ್ಲಿಯ ಮೇಗಲ ಬಸವನ । ನೋಡ್ಯೇನು
ನಿಲ್ಲಮ್ಮ ನಿಂತ ನೆಲೆಯಲ್ಲಿ ॥

ಹೆಣ್ಣಿನ ಪ್ರಕೃತಿಯೇ ಅಂತಹುದು. ಇತರರ ಅಲಂಕಾರಗಳನ್ನು ಒಮ್ಮೆಯಲ್ಲ ಮತ್ತೆ ಮತ್ತೆ ನೋಡುವ ಆಸೆ; ಉಟ್ಟ ಸೀರೆಯ ರೇಶಿಮೆಯ ಅಂಚಿನ ಮಾತಿರಲಿ; ಕೊರಳ ತಾಳಿಯ ಮೇಲೆ ಕಡೆದ ಬಸವನನ್ನು ನೋಡುವ ಬಯಕೆ! ಎಲ್ಲ ಬಗೆಯ ಎಲ್ಲ ಸೌಂದರ್ಯವನ್ನೂ ಕೊಂಡಾಡುವ ಮನ. ಅಂದಚೆಂದಗಳನ್ನೂ,

ಸಿಂಗರಿಸಿಕೊಂಡ ಬಗೆಯನ್ನೂ ಕಣ್ತುಂಬ ನೋಡುವ, ನೋಡಿ ನಲಿಯುವ, ನಲಿದು ಅನುಕರಿಸುವ ಚಪಲ. ಸಹಜ ಚೆಲುವನ್ನಂತೂ ಮೈಯುಬ್ಬಿ ಹೊಗಳಿ ಸೋಲುವ ಸ್ವಭಾವ. ಕೆಂಪವ್ವನ ದಿವ್ಯರೂಪು ಸಾಮಾನ್ಯವಾದುದೇ?

ಕನ್ನೆ ಕೆಂಪವ್ವ ಕಣ್ಣಿನುಬ್ಬಿನ ಮೇಲೆ ।
ತಿಳಿನೀರ ಭಾವಿ ಎಲೆ ತೋಟಾ । ಕೆಂಪವ್ವ
ಕನ್ನೆ ವಾಲಾಡಿ ಬೆಳೆದಾಳು ॥

ಅವಳ ಭವ್ಯಾಲಯದೆದುರು ಬೆಳೆದುವೋಲಾಡುವ ದಿವ್ಯಾರಾಮಗಳು ಅಂಗಗಳಲ್ಲಿ ಪ್ರತಿಬಿಂಬಿತವಾಗುತ್ತಿವೆಯೋ ಎಂಬಂತಿದೆ. ತಾಯಿ ಕೆಂಪವ್ವ ತಾನೇ ಆಸಕ್ತಿವಹಿಸಿ ಬೆಳೆದ ಈ ಹಸಿರು ತೋಟಗಳ ತಂಪು ಸೊಂಪಿನ ನೆಲೆಯಲ್ಲಿ ವೈಭವದ ಬಾಳನ್ನು ನಡೆಸಿರುವಾಕೆ. ನೆರೆಹೊರೆಯ ಬಯಲೆಲ್ಲಾ ಅವಳ ದಿವ್ಯ ಕರುಣೆಯೇ ಬೆಳೆದು ನಿಂತಂತೆ, ಹೂವಾಗಿ ಅರಳಿದಂತೆ ಸುಮಧುರ ಕಂಪನ್ನು ಸೂಸುವ ಪುಷ್ಪವನ. ಬಣ್ಣಬಣ್ಣದ ಬಿನ್ನಾಣದ ನುಡಿಯನ್ನಾಡುವ, ಬೀಸುಗಾಳಿಯಲ್ಲಿ ಉಲ್ಲಾಸದ ನರ್ತನ ಮಾಡುವ ಈ ಹೂವಿನ ಹೊಲಕ್ಕಾಗಲೇ ಕೆಂಪವ್ವ ಹೂ ಕುಯ್ಯಲು ಹೊರಟಳು. ಇತ್ತ ಮನೆಯ ಬಾಗಿಲಿಗೆ ಯಾರೋ ಬಂದು ಕಾದಿದ್ದಾರೆ –

ಅರಗಿನ ಹೊಲದಲಿ ಮರುಗುವ ಕೊಯ್ಯೋಳೆ ।
ಹರಳ್ಹಾಕಿದೋಲೆ ಕಿವಿಯೋಳೆ । ಕೆಂಪವ್ವ
ಹರಳು ಬಂದಾವೆ ಬೆಲೆಮಾಡೆ ॥

ಉತ್ತರದ ಹೊಲದಲ್ಲಿ ಪತ್ತರೆಯ ಕುಯ್ಯೋಳೆ ।
ಮುತ್ತ್ಹಾಕಿದೋಲೆ ಕಿವಿಯೋಳೆ । ಕೆಂಪವ್ವ ।
ಮುತ್ತು ಬಂದಾವೆ ಬೆಲೆಮಾಡೆ ॥

ಮುತ್ತು ಹವಳಗಳು ಮನೆಯ ಬಾಗಿಲಿಗೆ ಬರುತ್ತಲೇ ಇವೆ. ಕೊಳ್ಳುವ ಭಾಗ್ಯವನ್ನೂ ಪಡೆದುಕೊಂಡಿದ್ದಾಳೆ ಪುಣ್ಯವತಿ. ಅಂತೆಯೇ ತೊಡುವ ಸೌಭಾಗ್ಯವೂ ಇದೆ. ಅವಳು ಹೂಮುಡಿದು ನಲಿದರೆ, ವಸ್ತ್ರಾಭರಣಗಳಿಂದ ಅಲಂಕರಿಸಿಕೊಂಡು ಹರ್ಷಿಸಿದರೆ, ಅವಳ ಶ್ರೀಮಂತಿಕೆಗೊಂದು ಶೋಭೆಯಿದೆ. ಅಲಂಕಾರದಲ್ಲೊಂದು ಅರ್ಥವಿದೆ. ಅವಳ ಗುಡಿಯ ಬಳಿ ಹೋಗಿ ಬಂದವರು ಮಾತ್ರ ಇದನ್ನು ಅರಿತಾರು! ಅಲ್ಲಿನ ವೈಭವ, ಲಕ್ಷಣಗಳನ್ನು ನೋಡುವುದೊಂದು ಮಹಾಪುಣ್ಯ.

ಕೆಂಪವ್ನ ಗುಡಿಸುತ್ತ ಹಿಂಡೆಮ್ಮೆ ಮೇದಾವು।
ಹಂಡೇಲಿ ಹಾಲ ಕರೆಯೋವು । ಕೆಂಪವ್ನ ।
ಕೊಳತುಂಬಿ ಕೋಡಿ ಹರಿದಾವು ॥

ಹಾಲಿನ ಕೋಡಿಯನ್ನು ಹರಿಸುವ, ಆ ಅಮೃತವನ್ನು ಪರರಿಗೆ ದಾನಮಾಡಿ ನಲಿಯುವ ಕೆಂಪವ್ವನ ಮಹತ್ವವೂ ಅಸಾಮಾನ್ಯವಾದುದು. ಸುತ್ತಿನ ತೋಟಗಳಲ್ಲಿ ಮುಗಿಲೆತ್ತರ ಕೆಮ್ಮುಡಿಯೊಡ್ಡಿ ಗೊನೆಯನ್ನು ತೂಗುವ ತೆಂಗುಗಳನ್ನು ನೋಡಿದರೆ ಸಾಕು, ತಾಯಿಯ ಪುಣ್ಯವೆಂತಹುದೆಂದು ಅರಿವಾದೀತು! ಇದು ವೃಕ್ಷರಾಜಿಗಳಲ್ಲೊಂದು ಸೋಜಿಗ–

ಕೆಂಪವ್ವ ಗುಡಿಸುತ್ತ ಬೆಳೆದ ತೆಂಗಿನ ಮರ ।
ಜೊಂಪೆಜೊಂಪೆಗೆ ಎಳೆಗಾಯಿ । ಕೆಂಪವ್ವ ।
ಪೂಜೆಯ ಹೊತ್ತಿಗೆ ಹದವಾದೋ ॥

ನೋಡುವವರ ಕಣ್ಣಿಗೆ ಎಳೆಗಾಯಾಗಿ ತೋರಿ, ತಾಯಿಯ ಪೂಜೆಯ ವೇಳೆಗೆ ಹದವಾಗಿ ನಿಲ್ಲುವ ಈ ಸೋಜಿಗವಂತಿರಲಿ. ಗುಡಿಯ ಸುತ್ತಿನ ಹೂಬಳ್ಳಿಗಳನ್ನು ಕಾಣಬೇಕು. ಮೊಗ್ಗಾಗಿ ಮಲಗಿದ ಜೊಂಪೆಗಳು ಅದಾವ ಅವ್ಯಕ್ತ ಹಸ್ತದ ಮಧುರ ಸ್ಪರ್ಶಕ್ಕೆ ಆ ವೇಳೆಯಲ್ಲಿ ಅರಳಿ ನಿಂತು ಸುಗಂಧವನ್ನು ಹರಡಿ ಮುದಗೊಳಿಸುತ್ತವೆ! ಎಲ್ಲಿಂದ ಬಂದುದು ಈ ಸುವಾಸನೆ ಎಂದು ಅರಸುವ ಕಣ್ಣಿಗೆ ತೋರುವ ಆನಂದದ ನೋಟವೆಂತಹುದು!

ಕೆಂಪವ್ವ ಗುಡಿ ಸುತ್ತ ಗಮ್ಮನ್ನೊವೇನಮ್ಮ!
ಗಂಡು ಭೂತಾಳೆ ಗಜನಿಂಬೆ । ಕೆಂಪವ್ವ ।
ಪೂಜೆಗೆ ಮಲ್ಲಿಗೆ ಅರಳ್ಯಾವೆ ॥

ತಾಯಿಯ ಪೂಜೆಗೆ ಅನುವಾಗಿ ಅರಳಿ ಓಲಾಡುವ ಹೂಗೊಂಚಲ ರಮ್ಯನೋಟ ಹರ್ಷವನ್ನು ತರುತ್ತದೆ. ಕೆಂಪವ್ವನ ತನುವನ್ನು ಅಲಂಕರಿಸಿ ತಮ್ಮ ಬಾಳನ್ನು ಸಾರ್ಥಕಗೊಳಿಸಿಕೊಳ್ಳುವ ಈ ಹೂಗಳ ಪುಣ್ಯವಾದರೂ ಎಷ್ಟು! ಎಲ್ಲಿಯೋ ಕಾನನ ಮಧ್ಯದಲ್ಲಿ ಹುಟ್ಟಿ ಮೈತುಂಬ ನಗೆಯನ್ನು ಹೊತ್ತು ತೂಗಿದರೂ, ಮಧುರ ಕಂಪನ್ನು ಇನ್ನೆನಿತೆ ದೂರಕ್ಕೆ ಬೀರಿದರೂ ಎಲ್ಲವೂ ವ್ಯರ್ಥ. ನೋಡಿ ನಲಿಯದಂಥ ಆಸ್ವಾದಿಸಿ ಹಿಗ್ಗದಂಥ ನೆಲೆಯಲ್ಲಿ ಬೆಳೆದು ನಿಂತಾದರೂ ಫಲವೇನು? ಆದರೆ ತಮ್ಮ ಪುಣ್ಯ ವಿಶೇಷದಿಂದ ತಾಯಿ ಕೆಂಪವ್ವನ ಭಕ್ತರು ಸುಳಿಯುವ ನೆಲದಲ್ಲಿ ತನುವನ್ನು ಧರಿಸಿ ಸತ್ಸೇವೆಗೆ ನಿಂತಿರುವ ಈ ಹೂಗಿಡಗಳ ಹೆಮ್ಮೆಯೇನು! ಬಂದ ಹೆಣ್ಣುಮಕ್ಕಳ ತುರುಬಿನ ಮೇಲೆ ಕುಣಿಯುವ ಆಸೆ. ಬಹುದೂರದ ಪಯಣದಿಂದ ಸೋತ ಮನಕ್ಕೆ ಮುದವನ್ನು ತಂದು ಶ್ರಮವನ್ನು ತಗ್ಗಿಸುವ ಸದ್ಭಾವನೆ. ಎಲ್ಲದಕ್ಕೂ ಮಿಗಿಲಾಗಿ ತಾಯಿ ಕೆಂಪವ್ವನ ಪೂಜೆಗೆ ಅವಕಾಶವನ್ನು ಕಾಯುತ್ತ ಬೆಳಗಿನಿಂದ ಮೊಗ್ಗನ್ನ ತೋರಿದುವು ಇದ್ದಕ್ಕಿದ್ದಂತೆಯೇ ಪೂಜೆಯ ವೇಳೆಗೆ ಸರಿಯಾಗಿ ಬಿರಿದು ಥಳಥಳಿಸುವ ಬಯಕೆ, ಈ ಪುಷ್ಪ ಪರಿವೇಷಕ್ಕೆ!

ಮೊಗ್ಗಿನ ತೋಟವ ನೋಡ್ಯಾವು ನಾವೆಲ್ಲ ।
ನೀ ಬಂದು ಕೈಯನಿಟ್ಟಾಗ । ಕೆಂಪವ್ವ ।
ಕಸುಗಾಯಿಯಾಯ್ತು ಗಜನಿಂಬೆ ॥

ಹೌದು, ತಾಯಿಯ ದಿವ್ಯ ಹಸ್ತಸ್ಪರ್ಶದ ಮಹತ್ವವೇ ಅಂತಹುದು! ಆ ವೃಕ್ಷಗಳ ಬಯಕೆಯಾದರೂ ಅದೆ. ತಾಯಿಯ ಸನ್ನಿಧಿಯಲ್ಲಿ ಬೆಳೆದ ಮೇಲೆ ತಾಯೊಬ್ಬಳಿಗೇ ತಾವು ಮೀಸಲು. ಅವಳೊಬ್ಬಳ ಸೇವೆಯಿಂದಲೇ ತಾವು ಪುನೀತರಾಗಬೇಕು – ಎನ್ನುವ ಅಭೀಷ್ಟೆ. ಹೀಗೆ ಸುತ್ತಿನ ಗಿಡಮರ ಬಳ್ಳಿಗಳೆಲ್ಲಾ ತಾಯಿಯ ಸೇವೆಗೆ

ಹಾತೊರೆಯುವಾಗ ದೂರದೂರಗಳಿಂದ ಬರುವ ಭಕ್ತರ ಸೇವಾಕಾಂಕ್ಷೆಯಾದರೂ ಎಷ್ಟಿರಬಹುದು. ತಾಯಿಯನ್ನು ನೋಡಬೇಕು, ಪೂಜೆಯನ್ನು ಸಲ್ಲಿಸಿ ಭಕ್ತಿಯಿಂದ ಮಣಿಯಬೇಕು, ಅವಳ ಗುಡಿಯ ಸುತ್ತಿನ ವೈಭವ, ವೈಶಿಷ್ಟ್ಯಗಳನ್ನು ಕಣ್ತುಂಬ ಕಂಡು ತಣಿಯಬೇಕು; ಕೆಂಪವ್ವನ ಗುಡಿಗೆ ಯಾತ್ರೆ ಹೋಗಿ ಬಂದು ಭಾಗ್ಯಶಾಲಿಗಳೆನಿಸಬೇಕು ಎಂಬೊಂದು ಆಕಾಂಕ್ಷೆಯಲ್ಲಿಯೇ ದಿನಗಳೆದ ಮನಕ್ಕೆ ಎಂತೆಂಥ ಮಧುರ ಸ್ವಪ್ನಗಳು! ಕನಸಿನಲ್ಲಿಯೂ ಕೆಂಪವ್ವ!

ನಿದ್ದೆಯನ್ನುಳಿದು ಎದ್ದು ಕುಳಿತಾಗ ಮುಗ್ಧಬಾಲೆಯ ಮನಸ್ಸು ಯಾವುದೋ ಕಲ್ಪನಾಲೋಕದಿಂದ ತೇಲಿಬಂದಂತೆ ಹರ್ಷಗೊಂಡಿತು. ಕೆಂಪವ್ವನ ವೈಭವಗಳನ್ನು ಕನಸಿನ ರಾಜ್ಯದಲ್ಲಿ ಕಂಡು ಅವಳು ಉತ್ಸಾಹಗೊಂಡಳು, ಸ್ವಪ್ನದಲ್ಲಿ ಸುಳಿದು ತನ್ನತ್ತ ಕರುಣೆಯ ದೃಷ್ಟಿಯನ್ನು ಬೀರಿದ ಮಹಾತಾಯಿಗೆ ಮತ್ತೆ ಮತ್ತೆ ವಂದಿಸಿದಳು. ಇಂಥ ಕನಸುಗಳು ನೂರು ನೂರು ಬರಲಿ ಎಂದು ಹಾರೈಸಿದಳು.

> ಕನಸಿನಲಿ ಕಂಡೆ ಮನಸಿಗೆ ದೊಡ್ಡೋಳೆ
> ತುಳಸೀಯ ಮಾಲೆ ಒಳದಂಡೆ । ಕೆಂಪವ್ವ ।
> ತಾಯಿ ಬಾ ನನ್ನ ಸ್ವಪ್ನಕೆ ॥

ಬದುಕಿನ ಉಸಿರು – ಜನಪದ ಸಾಹಿತ್ಯ

ತೊಟ್ಟಿಲಲ್ಲಿ ಶಿಶು, ಹತ್ತಿರದಲ್ಲೇ ಪತಿ, ಹೊರಗೆ ಪಡಸಾಲೆಯಲ್ಲಿ ಮಾವ, ಮೈದುನ ಮಲಗಿದ್ದಾರೆ. ಒಳಗೆಲ್ಲೋ ಅತ್ತೆಯ ಸುಖನಿದ್ರೆ. ಮನೆಯೆಲ್ಲ ಮೌನದ ಮಡುವಿನಲ್ಲಿ ಅದ್ದಿರುವಾಗ ಕೊಟ್ಟಿಗೆಯ ಗೂಡಿನಲ್ಲಿ ಮುಂಗೋಳಿಯ ಕೂಗು. ಹೊರಗೆ ಬೆಳ್ಳಿ ಚಿಕ್ಕಿಯ ಮಂದ ಬೆಳಕು ಕತ್ತಲ ಮುಸುಕನ್ನು ತುಸು ಸರಿಸಿರಬೇಕು, ಪ್ರಕೃತಿಯೆಲ್ಲ ಸಚೇತನಗೊಳ್ಳುತ್ತಿದೆ. ಬನ ಬಯಲೆಲ್ಲ ಉಲ್ಲಸಿತವಾಗುತ್ತಿದೆ. ನೀರವ ರಾತ್ರಿಯ ನಿಗೂಢ ನಿದ್ರೆಯಿಂದ ಎಚ್ಚರಗೊಳ್ಳುವ ಲೋಕಕ್ಕೆ ದಿವ್ಯಗಾನದ ಗಾಯತ್ರಿ ಕಲ್ಲಿನ ಗರಗರ ನಾದದೊಡನೆ ತೇಲಿ ಬರುತ್ತದೆ.... ಎದ್ದಿದ್ದಾಳೆ ಮನೆಯ ಗರತಿ. ಜಗವೆಲ್ಲ ಮಲಗಿರುವಾಗ ತಾನೊಬ್ಬಳು ಎಚ್ಚತ್ತು ಪವಿತ್ರ ಕಾಯಕದಲ್ಲಿ ತೊಡಗಿದ್ದಾಳೆ. ಅವಳ ಬದುಕೇ ಒಂದು ಬಂಧುರ ಕಾವ್ಯ. ಬೆಳಗಿನಿಂದ ಸಂಜೆಯವರೆಗೆ ಅವಿರತವಾಗಿ ದುಡಿದು ದುಡಿದು ಹಣ್ಣಾದರೂ ದುಡಿಯುತ್ತಿದ್ದೇನೆಂಬ ಬೇಸರವಿಲ್ಲ, ದುಡಿಮೆಯಲ್ಲಿಯೇ ದೇವರನ್ನು ಕಾಣುವ, ಕಷ್ಟದಲ್ಲಿಯೇ ಕೈಲಾಸವನ್ನು ಕಾಣುವ, ತ್ಯಾಗಮಯಿ ಅವಳು. ಅವಳ ಜೀವನ ಶ್ರದ್ಧೆ, ಅವಳ ಕರ್ತವ್ಯನಿಷ್ಠೆ, ಅವಳ ಕಷ್ಟಸಹಿಷ್ಣುತೆ..... ಸಂಸಾರದ ಬಂಡಿಯ ಕಡೆಗೀಲು ಅವಳು. ಅವಳ ನಡೆಯ ಮೇಲೆ, ಅವಳ ನುಡಿಯ ಮೇಲೆ, ಅವಳ ಜಾಣ್ಮೆಯ ಮೇಲೆ ನಿಂತಿದೆ ಬದುಕಿನ ಗೋಪುರ!

ಹಳ್ಳಿಯ ಹೆಣ್ಣಿನ ಹೃದಯದಲ್ಲಿ ಈ ಅನಂತ ಶಕ್ತಿಯನ್ನು ತುಂಬಿದ ಮಾಂತ್ರಿಕಹಸ್ತವನ್ನು ಅವಳೇ ಅರಿಯಳು. ಅವಳ ನಾಡಿನಾಡಿಯಲ್ಲಿ ತುಂಬಿ ಮಿಡಿಯುವ ಪರಂಪರಾನುಗತ ಸಂಸ್ಕೃತಿಯ ಸಿರಿಯದು. ತಾಯ ಎದೆ ಹಾಲಿನಲ್ಲಿಯೇ ಹರಿದು ಬಂದ ಚೈತನ್ಯದ ಸೆಲೆಯದು. ಹಾಲುಣಿಸಿದ ತಾಯಿ, ನುಡಿಯನ್ನೂ, ಹಾಡನ್ನೂ, ಕಲಿಸಿದಳು. ಬಾಳಿ ಬದುಕುವ ದಾರಿಯನ್ನೂ ತೋರಿದಳು. ಇನ್ನಾವ ವಿದ್ಯಾಲಯವೂ ಅವಳಿಗೆ ಬೆಳಕನ್ನು ನೀಡಲಿಲ್ಲ. ಮತ್ತಾವ ಗ್ರಂಥಸಮುದಾಯವೂ ಜ್ಞಾನವನ್ನು ನೀಡಲಿಲ್ಲ. ಅವಳು ಅನಕ್ಷರಸ್ತೆ, ಅನಾಗರಿಕೆ, ಜಾಗತಿಕ ವಿಷಯಗಳಲ್ಲಿ ಕೆಲಮಟ್ಟಿಗೆ ಅಜ್ಞಾನಿ; ಆದರೆ ಬದುಕನ್ನು ಬಂಗಾರಮಾಡಿಕೊಳ್ಳುವಲ್ಲಿ, ಕಹಿಯಲ್ಲಿ ಸಿಹಿಯನ್ನು ಪಡೆಯುವುದರಲ್ಲಿ, ನೋವಿನಲ್ಲಿ ನಲವನ್ನು ಕಾಣುವುದರಲ್ಲಿ ಅವಳೇ ಸುಜ್ಞಾನಿ. ನಾಗರಿಕತೆ ಅವಳಲ್ಲಿಲ್ಲ. ಆದರೆ ಸದ್ಗುಣಗಳ ಸುಸಂಸ್ಕೃತಿಯ ಪ್ರತೀಕವೇ

ತಾನಾಗಿದ್ದಾಳೆ. ದಿನದಿನವೂ ತನ್ನನ್ನು ತಿದ್ದುವ, ತನ್ನ ವ್ಯಕ್ತಿತ್ವವನ್ನು ರೂಪಿಸುವ, ತನ್ನ ಭಾವನೆಯನ್ನು ಬೆಳೆಸುವ, ಪೋಷಿಸುವ ಮಹಾನಿಧಿಯೊಂದಿದೆ ಅವಳ ಅಂತರಂಗದಲ್ಲಿ. ಆ ತನಿಜೇನನ್ನು ಉಂಡೇ ಬೆಳೆದ ಚೇತನ ತನ್ನದಾಗಿ ಅದನ್ನು ಆರಾಧಿಸಿದ್ದಾಳೆ, ಅಭ್ಯಸಿಸಿದ್ದಾಳೆ. ಅದರ ಆಳ ಆಳಕ್ಕೆ ನಿತ್ಯವೂ ಇಳಿದು ಮಿಂದೇಳುತ್ತಾಳೆ. ಕಲ್ಲನ್ನು ಹಿಡಿಯುವ ಕೈ ಜಗತ್ಕಲ್ಯಾಣವನ್ನು ಕುರಿತು ಹಾಡುತ್ತದೆ, ಹಂಬಲಿಸುತ್ತದೆ.

ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಜುಣವ
ಜಲ್ಲಜಲ್ಲನೆ ಉದುರಮ್ಮ – ನಮ್ಮನೆಯ
ಬೆಲ್ಲದಾರುತಿಯ ಬೆಳಗೇನು

ಲೋಕವೆಲ್ಲ ನಿಂತಿರುವುದು ಆ ತನ್ನ ಕಲ್ಲಿನ ಆಧಾರದ ಮೇಲೆ. ಕಲ್ಲು ತಿರುಗಿದರೆ ತಾನು, ತನ್ನ ಮನೆ, ತನ್ನ ಸಮಸ್ತವೂ. ಲೋಕದ ಜೀವಶಕ್ತಿಯೇ ಆಗಿರುವ ಆ ಬೀಸುವ ಕಲ್ಲು ಕೇವಲ ಒಂದು ಜಡವಸ್ತುವೇ! ಅವಳು ಲೋಕದ ತಾಯಿ, 'ಕಲ್ಲಮ್ಮ', ಜಲ್ಲಜಲ್ಲನೆ ಅವಳು ಉದುರಿದರೆ ಸಿರಿ, ಸಂಪತ್ತು ಎಲ್ಲವೂ ವರ್ಧಿಸುತ್ತದೆ. ತಾನು ಮುಟ್ಟಿ ಬೀಸಲು ಕುಳಿತ ಆ ತಾಯಿಗೆ ಬೆಲ್ಲದಾರತಿ, ಮುತ್ತಿನಾರತಿ ಏನನ್ನು ಬೆಳಗಿದರೂ ತೃಪ್ತಿಯಿಲ್ಲ. ಅವಳು ಲಕ್ಷ್ಮಿ, ಅವಳು ಸರಸ್ವತಿ, ತನ್ನ ಅಂತರಂಗದ ರಾಗಭಾವಗಳಿಗೆ, ಆಶೆ ನಿರಾಶೆಗಳಿಗೆ, ಸುಖ ದುಃಖಗಳಿಗೆ ಹಾಡಿನ ರೂಪನ್ನು ಕೊಟ್ಟು 'ನಾಲಿಗ್ಗೆ ಅಕ್ಷರ ನಿಲ್ಲಿಸುವ' ದೇವಿ. ತನ್ನನ್ನು ನಲಿಸಿ, ಮನವನ್ನು ಅರಳಿಸಿ, ಬದುಕಿನಲ್ಲಿ ನಂಬಿಕೆಯನ್ನೂ, ಶ್ರದ್ಧೆಯನ್ನೂ, ನೆಚ್ಚು ಕೆಚ್ಚುಗಳನ್ನೂ ನೀಡುವ ಸಾಹಿತ್ಯ ಸುಧೆಯನ್ನು ನೀಡಿದ ಅವಳನ್ನೊಮ್ಮೆ ನೆನೆಯುತ್ತಾಳೆ ರಸರೋಮಾಂಚನದಲ್ಲಿ–

ತಾಯಿ ಸರಸೋತಿ ಮೆಲ್ಲಮ್ಮ ರಾಜುಣವ
ಜಕ್ಕ ಜಕ್ಕನೆ ಉದುರವ್ವ – ನಮ್ಮನೆಯ
ತೆಂಗಿನ ಎಳೆಗಾಯ ಹೊಡೆದೇನು

ಅವಳ ಚಿರಂತನಸ್ಫೂರ್ತಿ ಹಲವು ಹಾಡಿನ ಅಲೆಗಳನ್ನು ಚಿಮ್ಮಿದೆ. ಅವಳ ಕರುಣೆಯ ಕಣ್ಣು ತೆರೆದು, ತನ್ನ ಬದುಕಿಗೆ ಆಸರೆಯಾಗುವ, ಜೀವ ಜೀವಾಳವಾಗುವ, ತನ್ನ ಪಾವಿತ್ರ್ಯವನ್ನು, ಶೀಲವನ್ನು, ಬದುಕನ್ನು ಕಾಯುವ ರಕ್ಷಾಮಣಿಯಾಗುವ ವಾಣಿಯೇ ಉಕ್ಕಂದವಾಗಿ ಹರಿಯುತ್ತದೆ. ಇತರರು ಮೆಚ್ಚಲು ತಾನು ಹಾಡಿದವಳಲ್ಲ; ಇತರರನ್ನು ತಿದ್ದಲು ತಾನು ಸೊಲ್ಲೆತ್ತಿದವಳಲ್ಲ. ತನ್ನ ಅಂತರಂಗದ ಬೆಳಕಿಗಾಗಿ, ತನ್ನ ಆತ್ಮೋನ್ನತಿಗಾಗಿ, ತನ್ನ ಆನಂದ ಉತ್ಸಾಹಕ್ಕಾಗಿ, ತನ್ನ ಆದರ್ಶಗಳನ್ನು, ಮೌಲ್ಯಗಳನ್ನು ಕಾಯ್ದುಕೊಳ್ಳುವುದಕ್ಕಾಗಿ.

ಅವಳ ಮನಸ್ಸೋ, ಮಲ್ಲಿಗೆಯ ಮುಗುಳು. ಆ ಮುಗುಳನ್ನು ಎಷ್ಟು ದೈವಗಳಿಗೆ ಅರ್ಪಿಸಿದರೂ ಸಾಲದು, ಎಳ್ಳು ಜೀರಿಗೆಯನ್ನು ಬೆಳೆಯುವ ಭೂಮಿ ತಾಯಿ, ಸಿದ್ಧರ ಮಡದಿ ಶಿವಶರಣೆ ನೀಲಮ್ಮ, ತನ್ನ ಪತಿ, ತಾಯಿ ತಂದೆಯವರು,

ಅತ್ತೆಮಾವಂದಿರು, ಗುರುಹಿರಿಯರು, ಸುತ್ತೆಂಟು ದೈವಗಳೂ ಮುಂಜಾವಿನಲ್ಲಿ ಅವಳ ಮಂಜುಳವಾಣಿಯಲ್ಲಿ ಸುಳಿದು ಹೋಗಬೇಕು.

ಮುಂಚೆ ನೆನೆದೇನು ಕಂಚಿಕಾಳೀಶ್ವರಿಯ
ಚುಂಚುನಗಿರಿಯ ಭೈರುವನ – ಮೂಡಿಬರುವ
ಕೆಂಚ ಸೋಲಿಗನ ನೆನೆದೇನು

ಅವಳ ಬದುಕು ಒಪ್ಪವಾದರೂ ಓರಣವಲ್ಲ; ಶ್ರಮಪೂರ್ಣವಾದರೂ ಸುಖದ ನಿರೀಕ್ಷೆಯಿಲ್ಲ. ಕ್ಲೇಶ, ಕಷ್ಟ, ದಾರಿದ್ರ್ಯಗಳ ನಡುವೆಯೂ ಶಾಂತಿಯಿಂದ, ನೆಮ್ಮದಿಯಿಂದ, ಸಹನೆಯಿಂದ ಬದುಕುವ ಆತ್ಮಶಕ್ತಿ ತನ್ನದಾಗಬೇಕು. ಕಲ್ಲ ಹಿಡಿಯುವ ಕಾಯಕದ ಮೂಲಕ ಮಹಾಮಹಿಮರನ್ನೆಲ್ಲಾ ನೆನೆಯಬೇಕು – ಒಂದೊಂದು ಆದರ್ಶಕ್ಕಾಗಿ, ಒಂದೊಂದು ಪವಿತ್ರ ಉದ್ದೇಶಕ್ಕಾಗಿ ಬದುಕಿಹೋದವರ ಸ್ಮರಣೆಗೂ ಇದು ನೆಲೆಯಾಗಬೇಕು. ಕೈಗೆ ಕಲ್ಲನ್ನು ಹೂಡಿಕೊಟ್ಟು, ಅಂತರಂಗದ ಕೃಷಿಗೆ ಹಾದಿ ಮಾಡಿಕೊಟ್ಟ ತನ್ನಮ್ಮನಿಗೆ ತಾನು ಋಣಿ.

ಕಲ್ಲ ಕೊಟ್ಟಮ್ಮಗೆ ಎಲ್ಲ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ – ನಮ್ಮನೆಯ
ಮಲ್ಲಿಗೆ ಮುಡಿಯೊ ಸೊಸೆಬರಲಿ

ಆ ಹಂಬಲದಲ್ಲಿ, ಆ ಹಾರೈಕೆಯಲ್ಲಿ ಕಲ್ಲನ್ನು ನಡೆಸಿದ ತನ್ನಲ್ಲಿ ನಿರಾಶೆಯಿಲ್ಲ. ನಿರುತ್ಸಾಹವಿಲ್ಲ. ಅದೊಂದು ಪವಿತ್ರ ಕಾಯಕ, ತನ್ನ ಬದುಕಿನ ಮೂಲಮಂತ್ರ, ತನ್ನ ಸಾಧನೆಯ ಸ್ಥಿರದೀಪಸ್ತಂಭ ಎಂಬೆಲ್ಲ ಅರಿವು ಅವಳಲ್ಲಿದೆ. ಎಂತಲೇ ಮುಂಜಾವದ ಮಬ್ಬಿನಲ್ಲಿ ಎಲ್ಲರಿಗೆ ಮುನ್ನ ತಾನೆದ್ದರೂ ಅವಳಿಗೆ ಮುಜುಗರವಿಲ್ಲ. ಲವಲವಿಕೆ ತುಂಬಿತುಳುಕಿದೆ. ಕಲ್ಪನೆಯ ಎಳೆಗಳನ್ನು ನೇದು ತನ್ನದೇ ಆದ ವಿಶಿಷ್ಟ ಭಾವಪ್ರಪಂಚಕ್ಕೆ ಕರೆದೊಯ್ದಿದೆ ಅವಳ ಮುಗ್ಧ ಮನಸ್ಸು.

ಬೀಸೋ ಕಲ್ಲಿಗೆ ಹಾಸಿದೆ ಮುಂಜೆರಗ
ದೇಶದ ಮೇಲವರೆ ಏಳು ಮಂದಿ – ಅಣ್ಣದಿರು
ದೆಸೆವಂತರಾಗಿ ಬದುಕಲಿ

ಅವಳ ಪ್ರೀತಿ, ಔದಾರ್ಯ ಅವಳಿಗೇ ಮೀಸಲಾದುದು. ಅವಳ ಹೃದಯ ಹದಗೊಳ್ಳಲು, ಅವಳ ಮನ ಮೃದುವಾಗಲು, ಹಲವು ದಿಕ್ಕಿನಿಂದ ಶಕ್ತಿಯನ್ನು ಹೀರುವ ಚೇತನ ತನ್ನದು. ತನ್ನ ತೌರಿನಿಂದ ತಾನು ಪಡೆದ ಋಣದ ಅರಿವು ಅವಳಿಗಿದೆ. ಎಂತಲೇ –

ಹಾಲುಂಡ ತವರಿಗೆ ಏನೆಂದು ಹಾಡಲೆ
ಹೊಳೆದಂಡೆಲಿರುವ ಕರಕೀಯ – ಕುಡಿಯಂಗೆ
ಹಬ್ಬಲಿ ಅವರ ರಸಬಳ್ಳಿ

ತನ್ನ ತಾಯಿ, ತನ್ನ ತಂದೆ, ಅಣ್ಣ ತಮ್ಮಂದಿರ, ಅಕ್ಕತಂಗಿಯರ ನೆನಹೇ ಒಂದು ದಿನನಿತ್ಯದ ಸ್ಫೂರ್ತಿ, ಬದುಕಿನಲ್ಲಿ ಹಲವು ಕನಸು ಕಟ್ಟುವ ಹೆಣ್ಣಿಗೆ. ತೌರು ದೂರವಿದ್ದರೇನು, ತೌರವರು ವರ್ಷಕ್ಕೊಮ್ಮೆ ಬಂದರೂ ಏನು. ಪತಿಯೂರಿನಲ್ಲೆ ಬೆಳಗಿನ ಪ್ರಶಾಂತ ವಾತಾವರಣದಲ್ಲೇ ನಿತ್ಯವೂ ತೌರನ್ನು ಚಿತ್ರಿಸಿಕೊಂಡು ನಲಿಯುವ ಆನಂದ ಅವಳೊಬ್ಬಳದು ಮಾತ್ರ. ತಾಯಿಯನ್ನು ನೆನೆದಾಗ ಮನ ಉಬ್ಬಿ ಹೋಗುತ್ತದೆ. ಕಲ್ಲಮ್ಮ ತಾಯಿ ಭಾವನೆಗೆ ಪುಷ್ಟಿ ಕೊಡುವಲ್ಲಿ ಮೈಮರೆತು ಹಾಡುತ್ತಾಳೆ.

ಕಾಶೀಗೆ ಹೋಗಲಿಕೆ ಏಸೊಂದು ದಿನ ಬೇಕು
ತಾಸ್ಹೊತ್ತಿನ ಹಾದಿ ತೌರೂರು – ಮನೆಯಾಗೆ
ಕಾಶಿ ಕುಂತವಳೆ ಹಡೆದವ್ವ!

ತಾಯಿಯ ಬಗೆಗಿನ ಉದಾತ್ತವಾದ, ಬಂಧುರವಾದ, ಮನೋಜ್ಞ ಕಲ್ಪನೆಗೆ, ತಾನೆ ತಲೆದೂಗಿ ಕಂಬನಿದುಂಬಳೇ! ಆ ಹಡೆದವ್ವನ ಒಂದು ಹರಕೆಯ ಶಿಶು ತಾನು. ಅವಳ ಆತ್ಮ ಜ್ಯೋತಿಯ ಕುಡಿ. ಸಾಕಿ, ಸಲಹಿ ತನಗಾಗಿ ಎಷ್ಟೆಷ್ಟೊ ಕಷ್ಟ ಕಹಿಗಳನ್ನುಂಡ ಆ ತಾಯಿಯನ್ನು ಹಂಬಲಿಸುವ ತನ್ನ ಮನ ಮಣಿಯುತ್ತದೆ ಗೌರವ ಭಾವದಲ್ಲಿ.

ಬೀಸುತ್ತ ಬೀಸುತ್ತ ತೇಲುತ್ತದೆ ಅವಳ ಕಲ್ಪನೆ ಹಲವು ಪುಣ್ಯ ಚೇತನರ ಸ್ಮರಣೆಯ ದಿಕ್ಕಿನಲ್ಲಿ. ಸಿರಿವಂತ ಪಾಂಡವರು ಧರ್ಮಕ್ಕಾಗಿ, ಸತ್ಯಕ್ಕಾಗಿ, ನ್ಯಾಯಕ್ಕಾಗಿ ಬದುಕಿಹೋದವರು. ಹಲವು ಕಷ್ಟಗಳನ್ನು ಸಹಿಸಿ ನೊಂದವರು. ಸಿರಿಸಂಪತ್ತಿನ ಆಗರದಲ್ಲಿ ಸುಖಲೋಲುಪರಾಗಿರಬೇಕಿದ್ದ ಅವರು ಅದೆಂಥ ಘೋರ ವನವಾಸವನ್ನು ಕಾಣಬೇಕಾಯಿತು. ಅವರೆಲ್ಲೋ ಯಾವುದೋ ಪುರಾಣ ಪ್ರಪಂಚದಲ್ಲಿದ್ದು ಮರೆಯಾದವರಲ್ಲ. ಆ ದಿವ್ಯ ಮಹಿಮರು ಸದಾ ಸುತ್ತಣ ಪ್ರಕೃತಿಯಲ್ಲೇ ನಿಂತು ಲೋಕದಲ್ಲಿ ನೊಂದವರನ್ನು ಸಂತೈಸುವರೇನೊ!

ಸತ್ಯವುಳ್ಳ ಪಾಂಡವರು ಸತ್ತರು ಎನದಿರಿ
ಸತ್ತರೆ ಲೋಕ ಉಳಿಯದು – ಪಾಂಡವರು
ಬಿತ್ತಿ ಹೋಗವರೆ ಅವರೇಯ

ಸತ್ಯವಂತರಿಗೆ ಸಾವಿಲ್ಲ. ಅವರು ನಿಂತ ನೆಲೆಯುಂಟು, ಕುಳಿತ ಎಡೆಯುಂಟು. ತಂಗಿದ್ದ ಗವಿಗಳೂ ಉಂಟು. ಅಟ್ಟುಂಡ ಕುರುಹುಗಳೂ ಉಂಟು. ಆ ಪುಣ್ಯಾತ್ಮರ ಪುಣ್ಯಚರಿತೆಯನ್ನು ಉಲಿಯುತ್ತವೆ ಶಿಲೆಶಿಲೆಯೂ

ಆಲತಿ ಕಲ್ಲಿನಲ್ಲಿ ಇದ್ದರು ಧರುಮರು
ಹಾಲು ಸಕ್ಕರೆ ನಗರೀಯ – ಹಣ್ಣ ಮೆದ್ದು
ಅವರಿದ್ದಾರಾಲತಿ ಕಲ್ಲಿನಲ್ಲಿ

ಕಡುಕಷ್ಟವನ್ನೇ ಅವರು ಕಂಡರು. ನಿರ್ಗತಿಕರಂತೆ ಕಾಡಿನ ಗಿಡಗೆಡ್ಡೆಗಳಿಂದ ಬದುಕನ್ನು ಹೊರೆದರು. ಅಡವಿಯ ಸೊಪ್ಪನ್ನು ಮಡಿಲೊಡ್ಡಿ ಕುಯ್ದು, ಕುಂತಿಯ ಪುತ್ರರೈವರೂ ಮೂಟೆ ಮೂಟೆಯಲ್ಲಿ ಹೊತ್ತರು!

ಪಾಂಡವರು ಎಂದೂ ಸುಖವನ್ನೇ ಕಂಡವರಲ್ಲ. ಹುಟ್ಟಿದಂದಿನಿಂದಲೂ ಸಾಲು ದೀವಿಗೆಯ ಸಡಗರವನ್ನೇ ಅವರು ಕಂಡವರಲ್ಲ, ಶೂರರಾದ, ಮಹಾ ಸತ್ವರಾದ ಮಕ್ಕಳನ್ನು ಹಡೆದೂ 'ಕುಂತ್ಯಮ್ಮ' ಸುಖವೆಂಬುದನ್ನು ತಾನು ಕಾಣದಾದಳು. ಮಕ್ಕಳ ಜೊತೆಯಲ್ಲಿ ತಾಯಿಯೂ – ನೊಂದಳು, ಬೆಂದಳು, ಪರಿಪರಿಯ ಕಷ್ಟದಲ್ಲಿ ತೊಳಲಿದಳು.

ಕೊಂತ್ಯಮ್ಮ ಕೊಟ್ಟಣ ಕುಟ್ಟಿ ಭೀಮ ಭಿಕ್ಷೆಯ ಬೇಡಿ
ಅವರರುಜುನರಾಯ ಕರುಕಾದು – ಕಂಬಳಿ ಹೊದ್ದು
ಎಂಥೋರಿಗೆಂಥ ವನವಾಸ
ಎಂಥೋರಿಗೆಂಥ ವನವಾಸ ಬಂತೆಂದು
ಚಿಂತೆಮಾಡ್ಯಾಳೆ ಶಿವನಿಗೆ

ಪ್ರಶಾಂತರಾತ್ರಿಯ ಕಲ್ಲೆದೆಯೂ ಕರಗಿ ಹನಿಯುವಂತೆ, ಪಾಂಡವರ ಧಾರುಣಜೀವನವನ್ನು ನೆನೆದಷ್ಟೂ ಕಂಬನಿದುಂಬಿ ಬರುತ್ತದೆ. ಧರ್ಮಾತ್ಮರಾದ ಅವರ ನೋವು, ಅವರ ಸಂಕಷ್ಟಗಳೆಲ್ಲ ಲೋಕದ ಜೀವಿಗಳಿಗೊಂದು ಆತ್ಮಶಕ್ತಿಯನ್ನು ಗಳಿಸಿಕೊಡಬೇಕು. ಅವರ ಕಷ್ಟವನ್ನು ನೆನೆಯುತ್ತ ನೆನೆಯುತ್ತ ತಮ್ಮ ನೋವನ್ನು ಮರೆಯಬೇಕು.

ಕುಂತಿಯ ನಿಟ್ಟುಸಿರು ಶಿವನನ್ನೂ ಮುಟ್ಟಲಿಲ್ಲ! ಸಿರಿವಂತರು, ಗರ್ವಿಗಳು ಅವರ ಪರಿಯನ್ನು ನೋಡಿ ನಕ್ಕಾರು! ಕಷ್ಟಪರಂಪರೆಗಳ ಸುಳಿಯಲ್ಲಿ ಸಿಕ್ಕರೂ ಇತರರು ಅರಿಯಬಾರದು, ಅವರ ಕಣ್ಣಲ್ಲಿ ಹಗುರವಾಗಬಾರದು. ಕಷ್ಟವನ್ನು ಕೊಟ್ಟು ಶಿವ ಪರೀಕ್ಷಿಸಿ ನೋಡುವನೇನೊ. ಸಹನೆ, ಸಹಿಷ್ಣುತೆಗಳೇ ಬದುಕಿನ ಊರೆಗೋಲಾಗಬೇಕು.

'ಕುಂತ್ಯಮ್ಮ'ಗೆ ತಾನೇ ಹೇಳುತ್ತಾಳೆ –

ಚಿಂತ್ಯಾಕ ತಾಯಿ ಶಿವಕೊಟ್ಟ ಬಡಸ್ತನ
ಚಿಂತೆಗೆ ಮನಸು ಇಳಿದರೆ – ಆಚೆಗೆ
ಸಂತೋಷದವರು ನಗುತಾರೆ
ಸಂತೋಷದವರು ನಗುತಾರೆ ತಾಯಮ್ಮ
ಸಂತೋಷವಿರಲೆ ಮನದಲ್ಲಿ

'ಧರ್ಮರ ಪದ' ಪಾಂಡವರ ಸಾಹಸವನ್ನು ಬಣ್ಣಿಸುವ ಕಥೆಯಲ್ಲ. ಅವರ ವ್ಯಥೆಯನ್ನು ಚಿತ್ರಿಸುವ ಹಾಡು. ಅವರ ಕಷ್ಟದ ವಿವಿಧ ಮುಖಗಳನ್ನು ಮನೋಜ್ಞವಾಗಿ, ಸವಿಸ್ತಾರವಾಗಿ ಬಣ್ಣಿಸುವ ಸುಂದರ ಭಾವಗೀತೆಯದು.

ಪುರಾಣ ಪ್ರಪಂಚದ ಪ್ರಸಿದ್ಧಪುರುಷರೇ ತನಗೊಂದು ಮಾದರಿಯಾಗಬೇಕಿಲ್ಲ, ಆ ಮುಗ್ಧೆಗೆ. ತನ್ನಂತೆಯೇ, ತನ್ನ ಸುತ್ತಮುತ್ತಣ ಸಮಾಜದಲ್ಲಿಯೇ, ಬದುಕಿ ಹೋದ ಅಜ್ಞಾತಜೀವಿಗಳೆಷ್ಟೋ ಬದುಕಿನಲ್ಲಿ ದುರ್ಭರ ಕಷ್ಟಗಳನ್ನು ಕಂಡಿದ್ದಾರೆ. ಕಷ್ಟಗಳು ಬರವೆಂದಲ್ಲ, ಬಂದ ಕಷ್ಟಗಳನ್ನು ಅವರೆಂತು ಕೊಂಡರು ಎನ್ನುವುದನ್ನು ಕಾಣುತ್ತದೆ ಇವಳ ಮನಸ್ಸು. ಅವರ ಮನಸ್ಸಿನ ಸ್ಥೈರ್ಯ, ಅವರ ತ್ಯಾಗ, ಅವರ ಬಲಿದಾನ ಇವಳಿಗೊಂದು ಮರೆಯಲಾಗದ ಮುದ್ರೆಯನ್ನು ಮನಸ್ಸಿನ ಮೇಲೆ ಬಿತ್ತದಿರದು. ಕಲ್ಲಮ್ಮ ತಾಯಿ ಆ ಎಲ್ಲ ಪವಿತ್ರಾತ್ಮರ ಸೊಲ್ಲನ್ನೂ ಎತ್ತಿಕೊಟ್ಟು ಮತ್ತೆ ಮತ್ತೆ ತಿದ್ದಿದ್ದಾಳೆ, ಇವಳ ರೀತಿಯನ್ನು, ಇವಳ ನೀತಿಯನ್ನು.

ಅಣಜಿಯ ಹೊನ್ನಮ್ಮ, ಹುಳಿಯಾರು ಕೆಂಚಮ್ಮ, ತಮ್ಮ ಬಲಿದಾನದಿಂದಲೇ ದೇವತೆಗಳಾದರು. ಲೋಕ ಬದುಕಲು ಕೆರೆ ಉಳಿಯಬೇಕು. ಕೆರೆ ಉಳಿಯಲು ತಾವು ಬಲಿಯಾಗಬೇಕು. ಅಳುವ ಕಂದ ತೊಟ್ಟಿಲಲ್ಲಿದ್ದರೇನು, ನಲ್ಮೆಯ ಗಂಡ ದಂಡಿಗೆ ಹೋಗಿದ್ದರೇನು, ತಾನೊಂದು ಪವಿತ್ರ ಉದ್ದೇಶಕ್ಕೆ ಆತ್ಮಾರ್ಪಣೆ ಮಾಡಿದಾಗ ಅದು ಎಂಥ ತ್ಯಾಗವಾದೀತು, ಎಂಥ ಆದರ್ಶವಾದೀತು!

ಪರೋಪಕ್ಕಾರಕ್ಕಾಗಿ, ಲೋಕೋದ್ಧಾರಾರ್ಥವಾಗಿ ತನುವನ್ನರ್ಪಿಸಿದವರ ಮಾತಂತಿರಲಿ, ತನ್ನಂಥ ಹೆಣ್ಣು ಹಲವು ಕೌಟುಂಬಿಕ ವಿರಸಗಳಲ್ಲಿ ತೊಳಲಿದ, ಬಳಲಿದ, ಬೆಂದ, ಬೇಸತ್ತ ಪ್ರಸಂಗಗಳೆಷ್ಟು! ಆ ಅಸಹಾಯಕ ಹೆಣ್ಣುಗಳ ಒಂದೊಂದು ನೆನಪೂ ಹೃದಯವನ್ನು ಹಿಂಡುತ್ತದೆ. ತನಗೊಂದು ಸ್ಥೈರ್ಯವನ್ನು, ತನಗೊಂದು ಬೆಳಕನ್ನು ನೀಡುತ್ತದೆ. ಉತ್ತರದೇವಿ, ಹೊನ್ನಾಲದೇವಿಯರ ಕಥೆಯನ್ನು ತಾನರಿಯಳೇ. ಅತ್ತೆಯ ಆಗ್ರಹಕ್ಕೆ ತುತ್ತಾದ ಉತ್ತರದೇವಿ ಕಂದಮ್ಮನನ್ನು ಎತ್ತಿಕೊಂಡು ಬೆಳ್ಳಿಯ ಬೆಳಕಿನಲ್ಲಿಯೇ ಗಂಡನ ಮನೆಯನ್ನು ತೊರೆದಾಗ ಕರೆದ ಕಣ್ಣೀರೆಷ್ಟು. ದಾರಿ ತೋರದೆ ಬಂದ ಮಗಳನ್ನು ಕರೆದು ಸಂತೈಸದೆ, ಬಾಗಿಲುಗಳನ್ನು ತೆರೆಯದೆ ನಿರ್ದಯೆಯಿಂದ ತೌರವರೂ ವರ್ತಿಸಿದಾಗ ಅವಳು ಅಂತ್ಯವನ್ನು ಕಂಡ ರೀತಿ ಯಾರ ಮನಸ್ಸನ್ನು ಕಲಕದು!

ಈರೋಬಿಯ ಕಥೆಯನ್ನು ತಾನು ಹಾಡಿಕೊಂಡಾಗಲೆಲ್ಲ ಮರುಗಳೇ, ತಿಳಿಮನಸ್ಸಿನ ಈ ಗರತಿ. ಈರೋಬಿಯಂಥ ಅದೃಷ್ಟ ಹೀನ ಹೆಣ್ಣಾದರೂ ಯಾವುದಿದೆ ಈ ಲೋಕದಲ್ಲಿ. ತನ್ನ ಮುದ್ದು ಮಡದಿ ಗರ್ಭಿಣಿ. ಅವಳಿಗೊಂದು ಚಿನ್ನದ ಹರಿವಾಣವನ್ನು ತರಬೇಕು, ಎಂದು ಹೊರಟ ಪ್ರೀತಿಯ ನಲ್ಲ ಶೆಟ್ಟಿಶಂಕರರಾಯ. ಹೋದವನು ಬರಲಿಲ್ಲ. ಮುಂಗೋಳಿ ಕೂಗಿ, ಮೂಡುಕೆಂಪೇರುವ ವೇಳೆಗೆ ಬಂದಿತೊಂದು ಘೋರ ವಾರ್ತೆ:

ಮಲಗಿದ್ದ ಹುಲಿಯನ್ನು ಕೆಣಕಿ ಶಂಕರರಾಯ ಅಸುವನ್ನು ನೀಗಿದ್ದ! ಸುದ್ದಿ ಬಂದಿತು. ರಕ್ತಸಿಕ್ತ ವಸ್ತುಗಳೂ ಬಂದುವು. ಗುರುತನ್ನು ನೋಡಿ ಈರೋಬಿ

ಹೊರಟಳು ತನ್ನ ಪತಿಯ ದಾರಿಯಲ್ಲೇ! ಯಾರೂ ಅವಳನ್ನು ಉಳಿಸಲಾಗಲಿಲ್ಲ. ಹಡೆದ ತಾಯಿಯ ನುಡಿಯೂ ಅವಳ ದೃಢವಾದ ನಿಲವನ್ನು ಕಲಕಲಿಲ್ಲ.

ತಾಯಮ್ಮ ಬಂದವಳೆ ಹಾಲನ್ನೆ ತಂದವಳೆ
ಹಾಲಿಗಿಂತ ಮೇಲೆ ಎದೆಹಾಲು – ತಕ್ಕೊಂಡು
ನಿಮ್ಮವ್ವ ಬಂದವಳೆ ಮೊಕತೋರೆ

ಈರೋಬಿ ಕದಲಲಿಲ್ಲ –

ಅವ್ವನಾರ ಬರಲಿ ಹಾಲನಾರ ತರಲಿ
ಹಾಲಿನಂತೇ ಬದುಕು ಅಡವೀಲಿ – ಈಡಾಡುವಾಗ
ನಮ್ಮವ್ವನ ಗೊಡವೆ ನನಗೇನು।

ಅವಳ ಸಂಕಟ ಹೆಚ್ಚು. ಅವಳ ಕಳವಳ ಹೆಚ್ಚು. ತನ್ನ ಸುಂದರವಾದ ಬದುಕು ಅಡವಿಯಲ್ಲಿ ಈಡಾಡಿದೆ. ಕನಸೆಲ್ಲ ಒಡೆದು ಚೂರಾಗಿದೆ! ಅವಳಂಥ ದುಃಖಿ ಉಂಟೆ ಲೋಕದಲ್ಲಿ!

ಗೊಲ್ಲರ ನಾಗವ್ವನ ಕಥೆ ಇನ್ನೂ ಮಾರ್ಮಿಕವಾದುದು. ಮದುವೆಗೆ ಮುನ್ನವೇ ವೈಧವ್ಯವನ್ನು ಕಂಡವಳವಳು. ಎಳೆಯ ಬಾಲೆ ನಾಗವ್ವನನ್ನು ಚಿಂದಯ್ಯನಿಗೆ ಕೊಟ್ಟು ನಾಳೆಯೇ ಲಗ್ನವಾಗಬೇಕು. ಆದರೆ ಆ ರಾತ್ರಿ ಉಗುರೆಣ್ಣೆ ಮೀಯುವಾಗ ಚಿಂದಯ್ಯ ಕಾಡಿಗೆ ಹೋಗಬೇಕಾಯಿತು. ಬೇಡರು ಆಡನ್ನು ಕದ್ದಿದ್ದರು. ಇತ್ತ ನಾಗವ್ವ ಬಳೆ ತೊಡುವಾಗ 'ಬೆಕ್ಕು ಸೀತು', 'ಅರೆಬಳೆಗೆ ಲಗ್ನ ಒದಗಿದ್ದವು!' ಊಹಿಸಿದ್ದಂತೆ ಆಯಿತು. ಯಾವುದೋ ಘೋರ ದುರಂತ ನಾಗವ್ವನ ಬದುಕನ್ನು ಕಬಳಿಸಲು ಕಾದಿತ್ತು. ಕಾಡಿಗೆ ಹೋದ ಚಿಂದಯ್ಯನನ್ನು ಬೇಡರು ಮೋಸದಿಂದ ಕೊಂದರು!

ನಾಗವ್ವ ಎದೆಗುಂದಲಿಲ್ಲ ಆ ಘೋರವಾರ್ತೆಗೆ! ಪತಿಯ ಜೊತೆಯಲ್ಲೇ ಚಿತೆಯನ್ನೇರಲು ತೀರ್ಮಾನಿಸಿಕೊಂಡ ಅವಳ ಪರಿಗೆ ಬೆರಗಾದರು ನೆರೆದ ಮಂದಿ. ಚಿತೆ ಸಿದ್ಧವಾಯಿತು.

ಅತ್ತಿತ್ತ ನೋಡ್ಯಾಳೆ ಹತ್ಯಾಳೆ ಸತಿಕಲ್ಲ
ಹತ್ತಿರ ಬರುತಾರೆ ಅವರಪ್ಪ – ತಾಯಮ್ಮ
ಸಾವಿರ ಕೊಟ್ಟೇನು ಇರು ಮಗಳೆ !

ಸಾವಿರ ಹೊನ್ನಿನಾಸೆಗೆ ನಾಗವ್ವ ನಿಲ್ಲಲಿಲ್ಲ. ತನ್ನ ಪತಿಯ ದಾರಿ ತನ್ನದೆಂದು ಅರಿತ ಅವಳು ಮನಗೊಡಲಿಲ್ಲ ಯಾರ ಮಾತಿಗೂ –

ಸಾವಿರ ಕೊಟ್ಟರೆ ನನ್ನ ಕೊಪ್ಪಿನ ಬೆಲೆಯಿಲ್ಲ
ಅತ್ತೆಯ ಮಗನೆ ಚಿಂದಯ್ಯ – (ನಾ) ಕುಟ್ಟೆ
ನಾ ಹತ್ತೋದೆ ಲೇಸು ಒಡಗಿಚ್ಚ

ಎಳೆಯ ಬಾಳೆಯ ಸುಳಿಯಂತೆ 'ಒಡಗಿಚ್ಚಿ'ನಲ್ಲಿ ಅವಳ ಬದುಕು ಕರಗಿ ಕರಗಿ ಹೋಯಿತು!

> ಹೆಣ್ಣಿಗೆ ಮಣ್ಣು ಬಿದ್ದೋ ಕಣ್ಣಿಗೆ ಸೆತ್ತೆಬಿದ್ದೋ
> ಸಣ್ಣ ಸೀರೇಮೇಲೆ ಕಿಡಿಬಿದ್ದೊ – ನಾಗವ್ವನ
> ಹಣೆಗೆಂಟು ನಲುಗಿ ಉರಿದ್ಹೋದೊ!

ನಾಗವ್ವನ ರುದ್ರ, ಭೀಕರ ದುರಂತ ತಲ್ಲಣವನ್ನು ತರುತ್ತದೆ ಅರೆಕ್ಷಣ. ಅವಳ ಪತಿಭಕ್ತಿ, ಅನುಪಮ ಚಿತ್ತಸ್ಥೈರ್ಯಗಳು ಯಾರನ್ನೂ ಮೂಕಗೊಳಿಸುತ್ತವೆ!

ಅತ್ತೆಗೆ ಸೊಸೆಯಾಗಿ, ಗಂಡನಿಗೆ ಮಡದಿಯಾಗಿ, ಮೈದಯ್ಯನ ಅತ್ತಿಗೆಯಾಗಿ, ಎಲ್ಲದಕ್ಕಿಂತ ತುಂಬಿದ ಮನೆಯ ಸೊಸೆಯಾಗಿ ಬದುಕುವ ಹೆಣ್ಣಿನ ಕಷ್ಟ ಅಪಾರ! ಒಳಗೆ – ಹೊರಗೆ ಸದಾ ದುಡಿಯುವ ಅವಳಲ್ಲಿ ಅದೆಷ್ಟು ತಾಳ್ಮೆ, ಅದೆಷ್ಟು ಕಷ್ಟಸಹಿಷ್ಣುತೆ, ಅದೆಷ್ಟು ಮೃದುನಡೆ ತುಂಬಿ ತುಳುಕಬೇಕು. ಅವಳ ಒಂದು ತ್ಯಾಗ, ಅವಳ ಒಂದು ಶ್ರಮ, ಅವಳ ಒಂದು ಸಂಯಮವೇ ಹಳ್ಳಿಯ ಬದುಕಿನಲ್ಲಿ ಇನ್ನೂ ಉಳಿದಿರಬಹುದಾದ ಶಾಂತಿ ನೆಮ್ಮದಿಗಳಿಗೆ ಕಾರಣವೇನೋ! ಮನೆಯ ನಂದಾದೀಪವಾಗಿ ಸದಾ ನಲವನ್ನು ಚೈತನ್ಯವನ್ನು ತುಂಬುವ ಆ ತಾಯಿಗೆ ಸದಾ ಕರುಣೆಯ ಕಣ್ಣನ್ನು ತೆರೆದವಳೇ 'ಕಲ್ಲಮ್ಮ ತಾಯಿ'. ಅಲ್ಲಿಂದಲೇ ಆ ಸಾಹಿತ್ಯದ ಉಗಮ. ಅದೇ ಬದುಕಿನ ಉಸಿರು.

ಗ್ರಾಮ ಜೀವನದಲ್ಲಿ ಗಾದೆಗಳು

ಜನಸಾಮಾನ್ಯರ ನಿತ್ಯಬಳಕೆಯ ಮಾತಿನಲ್ಲಿ ಗಾದೆಗಳು ಬಿಳಲುಗಳಂತೆ ಹೆಣೆದುಕೊಂಡು, ಆ ಮಾತಿಗೆ ಒಂದು ಸತ್ವವನ್ನು ಒಂದು ತೀವ್ರತೆಯನ್ನು ನೀಡುವುದರಲ್ಲಿ ತಮ್ಮದೇ ಆದ ಪಾತ್ರವನ್ನು ಮೆರೆದಿವೆ. ಮಾತುಬಲ್ಲವನು, ಲೋಕ ವ್ಯವಹಾರವನ್ನು ತಿಳಿದವನು, ತನ್ನ ಮಾತಿಗೆ ವಿಶಿಷ್ಟ ಕಾಂತಿಯನ್ನು ತಂದುಕೊಡಲು, ಅನುಭವದ ಬತ್ತಳಿಕೆಯಿಂದ ಗಾದೆಗಳ ಅಸ್ತ್ರಗಳನ್ನು ತೆಗೆದು ನಿರಾಯಾಸವಾಗಿ ಪ್ರಯೋಗಿಸುವುದನ್ನು ನೋಡಿದರೆ ಅಚ್ಚರಿಯಾಗುತ್ತದೆ. ಅವನೇನು ತಾನಾಗಿಯೇ ಗಾದೆಗಳನ್ನು ಅರಸಿಕೊಂಡು ಹೋಗುವುದಿಲ್ಲ. ಉದ್ದೇಶವಿಟ್ಟು ಅವುಗಳನ್ನೇನೂ ಬಾಯಿಪಾಠ ಮಾಡಿಕೊಂಡೂ ಇರುವುದಿಲ್ಲ. ತಾನಾಗಿಯೇ ಅವನ್ನು ಸೃಜಿಸುವ ಗೋಜಿಗೂ ಹೋಗುವುದಿಲ್ಲ. ಅಲ್ಲಿ ಇಲ್ಲಿ ಅವನ ಕಿವಿಯ ಮೇಲೆ ಬಿದ್ದಿರುತ್ತವೆ. ಅವನ ಸ್ಮೃತಿಗುಹಾಂತರದಲ್ಲೆಲ್ಲೋ ಅಡಗಿದ್ದು, ಅವುಗಳ ಅವಶ್ಯಕತೆ ಕಂಡು ಬಂದಾಗ ತಾವಾಗಿಯೇ ಹೊರಬಂದು ಬಾರಿನ ಬಿಗಿತದಂತೆ ಚಟಾರನೆ ಸಿಡಿದು ಎದುರಾಳಿಯ ಬಾಯಿಮುಚ್ಚಿ ಬಿಡುತ್ತವೆ; ತಬ್ಬಿಬ್ಬಾಗಿಸುತ್ತವೆ. ತಮ್ಮ ಪ್ರಭಾವವನ್ನು ಬೀರಿ ಅವನ ಬುದ್ಧಿಯನ್ನು ತಿದ್ದುತ್ತವೆ; ಅವನನ್ನು ಜಾಗ್ರತಗೊಳಿಸುತ್ತವೆ.

ಲೌಕಿಕಾನುಭವದ ಅಡಿಗಲ್ಲಿನ ಮೇಲೆ ರೂಪಿತವಾದ ಈ ಗಾದೆಗಳು ಅನಾದಿ ಕಾಲದಿಂದಲೂ ಆಡುಮಾತಿನಲ್ಲಿ ಬೆರೆತು ಬಂದಿವೆಯೆನ್ನಬಹುದು. ಚಿಕ್ಕಚಿಕ್ಕ ಮಾತುಗಳಲ್ಲಿ ಅದೆಂಥ ಚೊಕ್ಕವಾದ ಅನುಭವದ ಮಿಂಚು ಅವುಗಳಲ್ಲಿ ಹುದುಗಿರುತ್ತದೆ. ಅದೆಂಥ ಚತುರತೆ, ಜಾಣ್ಮೆ ಪ್ರತಿಬಿಂಬಿತವಾಗಿರುತ್ತದೆ. ಅವುಗಳ ಧ್ವನಿಶಕ್ತಿ, ಪ್ರಾಸದ ಮೋಡಿ, ಬಿಗಿ, ಮೈಕಟ್ಟು, ಅಲಂಕಾರಾದಿಗಳನ್ನು ನೋಡಿದರೆ, ಅವುಗಳ ಕರ್ತೃ ನಿಜಕ್ಕೂ ಅಪೂರ್ವ ಪ್ರತಿಭಾಶಾಲಿಯೇ ಆಗಿರಬೇಕೆನಿಸುತ್ತದೆ. ಕಿರಿದರಲ್ಲಿ ಹಿರಿಯ ಅರ್ಥವನ್ನು ಅಡಕಮಾಡಿ ಹೇಳುವ ಆ ಶಕ್ತಿ, ಆ ಕೌಶಲ ಯಾರನ್ನು ಮೂಕ ವಿಸ್ಮಯರನ್ನಾಗಿ ಮಾಡವು! ಅವುಗಳ ಅಪೂರ್ವ ಸೌಂದರ್ಯ ಯಾರನ್ನು ತಲೆದೂಗಿಸವು! ಆ ಮಾತಿನ ಮೊನೆ, ಅದರ ಹಿಂದಿನ ಅರ್ಥ ವಿಸ್ತಾರ, ಅನೀತಿಯನ್ನು, ಅನ್ಯಾಯವನ್ನು ಖಂಡಿಸುವ ಬಗೆ – ಇವುಗಳಿಂದಾಗಿ ಅವು ವೇದಕ್ಕೆ ಸಮವೆಂಬ ಕೀರ್ತಿಗೂ ಭಾಜನವಾಗಿವೆ. ಜನತೆಯ ಒಂದು ವಿಶಿಷ್ಟ ಸಂಸ್ಕೃತಿಯೇ ಅವರಲ್ಲಿ ಅಡಗಿದೆ.

ಗಾದೆಗಳ ಬೆಡಗನ್ನು ಕಾಣಬೇಕಾದರೆ ಸುಸಂಸ್ಕೃತರೂ, ನಾಗರಿಕರೂ, ಸುಶಿಕ್ಷಿತರೂ ಆದ ಮಂದಿಯನ್ನು ಬಿಟ್ಟು ಅಶಿಕ್ಷಿತರಾದ ಜನಸಾಮಾನ್ಯರನ್ನು ಆಶ್ರಯಿಸಬೇಕು. ಅವು ಜನಸಾಮಾನ್ಯರಿಗಾಗಿ, ಜನಸಾಮಾನ್ಯರಲ್ಲಿಯೇ ಹುಟ್ಟಿ, ಜನಸಾಮಾನ್ಯರಲ್ಲಿಯೇ ಉಳಿದು ಬಂದಿವೆ. ಜನಸಾಮಾನ್ಯರ ಬದುಕಿಗೆ ದಾರಿದೀಪವಾಗಿವೆ, ಅವರ ಅಪೂರ್ವ ಆಸ್ತಿಯಾಗಿವೆ.

ಅವುಗಳಲ್ಲಿ ವಿಶಿಷ್ಟವೂ ಅಪೂರ್ವವೂ ಆದ ಗಾದೆಗಳನ್ನು ಕಾಣಬೇಕಾದರೆ ಗ್ರಾಮಾಂತರ ಪ್ರದೇಶಗಳಿಗೇ ಹೋಗಬೇಕು. ಹಳ್ಳಿಯ ಜನತೆಯೊಡನೆ ಬೆರೆತು, ಅವರ ಮಾತಿನ ಸೊಗಸನ್ನು ಗಮನಿಸುವ ಕಿವಿಗೆ ಹೆಜ್ಜೆಹೆಜ್ಜೆಗೂ, ಮೊನಚಾದ, ಪರಿಣಾಮಕಾರಿಯಾದ, ಸಂದರ್ಭೋಚಿತವಾದ ಗಾದೆಗಳ ದೀಪಗಣಿಗಲೆ ಅರಳಿ ನಿಲ್ಲುವುದನ್ನು ಸವಿಯುವ ಭಾಗ್ಯ ದೊರೆಯುತ್ತದೆ. ಅವರ ಜೀವನ ಕ್ರಮಕ್ಕೆ, ಅವರ ಸಂಸ್ಕೃತಿಗೆ, ಅವರ ರೀತಿ ನೀತಿಗಳಿಗೆ ಹಿಡಿದ ಕನ್ನಡಿಯಂತಿರುವ ಆ ಗಾದೆಗಳ ಸೊಬಗಿನ ಪೂರ್ಣ ಮಧುವನ್ನು ಪಡೆಯಲು ಸ್ವಲ್ಪಮಟ್ಟಿಗಾದರೂ ಗ್ರಾಮ ಜೀವನದ ಅನುಭವ, ಗ್ರಾಮ್ಯ ಭಾಷೆಯ ಪರಿಚಯ ಆವಶ್ಯಕವೆನಿಸುತ್ತದೆ. ಹಳ್ಳಿಯ ಗಾದೆಗಳು ಹಳ್ಳಿಗರ ಮಾತಿನಲ್ಲೇ, ಹಳ್ಳಿಯ ಜೀವನದ ಹಿನ್ನೆಲೆಯಲ್ಲಿಯೇ, ರಚಿತವಾಗಿರುವುದರಿಂದ ಅವುಗಳಲ್ಲಿನ ಪ್ರಾದೇಶಿಕತೆಯ ಸೊಬಗು, ಆಡುಮಾತಿನ ವೈಖರಿಯನ್ನು ತುಸು ಎಚ್ಚರಿಕೆಯಿಂದಲೇ ಗಮನಿಸಬೇಕಾಗುತ್ತದೆ. ಅವರ ಬಾಯಲ್ಲಿ ಹಾಗೆ ಸುಳಿದು ಮಾಯವಾಗುವ ಆ ಮಾತಿನ ಮಿಂಚು, ತನ್ನ ಬೆನ್ನಿನಲ್ಲಿ ಎಂಥ ಸಿಡಿಲನ್ನು ಹೊತ್ತು ತಂದಿರುತ್ತದೆ! ಎಂಥ ಅನುಭವದ ಅಪೂರ್ವ ಕೊಡುಗೆಯಾಗಿರುತ್ತದೆ.

ನೀಚರೂ, ದುಷ್ಟರೂ, ಗರ್ವಿಗಳೂ ಆದವರ ಸ್ನೇಹ ಎಷ್ಟೇ ಲಾಭಕಾರಿಯಾಗಿದ್ದರೂ ಹೇಯವಾದುದೆಂಬುದನ್ನು ಸೂಚಿಸಿ, ಸತ್ಸಹವಾಸದ ಮಹತ್ವವನ್ನು ಒತ್ತಿ ಹೇಳುವ ಸಂದರ್ಭದಲ್ಲಿ –

> "ಸಗಣಿ ಹೊರೋನ್ ಕೈಲಿ ಸರಸ ಆಡೋಕಿಂತ ಗಂಧದ್ಹುಡಿ ಮಾರೋನ್ಕೈಲಿ
> ಗುದ್ದಾಡೋದೆ ಲೇಸು"

ಎಂದು ಗಂಭೀರವಾಗಿ ಹೇಳಿಬಿಡುತ್ತಾರೆ. ಒಳ್ಳೆ ವ್ಯಕ್ತಿಗಳು ನಿಷ್ಠುರ, ನಿರ್ದಾಕ್ಷಿಣ್ಯ ಮನೋಭಾವದವರಾದರೇನು? ಅವರ ಸಂಪರ್ಕದಿಂದ ಎಂದಿಗೂ ಅಪಾಯವಿಲ್ಲ; ಅವರ ವ್ಯಕ್ತಿತ್ವದ ಮಹಿಮೆಯಲ್ಲಿ ನಮ್ಮ ಸ್ವಭಾವವೂ ತಾನಾಗಿಯೇ ಸಂಸ್ಕಾರವನ್ನು ಹೊಂದಿ ಸನ್ಮಾರ್ಗಗಾಮಿಯಾಗುತ್ತದೆ. ಗಂಧದ ಪುಡಿಯನ್ನು ಮಾರುವವನೊಡನೆ ಗುದ್ದಾಡಿದರೇನಂತೆ, ಮೈಗಿನಿತು ಸುಗಂಧವಾದರೂ ದೊರೆಯುತ್ತದೆ. ಸಗಣಿ ಹೊರುವವನ ಸ್ನೇಹದಿಂದ, ಅವನೊಡನೆ ಸರಸವಾಡುವುದರಿಂದ, ನಾವೂ ಕೊಳಕನ್ನು ಮೆತ್ತಿಕೊಳ್ಳಬೇಕು!

ಲೋಕದಲ್ಲಿ ಕೆಲವರಿರುತ್ತಾರೆ; ತಮ್ಮ ಸ್ಥಿತಿಯೇನು ತಮ್ಮ ಅಂತಸ್ತೇನು ಎಂಬುದರ ಪರಿವೆಯೇ ಇಲ್ಲದೆ ಬಡಾಯಿ ಮಾಡುತ್ತ ಆಡಂಬರವನ್ನು ತೋರುತ್ತಾರೆ! ತಮ್ಮ ಯೋಗ್ಯತೆಗೂ ಮಿೀರಿ ಮೋಜುಮಾಡಲು ಪ್ರಯತ್ನಿಸುತ್ತಾರೆ. ಯೋಗ್ಯರ ಕಣ್ಣಿಗೆ ಎಷ್ಟು ಹಾಸ್ಯಾಸ್ಪದವಾಗಿ ತೋರುತ್ತದೆ ಇದು!

"ಗಂಜಿ ಕುಡಿಯೋನಿಗೆ ಗಡ್ಡ ನೀವೊನೊಬ್ಬ!"

ಎಂದು ನಕ್ಕುಬಿಡುತ್ತಾರೆ! ಈ ಮಾತು ಮೋಜುಗಾರನ ಕಿವಿಗೆ ಬಿದ್ದರೆ ಪ್ರಾಣ ಕಳೆದುಕೊಳ್ಳಬೇಕು! ತನ್ನ ಹಾಸಿಗೆಯಿರುವಷ್ಟು ಕಾಲು ಚಾಚಲು ಅವನಿಗೇನು ಧಾಡಿ!

ಅಸಮರ್ಥರೂ, ಹೇಡಿಗಳೂ ಆದ ಮಂದಿ ತೂಕವಾಗಿ ನಡೆದುಕೊಳ್ಳುವುದಿಲ್ಲ. ದೊಡ್ಡ ಕಾರ್ಯಗಳನ್ನು ಮಾಡುವುದಿಲ್ಲ. ಮನೆಯ ಹೆಂಗಸನ್ನೋ, ತಮಗಿಂತ ದುರ್ಬಲರನ್ನೋ ದಂಡಿಸುವುದರಲ್ಲಿ ಮಾತ್ರ ಮಹಾಶೂರರು ಅವರು! ಶ್ರಮವಿಲ್ಲದುದೂ, ಶೀಘ್ರವಾಗಿ ಮುಗಿಯುವುದೂ, ಸುಲಭವಾದುದೂ ಆದ ಕೆಲಸಗಳನ್ನು ಮಾತ್ರ ಮಾಡಲು ಅಂಥವರು ಮುಂದು! ಇಂಥ ಸ್ವಭಾವ ಯಾರಿಗೆ ಬೇಸರವನ್ನು ತರದು!

"ಬಾಳೆ ಕಡಿಯೋಕೆ ನನ್ನ ಗಂಡ ಗೂಳಿಯ್ಹಂಗೆ"

– ಎಂದು ಹಂಗಿಸಿಯೇ ಬಿಡುತ್ತಾರೆ! ಬಾಯಿ ಮಾತ್ರ ಮುಂದಾಗಿ ಕೊಚ್ಚಿಕೊಳ್ಳುವ ಸ್ವಭಾವ ಅವನದಾದರೆ ಅದಕ್ಕೂ ಅಸ್ತ್ರವನ್ನು ಇಟ್ಟಿರುತ್ತಾರೆ. ಅವನ ಮಾತಿನಲ್ಲಿ ಅನಾಸಕ್ತಿಯನ್ನು ತೋರಿ, ಮುಖವನ್ನು ಮುರಿದುಕೊಂಡು ಒಮ್ಮೆ –

"ಬಡಾಯಿಕಾರನ ಮನೇಲಿ ಕುಡಿಯೋಕೆ ನೀರಿಲ್ಲ!"

ಎಂದು ವ್ಯಂಗ್ಯವಾಗಿ ನಕ್ಕರೆ, ಎಂಥ ಬಾಸುಂಡೆ ನುಲಿದುಕೊಳ್ಳುವ ಚಾಟಿಯ ಏಟು! ಮತ್ತೆ ಸೊಲ್ಲೆತ್ತಲು ಇನ್ನೆಲ್ಲಿಯ ನಾಲಗೆ ಅವನಿಗೆ!

ಸಕಾಲದಲ್ಲಿ ನೆರವಾದವರನ್ನು ಸ್ಮರಿಸಿಕೊಳ್ಳುವವರು ತೀರ ವಿರಳ. ಸ್ಮರಿಸಿಕೊಳ್ಳುವುದಂತಿರಲಿ, ತಮಗೆ ಉಪಕಾರಿಯಾದವರಿಗೇ ಕೃತಘ್ನರಾಗಿ ಅಪಕಾರವನ್ನು ಎಣಿಸುವ ಮಂದಿಯೂ ಇಲ್ಲದಿಲ್ಲ. ಅಂಥವರನ್ನು ಕಂಡಾಗ ಯಾರಿಗೆ ವ್ಯಥೆಯಾಗದು! ಸುತ್ತಮುತ್ತಿನ ಮಂದಿ ಕಣ್ಣುಮುಚ್ಚಿ ಕೂರುವುದಿಲ್ಲ.

"ಹಸಿದಿದ್ಕೆ ಬಿಸಿ ಮುದ್ದೆ ಕೊಡೋ ಹೊತ್ಗೆ ಎದ್ದು ಬಂದು ಎದೆಗೊದ್ದರಂತೆ!"

ಎಂದು ಅವನ ತಪ್ಪನ್ನು ಅವನ ಮುಖಕ್ಕೇ ಹಿಡಿದು ಹೀಯಾಳಿಸುತ್ತಾರೆ! ಅವನ ಅನೀತಿಯನ್ನು ಖಂಡಿಸಿ ಪೆಚ್ಚುಮಾಡುತ್ತಾರೆ! ಆದರೂ ಉಪಕಾರದ ಸ್ವಭಾವವುಳ್ಳವರು, ಧರ್ಮಬುದ್ಧಿಯವರು, ದಯಾಪರರೂ ಆದ ಮಂದಿ ಕಷ್ಟಕಾರ್ಪಣ್ಯಗಳಲ್ಲಿ

ಬಳಲುವವರನ್ನು ಕಂಡಾಗ ಹತ್ತಿರ ಹೋಗಿ, ಸಂತೈಸಿ ತಮ್ಮ ಕೈಲಾದ ನೆರವನ್ನು ನೀಡುತ್ತಾರೆ. ಜನ ಅಭಿಮಾನದಿಂದ –

"ಕಸ ಇದ್ದ ತಾವ ಬಸವಣ್ಣ"

ಎಂಬ ಉದಾತ್ತ ಹೋಲಿಕೆಯಿಂದ ಅವರ ಹಿತವನ್ನು ಕೊಂಡಾಡುತ್ತಾರೆ! ಯಾವ ಕಾರ್ಯವನ್ನು ಮಾಡಬೇಕಾದರೂ ಒಂದು ತಾಳ್ಮೆ ಬೇಕು, ಒಂದು ಸಂಯಮ ಬೇಕು – ಎಂಬುದು ಹಳ್ಳಿಗರ ಮನೋಧರ್ಮ. ಅವರಲ್ಲಿಯೂ ಕೆಲವು ಆತುರಗಾರರಿರುತ್ತಾರೆ. ತಾವು ಕೈಗೊಂಡ ಕೆಲಸವನ್ನು ತಮ್ಮೊಂದು ಅವಸರ ಮನೋಭಾವದಿಂದಲೇ ಕೆಡಿಸಿ ಕೈಸುಟ್ಟುಕೊಳ್ಳುತ್ತಾರೆ. ಅವರನ್ನು ನಿಂದಿಸಿ ಫಲವೇನು!

"ಆಗೋಗಂಟ ಇದ್ದೋರು ಆರೋಗಂಟ ಇರ್ಲಿಲ್ವಂತೆ!"

ಎಂಬ ಒಂದು ವ್ಯಂಗ್ಯೋಕ್ತಿಯಲ್ಲಿಯೇ ಮತ್ತೆ ದುಡುಕದಂತೆ ಮಾಡುತ್ತಾರೆ! ಅಡಿಗೆಯಾಗುವವರೆಗೂ ತೆಪ್ಪನಿದ್ದವರು, ಇನ್ನೆರಡು ನಿಮಿಷ ತಟ್ಟೆಯಲ್ಲಿ ಆರಿಕೊಳ್ಳುವುದಕ್ಕೂ ಅವಕಾಶ ಕೊಡದೆ ದುಡುಕಿದರೆ ಕೈಬಾಯನ್ನು ಸುಟ್ಟುಕೊಳ್ಳದಿರುತ್ತಾರೆಯೇ?

ಅನೇಕ ಅಸಹಾಯಕರನ್ನು ನೋಡಿ ಮರುಗಿ ನೆರವು ನೀಡುವ ಒಂದು ಗುಂಪಿನ ಜನವಿದ್ದರೆ, ಕೇವಲ ಬೆಣ್ಣೆಮಾತಿನಲ್ಲಿಯೇ, ತುದಿ ನಾಲಗೆಯ ಸಹಾನುಭೂತಿಯಿಂದಲೇ ಮರುಕವನ್ನು ನಟಿಸುವ ಇನ್ನೊಂದು ಗುಂಪಿನವರಿರುತ್ತಾರೆ. ನೆರವೀಯ ಬಲ್ಲ ಶಕ್ತಿ ತಮ್ಮಲ್ಲಿದ್ದರೂ ಸ್ವಾರ್ಥದ ಕೋಟೆಯ ಹಿಂದೆ ಅವಿತು ಅಪಾರ ಕರುಣಾಶಾಲಿಗಳಂತೆ ಮಾತಾಡಿ ಜನಮೆಚ್ಚಿಗೆಗೆ ಕೈ ಚಾಚಿದರೆ, ಜನರೇನು ದಡ್ಡರೇ!

"ಗಾಣಿಗಿತ್ತಿ ಅಯ್ಯೋ ಅಂದ್ರೆ ನೆತ್ತಿ ತಣ್ಣಗಾಯ್ತೇ!"

ಎಂದು ಟೀಕಿಸುತ್ತಾರೆ. ಎಣ್ಣೆ ಕಾಣದೆ ಕೆದರಿ ಧೂಳು ತುಂಬಿದ ತಲೆಯನ್ನು ಕಂಡು ಗಡಿಗೆಯ ತುಂಬ ಎಣ್ಣೆಯನ್ನು ಹೊತ್ತು ಮಾರುವ ಗಾಣಿಗಿತ್ತಿ, ಬಾಯಲ್ಲಿ ಮರುಕವನ್ನು ವ್ಯಕ್ತಪಡಿಸಿದರೆ ಆಯಿತೆ?

ಇನ್ನೂ ಕೆಲವರಿರುತ್ತಾರೆ. ಕೊಡುವುದರಲ್ಲಿ ಒಂದು ಇತಿಮಿತಿಯನ್ನು ಅರಿಯದೆ ತಾವೇ ಪೇಚಾಡುತ್ತಾರೆ – ಸಮಯ ಬಂದಾಗ. ದಾನಗುಣವಿರಬೇಕು. ಆದರೆ ಉಚಿತವರಿತು, ತನ್ನ ರಕ್ಷಣೆಯನ್ನು ನೋಡಿಕೊಂಡು ಮುಂದುವರಿಯದಿದ್ದರೆ ಅದೂ ದಡ್ಡತನವೇ! ಅಂಥವರ ಬಗ್ಗೆ ಸಹಾನುಭೂತಿಯನ್ನೇನೊ ತೋರಿದರೂ ಮತ್ತೊಮ್ಮೆ ಹಾಗೆ ಹಾದಿ ತಪ್ಪದಂತೆ ಎಚ್ಚರಿಸಬೇಕಾದುದೂ ಕರ್ತವ್ಯವೇ!

"ತನ್ನ ಮನೆ ಕದ ಕೊಟ್ಟು ಬೆಳ್ಗೂ ನಾಯ್ಹೊಡಿತಿದ್ರಂತೆ"

ಎಂಬ ಒಂದು ಧ್ವನಿಪೂರ್ಣ ನುಡಿಯ ಮುಂದೆ ಎಷ್ಟು ನೀತಿಯ ಮಾತುಗಳು ನಿಲ್ಲಬಲ್ಲವು! ಹೆರರಿಗೆ ನೆರವಾಗುತ್ತೇನೆಂದು ತನ್ನ ಮನೆಯ ಕದವನ್ನು ಕಿತ್ತುಕೊಟ್ಟು ಹಿಟ್ಟಿನಾಸೆಗೆ ಮತ್ತೆ ಮತ್ತೆ ನುಗ್ಗಿಬರುವ ನಾಯಿಗಳನ್ನು ನಿದ್ದೆಗೆಟ್ಟು ಕಾಯುವ ಮೂರ್ಖತನವೂ ಉಂಟೆ! ಇದೇ ಜಾತಿಯ ಇನ್ನೊಂದು ತೆರದ ಮಂದಿ ಇರುತ್ತಾರೆ. ದುರದೃಷ್ಟವಶದಿಂದ ನಷ್ಟಕ್ಕೊಳಗಾಗಿ ಉಳಿದುದರಲ್ಲಿಯಾದರೂ ನೆಮ್ಮದಿಯಿಂದಿರುವುದಿಲ್ಲ. ಅದನ್ನೂ ವ್ಯಯಮಾಡಿ ಹೋದುದರ ಪರಿಹಾರವನ್ನು ಹುಡುಕುವವರಿಗೆ ಏನೆನ್ನಬೇಕು?

"ಗಂಗಳ ಹೋಯ್ತು ಅಂತ ಚೆಂಬ್ ಕೊಟ್ ಕಣಿ ಕೇಳಿದ್ರಂತೆ"

ಎನ್ನುವ ಸಮಾಚಾರ ಅವರದು. ಗಂಗಳವೇನೋ ಕಳವಾಯಿತು; ಉಳಿದ ತಂಬಿಗೆಯನ್ನಾದರೂ ಸುರಕ್ಷಿತವಾಗಿಟ್ಟುಕೊಳ್ಳದೆ ಅದನ್ನು ಕೊಟ್ಟು ಕದ್ದವರಾರೆಂದು ಕಣಿ ಕೇಳುವ ಜನಕ್ಕೆ ಯಾರು ಬುದ್ಧಿ ಹೇಳಿಯಾರು!.

ಕೆಲಸಗಾಲದ ದಿನ; ಒಂದು ಗಳಿಗೆ ಕೂರಲು ಬಿಡುವಿಲ್ಲ; ಕೈತುಂಬ ಕೆಲಸ. ಅಂಥ ವೇಳೆಯಲ್ಲೂ 'ಕುಂತು ನಿಂತು' ಕಾಲಕಳೆಯುವವರಿರುತ್ತಾರೆ. ಕಾಡು ಹರಟೆಯಲ್ಲಿ ಮಗ್ನರಾಗಿ ಕೆಲಸ ಕಾರ್ಯಗಳನ್ನು ಮರೆಯುವವರಿರುತ್ತಾರೆ. ಅದನ್ನು ಕಂಡ ಹಿರಿಯರು ರೇಗುತ್ತಾರೆ. ಯಾರನ್ನೋ ಹೋಲಿಸಿ:

"ಕಂಡ್ಗ ಹೊತ್ಕೊಂಡು ಕಥೆ ಕೇಳ್ತಿದ್ರಂತೆ"

ಎಂದು ಟೀಕಿಸುತ್ತಾರೆ. ತಲೆಯಮೇಲೆ ಕಂಡುಗದಷ್ಟು ಹೊರೆಯನ್ನು ಹೊತ್ತು ಕಥೆಕೇಳುತ್ತಾ ನಿಲ್ಲುವ ಮೂರ್ಖತನವನ್ನು ಅವರು ಸಹಿಸರು!

ಮನೆಯಲ್ಲಿ ನೆಂಟರೂ ಗೇರೈಸಿಕೊಳ್ಳುತ್ತಾರೆ; ಹೊಸದರಲ್ಲಿ ಸೂಕ್ತ ಸತ್ಕಾರವೂ ದೊರೆಯುತ್ತದೆ. ಬಂದು ಒಂದೆರಡು ದಿನವಿದ್ದು ಹಿಂದಿರುಗಿದರೇನೋ ಸರಿಯೆ! ಆದರೆ ಅಲ್ಲಿಯೇ ಭದ್ರವಾಗಿ ನಿಂತು ಇಂದು ಹೋಗುತ್ತೇವೆ, ನಾಳೆ ಹೋಗುತ್ತೇವೆ, ಎಂದು ಕಾಲತಳ್ಳುತ್ತಿದ್ದರೆ ಯಾರಿಗೆ ಬೇಸರವನ್ನು ತರದು!

"ಸಾಯ್ತಿನಿ ಸಾಯ್ತಿನಿ ಅಂತ ಸಾವಿರ ಕೋಳಿ ತಿಂದ್ರಂತೆ"

ಎಂದು ಮನೆಯೊಡತಿ ನೆರೆಮನೆಯಾಕೆಯೊಡನೆ ಗೊಣಗಿಕೊಳ್ಳಬೇಕಾದ ಪರಿಸ್ಥಿತಿಯೇ ಬರುತ್ತದೆ. ಸಾಯುವ ಕೊನೆಯಲ್ಲಿ ಒಂದು ಕೋಳಿಯನ್ನಾದರೂ ತಿಂದು ಸಾಯಬಯಸಿ, ಸಾವಿರಕೋಳಿ ಮುಗಿಸಿಯೂ ಸಾಯದಿದ್ದರೆ ಹೇಗೆ!

ಹೀಗೆ ಅರ್ಥಪೂರ್ಣವಾದ, ಧ್ವನಿಪೂರ್ಣವಾದ, ಸಹಸ್ರಾರು ಗಾದೆಗಳು ಹಳ್ಳಿಗರ ಆಡುನುಡಿಯ ಸ್ವತ್ತಾಗಿವೆ. ಅವುಗಳ ಬಳಕೆಯಿಂದ ತಮ್ಮ ಬದುಕಿನ ಸ್ವಾರಸ್ಯವನ್ನು ವರ್ಧಿಸಿಕೊಂಡ ಪುಣ್ಯಭಾಗಿಗಳವರು! ಎದ್ದರೂ, ಕುಳಿತರೂ, ನಿಂತರೂ ಗಾದೆಯಿಲ್ಲದೆ ಅವರ ಮಾತು ಮುಂದುವರಿಯದು, ಅದು ತನ್ನ ಉದ್ದೇಶವನ್ನು

ಸಾಧಿಸದು. ತೀರ ಸಾಮಾನ್ಯವಾದ ನುಡಿಗಳಲ್ಲೇ ಅವರು ತೋರುವ ಲೋಕಾನುಭವ, ವ್ಯವಹಾರ ಕುಶಲತೆ, ನೀತಿಮಾರ್ಗಗಳು, ಅವರ ಸಂಸ್ಕೃತಿಯ ಸಾರವಾಗಿ, ಅವರ ಬದುಕಿನ ಬಂಗಾರವಾಗಿದೆ. ಮಾನವ ಸ್ವಭಾವದ ಎಳೆಎಳೆಯನ್ನೂ, ಹಿಂಜಿನೋಡಿ ಮನಶ್ಶಾಸ್ತ್ರಜ್ಞರೂ ಬೆರಗಾಗುವಂತೆ ಅವರು ಆಡಿರುವ ಮಾತುಗಳು ಅಮೃತ ಬಿಂದುಗಳು. ಹಳ್ಳಿಗರ ಗಾದೆಗಳಲ್ಲಿ ಎಷ್ಟೋ ಅಶ್ಲೀಲವಾದ ಗಾದೆಗಳಿರಬಹುದು. ಹುಲ್ಲು ಬಯಲಿನಲ್ಲಿ ಬೆಳೆದ ಮುಳ್ಳನ್ನು ಕಿತ್ತು ಹಾದಿ ಮಾಡಿಕೊಂಡರೆ ಅಲ್ಲಿರುವ ಸೊಬಗೆಷ್ಟು, ಸೌಂದರ್ಯವೆಷ್ಟು!

ಅಣ್ಣೆ ಸೊಪ್ಪು ತಿನ್ನಾಕು ಪುಣ್ಯ ಬೇಕು!
ಚಿಂತಿಲ್ಲದ ಮುಕ್ಕುಂಗೆ ಸಂತೇಲಿ ನಿದ್ದೆ ಬಂತು!
ಯಾಕೊಲ್ಲೆ ಗೌಡ ಅಂದ್ರೆ ಮನೇಲಿಲ್ದೆ ಒಲ್ಲೆ ಅಂದ್ನಂತೆ!
ಎಲ್ಲೋದೆ ಪಿಶಾಚಿ ಅಂದ್ರೆ ಬಂದೆ ಗಾವಾಕ್ಷಿಲಿ ಅಂತಂತೆ!
ಸುಂಡಕೆ ಸಿರಿ ಬಂದು ಗಂಜಿ ಗುಂಡೀಲಿ ಬಿತ್ತಂತೆ!
ಮುಂದಲಾರ ಎತ್ತಾಗ ಬೇಡ ಮೊದಲ ಮಗನಾಗಬೇಡ
ಆಳು ಪೆಡ್ಡ ಆದ್ರೂವೆ ಆಯುಧ ಚೆನ್ನಾಗಿರಬೇಕು
ಕತ್ತೆ ಕಂಡ್ಗ ಹೊತ್ರೂ ಶೆಟ್ಟಿ ಅನ್ನಿಸ್ಕೊಂಡೊತ್ತ?
ತನ್ನ ಕೇಡ್ ತನಗ್ತಿಂತು, ಅರಗು ಬಂಗಾರ ತಿಂತು
ಆಡಿಬಂದ ಕತ್ತೆ ಗೇದ್ ಬಂದ ಕತ್ತೆಗೆ ಝಾಡಿಸ್ತು!
ಊರೇಲಿ ಮಲ್ಗಿದ್ದು ಕಾಡೇಲಿ ಓಡಿದ್ರಂತೆ!
ಅಡವೀಲಿ ಬೆಳದಿಂಗಳ ಕಾಯ್ದಂಗೆ!
ಬರಿ ಮುಗ್ಲಿಗ್ ಕಡೆಯೆ ಬಡವರ್ಹುಡುಗಿ?

ಈ ಮುಂತಾದ ಗಾದೆಗಳ ಬೆಡಗಿಗೆ ಬೆರಗಾಗದವರಾರು? ಅವುಗಳ ಸೌಂದರ್ಯಕ್ಕೆ ಸೋಲದವರಾರು?

ಪರಿಸಮಾಪ್ತಿ

ಜನಪದ ಸಾಹಿತ್ಯವನ್ನು ಸಂಗ್ರಹಮಾಡುವುದೂ ಪ್ರಾದೇಶಿಕ ಭಾಷೆಗಳ ವೈಲಕ್ಷಣ್ಯಗಳನ್ನು ಗಮನಿಸಿ ಅವುಗಳ ಸ್ವರೂಪವನ್ನು ವರ್ಣಿಸುವುದೂ ಕನ್ನಡ ವಿದ್ವತ್ತಿನ ಮುಖ್ಯವಾದ ಅಂಗಗಳಾಗಿವೆ. ಈ ಕೆಲಸ ಕ್ಲೇಶಕರವಾದುದಾದರೂ ಅದಕ್ಕೆ ಪ್ರತಿಫಲವಾಗಿ ದೊರೆಯುವ ಆನಂದ ಸ್ಪೃಹಣೀಯವಾಗಿದೆ.

.... ಹೊಸನಾಗರಿಕತೆ ಹಳ್ಳಿಗಳಿಗೆ ನುಗ್ಗಿ ಅಲ್ಲಿನ ಜೀವನದ ಸಾರಸರ್ವಸ್ವವಾಗಿರುವ ಈ ಸಾಹಿತ್ಯ ಕುಸುಮವನ್ನು ಬಾಡಿಸುವ ಮುನ್ನವೇ ಅದರ ಸಂಗ್ರಹಣಕಾರ್ಯ ಆದಷ್ಟು ತ್ವರಿತವಾಗಿ ಮುಂದುವರಿಯಬೇಕು.

–ಡಿ.ಎಲ್.ಎನ್.

ಅಧ್ಯಕ್ಷ ಭಾಷಣ–೪೧ನೇ ಕನ್ನಡ ಸಾಹಿತ್ಯ ಸಮ್ಮೇಳನ

ಜನಪದ ಸಾಹಿತ್ಯ ಸಂಗ್ರಹಣೆಯಲ್ಲಿ ನಮ್ಮ ಹೊಣೆ

ಮಾನವನ ಅನುಭವಗಳ ಶ್ರೀಮಂತ ಭಂಡಾರವಾದ ಜನಪದ ಸಾಹಿತ್ಯ ಜನಾಂಗದ ಸಂಸ್ಕೃತಿಯ ಅಧ್ಯಯನಕ್ಕೆ ಅತ್ಯಮೂಲ್ಯವಾದ ಸಾಮಗ್ರಿ. ಸಾಮಾನ್ಯ ಜನತೆಯ ಬಾಳನ್ನು ರೂಪಿಸುವ ಈ ಸಾಹಿತ್ಯ ಆಧುನಿಕ ವಿದ್ವಾಂಸರ ಆಸಕ್ತಿಯನ್ನು ಸೆಳೆದಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಅವರ ಚಿತ್ತವೃತ್ತಿಗಳನ್ನೂ, ಆಚಾರ ವಿಚಾರಗಳನ್ನೂ ಸಮರ್ಪಕವಾಗಿ ಪ್ರತಿಬಿಂಬಿಸುವ ಈ ಸಾಹಿತ್ಯದ ಸಂರಕ್ಷಣೆಯ ಹೊಣೆ ಜನತೆಯನ್ನೂ ಸರ್ಕಾರವನ್ನೂ ಸಂಪೂರ್ಣವಾಗಿ ಅವಲಂಬಿಸಿರುತ್ತದೆ. ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು ಎನ್ನುವ ಅರಿವು ನಮ್ಮಲ್ಲಿನ್ನೂ ಮೂಡದಿರುವುದು ಶೋಚನೀಯ ವಿಷಯ!

ಪಾಶ್ಚಾತ್ಯದೇಶಗಳು ಈ ನಿಟ್ಟಿನಲ್ಲಿ ಕಳೆದ ಶತಮಾನದಿಂದಲೂ ಸಮರ್ಪಕವಾದ ರೀತಿಯಲ್ಲಿ ಕೆಲಸಮಾಡಿ ಇತರ ರಾಷ್ಟ್ರಗಳಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿವೆ. ಬ್ರಿಟನ್ನಿನಲ್ಲಿ ಕಳೆದ ಶತಮಾನದಲ್ಲಿ ಆರಂಭವಾದ ಜನಪದ ಸಾಹಿತ್ಯ ಚಳುವಳಿ ಯುರೋಪಿನ ಇತರ ರಾಷ್ಟ್ರಗಳಿಗೂ ವ್ಯಾಪಿಸಿತು. ಜನಪದ ಸಾಹಿತ್ಯ ಸಂಗ್ರಹಕ್ಕಾಗಿ, ಪ್ರಕಟಣೆಗಾಗಿ, ಪ್ರಸಾರಕ್ಕಾಗಿ, ಅನೇಕ ಸಂಘಸಂಸ್ಥೆಗಳು ಸ್ಥಾಪನೆಯಾದುವು. ಫ್ರಾನ್ಸ್, ಬೆಲ್ಜಿಯಂ, ಡೆನ್ಮಾರ್ಕ್, ಜರ್ಮನಿ ಮುಂತಾದುವು ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಅದ್ವಿತೀಯವಾದ ಸಾಧನೆಯನ್ನು ತೋರಿವೆ. ಇಂದು ವಿಶ್ವದ ಅತ್ಯಂತ ಪ್ರಮುಖರಾಷ್ಟ್ರಗಳಾದ ರಷ್ಯಾ, ಅಮೇರಿಕಾಗಳಲ್ಲೂ ಜನಪದ ಸಾಹಿತ್ಯಕ್ಕೆ ಮೀಸಲಾದ ಅನೇಕ ಪತ್ರಿಕೆಗಳೂ, ಸಂಶೋಧನಾ ಕೇಂದ್ರಗಳೂ ಅಲ್ಲಿ ಗಮನಾರ್ಹವಾದ ಕೆಲಸ ಮಾಡುತ್ತಿವೆ.

ಭಾರತೀಯ ಜನಪದ ಸಾಹಿತ್ಯವನ್ನು ವಿಶ್ವಕ್ಕೆ ಮೊದಲು ಪರಿಚಯಮಾಡಿಕೊಟ್ಟ ಕೀರ್ತಿ ಪಾಶ್ಚಾತ್ಯ ವಿದ್ವಾಂಸರಿಗೇ ಸಲ್ಲಬೇಕು. ಕಳೆದ ಶತಮಾನದಲ್ಲಿಯೇ ಅಲ್ಲಿಷ್ಟು ಇಲ್ಲಿಷ್ಟು ಭಾರತೀಯ ಜನಪದ ಸಾಹಿತ್ಯ ಸಂಗ್ರಹಿತವಾಗುವ ಸೌಭಾಗ್ಯ ಒದಗಿಬಂದು, ಭಾರತ, 'ಜನಪದ ಸಾಹಿತ್ಯ'ದ ತೌರು ಎಂಬ ಕೀರ್ತಿಗೆ ಭಾಜನವಾಯಿತು. ಅಪೂರ್ವಗಾದೆಗಳೂ, ಕಥೆಗಳೂ, ಗೀತೆಗಳೂ ಇಂಗ್ಲಿಷಿಗೆ ಅನುವಾದಿತವಾದವು. ಭಾರತೀಯ ವಿದ್ವಾಂಸರನೇಕರು ತಮ್ಮ ತಾಯಿನಾಡಿನ ಈ ಸಂಪತ್ತಿನ ಕಡೆ ದೃಷ್ಟಿಹರಿಸಿ ಸಂಗ್ರಹಕಾರ್ಯದ ವಿಶಿಷ್ಟ ಹೊಣೆಯನ್ನು ಹೊತ್ತರು. ಆದರೆ ಕಾಶ್ಮೀರ, ರಾಜಾಸ್ಥಾನ, ಬಂಗಾಳ, ಅಸ್ಸಾಮ ಮುಂತಾದ ಕೆಲವು ಉತ್ತರದ ರಾಜ್ಯಗಳಲ್ಲಿ ನಡೆದ ಕೆಲಸ ದಕ್ಷಿಣ ಭಾರತದಲ್ಲಿ ನಡೆಯಲಿಲ್ಲ. ಕರ್ನಾಟಕದಲ್ಲಿಯಂತೂ ಈ ಕ್ಷೇತ್ರ

ನಿರ್ಲಕ್ಷಿತವಾಗಿಯೇ ಉಳಿಯಿತು. ಏನಿದ್ದರೂ 'ಗೀತ' ಸಾಹಿತ್ಯದಲ್ಲಿ ಮಾತ್ರ ಗಣನೀಯ ಸಾಧನೆಯನ್ನು ಕೆಲವು ಉತ್ಸಾಹಿಕಾರ್ಯಕರ್ತರು ತೋರಿದ್ದಾರೆ.

ಇಂಗ್ಲಿಷ್ ಸಂಶೋಧಕರಾದ ಜಾನ್ ತಾಮ್ಸ್ ಅವರು ೧೮೪೬ರಲ್ಲಿ 'Floklore' ಎನ್ನುವ ಪದವನ್ನು ಮೊದಲಬಾರಿಗೆ ಪ್ರಯೋಗಿಸಿದರು. ವಿಶ್ವದ ಬಹುಪಾಲು ರಾಷ್ಟ್ರಗಳಲ್ಲಿ ಈ ಪದವೇ ಬಳಕೆಯಲ್ಲಿದೆ. ಇದಕ್ಕೆ ಸಂವಾದಿಯಾದ ಪದ ಭಾರತೀಯ ಭಾಷೆಗಳಲ್ಲಿ ಇನ್ನೂ ಸೃಷ್ಟಿಯಾಗಬೇಕಾಗಿದೆ. ಬಂಗಾಳದ ವಿದ್ವಾಂಸರು ಚರ್ಚಿಸಿರುವ 'ಲೋಕವ್ರತ' 'ಲೋಕವಿಜ್ಞಾನ', 'ಲೋಕ ಸಂಸ್ಕೃತಿ', 'ಜನಪದ ಸಾಹಿತ್ಯ', 'ಲೋಕ ಶ್ರುತಿ' ಮುಂತಾದ ಪದಗಳ ಮೇಲೆ ಸಾಕಷ್ಟು ಜಿಜ್ಞಾಸೆ ನಡೆದಿದೆ. ಶ್ರೀ ಎಸ್.ಕೆ.ಚಟರ್ಜಿಯವರು 'ಲೋಕಯಾನ' ಎನ್ನುವ ಹೆಸರನ್ನು ಸೂಚಿಸಿದ್ದಾರೆ.[1] ಒಟ್ಟಿನಲ್ಲಿ ಕನ್ನಡದಲ್ಲಿ ಬಳಕೆಯಾಗಿರುವ 'ಜನಪದ ಸಾಹಿತ್ಯ' ಇಂಗ್ಲಿಷಿನ ಪದಕ್ಕೆ ಸಂವಾದಿಯಾದುದಲ್ಲ. 'Floklore' ಎನ್ನುವ ಪದ ವಿಶಾಲ ಅರ್ಥದಲ್ಲಿ ಬಳಕೆಯಾಗಿದೆ. ಜನಪದ ಗೀತೆಗಳು ಕಥೆಗಳು, ಗಾದೆಗಳು, ಒಗಟುಗಳು, ನಂಬಿಕೆಗಳು, ನಾಟಕ, ಹಬ್ಬ ಹುಣ್ಣಿಮೆಗಳು ಹೀಗೆ 'ಜನಪದ'ಕ್ಕೆ ಸಂಬಂಧಪಟ್ಟ ಎಲ್ಲ ವಿವರಗಳೂ 'Floklore'[2] ಪದದ ವ್ಯಾಪ್ತಿಗೆ ಒಳಪಡುತ್ತವೆ. 'ಜನಪದ ಸಾಹಿತ್ಯ' ಈ ಮಹಾವೃಕ್ಷದ ಒಂದು ಪ್ರಮುಖವಾದ ಶಾಖೆಯಷ್ಟೆ. ಜನಪದ ಗೀತೆಯಂತೂ ಜನಪದ ಸಾಹಿತ್ಯದ ಒಂದು ಅಂಗ ಮಾತ್ರ. ನಮ್ಮಲ್ಲಿ ನಡೆದಿರುವ ಸಂಗ್ರಹಕಾರ್ಯ ಏನಿದ್ದರೂ ಜನಪದ ಸಾಹಿತ್ಯದ ಒಂದು ಶಾಖೆಯಲ್ಲಿ ಮಾತ್ರ ಎಂದಾಗ ಆಗಬೇಕಾಗಿರುವ ಕಾರ್ಯದ ವ್ಯಾಪ್ತಿ ವೇದ್ಯವಾಗುತ್ತದೆ; ನಮ್ಮ ಕೊರತೆ ಎದ್ದು ತೋರುತ್ತದೆ. ನಿಷ್ಣಾತರಾದ ವಿದ್ವಾಂಸರ ದೊಡ್ಡ ದಳವೇ ಈ ಕ್ಷೇತ್ರವನ್ನು ತಮ್ಮ ಬದುಕಿನ ಪ್ರಮುಖ ಕಾರ್ಯರಂಗವಾಗಿ ಮಾಡಿಕೊಂಡು ಒಂದೆರಡು ದಶಕಗಳು ಶ್ರಮಿಸಿದರೆ ಮಾತ್ರ ಈ ಕ್ಷೇತ್ರ ಸುಪುಷ್ಟವಾಗಬಲ್ಲುದು; ನಮ್ಮ ಅಮೂಲ್ಯ ನಿಧಿಯೊಂದು ಸುರಕ್ಷಿತವಾಗಬಲ್ಲುದು.

ಈ ಕಾರ್ಯವನ್ನು ಯಾರು ಮಾಡಬೇಕು? ಜನತೆಯೇ? ಸರ್ಕಾರವೇ? ಜನತೆಯ ಹೊಣೆಯಂತೂ ಹಿರಿದಾದುದೇ ಆದರೂ ಸರ್ಕಾರ ಆದ್ಯಗಮನ ನೀಡಬೇಕಾದುದು ಅತ್ಯಗತ್ಯ. ವೈಜ್ಞಾನಿಕ ಸಂಶೋಧನೆಗಳು ನಮ್ಮ ಬದುಕನ್ನು

---

1. ಜನಪದ ಸಾಹಿತ್ಯಕ್ಕೆ ಲೋಕಸಾಹಿತ್ಯ ಎನ್ನುವ ಇನ್ನೊಂದು ಹೆಸರು ಉತ್ತರ ಭಾಗದಲ್ಲಿ ಬಳಕೆಯಲ್ಲಿದೆ. Floklore ಪದಕ್ಕೆ ಸಂವಾದಿಯಾಗಿ ಈ ಪದವು ಬಳಕೆಯಗಿರುವುದೂ ಉಂಟು.

- D.G. Bose, Studies in Folk Literature, P. 155

2. Floklore ಪದಕ್ಕೆ 'ಜಾನಪದ' ಎನ್ನುವ ಪದವನ್ನು ಡಾ. ಹಾ. ಮಾ ನಾಯಕರು ಇತ್ತೀಚೆಗೆ ಸೂಚಿಸಿದ್ದಾರೆ. (ಸುವರ್ಣ ಸಂಚಯ: ಪುಟ ೨೧). ಶ್ರೀ ಸುಜನಾ ಅವರು "ಜಾನಪದ ವಾಙ್ಮಯ" ಸೂಕ್ತಪದವೆಂದು ಅಭಿಪ್ರಾಯಪಡುತ್ತಾರೆ.

ಡಾ. ಜಿ. ವರದರಾಜರಾಯರು 'ಜನಶ್ರುತಿ' ಇಲ್ಲವೆ 'ಜಾನಪದ ವಿಜ್ಞಾನ' ಎಂಬ ಪದಗಳನ್ನು ಸೂಚಿಸುತ್ತಾರೆ. (ಸು.ಸಂ. ಪು ೯೪)

ತೀವ್ರಗೊಳಿಸಿವೆ. ಯಾವುದೋ ಗಡಿಬಿಡಿ ಗೊಂದಲ ನಮ್ಮನ್ನು ಆವರಿಸದಂತೆ ವೇದ್ಯವಾಗುತ್ತದೆ. ನವನಾಗರಿಕತೆ ನಗರಗಳ ಎಲ್ಲೆಯನ್ನೂ ಮೀರಿ ಪ್ರಶಾಂತ ಗ್ರಾಮಾಂತರ ಬದುಕನ್ನೂ ಕಲಕುವಷ್ಟು ದೂರ ತೀವ್ರವಾಗಿ ವ್ಯಾಪಿಸಿ ಜನಪದ ಸಾಹಿತ್ಯದ ಅಳಿವಿಗೆ ಕಾರಣವಾಗಿದೆ. ಅನೇಕ ಯೋಜನೆಗಳ ಮೇಲೆ ನಾವು ಅಪಾರ ಹಣವನ್ನು ಚೆಲ್ಲುತ್ತೇವೆ. ಜನಪದ ಸಾಹಿತ್ಯದಂಥ ಒಂದು ರಾಷ್ಟ್ರೀಯ ಸಂಪತ್ತನ್ನು ಸಂರಕ್ಷಿಸಿಕೊಳ್ಳುವತ್ತ ನಾವು ಔದಾಸೀನ್ಯಪರರಾಗಿದ್ದೇವೆ. ಕಳೆದ ಒಂದೆರಡು ದಶಕಗಳಲ್ಲಿ ನಮ್ಮ ಜನಪದ ಸಾಹಿತ್ಯ ವೇಗವಾಗಿ ಕಣ್ಮರೆಯಾಗುತ್ತಿದೆ.

"ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ" ಎಂದು ಆಚಾರ್ಯ 'ಶ್ರೀ'ಯವರು ಮೂರುವರೆ ದಶಕಗಳ ಹಿಂದೆಯೇ 'ಗರತಿಯ ಹಾಡು' ಜನಪದ ಸಾಹಿತ್ಯ ಸಂಕಲನಕ್ಕೆ ಮುನ್ನುಡಿಯನ್ನು ಬರೆಯುತ್ತ ಎಚ್ಚರಿಸಿದ್ದರು. ಆದರೆ ನಮ್ಮ ಆಸಕ್ತಿ ಇನ್ನೂ ಅತ್ತ ಸರಿಯಾದ ರೀತಿಯಲ್ಲಿ ಹೊರಳದಿರುವುದು ನಮ್ಮ ದೌರ್ಭಾಗ್ಯ.

ಜನಪದ ಸಾಹಿತ್ಯ ಸಂರಕ್ಷಣೆಗಾಗಿಯೇ ಹಲವು ವಿದ್ವಾಂಸರಿಂದ, ಉತ್ಸಾಹಿ ಕಾರ್ಯಕರ್ತರಿಂದ ಕೂಡಿದ ಒಂದು ಶಾಖೆಯನ್ನು ಸರ್ಕಾರ ಈಗಲಾದರೂ ಆರಂಭಿಸುವುದು ಅತ್ಯಗತ್ಯವಾಗಿದೆ. ಸಂಗೀತಕ್ಕೆ, ನಾಟಕಕ್ಕೆ, ನೃತ್ಯಕ್ಕೆ, ಚಿತ್ರಕಲೆಗೆ ಪ್ರತ್ಯೇಕವಾದ ಅಕಾಡೆಮಿಗಳನ್ನು ತೆರೆದು ಅಪಾರ ಹಣ ವೆಚ್ಚಮಾಡುವ ಔದಾರ್ಯ ಮಾತ್ರ ನಮ್ಮದಾಗಬಾರದು. ನೃತ್ಯ, ನಾಟಕಗಳಿಗಾಗಿ ಪ್ರತ್ಯೇಕವಾದ ಕಾಲೇಜುಗಳನ್ನೇ, ಶಾಲೆಗಳನ್ನೇ ತೆರೆಯಲು ಸಿದ್ಧವಾಗಿರುವ ನಮ್ಮ ದೃಷ್ಟಿಯಿಂದ ನಮ್ಮ ಸಂಸ್ಕೃತಿಯ ತಾಯಿಬೇರಾದ ಜನಪದ ಸಾಹಿತ್ಯದ ಸಂರಕ್ಷಣೆ ಹೇಗೆ ವಂಚಿತವಾಯಿತೋ ಅಚ್ಚರಿಪಡಬೇಕಾಗಿದೆ! ಪಾಮರ ಸಾಹಿತ್ಯದ ಪರವಾಗಿ ವಕಾಲತ್ತು ವಹಿಸುವ ಪ್ರಭಾವಶಾಲಿ ವ್ಯಕ್ತಿಗಳು ನಮ್ಮಲ್ಲಿಲ್ಲವೆಂದೇ? ಗ್ರಾಮೀಣ ಸಂಸ್ಕೃತಿಯನ್ನೇ ಮಲತಾಯ ಧೋರಣೆಯಿಂದ ನೋಡುವ ಸಂಕುಚಿತ ದೃಷ್ಟಿ ನಮ್ಮದೆಂದೆ! ಇದನ್ನು ವಿಚಾರಶೀಲರು ಈಗಲಾದರೂ ಯೋಚಿಸಬೇಕಾದುದು ಅತ್ಯಗತ್ಯವಾಗಿದೆ.

"ಜನಪದ ಸಾಹಿತ್ಯವನ್ನು ಕಳೆದುಕೊಂಡ ಕನ್ನಡ ಭಾಷೆ ಹಾಗೂ ಸಾಹಿತ್ಯ ತಾಯಿತಂದೆಗಳನ್ನು ಕಳೆದುಕೊಂಡ ತಬ್ಬಲಿಗಳಂತಾಗುತ್ತದೆ...... ಮುಂದೆ ಹಣ ಕೊಟ್ಟರೆ ಏನಾದರೂ ಸಿಗಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿ ಕೊಳ್ಳಬಹುದು. ಆದರೆ ಜನಪದ ಸಾಹಿತ್ಯ ಶರಾವತಿ ಒಮ್ಮೆ ಬತ್ತಿಹೋದರೆ ಮತ್ತೊಮ್ಮೆ ಹರಿಯಲಾರಳು.... ಆದ್ದರಿಂದ ಸರ್ವರೂ ಎಚ್ಚತ್ತು ಜನಪದ ಸಾಹಿತ್ಯ ಸಂರಕ್ಷಣೆ ಮಾಡಬೇಕಾಗಿದೆ" ಎಂದು ತಜ್ಞ ಲೇಖಕರಾದ ಶ್ರೀ ಎಚ್. ಎಲ್. ನಾಗೇಗೌಡರು

'ದೇಶವಿದೇಶದ ಜನಪದ ಕಥೆಗಳು' ಎಂಬ ಕೃತಿಗೆ ಮುನ್ನುಡಿಯನ್ನು ಬರೆಯುತ್ತ ನುಡಿದಿರುವ ಮಾತು ನಮ್ಮೆಲ್ಲರ ಕಣ್ಣುತೆರೆಸುವಂತಿದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊ. ದೇ. ಜವರೇಗೌಡರ ಸಾಹಸದ ಫಲವಾಗಿ 'ಜನಪದ ಸಾಹಿತ್ಯ' ಎಂ.ಎ. ತರಗತಿಯ ವ್ಯಾಸಂಗ ವಿಷಯಗಳಲ್ಲೊಂದಾಗಿ ಸ್ವೀಕೃತವಾಗಿರುವುದು ಹೆಮ್ಮೆಯ ವಿಷಯ. ವಿದ್ವತ್ತಿನ ಗದ್ದಿಗೆಯನ್ನು ಏರುತ್ತಿರುವ ಈ ಸಾಹಿತ್ಯಾಭ್ಯಾಸಕ್ಕೆ ಸಾಕಷ್ಟು ಸಾಮಗ್ರಿಯನ್ನು ಒದಗಿಸುವುದು ಎಲ್ಲರ ಕರ್ತವ್ಯವಾಗಿದೆ. ಕರ್ನಾಟಕ ವಿಶ್ವವಿದ್ಯಾನಿಲಯ ಈ ಮೊದಲೇ ದಿ. ಡಾ.ಗದ್ದಿಗೀಮಠರಂಥ ಜನಪದ ಸಾಹಿತ್ಯ ವಿದ್ವಾಂಸರಿಗೆ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿದುದರ ಜೊತೆಗೆ ಅವರ ನಿಬಂಧನವನ್ನು ಹಲವು ಸುದೀರ್ಘ ಕಥನಗೀತೆಗಳೊಡನೆ ಪ್ರಕಟಿಸಿರುವುದು ಅಭಿನಂದನಾರ್ಹ.

ಕನ್ನಡದಲ್ಲಿ ಉತ್ಸಾಹಿಕಾರ್ಯಕರ್ತರಿಗೇನೂ ಕೊರತೆಯಿಲ್ಲ ಎಂಬುದು ಅಪಾರ ಸಂಖ್ಯೆಯಲ್ಲಿ ಜನಪದ ಸಾಹಿತ್ಯ ಸಂಕಲನಗಳನ್ನು ಹೊರತಂದಿರುವ ಸಾಹಿತ್ಯಾಭಿಮಾನಿಗಳ ಕೃತಿಗಳಿಂದ ವ್ಯಕ್ತವಾಗಿದೆ. ಜನಪದ ಗೀತೆಗಳನ್ನು ಸಂಗ್ರಹಿಸುವ ಕಾರ್ಯ ಮೂರು ನಾಲ್ಕು ದಶಕಗಳ ಹಿಂದೆಯೇ ಕರ್ನಾಟಕದಲ್ಲಿ ಆರಂಭವಾಯಿತು. ಆಚಾರ್ಯ ಮಾಸ್ತಿಯವರೂ, ಕವಿವರ್ಯ ಬೇಂದ್ರೆಯವರೂ, ಕನ್ನಡದ ರಕ್ಷಾಮಣಿಯಾಗಿದ್ದ 'ಶ್ರೀ' ಯವರೂ ಜನಪದ ಸಾಹಿತ್ಯದ ಸತ್ವವನ್ನು ಕುರಿತು ಅಲ್ಲಲ್ಲಿ ಬರೆದು, ನುಡಿದು ಮುಂದಿನ ಕಾರ್ಯಕರ್ತರಿಗೆ ಉತ್ಸಾಹವನ್ನು ತುಂಬಿದರು. ೧೯೩೧ರ ವೇಳೆಗೆ ಪ್ರಕಟವಾದ 'ಗರತಿಯ ಹಾಡು' ಹಲಸಂಗಿಯ ಸೋದರರು ಕನ್ನಡಕ್ಕೆ ನೀಡಿದ ಅತ್ಯಪೂರ್ವ ಕಾಣಿಕೆಯಾಗಿದೆ. ಕಾಲದ ದೃಷ್ಟಿಯಿಂದಲೂ ಶ್ರೇಷ್ಠತೆಯ ದೃಷ್ಟಿಯಿಂದಲೂ ಅದಕ್ಕೆ ಅಗ್ರಸ್ಥಾನ ಮೀಸಲಾಯಿತು. ಮುಂದೆ ಸಿಂಪಿಯವರ 'ಜೀವನ ಸಂಗೀತ' ಕಾಪಸೆ ರೇವಪ್ಪನವರ 'ಮಲ್ಲಿಗೆ ದಂಡೆ' ಎರಡು ಮೂರು ವರ್ಷಗಳ ಅವಧಿಯಲ್ಲಿಯೇ ಪ್ರಕಟಗೊಂಡು ಉತ್ತರ ಕರ್ನಾಟಕದ ಜನಪದ ಸಾಹಿತ್ಯದ ಸೊಗಸನ್ನೂ, ವೈವಿಧ್ಯವನ್ನೂ ಪರಿಚಯಿಸಿದವು.

ಅದೇ ವೇಳೆಗೆ ಹಳೆಯ ಮೈಸೂರಿನ ಪ್ರಾತಿನಿಧಿಕ ಕೃತಿಯಾಗಿ ಹೇಮಗಿರಿಯ ಅರ್ಚಕ ಬಿ. ರಂಗಸಾಮಿಯವರ 'ಹುಟ್ಟಿದ ಹಳ್ಳಿ ಹಳ್ಳಿಯ ಹಾಡು' (೧೯೩೩) ಎಂಬ ಉತ್ಕೃಷ್ಟ ಕೃತಿ ಪ್ರಕಟವಾಯಿತು. ಗ್ರಾಮ ಸಾಹಿತ್ಯದ ಸಮಗ್ರ ಚಿತ್ರವನ್ನು ಕೊಡುವ ಈ ಕೃತಿ ಇಂದಿಗೂ ಆಚಾರ್ಯ ಕೃತಿಯಾಗಿಯೇ ಉಳಿದಿದೆ. ಮುಂದಿನ ಜನಪದ ಸಾಹಿತ್ಯ ಸಂಗ್ರಹಕರು ಈ ಕೃತಿಯ ಮೇಲ್ಪಂಕ್ತಿಯನ್ನು ಅನುಸರಿಸಿದ್ದರೆ ಇಂದಿನ ವಿಪುಲ ಕೃತಿಗಳಲ್ಲಿ ಕಾಣಬರುತ್ತಿರುವ ಅನೇಕ ಕೊರತೆಗಳನ್ನು ತುಂಬಿಕೊಳ್ಳಬಹುದಾಗಿತ್ತು. ೧೯೩೩ರ ಸುಮಾರಿಗೇ ಪ್ರಕಟವಾದ ವಿ.ವಿ. ತೊರ್ಕೆಯವರ ಕೃತಿ ಉತ್ತರ ಕನ್ನಡ ಜಿಲ್ಲೆಯ ಕಿರುಹೊತ್ತಗೆ 'ಹಳ್ಳಿಯ ಹಾಡುಗಳು' ಕಾಲದ ದೃಷ್ಟಿಯಿಂದ ಗಮನಾರ್ಹಕೃತಿಯಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಹೀಗೆ ಆರಂಭವಾದ ಸಾಹಿತ್ಯ ಸಂಗ್ರಹ ಯಾತ್ರೆ ಸಾಕಷ್ಟು ಮಂದಗತಿಯಲ್ಲೇ ಸಾಗಿ ೧೯೪೬ರ ವೇಳೆಗೆ ಪ್ರಕಟವಾದ ಮತಿಘಟ್ಟ ಸೋದರರ 'ನಾಡಪದಗಳು' ಕೃತಿಯ ಮೂಲಕ ಒಂದು ಘಟ್ಟವನ್ನು ಮುಟ್ಟಿತು. ಕನ್ನಡ ಜನಪದ ಗೀತೆಗಳ ಸೊಗಸನ್ನು ಈ ಕೃತಿ ಸಮರ್ಪಕವಾದ ರೀತಿಯಲ್ಲಿ ಮಾಡಿಕೊಡುವುದಲ್ಲದೆ, ಶ್ರೀ ಎಲ್. ಗುಂಡಪ್ಪನವರಂಥ ಶ್ರೇಷ್ಠ ವಿದ್ವಾಂಸರ ಕೈಯಲ್ಲಿ ಹಾದುಬಂದು ಜನಪದ ಗೀತ ಸಂಗ್ರಹಗಳನ್ನು ಸಂಪಾದಿಸುವ ಬಗೆಗೆ ಸೂಕ್ತ ಮೇಲ್ಪಂಕ್ತಿಯಾಯಿತು. 'ನಾಡಪದಗಳು' ಕೃತಿಯನ್ನು ಹೊರತಂದ ಮೇಲೂ ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರು ಇಂದಿನವರೆಗೆ ಆ ಕ್ಷೇತ್ರದಲ್ಲಿಯೇ ದುಡಿದು ಅಪೂರ್ವ ಗೀತೆಗಳನ್ನು ಸಂಗ್ರಹಿಸಿದ್ದಾರೆ.

ಈ ನಡುವೆ ಜನಪದ ಸಾಹಿತ್ಯವನ್ನು ಕುರಿತ ಮಾಸ್ತಿಯವರ, ದೇವುಡು ಅವರ, ಗೊರೂರರ ಕೃತಿಗಳು ಪ್ರಕಟವಾಗಿ ಆ ಸಾಹಿತ್ಯದ ಬಗ್ಗೆ ಜನತೆಯ ಒಲವನ್ನು ಹೆಚ್ಚಿಸಿದುವು.

ಕನ್ನಡ ಜನಪದ ಸಾಹಿತ್ಯ ಸಂಗ್ರಹಣೆ, ಪ್ರಕಟಣೆ ಉತ್ತಮ ಸಿದ್ಧಿಯನ್ನು ಕಂಡುದುದು ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಮಾತ್ರ. ಡಾ. ಗದ್ಗೀಮಠ ಅವರು ಉತ್ತರ ಕರ್ನಾಟಕದಲ್ಲೂ, ಕ.ರಾ.ಕೃ. ಜೀಶಂಪ ಅವರು ಮೈಸೂರು ಕಡೆಯಲ್ಲೂ ಅದ್ವಿತೀಯವಾದ ಸಾಧನೆಯನ್ನು ತೋರಿದರು. ಉತ್ತರ ಕರ್ನಾಟಕದ ಬಹುಪಾಲು ಸಾಹಿತ್ಯವನ್ನು ಡಾ. ಗದ್ಗೀಮಠ ಅವರು ಸಂಗ್ರಹಿಸಿ, ಸಂಪಾದಿಸಿ, ಪರಿಷ್ಕರಿಸಿ 'ಲೋಕಗೀತೆಗಳು' 'ನಾಡ ಹಾಡುಗಳು' ಮುಂತಾದ ವೈವಿಧ್ಯಪೂರ್ಣವಾದ ಕೃತಿಗಳನ್ನು ಹೊರತಂದರು. ಇತ್ತ ಶ್ರೀ ಕರಾಕೃ ಹಾಗೂ ಜೀಶಂಪ ಅವರು ಮೇಲಿಂದಮೇಲೆ ಹಳೆಯ ಮೈಸೂರಿನ ಅನೇಕ ಜಿಲ್ಲೆಗಳ ಸಾಹಿತ್ಯವನ್ನು ಸುಂದರ ಸಂಕಲನಗಳ ಮೂಲಕವೂ ಬರಹಗಳ ಮೂಲಕವೂ ಹೊರತಂದರು. ಸುದೀರ್ಘ ಕಥನ ಗೀತೆಗಳನ್ನು ಮೊದಲಬಾರಿಗೆ ಸಂಗ್ರಹಿಸಿದ ಕೀರ್ತಿ ಡಾ. ಗದ್ಗೀಮಠ, ಕರಾಕೃ ಹಾಗೂ ಜೀಶಂಪ ಅವರಿಗೇ ಸಲ್ಲಬೇಕು. ಕರಾಕೃ ಅವರ 'ಜಾನಪದ ಕಥನ ಗೀತೆಗಳು' ಮೂವತ್ತಕ್ಕೂ ಮೇಲ್ಪಟ್ಟ ಸುದೀರ್ಘ ಕಥನ ಗೀತೆಗಳ ಸಂಕಲನ. ಕನ್ನಡ ಜನಪದ ಕಥನ ಗೀತೆಗಳ ಎಲ್ಲ ಮುಖಗಳನ್ನೂ ಪರಿಚಯಮಾಡಿಕೊಡಲು ಈ ಕೃತಿ ಸಮರ್ಥವಾಗಿದೆ. ವೈವಿಧ್ಯತೆಯಿಂದ ಕೂಡಿರುವ ಕರಾಕೃ ಅವರ ಇಪ್ಪತ್ತೈದು ಸಂಕಲನಗಳು ಒಂದಲ್ಲ ಒಂದು ದೃಷ್ಟಿಯಿಂದ ಗಮನಾರ್ಹವಾದ ಕೃತಿಗಳಾಗಿವೆ.*

ಜನಪದ ಗೀತೆಗಳ ಇನ್ನೂ ಕೆಲವು ವಿಶಿಷ್ಟ ಸಂಕಲನಗಳು ಕನ್ನಡ ನಾಡಿನ ನಾನಾ ಕಡೆಗಳಿಂದ ಪ್ರಕಟವಾಗಿ ಆ ಸಾಹಿತ್ಯದ ಶ್ರೀಮಂತಿಕೆಯನ್ನು ಪರಿಚಯಿಸುವಂತಿವೆ. ಗೊರೂರರ 'ಹಳ್ಳಿಯ ಹಾಡುಗಳು' ಈಶ್ವರ ಚಂದ್ರ ಚಿಂತಾಮಣಿಯರ 'ಗರತಿಯರ ಮನೆಯಿಂದ' ಜೀಶಂಪರ 'ಅವರ ನೆನೆದೇವು',

* ಹಿರಿಯ ಲೇಖಕರಾದ ಶ್ರೀ ಎಚ್.ಎಲ್. ನಾಗೇಗೌಡರು ತುಮಕೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಅಪಾರ ಸಾಹಿತ್ಯವನ್ನು ಧ್ವನಿಮುದ್ರಣ ಮಾಡಿದ್ದಾರೆ.

ಆರ್.ಎಸ್. ಪಂಚಮುಖಿಯವರ 'ಕರ್ನಾಟಕದ ಜನಪದ ಗೀತೆಗಳು' ಸ.ಚ. ಮಹಾದೇವನಾಯಕರ 'ಜಾನಪದ ರಸಗಂಗೆ' ಮುಂತಾದ ಕೃತಿಗಳು, ಕೆ.ವಿ. ಸುಬ್ಬಣ್ಣನವರ 'ಅವರ ನೆನೆದೇವು,' ಶಿವೇಶ್ವರ ದೊಡ್ಡಮನಿಯವರ 'ನವಿಲೂರ ಮನೆಯಿಂದ', ಗೊ.ರು.ಚನ್ನಬಸಪ್ಪನವರ 'ಗ್ರಾಮ ಗೀತೆಗಳು' 'ಮೈದುನ ರಾಮಣ್ಣ' 'ಜೋಗದ ಝೋಕ್ ಮತ್ತು ಇತರ ಹಾಡುಗಳು' – ಮುಂತಾದ ಕೃತಿಗಳೂ, ಕರೀಂಖಾನರ 'ಜನಪದ ಗೀತ' ಸಂಕಲನಗಳೂ, ಚಂದ್ರಶೇಖರನಾಥರ 'ಶ್ರೀ ಆದಿ ಚುಂಚನಗಿರಿ ಜನಪದ ಗೀತೆಗಳು' – ಹೀಗೆ ಕನ್ನಡ ಜನಪದದ ಗೀತೆಗಳ ಸಂಕಲನ ಕಾರ್ಯ ಸಾಕಷ್ಟು ವ್ಯಾಪ್ತವಾಗಿಯೇ ನಡೆದಿದೆ. ಅಮೃತ ಸೋಮೇಶ್ವರ, ಎಂ.ಬಿ. ಮರಕ್ಕಿಣಿ, ಕೆ.ವಿ.ಲಿಂಗಪ್ಪ ಪಡಾರು ಮಹಾಬಲೇಶ್ವರ ಭಟ್ಟ, ಕೆ.ಆರ್. ಲಿಂಗಪ್ಪ, ಎಲ್.ಆರ್. ಹೆಗ್ಗಡೆ, ಎನ್.ಆರ್. ರಂಗಯ್ಯ ಮುಂತಾದ ಕೆಲವು ಹೆಸರುಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಕರ್ನಾಟಕದಲ್ಲಿ ಜನಪದ ಸಾಹಿತ್ಯ ಸಂಶೋಧನೆಗೆ ನೆರವಾಗುವಂತೆ ಗೀತ ಸಾಹಿತ್ಯ 'ವಿಪುಲವಾಗಿ ಸಂಗ್ರಹಿತವಾದಂತೆ ಕಂಡರೂ, ವ್ಯವಸ್ಥಿತವಾದ ರೀತಿಯಲ್ಲಿ, ಎಲ್ಲ ಪ್ರಾದೇಶಿಕ ವೈವಿಧ್ಯಗಳೊಡನೆ ಇನ್ನೂ ಆಗಬೇಕಾದ ಕೆಲಸ ಅಪಾರವಾಗಿದೆ. ಜನಪದ ಕಥೆಗಳನ್ನೂ, ಗಾದೆಗಳನ್ನೂ, ಒಗಟುಗಳನ್ನೂ, ಸ್ಥಳಕಥೆಗಳನ್ನೂ, ಸಂಗ್ರಹಿಸುವುದಂತಿರಲಿ ಗೀತ ಸಾಹಿತ್ಯದಲ್ಲಿಯೇ ಅಗಾಧವಾದ ಸಾಹಿತ್ಯ ಸಂಗ್ರಹಕರ ಹಾದಿಯನ್ನು ಕಾಯುತ್ತಾ ಕುಳಿತಿದೆ. ಕಂಸಾಳೆಯ ಕಥೆಗಳು, ಕರಪಾಲದ ಕಥೆಗಳು, ಮಂಟೆದೇವರ ಕಥೆಗಳು, ಹೆಳವರ ಕಥೆಗಳು ಇವೆಲ್ಲವೂ ಚಂಪೂರೀತಿಯ ಗದ್ಯಪದ್ಯ ಮಿಶ್ರಿತ ರಚನೆಗಳು. ಇವುಗಳ ಕಡೆಯೂ ನಮ್ಮ ಸಂಗ್ರಹಕರು ದೃಷ್ಟಿಹರಿಸುವುದು ಅಗತ್ಯವಾಗಿದೆ.'*

ಸರ್ಕಾರದ ನೆರವು ಜನಪದ ಸಾಹಿತ್ಯಕ್ಷೇತ್ರಕ್ಕೆ ಅತಿ ತ್ವರಿತವಾಗಿ ಒದಗಬೇಕಾದ ಅಗತ್ಯವನ್ನು ಕುರಿತು ಪತ್ರಿಕೆಗಳೂ, ವಿದ್ವಾಂಸರೂ ಅನೇಕ ಸಂದರ್ಭಗಳಲ್ಲಿ ಹೇಳುತ್ತಾ ಬಂದಿದ್ದಾರೆ. ದಕ್ಷರೂ, ಸಾಹಿತ್ಯಜ್ಞರೂ, ಜನಪದ ಸಾಹಿತ್ಯದ ಬಹುಮುಖ ಪರಿಚಯವುಳ್ಳವರೂ ಆದ ಅಧಿಕಾರಿಯೊಬ್ಬರ ನೇತೃತ್ವದಲ್ಲಿ, ಸರ್ಕಾರದ ವತಿಯಿಂದಲೇ 'ಜನಪದ ಸಾಹಿತ್ಯ ಶಾಖೆ'ಯೊಂದು ಆರಂಭವಾಗಬೇಕಾದುದು ಉಚಿತವಾಗಿದೆ. ಒಂದೊಂದು ಜಿಲ್ಲೆಯಂತೆ ಕಾರ್ಯಕ್ರಮವನ್ನು ರೂಪಿಸಿಕೊಂಡು ಹತ್ತಾರು ವರ್ಷಗಳಲ್ಲಿ ಕ್ರಮಬದ್ಧವಾಗಿ ಸಾಹಿತ್ಯ ಸಂಗ್ರಹಣೆಯನ್ನು ಮುಗಿಸುವ ವ್ಯವಸ್ಥೆಯಾದರೆ ಸೂಕ್ತವೆಂಬ ವಿಷಯವನ್ನು ಒತ್ತಿ ಹೇಳಬೇಕಾದ ಅಗತ್ಯವಿಲ್ಲ. ಈ ನಿಟ್ಟಿನಲ್ಲಿ ವ್ಯಾಪಕವಾದ ಕಾರ್ಯಕ್ರಮವನ್ನು ಕೈಗೊಳ್ಳುವಾಗ ಒಂದೊಂದು ಹಳ್ಳಿಯೂ ಸಂಶೋಧಕರಿಗೆ ಅಮೂಲ್ಯ ವಿಷಯಗಳನ್ನು ಒದಗಿಸುತ್ತದೆ; ಕನ್ನಡ ಜನಪದ ಸಾಹಿತ್ಯದ ಸಿರಿ ಅಳಿದುಹೋಗದೆ ತನ್ನೆಲ್ಲ ಸೊಬಗಿನಿಂದ ಮತ್ತೆ ಕಳಕಳಿಸುವಂತಾಗುತ್ತದೆ. ಆ ಪುಣ್ಯದಿನಗಳನ್ನು ಎದುರು ನೋಡೋಣ.

---

* ಇತ್ತೀಚೆಗೆ ಇದೇ ಲೇಖಕರಿಂದ ಈ ಸಾಹಿತ್ಯ ಪ್ರಕಾರಗಳಲ್ಲಿ ಬಹುಪಾಲು ಸಂಗ್ರಹಿತವಾಗಿದೆ.

ಜನಪದ ಸಾಹಿತ್ಯ ಮತ್ತು ಕಲೆಗಳ ಸಂರಕ್ಷಣೆ

ಗ್ರಾಮೋದ್ಧಾರದ ದೃಷ್ಟಿಯಲ್ಲಿ ಕೈಗೊಳ್ಳುತ್ತಿರುವ ವಿಪುಲಯೋಜನೆಗಳಲ್ಲಿ ಅಲ್ಲಿನ ಸಂಸ್ಕೃತಿಯ ಅಂತಃಸತ್ವವಾಗಿ ಉಳಿದು ಬಂದಿರುವ ಜನಪದ ಸಾಹಿತ್ಯ ಹಾಗೂ ಜನಪದ ಕಲೆಗಳ ಕಲ್ಯಾಣವನ್ನು ಆಲೋಚಿಸುವುದು ಸ್ವಾತಂತ್ರ್ಯೋತ್ತರ ಭಾರತದ ಆದ್ಯ ಕರ್ತವ್ಯಗಳಲ್ಲೊಂದಾಗಿದೆ. ಗ್ರಂಥಸ್ಥ ಸಾಹಿತ್ಯದ ಸಂರಕ್ಷಣೆಯೇನೋ ಹಲವು ರೀತಿಯಲ್ಲಿ ನಡೆದು ನಮ್ಮ ಪ್ರಾಚೀನರು ಬಿಟ್ಟುಹೋದ ಅಮೂಲ್ಯ ಕೃತಿಗಳು ತಮ್ಮ ಸಾಹಿತ್ಯಮೌಲ್ಯದಿಂದ ಇಂದು 'ವಿಶ್ವಮಾನ್ಯತೆ'ಯನ್ನು ಪಡೆದಿವೆ. ಆಂಗ್ಲರ ಆಳ್ವಿಕೆಯಲ್ಲಿ ಆರಂಭವಾದ ಸಾಹಿತ್ಯ ಕೃತಿಗಳ ಈ ಸಂರಕ್ಷಣಾಕಾರ್ಯದಿಂದ ನಮ್ಮದೇ ಆದ ವಿಶಿಷ್ಟ ಸಾಹಿತ್ಯ ಚರಿತ್ರೆಯನ್ನು ರಚಿಸಿಕೊಳ್ಳಲು ಸಾಧ್ಯವಾಯಿತು. ಕ್ರೈಸ್ತ ಮಿಶನರಿಗಳೂ, ಪಾಶ್ಚಾತ್ಯ ವಿದ್ವಾಂಸರೂ ಈ ನಿಟ್ಟಿನಲ್ಲಿ ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿ ಆ ಕಾರ್ಯ ಎಲ್ಲ ಭಾರತೀಯ ಭಾಷೆಗಳಲ್ಲೂ ಇನ್ನೂ ಸಮಗ್ರವಾಗಿ ಆಗಬೇಕಿತ್ತು. ನೂರಾರು ಓಲೆಯ ಗರಿಯ ಗ್ರಂಥಗಳನ್ನು ನೀರಿಗೆಸೆದ, ಬೆಂಕಿಯಲ್ಲಿ ಸುಟ್ಟ ವಿಷಾದಪ್ರಸಂಗಗಳು ಇಂದಿಗೂ ವರದಿಯಾಗುತ್ತಿವೆ. ಇಂಥ ಅವಜ್ಞೆ ಮನೆಮಾಡಿಕೊಂಡಿರುವ ಜತೆಯಲ್ಲಿ ಕಲೆಯ ಕಣ್ಣು ತೆರೆಸುವ ಬಿರುಸಿನ ಕ್ರಮಗಳನ್ನು ಕೈಗೊಳ್ಳದ ಹೊರತು ನಾಡಿನ ಕಲ್ಯಾಣ ಪೂರ್ಣವಾಗಿ ಸಾಧಿತವಾಗಲಾರದು.

ಗ್ರಂಥಸ್ಥ ಸಾಹಿತ್ಯದ ಸ್ಥಿತಿ ಇದಾದ ಮೇಲೆ ಶತಶತಮಾನಗಳಿಂದ ಪಂಡಿತ ವರ್ಗದವರಿಂದ ನಿರ್ಲಕ್ಷಿಸಲ್ಪಟ್ಟು, ಆದರೂ ಎಲ್ಲ ಸಾಹಿತ್ಯ ಸೃಷ್ಟಿಗೂ ಮಾತೃಪ್ರಾಯವಾಗಿ ಉಳಿದು ಜನತೆಯ ಜೀವಾಳವಾಗಿ ಬೆಳೆದು ಬಂದ ಜನಪದ ಸಾಹಿತ್ಯ ಹಳ್ಳಿಗಳ ಇಂದಿನ ವಾತಾವರಣದಲ್ಲಿ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದೇ ದುರ್ಲಭವಾಗಿದೆ. ಒಂದು ನಾಡಿನ ಹಿರಿಯ ಸಂಸ್ಕೃತಿಯನ್ನು ಅಳೆಯಬೇಕಾದರೆ, ಆ ಬದುಕಿನ ಆದರ್ಶಗಳನ್ನು ತಿಳಿಯಬೇಕಾದರೆ ಅಲ್ಲಿನ ಜನಪದ ಸಾಹಿತ್ಯದ ಮೊರೆಹೊಗಬೇಕು. ಜನತೆಯ ಆಶೋತ್ತರಗಳು ಬಹು ನೈಜವಾಗಿ ವ್ಯಕ್ತವಾಗಿರುವ ಈ ಸಾಹಿತ್ಯವು ತನ್ನದೇ ಆದ ಸರಳ ಸೌಂದರ್ಯದಿಂದ ರಸಿಕರ ಹೃದಯವನ್ನು ಸೂರೆಗೊಳ್ಳುತ್ತದೆ. ಇದರ ಈ ಉನ್ನತ ಸಾಹಿತ್ಯ ಗುಣವನ್ನು ಕೇವಲ ಎರಡು ಮೂರು ದಶಕಗಳ ಹಿಂದೆ ಗುರುತಿಸಿ, ಸಾಕಷ್ಟು ಸಂಗ್ರಹಕಾರ್ಯವೂ ನಡೆದು, ಉತ್ತಮ ಕೃತಿಗಳೂ ಪ್ರಕಟವಾಗಿವೆ. ಆದರೆ ಭಾರತದ ಇತರ ಭಾಷೆಗಳೊಡನೆ ಹೋಲಿಸಿ ನೋಡಿದಾಗ ಕನ್ನಡದಲ್ಲಿ ಆಗಬೇಕಾದುದು ಇನ್ನೂ ಪರ್ವತದಷ್ಟಿದೆ ಎನ್ನಿಸುತ್ತದೆ. ಡಾ. ವೆರಿಯರ್ ಎಲ್ವಿನ್ ಮುಂತಾದ ಸಾಹಿತ್ಯಾಭಿಮಾನಿಗಳು ತಮ್ಮ ಬದುಕನ್ನೇ ಜನಪದ ಸಾಹಿತ್ಯದ ಸಂರಕ್ಷಣೆ,

ಸಂಗ್ರಹಣೆಗೆ ಮೊಸಲಾಗಿಟ್ಟು, ಕಾಡುಜನರ ನಡುವೆ ನೆಲಸಿ ಉತ್ತರಭಾರತದಲ್ಲಿ ಬಹು ಗಣನೀಯ ಕೆಲಸ ಮಾಡಿದ್ದಾರೆ. ಕನ್ನಡ ನಾಡಿನಲ್ಲಿ ಡಾ. ಗದ್ದಗೀಮಠ ಅವರಂಥ ನಿಷ್ಠಾವಂತ ಜನಪದ ಸಾಹಿತ್ಯಪ್ರೇಮಿಗಳ ಸೇವೆಯನ್ನು ಪಡೆಯಲು ನಮ್ಮ ನಾಡಿಗೆ ಪುಣ್ಯವಿರಲಿಲ್ಲ. ಸಹಸ್ರಾರು ಪುಟಗಳ ಸಾಹಿತ್ಯವನ್ನು ಉತ್ತರ ಕರ್ನಾಟಕದಲ್ಲೆಲ್ಲಾ ಸಂಗ್ರಹಿಸಿದ ಅವರಿಗೆ ಸೂಕ್ತ ಪ್ರೋತ್ಸಾಹ ನೀಡಲು ಸಾರ್ವಜನಿಕರಾಗಲೀ, ಸರ್ಕಾರವಾಗಲೀ ಸಕಾಲದಲ್ಲಿ ಮುಂದೆ ಬರದಿದ್ದುದು ವಿಷಾದದ ಸಂಗತಿ. ಕನ್ನಡ ಜನಪದ ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಅಧಿಕಾರ ವಾಣಿಯಿಂದ ಮಾತಾಡಬಹುದಾಗಿದ್ದ ಅವರ ಅನಿರೀಕ್ಷಿತ ಅಗಲಿಕೆಯಿಂದಾಗಿರುವ ನಷ್ಟವನ್ನು ತುಂಬಿಕೊಳ್ಳುವುದು ದುಸ್ಸಾಧ್ಯವಾಗಿದೆ. ನಾಡಿನ ಹಿತದೃಷ್ಟಿಯಿಂದ ಅವರು ಸಂಗ್ರಹಿಸಿ ಹೋಗಿರುವ ಅಪಾರ ಸಾಹಿತ್ಯವನ್ನಾದರೂ ಹೊರತರುವ ಪ್ರಯತ್ನ ಈಗಲಾದರೂ ಅವಶ್ಯವಾಗಿ ಆಗಬೇಕಾಗಿದೆ.

ಕನ್ನಡ ಭಾಷೆ, ಕನ್ನಡ ಸಾಹಿತ್ಯಗಳ ಬಗ್ಗೆ ಹೇಳುವುದಾದರೆ ಕೆಲವು ದಿನಗಳ ಹಿಂದೆ ಕನ್ನಡದ ಆಚಾರ್ಯ ಪುರುಷರೊಬ್ಬರು ಉದ್ಘೋಷಿಸಿದಂತೆ 'ಆಂಗ್ಲರ ಕಾಲದಲ್ಲೂ ಕನ್ನಡಕ್ಕೆ ಈ ದುಸ್ಥಿತಿ ಬಂದಿರಲಿಲ್ಲ' ಎಂಬ ಮಾತು ನಿಷ್ಠಾವಂತ ಕನ್ನಡಿಗರನ್ನು ಬಡಿದೆಬ್ಬಿಸುತ್ತದೆ. ಕನ್ನಡನಾಡು ಒಂದಾದ ಮೇಲೆ ಕನ್ನಡ ನುಡಿಯ ಸರ್ವತೋಮುಖ ಏಳಿಗೆಯ ಬಗೆಗೆ ಜನತೆಯಾಗಲಿ ಸರ್ಕಾರವಾಗಲಿ ನಿರ್ದಿಷ್ಟವಾದ ಯಾವ ಯೋಜನೆಯನ್ನೂ ಹಾಕಿಕೊಳ್ಳದಿರುವುದು ವಿಷಾದನೀಯ. 'ಕನ್ನಡ'ದ ಮಾತು ಕೆಲವರಿಗೆ ಆಲಸ್ಯವನ್ನೂ, ಕೆಲವರಿಗೆ ತಾತ್ಸಾರವನ್ನೂ, ಕೆಲವರಿಗೆ ತಿರಸ್ಕಾರವನ್ನೂ ತರುತ್ತಿರುವುದು ನಮ್ಮ ಹೇಡಿಮನಸ್ಸಿನ ಪ್ರತೀಕವಲ್ಲದೆ ಬೇರೆಯಲ್ಲ. ನಾಡಿನ ನುಡಿಯ ಒಂದು ಪರಂಪರಾನುಗತವಾದ ಸಾಹಿತ್ಯ ಸಂಸ್ಕೃತಿಗಳ ಜೀವಾಳವನ್ನು ಜೀರ್ಣಿಸಿಕೊಂಡು ಆದರ್ಶ ನಾಡನ್ನು ಕಟ್ಟುವ ಪಣವನ್ನು ನಾವಿಂದು ತೊಡಬೇಕಾಗಿದೆ. ಅಂಥ ಆದರ್ಶ ನಾಯಕರೂ ನಮಗೆ ಬೇಕಾಗಿದೆ.

ಇಂದು ನಮ್ಮ ಹಳ್ಳಿಗಳು ಏನಾಗುತ್ತಿವೆ? ಜನತೆಯಲ್ಲಿ ಹಿಂದಿನ ಜೀವನಶ್ರದ್ಧೆ, ಐಕಮತ್ಯ, ಶಾಂತಿ ನೆಮ್ಮದಿಗಳು ಮಾಯವಾಗುತ್ತಿವೆಯೋ ಎನ್ನಿಸುತ್ತಿದೆ. ಒಂದು ಕಡೆ ಆಧುನಿಕ ವೈಜ್ಞಾನಿಕ ನಾಗರಿಕತೆ ಅವರಲ್ಲಿ ಸರಳತೆಯನ್ನು ಹಾಳುಮಾಡಿ ಕೃತಕತೆಯನ್ನೂ ಆಡಂಬರವನ್ನೂ ತಂದೊಡ್ಡುತ್ತಿದೆ. ಮತ್ತೊಂದು ಕಡೆ ರಾಜಕೀಯದ ವಿಷವಾಯು ಪರಸ್ಪರ ಅಂತಃಕಲಹಗಳನ್ನೂ, ಕೃತ್ರಿಮತೆಯನ್ನೂ ತಂದೊಡ್ಡುತ್ತಿವೆ. ಇಷ್ಟಾದರೂ ಶತಶತಮಾನಗಳಿಂದ ಅವರ ಬದುಕನ್ನು ಕಬಳಿಸುತ್ತ ಬಂದಿರುವ ಬಡತನವೇನೂ ಹರಿದಿಲ್ಲ. ಇಂದಿನ ರೈತನು ಹಿಂದಿನ ರೈತನೇ ಆಗಿದ್ದಾನೆ. ರೈತನು ಉದ್ಧಾರವಾಗುತ್ತಿದ್ದಾನೆಂಬುದು ಬರಿಯ ಭ್ರಾಂತಿಯ ಮಾತು.

ಹಳ್ಳಿಗರ ಸಾಂಸ್ಕೃತಿಕ ಐಕ್ಯವನ್ನು ಸಾಧಿಸುವ ಜನಪದ ಕಲೆಗಳೆಲ್ಲವೂ ಆಧುನಿಕ ನಾಗರಿಕತೆಯ ಪ್ರಭಾವದಿಂದಾಗಿ ನಶಿಸಿಹೋಗುತ್ತಿವೆ. ಇವುಗಳನ್ನು

ಪುನಶ್ಚೇತನಗೊಳಿಸುವ ಬಗೆಗೆ ತೀವ್ರವಾಗಿ ಆಲೋಚಿಸಬೇಕಾಗಿದೆ. ಯಕ್ಷಗಾನ, ಬಯಲಾಟಗಳೇ ಮೊದಲಾದ ಜನಪದ ನೃತ್ಯಗಳೂ ಹಳ್ಳಿಹಳ್ಳಿಯಲ್ಲಿಯೂ ವಿಪುಲವಾಗಿ ಹರಡಿಕೊಂಡಿರುವ ಜನಪದ ಸಾಹಿತ್ಯವೂ ನವೋದಯದ ಈ ಪರ್ವಕಾಲದಲ್ಲಿ ಹಳ್ಳಿಗರ ಬದುಕಿನಲ್ಲಿ ಉತ್ಸಾಹವನ್ನೂ, ಆದರ್ಶಗಳನ್ನೂ ತುಂಬಲು ನೆರವಾಗಬೇಕು. ಇವುಗಳ ಪುನಃಪ್ರಸಾರ ಕಾರ್ಯಕ್ಕೆ ಹೊಸ ಯೋಜನೆಯನ್ನು ಹಾಕಿಕೊಳ್ಳದೆ ಅನ್ಯಮಾರ್ಗವಿಲ್ಲ. ಇವುಗಳ ಉದ್ಧಾರವಿಲ್ಲದೆ ಹಳ್ಳಿಗಳ ಉದ್ಧಾರ ಇಲ್ಲ.

ಜನಪದ ಕಲೆಗಳ ಪುನರುಜ್ಜೀವನಕ್ಕೆ ಯಾವ ಹೊಸ ಸೂತ್ರವನ್ನು ಅಳವಡಿಸಬಹುದು, ಎಂಬುದರ ಬಗೆಗೆ ತಜ್ಞರ ಸಮಿತಿ ನಿಯಮಿತವಾಗಬೇಕು. ತಾಲ್ಲೂಕು ಮಟ್ಟದಲ್ಲಿ ಸರ್ವ ಕಲೆಗಳ ಸ್ಪರ್ಧೆಯು ವರ್ಷಕ್ಕೊಮ್ಮೆಯಾದರೂ ನಡೆಯುವ ವ್ಯವಸ್ಥೆಯಾಗಿ ಸೂಕ್ತವಾದ ಬಹುಮಾನಗಳ ವಿನಿಯೋಗವಾಗುವುದು ಈ ಕಲೆಗಳಲ್ಲಿ ಹೊಸ ಚೇತನವನ್ನು ತುಂಬುತ್ತದೆ. ನಾಟಕಾದಿಗಳ ಪ್ರದರ್ಶನದ ಆರ್ಥಿಕ ಹೊಣೆಯಲ್ಲಿ ಸರ್ಕಾರವೂ ಪಾಲುಗೊಂಡು, ಹಳ್ಳಿ ಹಳ್ಳಿಗಳಲ್ಲಿಯೂ, ಪುರಾಣಪುರುಷರ ಪುಣ್ಯಕಥೆಗಳ ಪ್ರಸಾರ ಅಗತ್ಯವೆನಿಸುತ್ತದೆ. ಇವೆಲ್ಲಕ್ಕೂ ಮಿಗಿಲಾಗಿ ನಶಿಸಿಹೋಗುತ್ತಿರುವ ಜನಪದ ಸಾಹಿತ್ಯದ ಸಂಗ್ರಹಣೆ, ಪ್ರಕಟಣೆಯ ಬಗೆಗೆ ಅಪಾರವಾದ ಕೆಲಸ ಬಿದ್ದಿದೆ. ಜನಪದ ಸಾಹಿತ್ಯ – ಸಂಸ್ಕೃತಿಗಳ ಸಂರಕ್ಷಣೆಯ ಬಗಗೆ ಪ್ರತ್ಯೇಕ ಇಲಾಖೆಯನ್ನು ತೆರೆದರೂ ಸೂಕ್ತವೇ? ಇಲ್ಲವೆ ಆ ರಂಗದಲ್ಲಿ ಶ್ಲಾಘನೀಯ ಕೆಲಸ ಮಾಡುತ್ತಿರುವ ಉತ್ಸಾಹಿಗಳಿಗೆ ಸರ್ವ ಪ್ರೋತ್ಸಾಹಗಳನ್ನು ನೀಡಲಾದರೂ ಮುಂದೆ ಬರಬೇಕು.

ಜನಪದ ಜೀವನದ ನಿಕಟ ಪರಿಚಯ ಉಳ್ಳವರೂ, ಕನ್ನಡ ಸಾಹಿತ್ಯ ಭಾಷೆಗಳ ಉತ್ತಮ ಜ್ಞಾನವನ್ನು ಪಡೆದವರೂ ಆಕಾಶವಾಣಿ ಮುಂತಾದ ಕೆಲವು ಪ್ರಸಾರ ಕೇಂದ್ರಗಳ ಮೂಲಕ ವ್ಯವಸ್ಥಿತ ಜನಪದ ಪ್ರಸಾರಗಳನ್ನು ಕೈಗೊಳ್ಳಬೇಕು. ಕನ್ನಡ ನಾಡಿನಲ್ಲಿ ಜನಪದ ಸಾಹಿತ್ಯಕ್ಕಾಗಿ ದುಡಿಯುತ್ತಿರುವವರೆಲ್ಲರ ಸಹಕಾರವನ್ನು ಪಡೆಯುವುದೂ ತೀರ ಅಗತ್ಯವಾಗಿದೆ. ಜನಪದ ಕಲೆಗಳ ಬಗೆಗೂ ಇದೇ ಮಾತು ಅನ್ವಯವಾಗುತ್ತದೆ.

ಕನ್ನಡ ನಾಡಿನಲ್ಲಿ ನಾಲ್ಕೂ ನಿಟ್ಟಿನಲ್ಲಿಯೂ ಜನಪದ ಸಾಹಿತ್ಯ ಪ್ರೇಮಿಗಳು ಸಂಚಾರ ಮಾಡಿ ಟೇಪ್ ರಿಕಾರ್ಡರುಗಳ ನೆರವಿನಿಂದ ಜನಪದ ಧಾಟಿಗಳನ್ನು ಉಳಿಸುವ ಯತ್ನ ಮಾಡಬೇಕಾದುದೂ ಮುಖ್ಯವಾದುದೇ. ಕೃತಕವಾದ ಚಿತ್ರಗೀತೆಗಳ ಧಾಟಿಗಳಲ್ಲಿ ಸರಳವೂ ಸುಮಧುರವೂ ಆದ ಈ ಗೀತೆಗಳನ್ನು ಕೆಲವರು ಹಾಡುವುದನ್ನು ಕೇಳುವಾಗ ಈ ಸಾಹಿತ್ಯದ ಕೊಲೆಯಾಗುತ್ತಿದೆ ಎನಿಸುತ್ತದೆ. ಹಳ್ಳಿಯ ಬದುಕನ್ನು ಕಾಣದೆ ಒಮ್ಮೆಯಾದರೂ ಹಳ್ಳಿಗರ ಬಾಯಿಂದ ಈ ಹಾಡುಗಳನ್ನು ಕೇಳದ ಅವುಗಳ ಮೂಲ ಧಾಟಿಗಳನ್ನು ಅಭ್ಯಸಿಸದ, 'ಜಾನಪದ ಗಾಯಕರು' ಅವರ ಆತ್ಮ ಸಂತೋಷಕ್ಕೆ ಮಾತ್ರ ಹಾಡಿಕೊಂಡರೆ ಕ್ಷೇಮ.

ಜನಪದ ಸಾಹಿತ್ಯದ ಅಳತೆಗೋಲು

ಕರ್ನಾಟಕದ ಸಮಗ್ರ ಜನಪದ ಸಾಹಿತ್ಯವನ್ನು ಪರಿಚಯಮಾಡಿಕೊಂಡು, ಅದರ ಒಂದು ಶಾಸ್ತ್ರೀಯ ಅಭ್ಯಾಸವನ್ನು ನಡೆಸಲು ಎಲ್ಲ ಪ್ರದೇಶಗಳ ಸಾಹಿತ್ಯ ಇನ್ನೂ ಸಮರ್ಪಕವಾಗಿ ಸಂಗ್ರಹಿತವಾಗಬೇಕಾಗಿದೆ. ಬಹಳ ದಿನಗಳಿಂದಲೂ ನಿರ್ಲಕ್ಷಿತವಾಗಿ ಬಿದ್ದಿರುವ ಈ ಕಾರ್ಯಕ್ಷೇತ್ರಕ್ಕೆ ಕೈಹಚ್ಚುವವರು ವಿರಳವಾಗಿರುವಂತೆಯೇ ಸರ್ಕಾರ ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ನಿರ್ಲಕ್ಷ್ಯವೂ ಅಷ್ಟೇ ಕಾರಣವಾಗಿದೆ. ಪ್ರೌಢಸಾಹಿತ್ಯದ ಹಸ್ತಪ್ರತಿಗಳ ಸಂಗ್ರಹಣೆ ಎಷ್ಟು ಅಗತ್ಯವೆನಿಸಿ ಆ ಕಾರ್ಯ ಹಲವು ವರ್ಷಗಳ ಹಿಂದೆಯೇ ಆರಂಭವಾಯಿತೋ, ಅಷ್ಟೇ ಮಹತ್ವದ, ಅಷ್ಟೇ ಅಗತ್ಯವಾದ ಈ ಜನತೆಯ ಸಾಹಿತ್ಯವನ್ನು ಸಂಗ್ರಹಿಸಿಡುವುದು ನಮ್ಮ ಆದ್ಯ ಕರ್ತವ್ಯ ಎಂಬುದನ್ನು ನಾವು ಮರೆಯಬಾರದು. ಕನ್ನಡ ನಾಡಿನ ಕೆಲವು ಪ್ರದೇಶಗಳಲ್ಲಿ ಮೂರು ನಾಲ್ಕು ದಶಕಗಳಿಂದ ಸಂಗ್ರಹಿತವಾಗಿರುವ ಸಾಹಿತ್ಯ ಆಗಾಗ ಕೃತಿರೂಪದಲ್ಲಿ ಪ್ರಕಟನೆಗೊಂಡು ಮತ್ತೆ ಪ್ರತಿಗಳು ದೊರೆಯದಂತಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಸಂಗ್ರಹಿತವಾದ ಸಾಹಿತ್ಯ ಬಾಹುಳ್ಯದ ದೃಷ್ಟಿಯಿಂದ ತೀರ ಸ್ವಲ್ಪವೆನಿಸಿದರೂ ಗುಣದ ದೃಷ್ಟಿಯಿಂದ ತನ್ನ ಸ್ಥಾನವನ್ನು ತಾನು ಕಾಪಾಡಿಕೊಂಡು ಕನ್ನಡದಲ್ಲಿಯೂ ಸತ್ವಯುತವಾದ ಜನಪದ ಸಾಹಿತ್ಯವಿದೆ ಎಂದು ಸಾರಲು ಸಮರ್ಥವಾಗಿದೆ. ಆದರೆ ಸ್ವಾತಂತ್ರ್ಯಾನಂತರ ಸಂಗ್ರಹಿತವಾದ ಸಾಹಿತ್ಯ ಆಧಿಕ್ಯದ ದೃಷ್ಟಿಯಿಂದಲೂ, ಸತ್ವದ ದೃಷ್ಟಿಯಿಂದಲೂ, ಗಣನೀಯವಾದುದು ಎಂಬುದಕ್ಕೆ ಅನೇಕ ಉತ್ಸಾಹಶಾಲಿಗಳು ಸಂಗ್ರಹಿಸಿದ ಸಾಹಿತ್ಯ ನಿದರ್ಶನಪ್ರಾಯವಾಗಿದೆ.

ಯಾವುದೇ ಕ್ಷೇತ್ರದಲ್ಲಿ ಸಮಗ್ರವಾದ, ಸ್ವಸಂಪೂರ್ಣವಾದ, ಸತ್ವಯುತವಾದ ಕಾರ್ಯದಲ್ಲಿ ಯಶಸ್ವಿಯಾಗಲು, ಶ್ರದ್ಧೆ, ಆಸಕ್ತಿ, ನಿಷ್ಠೆಗಳ ಜೊತೆಗೆ ತ್ಯಾಗವೂ, ನಾಡು ನುಡಿಗಳ ಪ್ರೇಮವೂ ಅಗತ್ಯವೆನಿಸುತ್ತವೆ. ಕೇವಲ ಲಘುಕೃತಿಗಳ ರಚನೆಯಲ್ಲಿಯೇ, ವೃತ್ತಪತ್ರಿಕೆಗಳಿಗೆ ಕಥೆ ಕವನಗಳನ್ನು ಬರೆದು ಪ್ರಕಟಿಸುವುದರಲ್ಲಿಯೇ ತೃಪ್ತರಾಗಿ, ಸುಲಭ ಜನಪ್ರಿಯತೆಯ ಹಂಬಲದಲ್ಲಿ 'ಸಾಹಿತ್ಯಸೇವೆ'ಯ ಸೋಗನ್ನು ಹಾಕಿ ಸಾಹಿತ್ಯಕ ವಿಷಯಗಳ ಮೇಲೆ "ಅಧಿಕಾರವಾಣಿ"ಯಿಂದ ಮಾತಾಡಿಕೊಂಡು ತಿರುಗುವ ಧುರೀಣರಿಗಿಂತ ನಮ್ಮಲ್ಲಿ ಇಂದು ಸಂಶೋಧನೆಯ ರಂಗದಲ್ಲಿ, ವಿಸ್ತಾರವಾಗಿ ಬಿದ್ದಿರುವ ಕಾರ್ಯಕ್ಷೇತ್ರವನ್ನು ತಮ್ಮ ಸಾಹಿತ್ಯಸೇವೆಯ ಮೂಲ ಮಂತ್ರವನ್ನಾಗಿಟ್ಟುಕೊಳ್ಳುವವರ ಅಭಾವ ಇದ್ದೇ ಇದೆ. ಅಂಥ ಕಾರ್ಯನಿಷ್ಠರಿಗೆ

ಕರ್ನಾಟಕದಲ್ಲಿ ದೊರೆಯುವ ಪ್ರೋತ್ಸಾಹ, ನಾವು ಹೆಮ್ಮೆಪಡುವಂತಿಲ್ಲವಾದರೂ ಕೇವಲ ಸಾಹಿತ್ಯಸೇವೆಯ, ಭಾಷಾಭಿಮಾನದ ಬಲವೊಂದನ್ನೇ ಅವಲಂಬಿಸಿ ಕಾರ್ಯಮಗ್ನರಾಗುವ ಶ್ರದ್ಧಾವಂತರು ಮುಂದೆ ಬರುವುದು ಆ ನಾಡಿನ ಪುಣ್ಯ. ಒಂದೊಂದು ಕಾರ್ಯಕ್ಷೇತ್ರವನ್ನು ತಮ್ಮ ಸಮಗ್ರ ಜೀವನದ ಅಮೂಲ್ಯ ಸಾಧನೆಯನ್ನಾಗಿ ಆರಿಸಿಕೊಂಡು ಅದಕ್ಕಾಗಿ ಸರ್ವಕಾಲವೂ ಶ್ರಮಿಸಿ, ನಾಡಿನ ಸಾಹಿತ್ಯ ಸಂಸ್ಕೃತಿಗಳ ಉಳಿವಿಗೆ ಭದ್ರವಾದ ಮೆಟ್ಟಿಲುಗಳನ್ನು ಕಟ್ಟುವ ದೀಕ್ಷೆಯನ್ನು ಕೈಕೊಂಡವರು ಬೆರಳೆಣಿಕೆಗಾಗುವಷ್ಟು ಮಂದಿಯೂ ನಮ್ಮಲ್ಲಿ ದೊರೆಯಲಾರರು. ದೊರೆತರೂ, ಸಾಹಿತ್ಯ ಸಂಗದಲ್ಲಿಯೂ ತನ್ನ ವಿಷಮಹಸ್ತವನ್ನು ಚಾಚಿ ಸರಸ್ವತಿಯ ಮಂದಿರವನ್ನು ಕಲುಷಿತಗೊಳಿಸಿರುವ ರಾಜಕೀಯದ, ಜಾತೀಯತೆಯ, ವ್ಯಕ್ತಿ ದ್ವೇಷದ ವಿಷವರ್ತುಲದಿಂದಲೋ, ಸ್ವಾರ್ಥಲಂಪಟರ ಹಾವಳಿಯಿಂದಲೋ ನಿಜವಾದ ನಿಷ್ಠಾವಂತ ಕಾರ್ಯಕರ್ತರು ತೆರೆಯ ಹಿಂದೆ ಸರಿದು, ಸತ್ವಹೀನವಾದ ಬುಡಕುಸಿದ ಅಸ್ಥಿರ ವೃಕ್ಷಗಳೇ ಮೇಲೆ ಮೇಲೆ ತೇಲಿಬಂದು ಗೊಂದಲವೆಬ್ಬಿಸುವುದೂ ಸಹಜ.

ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ, ಶ್ರದ್ಧೆಯಿಂದ ಮೂಲೆ ಮೂಲೆಗಳಿಂದ ತಮ್ಮ ಕಡೆಯಲ್ಲಿರುವ ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ, ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು. ಆಗ ಆ ಸಾಹಿತ್ಯವನ್ನೆಲ್ಲಾ ಆಮೂಲಾಗ್ರವಾಗಿ ಪರಿಶೋಧಿಸಿ, ಅದರ ಸ್ವರೂಪವನ್ನು ನಿರ್ಣಯಿಸಿ, ಇವುಗಳ 'ಸತ್ಯ ಸೌಂದರ್ಯ–ಸುಖ'ಗಳನ್ನು ಅನುಭವಿಸಿ "ಇವುಗಳ ವರ್ಚಸ್ಸು ಹೊಸ ಸಾಹಿತ್ಯದಲ್ಲಿ ಮೂಡುವಂತೆ ಮಾಡಬಹುದು ...." ಎಂದು ಆಚಾರ್ಯ 'ಶ್ರೀ'ಯವರು ಮೂರು ದಶಕಗಳ ಹಿಂದೆಯೇ ಜನಪದ ಸಾಹಿತ್ಯ ಸಂಗ್ರಹಣೆಯ ಅಗತ್ಯವನ್ನು ಒತ್ತಿ ಹೇಳಿದ್ದರು. ಅದು ಎಷ್ಟು ತ್ವರೆಯಾಗಿ ಆಗಬೇಕೆಂಬುದನ್ನು ಸೂಚಿಸಿದ್ದರು. ಇದಕ್ಕೂ ಹಿಂದೆಯೇ ಶ್ರೀ ಮಾಸ್ತಿಯವರು ಉಪನ್ಯಾಸಗಳ ಮೂಲಕವೂ, ಲೇಖನಗಳ ಮೂಲಕವೂ ಈ ದಿಸೆಯಲ್ಲಿ ಕನ್ನಡಿಗರ ದೃಷ್ಟಿಯನ್ನು ಸೆಳೆದಿದ್ದಾರೆ. ಅನೇಕ ಸಾಹಿತ್ಯ ಸಮ್ಮೇಳನಗಳಲ್ಲಿ ಕನ್ನಡ ವಿದ್ವಾಂಸರು ಕನ್ನಡ ಜನಪದ ಸಾಹಿತ್ಯದ ಬಗೆಗೆ ಮಾತನಾಡಿ ಆ ಸಾಹಿತ್ಯ ಸಂರಕ್ಷಣೆಯತ್ತ ಕನ್ನಡಿಗರು ದೃಷ್ಟಿಯನ್ನು ಹರಿಸಬೇಕೆಂದು ಕೋರಿದ್ದಾರೆ. ಜಯಕರ್ಣಾಟಕ, ಸಾಹಿತ್ಯ ಪರಿಷತ್ಪತ್ರಿಕೆ, ಪ್ರಬುದ್ಧ ಕರ್ಣಾಟಕ ಮುಂತಾದ ಪತ್ರಿಕೆಗಳಂತೂ ಜನಪದ ಸಾಹಿತ್ಯಕ್ಕೆ ಅನೇಕ ಪುಟಗಳನ್ನು ಮೀಸಲಿಟ್ಟು ಪ್ರೋತ್ಸಾಹಿಸುತ್ತಾ ಬಂದಿವೆ. ೧೯೩೧ರಲ್ಲಿ ಪ್ರಕಟವಾದ 'ಗರತಿಯ ಹಾಡು' ಪುಸ್ತಕಕ್ಕೆ 'ಪರಿಚಯ'ವನ್ನು ಬರೆಯುತ್ತ ಶ್ರೀ ಬೇಂದ್ರೆಯವರು–

"ಕರ್ಣಾಟಕದೊಳಗಿನ ಬೇರೆಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ, ಚೆನ್ನಾಗಿ ಬರೆದು ಕಳಿಸಿದರೆ ಕನ್ನಡದ ಅಭ್ಯಾಸಕ್ಕೆ ಉಪಕಾರ ಮಾಡಿದಂತಾಗುತ್ತದೆ.... ಇದನ್ನು ಎಷ್ಟು ಒತ್ತಿ ಹೇಳಿದರೂ ಸಾಲದು....." ಎಷ್ಟು ಸ್ಪಷ್ಟಪಡಿಸಿದ್ದಾರೆ.

ಇಷ್ಟಾದರೂ ಸಂಗ್ರಹಿತ ಸಾಹಿತ್ಯ ಕೃತಿರೂಪದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹೊರಬಂದಿಲ್ಲ. ಅನೇಕರು ಸಂಗ್ರಹಿತ ಸಾಹಿತ್ಯದ ಮೂಲಧನದ ಮೇಲೆಯೇ ಸಾಹಿತ್ಯ ಪ್ರಶಂಸೆಯ ಗೋಪುರಗಳನ್ನು ಕಟ್ಟಿದರು. ಮತ್ತೆ ಕೆಲವು ಉತ್ಸಾಹಿ ವ್ಯಾಪಾರಗಾರರು ಅವರಿವರು ಕಟ್ಟಿದ ಗೋಡೆಗಳಿಂದ ಒಂದೊಂದು ಇಟ್ಟಿಗೆಯನ್ನು ಕಸಿದುಕೊಂಡು ತಮ್ಮವೆಂಬಂತೆ ಸುಲಭ ಬೆಲೆಗೆ ಮಾಡಿಕೊಂಡ ಪ್ರಸಂಗ ಈ ರಂಗದಲ್ಲಿ ದುಡಿದವರನೇಕರಿಗೆ ದೊಡ್ಡ ಆಘಾತವಾಯಿತು. ಇಂಥ ಕೆಲವು ದುರ್ವ್ಯಾಪಾರಗಳನ್ನು ಶ್ರೀ ಕರೀಂಖಾನರು ತಮ್ಮ ಪುಸ್ತಕಗಳ ಮುನ್ನುಡಿಗಳಲ್ಲಿ ಉಗ್ರವಾಗಿ ಖಂಡಿಸಿದ್ದಾರೆ. ಹೀಗೆ ಜನಪದ ಸಾಹಿತ್ಯ ಕನ್ನಡ ನಾಡಿನಲ್ಲಿ ಸಾಕಷ್ಟು ಜನಪ್ರಿಯವಾಯಿತು. ಅದರ ಅಭಿಮಾನಿಗಳೂ ಹೆಚ್ಚಿದರು. ಅದನ್ನು ಹಾಡುವವರೂ ಕೇಳುವವರೂ ಅಧಿಕ ಸಂಖ್ಯೆಯಲ್ಲಿ ಕಾಣಿಸಿಕೊಂಡರು. ಎಲ್ಲ ಕಾಲೇಜು ವೇದಿಕೆಗಳಲ್ಲೂ, ಎಲ್ಲ ಧ್ವನಿವರ್ಧಕ ಯಂತ್ರಗಳಲ್ಲೂ ಜನಪದ ಕಾವ್ಯಗಂಗೆ ಹರಿಯಿತು. ಈ ಸುಲಭ ಪ್ರಚಾರದ ರಭಸದಲ್ಲಿ ಇದ್ದ ಅಲ್ಪ ಸಾಹಿತ್ಯದ ಜಗ್ಗಾಟ ಮಾತ್ರ ನಡೆದು, ಉಳಿದ ಸಾಹಿತ್ಯದ ಕೊಯ್ಲಿಗಾಗಲೀ, ಪ್ರಕಟಿತ ಸಾಹಿತ್ಯದ 'ಸವಿ'ಗಾಗಲೀ ಯಾರೂ ಕೈ ನೀಡಲಿಲ್ಲ. ಇದರ ಹಿನ್ನೆಲೆ ಹೊಸ ಸಾಹಿತ್ಯ ಸಂಗ್ರಹಣೆಯಲ್ಲಿ ತೊಡರಿಕೊಂಡಿರುವ ಕಷ್ಟ ನಿಷ್ಠುರತೆಗಳು ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲ ಚಾಕಚಕ್ಯತೆ, ಧೈರ್ಯ, ಜನರ ಮನಸನ್ನು ಒಲಿಸಿಕೊಳ್ಳುವ ಕೌಶಲ, ಹಳ್ಳಿಯ ಬಾಳಿನ ನಿಕಟ ಪರಿಚಯ ಅವರೊಡನೆ ಬೆರೆಯುವ ಸ್ನೇಹ ಮನೋಭಾವ ಇವುಗಳ ಅಭಾವ ಪ್ರಧಾನವಾಗಿ ಜನಪದ ಸಾಹಿತ್ಯ ಸಂಗ್ರಹಣೆಯು, ತೊಡಕಾಗಿ ಅನೇಕರಿಗೆ ತೋರಿದೆ.

ಜನಪದ ಸಾಹಿತ್ಯ ಸಂಗ್ರಹಣೆಯ ಕಾರ್ಯ ಇಷ್ಟು ದುಸ್ಸಾಧ್ಯವಾದುದಾದರೂ ಅದನ್ನು ಸಾಧಿಸಿ ವಿಪುಲ ಸಂಖ್ಯೆಯಲ್ಲಿ ಗೀತೆಗಳನ್ನು ಕಲೆ ಹಾಕಿದವರ ಬಗ್ಗೆ ನಾವು ಅರ್ಪಿಸಬಹುದಾದ ಕೃತಜ್ಞತೆಗೆ ಬದಲಾಗಿ ಅಲ್ಲಲ್ಲಿ ಕುಟೀಕೆಗಳೂ ಕೇಳಿ ಬರುತ್ತಿರುವುದು ನಮ್ಮ ದುರ್ದೈವ. ಜನಪದ ಸಾಹಿತ್ಯದ ಬಗ್ಗೆ ನಮ್ಮ ಹಿರಿಯರು ತೋರುತ್ತಿದ್ದ ಒಲುವು ಆದರಗಳಿಗೇನೂ ಈಗ ಕೊರತೆಯಿಲ್ಲವಾದರೂ, ಆ ಸಾಹಿತ್ಯದ ಹಿರಿಮೆಯನ್ನು ಕೊಂಡಾಡುವುದರಲ್ಲಿ ಯಾರೂ ಹಿಂದೆ ಬೀಳದಿದ್ದರೂ ಸಂಗ್ರಹಕರಾಗಿ ಶ್ರಮಿಸಿದವರ ಬಗ್ಗೆ ಬಹು ಅರ್ಥಗರ್ಭಿತವಾದ ಮಾತುಗಳಲ್ಲಿ ವ್ಯಂಗ್ಯನುಡಿಗಳನ್ನಾಡಿ ತಮ್ಮ ವಿದ್ವತ್ಪ್ರದರ್ಶನ ಮಾಡಿಕೊಂಡವರೂ ನಮ್ಮಲ್ಲಿಲ್ಲದಿಲ್ಲ.

ಜನಪದ ಸಾಹಿತ್ಯ ಮೊದಲು ಸಂಗ್ರಹಿತವಾಗಿ ಅಳಿಸಿ ಹೋಗುವ ಹಾದಿಯಿಂದ ಮೊದಲು ಪಾರಾಗಬೇಕು; ಹಾಗೆ ಸಂಗ್ರಹಿತವಾದ ಸಾಹಿತ್ಯ ಯಾವುದೋ ಮೂಲೆಯಲ್ಲಿ ಕುಳಿತು ಗೆಜ್ಜಲಿಗೆ ಆಹುತಿಯಾಗದೆ ಆದಷ್ಟು ಶೀಘ್ರವಾಗಿ ಕೃತಿರೂಪದಲ್ಲಿ ಹೊರಬರಬೇಕು, ಎಂಬ ಮಹದಾಶಯವನ್ನು ಅಲ್ಲಗಳೆಯುವುದರಲ್ಲಿ ಅರ್ಥವಿಲ್ಲ. ಸಂಗ್ರಹಿತ ಸಾಹಿತ್ಯ ಎಷ್ಟೇ ಇದ್ದರೂ, ಅದರ ಕೆಲವು ಪದ್ಯಗಳು ಒಂದೆರಡು ಕಡೆಗಳಲ್ಲಿ

ತುಸು ವ್ಯತ್ಯಾಸದೊಡನೆ ಪ್ರಕಟಣೆಗೊಂಡಿದ್ದರೂ, ಅದರ ಮುಂದಿನ ಶಾಸ್ತ್ರೀಯ ಪರಿಷ್ಕಾರದ ದೃಷ್ಟಿಯಿಂದ ಪಾಠಾಂತರದ ದೃಷ್ಟಿಯಿಂದ ಬಂದ ಸಾಹಿತ್ಯ ಮೊದಲು ಅಚ್ಚಾಗಿ ಹೊರಬರುವುದರಲ್ಲಿ ದೋಷವೇನೂ ಇರಲಾರದು. ಅಪಾರ ಸಂಖ್ಯೆಯಲ್ಲಿ ಕೃತಿಗಳನ್ನು ಪ್ರಕಟಿಸುವವರು ತಾವೇ ಆಯ್ಕೆಯ ಶಸ್ತ್ರವನ್ನೇ ಹಿಡಿದು ಇದು 'ಸಿಹಿ' 'ಕಹಿ' ಎಂದು ಸರಕನ್ನು ಕಡಿಮೆ ಮಾಡುವ ದೃಷ್ಟಿಗಿಂತ ಅದರ ಗುಣಭೇದಗಳ ವಿಮರ್ಶೆಗೆ ಹಾದಿಮಾಡಿಕೊಟ್ಟು ಮೂಲ ಸಾಹಿತ್ಯವನ್ನು ತಂದಂತೆ ಪ್ರಕಟಿಸುವುದು ಅನಿವಾರ್ಯ. ಆದರೆ ಕೃತಿ ಹೊರಬಂದ ಮೇಲಿನ ಟೀಕೆಗಳು ಸಂಪಾದಕನ, ಸಂಗ್ರಾಹಕನ ಉತ್ಸಾಹಕ್ಕೆ ಮಾರಕವಾಗಿ ಕಂಡುಬಂದರೆ ಎಂದಿಗೂ ಸಹೃದಯ ವಿಮರ್ಶೆಯಾಗದೆ, ಸಂಕುಚಿತ ಮನೋಭಾವದ ಪ್ರತೀಕವಾಗಿ ಮಾತ್ರ ನಿಲ್ಲುತ್ತದೆ.

ಈ ಸಾಹಿತ್ಯ 'ವಿಸ್ತಾರವಿದ್ದು' ಅದು 'ವಿರಲದೀಪ್ತ'ವಾಗಿದ್ದರೆ ಅದಕ್ಕೆ ಸಂಗ್ರಹಿಸಿ ತಂದವರು ಹೊಣೆಯಾಗಿ ನಿಲ್ಲಬೇಕೆಂದು ಯಾರೂ ಹೇಳುವುದಿಲ್ಲ. ಜನಪದ ಸಾಹಿತ್ಯ ಸಂಗ್ರಹಕನ ಸ್ವಂತ ಸೃಷ್ಟಿಯಲ್ಲ, ಅದು ಜನತೆಯ ಸ್ವತ್ತು. ಆ ಜನದ ಆಶೆ, ನಿರಾಶೆಗಳನ್ನು, ಭಾವ ಬದುಕುಗಳನ್ನು ಪ್ರತಿನಿಧಿಸುವ ಸಾಹಿತ್ಯ ಹೀಗಿದೆ ಎಂದು ತಂದು ಪ್ರಕಟಿಸುವ ಅವನ 'ಔದಾರ್ಯ' ದೊಡ್ಡದೇ ಹೊರತು, ಅದರಲ್ಲಿ ಇಂತಿಷ್ಟೇ ಗುಣವಿರಬೇಕೆಂದು ನಿಯಮಗಳನ್ನು ಹೇರುವುದು ಎಷ್ಟು ಸೂಕ್ತವೋ ಅರ್ಥವಾಗುವುದಿಲ್ಲ. ಅಲ್ಲದೆ ಇಲ್ಲಿ 'ಲೋಕೋಭಿನ್ನರುಚಿಃ' ಎಂಬ ಮಾತನ್ನೂ ಮರೆಯಬಾರದು. ಒಬ್ಬರಿಗೆ ಒಂದು ದೃಷ್ಟಿಯಿಂದ ಮೆಚ್ಚಿಕೆಯಾದ ಗೀತೆ ಬೇರೊಬ್ಬರಿಗೆ ಇನ್ನೊಂದು ರೀತಿಯ ಆಸ್ವಾದವನ್ನು ನೀಡಲಾರದೆಂದು ಯಾರು ಹೇಳುತ್ತಾರೆ? ಈ ಪದ್ಯದಲ್ಲಿ ಇಷ್ಟೇ ಸಾಹಿತ್ಯ ಗುಣಗಳಿವೆ, ಉಳಿದುದೆಲ್ಲಾ ನಿಸ್ಸಾರ, ನಿರುಪಯುಕ್ತ ಎಂದು ಅಲ್ಲಗಳೆಯುವುದರಲ್ಲಿ 'ರುಚಿಭೇದ'ದ ಮಾರುಗೋಲಿರುವುದನ್ನು ಮರೆತು ಅಧಿಕಾರವಾಣಿಯಿಂದ ವಿಮರ್ಶೆಯನ್ನು 'ಗೀಚಿ' ಎಷ್ಟೋ ಶ್ರಮದಿಂದ ಹೊರತಂದ ಜನಪದ ಸಾಹಿತ್ಯ ಕೃತಿಯನ್ನು ಅಷ್ಟು ಲಘುವಾಗಿ ತೂಗಿಬಿಡುವುದು ಅಪಾಯಕಾರಿ ಎನಿಸುತ್ತದೆ. ಜನಪದ ಸಾಹಿತ್ಯದಲ್ಲಿ 'ಸೌಂದರ್ಯ ದೃಷ್ಟಿ' ಒಂದು ಕಡೆ ಇದ್ದರೆ 'ಶಾಸ್ತ್ರೀಯ ಅಭ್ಯಾಸದ ದೃಷ್ಟಿ' ಮತ್ತೊಂದಿದೆ ಎಂಬುದನ್ನು ಮರೆತು ಸಂಪಾದಕನಾದವನು ತನ್ನಲ್ಲಿರುವ ಸಾಹಿತ್ಯರಾಶಿಯಲ್ಲಿ 'ಕಸ' 'ರಸ'ಗಳನ್ನು ಬೇರ್ಪಡಿಸುತ್ತ ಕೂರುವುದು ವಿಹಿತವಾಗಲಾರದು.

ಜನಪದ ಸಾಹಿತ್ಯವನ್ನು 'ಮಾರ್ಗ' ಕಾವ್ಯದೊಡನೆ ಹೋಲಿಸಿ ನೋಡುವ ಹವ್ಯಾಸವನ್ನು ಕೆಲವು ಕಡೆ ನೋಡಬಹುದು. ಅಲ್ಲದೆ ಈಗಾಗಲೇ ಪ್ರಕಟವಾಗಿರುವ 'ಕೆರೆಗೆ ಹಾರ'ದಂಥ ಒಂದು ಕೃತಿಯೂ ಇಲ್ಲಿನ ಪ್ರಕಟಿತ ಕೃತಿಗಳಲಿಲ್ಲವೆಂದು ನಿಡುಸುಯ್ಯುವ ಬಗೆ ತುಂಬಾ ಹಾಸ್ಯಾಸ್ಪದವಾದುದು. 'ಮಾರ್ಗಕಾವ್ಯ'ದಂಥ ಪ್ರೌಢರಚನೆಯೊಡನೆ ಸರಳ ಸುಂದರವಾದ ಜನ ಸಾಮಾನ್ಯರ ಕಾವ್ಯವನ್ನು ಹೋಲಿಸಿ ನೋಡುವುದಾಗಲೀ, ಯಾರಿಂದಲೋ ಸಂಗ್ರಹಿತವಾಗಿ ಪ್ರಕಟವಾದ ಮತ್ತೊಂದು

ಜನಪದ ಕೃತಿಯೊಡನೆ ಪ್ರಕೃತ ಕೃತಿಗಳನ್ನು ಹೋಲಿಸಿ ಒಂದನ್ನು ಕೊಂಡಾಡುವ ಭರದಲ್ಲಿ ಮತ್ತೊಂದನ್ನು ಅಲ್ಲಗಳೆದು 'ಎತ್ತಿಕಟ್ಟುವ' 'ಮಾರ್ಗವಾಗಲಿ' 'ತೌಲನಿಕ' ವಿಮರ್ಶೆಯಾಗಲಾರದು. 'ಕೆರೆಗೆ ಹಾರ' ಉತ್ತಮ ಕೃತಿಯಾದ ಮಾತ್ರಕ್ಕೆ ಮಿಕ್ಕವು ಸಂಗ್ರಹಯೋಗ್ಯವಲ್ಲ; ಪ್ರಕಟಣಯೋಗ್ಯವಲ್ಲ; ಓದಲರ್ಹವಲ್ಲವೆಂದು ನಿರ್ಣಾಯಕವಾಗಿ ಹೇಳಿಬಿಡುವ ಎದೆಗಾರಿಕೆ ಮೆಚ್ಚಬೇಕಾದುದೇ!

ಯಾವ ಜನಪದ ಸಾಹಿತ್ಯ ಸಂಗ್ರಹಕನೂ ಪ್ರತಿಯೊಬ್ಬರ ಅಭಿರುಚಿಯನ್ನು ಪೂರೈಸುವುದಕ್ಕೆ ತನ್ನ ಕೃತಿರಾಶಿಯನ್ನು ಜಾಲಾಡುವುದಕ್ಕೆ ಸಿದ್ಧನಾಗಿರಬೇಕಿಲ್ಲ; ಅಪಾರ ಸಾಹಿತ್ಯರಾಶಿಯನ್ನು ಸಂಗ್ರಹಿಸುತ್ತಾ ಹೊರಟವನು ಸುಲಭವಾಗಿ 'ಜೊಳ್ಳ'ನೆಲ್ಲಾ ತೂರಿಬಿಡುವ ಧೈರ್ಯವನ್ನೂ ವಹಿಸುವುದಿಲ್ಲ. 'ಟೊಳ್ಳು' 'ಗಟ್ಟಿ'ಗಳ ತಾರತಮ್ಯದ ಹೊಣೆಗೆ ತಾನೊಬ್ಬನೇ ಭಾಜನನಾಗದೆ ಕನ್ನಡ ಸಹೃದಯ ಕೋಟಿಯನ್ನು ತನ್ನ ಬೆಂಬಲಕ್ಕೆ ಕರೆದುಕೊಳ್ಳುತ್ತಾನೆ.

ಜನಪದ ಸಾಹಿತ್ಯ ವಿಪುಲವಾಗಿ ಸಂಗ್ರಹಿತವಾಗಬೇಕು, ಸಂಗ್ರಹಿತ ಸಾಹಿತ್ಯ ಕೃತಿರೂಪದಲ್ಲಿ ಸರ್ವರಿಗೂ ದೊರೆಯುವಂತಾಗಬೇಕು, – ಅನಂತರ ಅದರ ಶಾಸ್ತ್ರೀಯ ಅಭ್ಯಾಸ ನಡೆಯಬೇಕು – ಎಂಬ ಮೂರು ಮುಖ್ಯ ದೃಷ್ಟಿಗಳನ್ನಿಟ್ಟು ಯಾವುದೇ ಹೊಸದಾಗಿ ಬಂದ ಜನಪದ ಸಾಹಿತ್ಯ ಕೃತಿಯನ್ನು ನೋಡುವುದೊಳ್ಳಿತು. 'ಉತ್ತಮ'ವಾದುದನ್ನು ಆರಂಭದಲ್ಲೇ ಅರಸುತ್ತ ಹೋಗಿದ್ದರೆ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕೇವಲ 'ಪಂಪ' 'ರನ್ನ' 'ಹರಿಹರ' 'ಕುಮಾರವ್ಯಾಸ'ರು ಮಾತ್ರ ಉಳಿದುಬಿಡುತ್ತಿದ್ದರು. ಉಳಿದ ಸಾವಿರಾರು ಕವಿಗಳನ್ನು ಕಾಲ ಮರೆಮಾಡಿ ಕೊಂಡಿದ್ದರೂ ಅವರ ಕೃತಿಗಳು ಸಾಹಿತ್ಯ ಚರಿತ್ರೆಯಲ್ಲಿ ಒಂದಲ್ಲ ಒಂದು ರೀತಿಯ ಸ್ಥಾನವನ್ನು ಗಳಿಸಿಕೊಂಡಿವೆ.

ಕರ್ಣಾಟಕ ಜನಪದ ಸಾಹಿತ್ಯದ ಸಮಗ್ರ ಪರಿಚಯಕ್ಕೆ ಎಷ್ಟೆಷ್ಟು ಹೊಸ ಸಾಹಿತ್ಯ ಪ್ರವಾಹ ಹರಿದುಬರುತ್ತದೋ ಅಷ್ಟೂ ಸ್ವಾಗತಾರ್ಹ. ಜನಪದ ಸಾಹಿತ್ಯವನ್ನು ಯಾವ ಅಳತೆಗೋಲಿನಿಂದ ಅಳೆಯಬೇಕೆಂಬ ಮೌಲ್ಯಗಳೇ ಇನ್ನೂ ನಮ್ಮಲ್ಲಿ ಸಿದ್ಧಿಸದಿರುವಾಗ, ವಿಮರ್ಶೆಯಲ್ಲಿ 'ಕೇವಲ ವಿಸ್ತಾರಕ್ಕಾಗಿ ಹೆಸರಿಸಬಹುದಾದ ಕೃತಿ', ಜನಪದ ವಿಶೇಷಣದ ಹೆಮ್ಮೆಯನ್ನು ಕಳೆದು ನೋಡಿದರೆ ಒಟ್ಟು ಈ ಮೂರು ಪುಸ್ತಕಗಳ ಸುಸಂಬದ್ಧ ಪದ್ಯ ಕಡಿಮೆಯೇ, ಎಂಬೆಲ್ಲ ರೀತಿಯ ಮಾರ್ಮಿಕ ನುಡಿಗಳು ನಮ್ಮ ದೃಷ್ಟಿದೋಷವನ್ನು ಬಹಿರ್ಗತಗೊಳಿಸುವಷ್ಟು ಮಾತ್ರ ಶಕ್ತವಾಗಿವೆ.

ಕೃತಿಗಳ ಗುಣಾವಗುಣಗಳು ಏನೇ ಇರಲಿ, ಜನಪದ ಸಾಹಿತ್ಯ ಸಂಗ್ರಹಣೆಯೊಂದು ಪವಿತ್ರಕಾರ್ಯ, ಅದಕ್ಕಾಗಿ ದುಡಿಯುತ್ತಿರುವವರೆಲ್ಲರೂ ಅಭಿನಂದನಾರ್ಹರೆಂಬುದನ್ನು ಮರೆಯಬಾರದು.

❐

ಶತಮಾನೋತ್ಸವ ವರ್ಷ : ೨೦೧೪-೨೦೧೫

ಕನ್ನಡ ಸಾಹಿತ್ಯ ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾದ ಯೋಜನೆ ಕನ್ನಡದ ನೂರು ಮೌಲಿಕ ಗ್ರಂಥಗಳ ಮರುಮುದ್ರಣ. ಈ ಪುಸ್ತಕಗಳ ಆಯ್ಕೆಯಲ್ಲಿ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳು, ಚಳುವಳಿಗಳು ಹಾಗೂ ವಿವಿಧ ಸಾಹಿತ್ಯಿಕ ಸಂವೇದನೆಗಳನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ. ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಪ್ರಾತಿನಿಧ್ಯವಿರುವಂತೆ ಸಹ ನೋಡಿಕೊಳ್ಳಲಾಗಿದೆ. ಪ್ರತಿಭೆ, ಪ್ರಾದೇಶಿಕತೆ ಹಾಗೂ ಸಾಮಾಜಿಕ ನ್ಯಾಯಗಳನ್ನು ಪರಿಗಣಿಸಲಾಗಿದೆ. ಈ ಅಮೂಲ್ಯ ಕನ್ನಡ ಕೃತಿಗಳನ್ನು ಓದುಗರು ಪ್ರೀತಿ ಅಭಿಮಾನಗಳಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಪುಂಡಲೀಕ ಹಾಲಂಬಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮